ಮಾನವಿಕ ಕರ್ಣಾಟಕ

ಸಂಪುಟ ೧೫ ಸಂಚಿಕೆ ೨

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೫

MANAVIKA KARNATAKA, Kannada quarterly of the University of Mysore, Volume 15, Number 2, February 1985. Edited by Dr. B.K. Gururaja Rao and Dr. C.K. Renukarya

ಪ್ರಧಾನ ಸಂಪಾದಕರು

ಡಾ॥ ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ಡಾ॥ ಬಿ.ಕೆ. ಗುರುರಾಜರಾವ್

ಡಾ॥ ಸಿ.ಕೆ. ರೇಣುಕಾರ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೨ ಆರ್. ಎಸ್. ಶಿವಗಣೇಶಮೂರ್ತಿ	ಪ್ರವಾಚಕರು, ಸಂಸ್ಕೃತ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೩ ಕೋ. ಚೆನ್ನಬಸಪ್ಪ	ವಿಶ್ರಾಂತ ಜಿಲ್ಲಾ ನ್ಯಾಯಾಧೀಶರು, ರಾಜಾಜಿನಗರ, ಬೆಂಗಳೂರು-೮೬
೪ ಸೀತಾರಾಮ ಜಾಗೀರ್‌ದಾರ್	ಶಾಸನಶಾಸ್ತ್ರ ಸಹಾಯಕ, ಎಪಿಗ್ರಾಫಿಯ ಕರ್ನಾಟಿಕ ಪುನರ್ಮುದ್ರಣ ಯೋಜನೆ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೫ ಕೆ. ಕೆಂಪೇಗೌಡ	ಪ್ರವಾಚಕರು, ಭಾಷಾಶಾಸ್ತ್ರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೬ ಎಂ. ರಾಧಾ	ಅಧ್ಯಾಪಕಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೭ ಪಿ. ಎನ್. ಹರೀಶ್	ಸಂಶೋಧನ ವಿದ್ಯಾರ್ಥಿ, ಮಾನವಿಕ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೮ ಟಿ. ವಿ. ವೆಂಕಟಾಚಲಶಾಸ್ತ್ರೀ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬
೯ ಯಮುನಾಬಾಯಿ ಆರ್. ರಾವ್	'ಶ್ರೀ' ೪೦೯, ೧೨ ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು-೯
೧೦ ಎಚ್. ಆರ್. ರಘುನಾಥ ಭಟ್	ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-೩



ಡಾ॥ ಸುನೀತಿಕುಮಾರ ಚಟರ್ಜಿ (1890-1977)

ಆರ್. ರಾಮಕೃಷ್ಣ

ಡಾ॥ ಸುನೀತಿಕುಮಾರ ಚಟರ್ಜಿ (1890-1977)

ಡಾ. ಸುನೀತಿಕುಮಾರ ಚಟರ್ಜಿಯವರು ಭಾರತದ ಸುಪ್ರಸಿದ್ಧ ಭಾಷಾವಿಜ್ಞಾನಿ. ಅಂತರರಾಷ್ಟ್ರೀಯ ಮಾನ್ಯತೆ ಗಳಿಸಿದ ಮಹಾವಿದ್ವಾಂಸರು. ಪಾಶ್ಚಾತ್ಯ ದೇಶಗಳಲ್ಲಿ ಭಾರತದ ಭಾಷೆಗಳು ಎಂದೊಡನೆ ವಿದ್ವಾಂಸರ ಗಮನಕ್ಕೆ ಬರುತ್ತಿದ್ದ ಮೊತ್ತ ಮೊದಲ ವ್ಯಕ್ತಿ ಎಂದರೆ ಡಾ॥ ಚಟರ್ಜಿಯವರೇ. ಮಾನವಿಗೆ ವಿಷಯಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಅಂತರರಾಷ್ಟ್ರೀಯ ವಿದ್ವಾಂಸರ ಮಂಡಲಿಗಳಲ್ಲಿ ಅವರಿಗೆ ಸದಾ ಗೌರವದ ಸ್ಥಾನ. ಅವರಷ್ಟು ಗೌರವ ಮಾನ್ಯತೆಗಳನ್ನು ಗಳಿಸಿದ ವಿದ್ವಾಂಸರು ಭಾರತದಲ್ಲಿ ಸದ್ಯಕ್ಕೆ ಮತ್ತೊಬ್ಬರಿಲ್ಲ.

ಚಟರ್ಜಿಯವರು ಕಲ್ಕತ್ತೆಯ ಸಮೀಪದ ಶಿವಪುರ ಎಂಬಲ್ಲಿ 1890ರ ನವೆಂಬರ್ 26ರಂದು ಜನಿಸಿದರು. ಅವರ ವಂಶದ ಹಿರಿಯರೊಬ್ಬರಿಗೆ ಬಂಗಾಲದ ದೊರೆ ಬಲ್ಲಾಳ ಸೇನ (1158–1179) ಚತುತಿ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟದ್ದರಿಂದ ವಂಶದ ಹೆಸರು 'ಚಟರ್ಜಿ' ಎಂದಾಗಿದೆ. ತಂದೆ ಹರಿದಾಸ ಚಟರ್ಜಿಯವರು (1862–1945) ಕವಿ ಹಾಗೂ ಸಂಗೀತಗಾರರಾಗಿದ್ದರು. ಕಲ್ಕತ್ತೆಯ ಇಂಗ್ಲಿಷ್ ವ್ಯಾಪಾರಿ ಸಂಸ್ಥೆಯೊಂದರಲ್ಲಿ ಸುಮಾರು 40 ವರ್ಷ ದುಡಿದವರು.

ಚಟರ್ಜಿಯವರ ಪ್ರಾಥಮಿಕ ವಿದ್ಯಾಭ್ಯಾಸ ಕಲ್ಕತ್ತೆಯಲ್ಲಿಯೇ ನಡೆಯಿತು. ಮೋತಿಲಾಲ ಸೀಲರ ಪಾಠಶಾಲೆ, ಸ್ಕಾಟಿಷ್ ಚರ್ಚ್ ಕಾಲೇಜು, ಪ್ರೆಸಿಡೆನ್ಸಿ ಕಾಲೇಜುಗಳಲ್ಲಿ ಓದಿದರು. ಆನರ್ಸ್ (1911) ಮತ್ತು ಎಂ.ಎ. (1913) ಪದವಿಗಳೆರಡರಲ್ಲಿಯೂ ಅವರು ಪ್ರಥಮ ದರ್ಜೆ ಪ್ರಥಮ ಸ್ಥಾನ ಪಡೆದರು. ಪ್ರಾಚೀನ, ಮಧ್ಯಕಾಲೀನ ಇಂಗ್ಲಿಷ್, ಇಂಗ್ಲಿಷ್ ಭಾಷಾವಿಜ್ಞಾನ, ಜರ್ಮಾನಿಕ್ ಎಂ.ಎ. ತರಗತಿಯಲ್ಲಿ ಅವರು ಅಧ್ಯಯನ ಮಾಡಿದ ವಿಶೇಷ ವಿಷಯಗಳಾಗಿದ್ದವು. ಜೊತೆಗೆ ಸಂಸ್ಕೃತವೂ ಅವರ ಒಲವಿನ ವಿಷಯವಾಗಿತ್ತು. ಎಂ.ಎ. ಪದವಿ ಅನಂತರ ಚಟರ್ಜಿಯವರಿಗೆ ಕಲ್ಕತ್ತ ವಿಶ್ವವಿದ್ಯಾಲಯದ ಪ್ರೇಮ್‌ಚಂದ್ ರಾಯ್‌ಚಂದ್ ವಿದ್ಯಾರ್ಥಿವೇತನ ದೊರೆತದ್ದರಿಂದ ಸಂಶೋಧನೆಗೆ ತೊಡಗಿದರು. ತಮ್ಮ ಸಂಶೋಧನೆಗಾಗಿ ಅವರು ವಿಶ್ವವಿದ್ಯಾಲಯದ ಬಹುಮಾನವನ್ನೂ ಪಡೆದರು. ಸ್ವಲ್ಪಕಾಲ ಕಲ್ಕತ್ತೆಯ ವಿದ್ಯಾಸಾಗರ ಕಾಲೇಜಿನಲ್ಲಿ

ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿದ ಮೇಲೆ ಕಲ್ಕತ್ತ ವಿಶ್ವವಿದ್ಯಾಲಯದ ಇಂಗ್ಲಿಷ್ ಸ್ನಾತಕೋತ್ತರ ವಿಭಾಗದಲ್ಲಿ ಉಪಪ್ರಾಧ್ಯಾಪಕರಾಗಿದ್ದರು.

ಚಟರ್ಜಿಯವರು ಭಾಷಾವಿಜ್ಞಾನವನ್ನು ವಿಶೇಷವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ 1919ರಲ್ಲಿ ಯೂರೋಪಿಗೆ ಹೋದರು. ಲಂಡನ್, ಪ್ಯಾರಿಸ್ ಮತ್ತು ಸಾರಬಾನ್ ವಿಶ್ವವಿದ್ಯಾಲಯಗಳಲ್ಲಿ ಅವರು ಅಂದಿನ ಪ್ರಸಿದ್ಧ ಭಾಷಾ ವಿಜ್ಞಾನಿಗಳಿಂದ ಮಾರ್ಗದರ್ಶನ ಪಡೆದರು. ಇಂಡೋ-ಯೂರೋಪಿಯನ್ ಭಾಷಾವಿಜ್ಞಾನ, ಇಂಡೋ-ಆರ್ಯನ್ ಮತ್ತು ಪ್ರಾಕೃತ, ತೌಲನಿಕ ಭಾಷಾವಿಜ್ಞಾನ, ಧ್ವನಿವಿಜ್ಞಾನ, ಗಾಥಿಕ್, ಗ್ರೀಕ್, ಲ್ಯಾಟಿನ್ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಿದರು. ಡೇನಿಯಲ್ ಜೋನ್ಸ್, ಬಾರ್ನೆಟ್, ಜೂಲ್ಸ್ ಬ್ಲಾಕ್, ಪ್ರಿಜಲುಸ್ಕಿ, ಮೊದಲಾದ ವಿದ್ವಾಂಸರು ಚಟರ್ಜಿಯವರ ಅಧ್ಯಾಪಕರಾಗಿದ್ದರು, ಮಾರ್ಗದರ್ಶಕರಾಗಿದ್ದರು. ಇವರೆಲ್ಲರ ಸಲಹೆ ಸಹಕಾರದಿಂದ 'ಇಂಡೋ-ಆರ್ಯನ್ ಭಾಷಾಶಾಸ್ತ್ರ' ಎಂಬ ಶೀರ್ಷಿಕೆಯಲ್ಲಿ ಬಂಗಾಳಿ ಭಾಷೆಯನ್ನು ಆಧರಿಸಿ ಬರೆದ ಅವರ ಸಂಶೋಧನಾ ಮಹಾಪ್ರಬಂಧಕ್ಕೆ ಲಂಡನ್ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿ ದೊರೆಯಿತು (1921). ಡಾ|| ಚಟರ್ಜಿಯವರು 1922ರ ಕೊನೆಯಲ್ಲಿ ವಿದೇಶದಿಂದ ಭಾರತಕ್ಕೆ ಹಿಂದಿರುಗಿದೊಡನೆಯೇ ಅವರನ್ನು ಕಲ್ಕತ್ತ ವಿಶ್ವವಿದ್ಯಾಲಯ ಭಾರತೀಯ ಭಾಷಾವಿಜ್ಞಾನದಲ್ಲಿ ಖೈರಾ ಪ್ರಾಧ್ಯಾಪಕರನ್ನಾಗಿ ನೇಮಿಸಿತು. ಸುಮಾರು ಮೂವತ್ತು ವರ್ಷ ಅದೇ ಹುದ್ದೆಯಲ್ಲಿ ಡಾ|| ಚಟರ್ಜಿಯವರು ಕಾರ್ಯ ನಿರ್ವಹಿಸಿದರು. ಹೆಸರಿಗೆ ಭಾಷಾವಿಜ್ಞಾನ ಪ್ರಾಧ್ಯಾಪಕರಾಗಿದ್ದರೂ ಅವರು ಇಂಗ್ಲಿಷ್, ಇಸ್ಲಾಂ ಇತಿಹಾಸ ಮತ್ತು ಸಂಸ್ಕೃತಿ, ಉರ್ದು, ಫ್ರೆಂಚ್ ಮುಂತಾದ ಇಲಾಖೆಗಳೊಡನೆ ನಿಕಟ ಸಂಪರ್ಕ ಪಡೆದಿದ್ದರು.

ಡಾ|| ಚಟರ್ಜಿಯವರದ್ದು ವಿಪುಲವಾದ ಬರೆವಣಿಗೆ. ಇಂಗ್ಲಿಷ್, ಬಂಗಾಳಿ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಅವರು ಹಲವಾರು ಪುಸ್ತಕಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಅವರ ಲೇಖನಗಳ ಸಂಖ್ಯೆ ಅಸಂಖ್ಯಾತ. 'ಸುನೀತಿಕುಮಾರ ಚಟರ್ಜಿ — ವಿದ್ವಾಂಸ ಮತ್ತು ವ್ಯಕ್ತಿ' ಎಂಬ ಶೀರ್ಷಿಕೆಯಲ್ಲಿ ಅವರ ಬರಹಗಳ ಸೂಚಿಯನ್ನು ಪ್ರಕಟಿಸಲಾಗಿದೆ (1970). ಅದರಲ್ಲಿ 900ಕ್ಕೂ ಹೆಚ್ಚು ಬರಹಗಳು ಸೇರ್ಪಡೆಯಾಗಿದ್ದರೂ ಅನೇಕ ಲೇಖನಗಳು ಆ ಪಟ್ಟಿಯಿಂದ ಕೈತಪ್ಪಿ ಹೋಗಿರುವುದೂ ಉಂಟು!

ಡಾ|| ಚಟರ್ಜಿಯವರ ಪ್ರಕಟಿತ ಕೃತಿಗಳ ಪೈಕಿ ಹೆಸರಾಂತ ಕೃತಿಯೆಂದರೆ 'ದಿ ಒರಿಜನ್ ಅಂಡ್ ಡೆವಲಪ್‌ಮೆಂಟ್ ಆಫ್ ದಿ ಬಂಗಾಳಿ ಲಾಂಗ್ವೇಜ್'. ಬೃಹತ್ತು ಮಹತ್ತು ಎರಡರ ದೃಷ್ಟಿಯಿಂದಲೂ ಪ್ರಮುಖವಾದ ಈ ಕೃತಿ ಮೂರು ಸಂಪುಟಗಳಲ್ಲಿ ಪ್ರಕಟವಾಗಿದೆ. (ಸಂ. 1 ಮತ್ತು 2, 1970. ಸಂ. 3, 1972) ಮೂಲತಃ ಇದು ಲಂಡನ್ ವಿಶ್ವವಿದ್ಯಾಲಯಕ್ಕೆ ಡಿ.ಲಿಟ್, ಪದವಿಗಾಗಿ ಒಪ್ಪಿಸಿದ ಸಂಶೋಧನ ಬರಹ. "ಒಡಿಬಿಎಲ್" ಎಂದೇ ಈ ಗ್ರಂಥ ಹೆಸರಾಗಿದೆ. ಇಂಡೋ-ಆರ್ಯನ್ ಅಂಡ್ ಹಿಂದಿ (1960) ಎಂಬುದು ಚಟರ್ಜಿಯವರ ಮತ್ತೊಂದು ಪ್ರಸಿದ್ಧ ಕೃತಿ. ಇದರಲ್ಲಿ ಇಂಡೋ-ಆರ್ಯನ್

ಭಾಷೆಗಳ ಉಗಮ, ವಿಕಾಸ, ಹಿಂದೀ ಭಾಷೆಯ ಬೆಳೆವಣಿಗೆ, ಅದರ ಸ್ಥಾನಮಾನಗಳನ್ನು ಕುರಿತು ವಿವೇಚಿಸಲಾಗಿದೆ. ಲಾಂಗ್ವೇಜಸ್ ಅಂಡ್ ದಿ ಲಿಂಗ್ವಿಸ್ಟಿಕ್ ಪ್ರಾಬ್ಲಮ್ (1945), ದ್ರಾವಿಡಿಯನ್ (1965), ದಿ ಪೀಪಲ್, ಲಾಂಗ್ವೇಜ್ ಅಂಡ್ ಕಲ್ಚರ್ ಆಫ್ ಒರಿಸ್ಸಾ, ಬಾಲ್ಟ್ಸ್ ಅಂಡ್ ಆರ್ಯನ್ಸ್ (1968) ಲಾಂಗ್ವೇಜಸ್ ಅಂಡ್ ಲಿಟರೇಚರ್ಸ್ ಆಫ್ ಮಾಡರ್ನ್ ಇಂಡಿಯಾ (1963), ಇಂಡಿಯಾ ಅಂಡ್ ಇಥಿಯೋಪಿಯ, ವರ್ಲ್ಡ್ ಲಿಟರೇಚರ್ ಅಂಡ್ ಟಾಗೋರ್, ಇರಾನಿಯನಿಸಮ್, ಆಫ್ರಿಕನಿಸಮ್ (1960), ಜಯದೇವ (1973), ಗುರುಗೋಬಿಂದ ಸಿಂಗ್ (1967), ದಿ ರಾಮಾಯಣ, ಆಂಗ್ಲ ನಿಬಂಧ ಚಯನ (2 ಸಂಪುಟಗಳು), ರಾಜಸ್ಥಾನಿ ಭಾಷಾ ಮುಂತಾದ ಪುಸ್ತಕಗಳಲ್ಲಿ ಅವರ ವ್ಯಾಪಕ ವಿದ್ವತ್ತಿನ ಆಳವನ್ನು ಪರಿಶೀಲಿಸಬಹುದು.

ಭಾರತದಲ್ಲಿಯ ಭಾಷೆಗಳ ಸ್ಥಾನಮಾನದ ಬಗೆಗೆ ಡಾ|| ಚಟರ್ಜಿಯವರ ಚಿಂತನೆ ಗಾಢವಾದುದು. ಪ್ರತಿಯೊಂದು ಭಾಷಾವಲಯದಲ್ಲೂ ಆಯಾ ಭಾಷೆಯೇ ಪ್ರಥಮವೂ ಪ್ರಧಾನವೂ ಆದ ಸ್ಥಾನ ಪಡೆಯಬೇಕು, ಇಂಗ್ಲಿಷ್ ಅಧಿಕೃತ ಸಂಪರ್ಕ ಭಾಷೆಯಾಗಿ ಮುಂದುವರಿಯಬೇಕು. ಹಿಂದಿ ಭಾಷೆಯನ್ನು ಹೇರಬಾರದು. ಸಂಸ್ಕೃತವನ್ನೂ ಇತರ ಭಾರತೀಯ ಭಾಷೆಗಳನ್ನೂ ಜನ ಕಲಿಯಬೇಕು. ಭಾಷೆಗಳು ಮಾನವನಿಗೆ ದೊರಕಿದ ವರಗಳಾದ್ದರಿಂದ ಅವನ್ನು ಶಾಪವಾಗಿ ಪರಿವರ್ತಿಸಬಾರದು'—ಇದು ಡಾ|| ಚಟರ್ಜಿಯವರ ವಿಚಾರಧಾರೆ.

ಡಾ|| ಸುನೀತಿಕುಮಾರಚಟರ್ಜಿಯವರು ಅನೇಕ ವಿಶ್ವವಿದ್ಯಾಲಯಗಳೊಡನೆ ಸಂಪರ್ಕ ಪಡೆದಿದ್ದರು. ದೆಹಲಿ, ಉಸ್ಮಾನಿಯಾ, ರೋಮ್ ಮೊದಲಾದ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಪದವಿಗಳನ್ನು ನೀಡಿವೆ. ಭಾರತ ಸರ್ಕಾರ ಅವರಿಗೆ 1955ರಲ್ಲಿ 'ಪದ್ಮ ಭೂಷಣ' ಪ್ರಶಸ್ತಿ ನೀಡಿ ಗೌರವಿಸಿದೆ.

ವಿಶ್ವಮಾನವ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದ ಡಾ|| ಚಟರ್ಜಿಯವರು ಭಾಷೆಗಳ ಅಧ್ಯಯನದಿಂದ, ಸಾಹಿತ್ಯದ ಆಧಾರಗಳಿಂದ, ಸಂಸ್ಕೃತಿಯ ವಿಶ್ಲೇಷಣೆಯಿಂದ ಮಾನವನ ಏಕತೆಯನ್ನು ಕಂಡುಕೊಂಡ ಒಬ್ಬ ಮಹಾವ್ಯಕ್ತಿ, ಮಹಾಚೇತನ. ಭಾರತದ ಭಾಷೆ, ಸಾಹಿತ್ಯ, ಸಂಸ್ಕೃತಿ ಬಗೆಗೆ ವಿಶೇಷ ಆಸಕ್ತಿಯನ್ನೂ ಸಂಶೋಧನಾ ಪ್ರವೃತ್ತಿಯನ್ನೂ ಮೂಡಿಸಿದ ಈ ಮಹಾನ್‌ವ್ಯಕ್ತಿ 1977, ಮೇ 29 ರಂದು ಕಲ್ಕತ್ತೆಯಲ್ಲಿ ತೀರಿಹೋದರು.

ಗ್ರಂಥಋಣ

1 ಡಾ॰ ಹಾ॰ ಮಾ॰ ನಾಯಕ, ಸ್ತವನ, 1980

2 Indo Aryan and Hindi, 1960

3 Select papers : Angla-Nibandha-Chayana
Vol 1, 1972
Vol 2, 1979

ಜಾನ್ ಫೇತ್‌ಫುಲ್ ಫ್ಲೀಟ್

ಭಾರತೀಯ ಶಾಸನ ಕ್ಷೇತ್ರದಲ್ಲಿ ಜಾನ್ ಫೇತ್‌ಫುಲ್ ಫ್ಲೀಟ್ ಅವರದು ಬಹಳ ದೊಡ್ಡ ಹೆಸರು. ಅವರನ್ನು 'ಭಾರತ ಶಾಸನಶಾಸ್ತ್ರ ಪಿತಾಮಹ' ಎಂದು ಕರೆಯ ಬಹುದು. ಇಂಪೀರಿಯಲ್ ಗೆಜೆಟಿಯರ್‌ನ ದ್ವಿತೀಯ ಸಂಪುಟದಲ್ಲಿ ಅವರು ಬರೆದ ಎಪಿಗ್ರಫಿ ಎಂಬ ಸುದೀರ್ಘ ವಿದ್ವತ್‌ಸಂಪನ್ನ ಲೇಖನ ಭಾರತೀಯ ಶಾಸನಶಾಸ್ತ್ರವನ್ನು ಬಹುಮಟ್ಟಿಗೆ ಸಮಗ್ರವಾಗಿ ವಿವೇಚಿಸುವ ಮೊಟ್ಟ ಮೊದಲನೆಯ ಕೃತಿ ; ಅದು ಸುಮಾರು ಆರು ದಶಕಗಳ ಹಿಂದೆ ರಚಿತವಾಗಿದ್ದರೂ ಇಂದಿಗೂ ಮೂಲಭೂತ ಸ್ವರೂಪ ದ್ದಾಗಿದೆ ; ಅದರಲ್ಲಿ ಸೇರಿರುವ ಸಾಮಗ್ರಿಯ ಸಮೃದ್ಧಿ ಮತ್ತು ವಿವೇಚನೆಯ ಮೌಲಿಕತೆ ಅದನ್ನು ಅಭ್ಯಾಸಿಗಳ ಮತ್ತು ಸಂಶೋಧಕರ ಪಾಲಿಗೊಂದು ಅತ್ಯುಪಯುಕ್ತ ಕೈಪಿಡಿಯ ನ್ನಾಗಿ ಮಾಡಿದೆ.

ಸಿ. ಪಿ. ಕೆ.

(ಭಾರತೀಯ ಶಾಸನಶಾಸ್ತ್ರ ಪರಿಚಯ)

ಭಾರತೀಯ ಸಾಮ್ರಾಜ್ಯದ ಪ್ರಾಚೀನ ಹಾಗೂ ಮಧ್ಯಕಾಲೀನ ಚರಿತ್ರೆಯ ನಿಷ್ಕೃಷ್ಟ ಜ್ಞಾನವನ್ನು ಅಪೇಕ್ಷಿಸುವ ವಿದ್ವಾಂಸರ ಭಾವೀ ಪೀಳಿಗೆಗೆ ದಾರಿ ತೋರಿದ ಮೂಲ ಪ್ರವರ್ತಕರಲ್ಲಿ ಮುಂಚೂಣಿಯವರೆಂದು ಫ್ಲೀಟರನ್ನು ನಾನು ಪರಿಗಣಿಸುತ್ತೇನೆ . . . . ನಮ್ಮೆಲ್ಲರನ್ನೂ ಕುರಿತು ನಿರ್ಲಿಪ್ತವಾದ ಸಮತೂಕದ ತೀರ್ಪು ಕೊಡಬಲ್ಲ, ಇನ್ನೂ ಹುಟ್ಟದಿರುವ ಪೀಳಿಗೆಯ ಅಭಿಪ್ರಾಯವೂ ಇದೇ ಆಗಿರುವುದೆಂದು ಮಾತ್ರ ನಾನು ಆಶಿಸಬಲ್ಲೆ.

ರಿಚರ್ಡ್ ಸಿ. ಟೆಂಪಲ್

ಆರ್. ಎಸ್. ಶಿವಗಣೇಶಮೂರ್ತಿ

ಭಾರತೀಯ ಲಿಪಿಮಾಲೆಯ ಉಗಮ

ಇಂಗ್ಲಿಷ್ ಮೂಲ : **ಡಿ. ಆರ್. ಭಂಡಾರ್‌ಕರ್**

ಈ ದೇಶದಲ್ಲಿನ ಪ್ರಾಚೀನ ಶಿಲಾಲೇಖನಗಳನ್ನೆಲ್ಲ ಎರಡು ಭಿನ್ನ ಲಿಪಿಗಳಲ್ಲಿ ಕೆತ್ತಲಾಗಿದೆ. ಬ್ರಾಹ್ಮೀ ಎಂದು ಕರೆಯಲಾದುದೊಂದು—ಇದನ್ನು ಹಿಂದೂ ಲಿಪಿಗಳಂತೆ ಎಡದಿಂದ ಬಲಕ್ಕೆ ಬರೆಯಲಾಗುತ್ತಿತ್ತು. ಇನ್ನೊಂದನ್ನು ಖರೋಷ್ಠೀ ಎಂದು ಕರೆಯಲಾಗಿದೆ. ಪರ್ಷಿಯನ್, ಅರಾಬಿಕ್‌ಗಳಂತೆ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು ; ಇದು ಭಾರತದ ವಾಯುವ್ಯ ಭಾಗದಲ್ಲಿ ಮಾತ್ರ ಪ್ರಚಾರದಲ್ಲಿತ್ತು. ಮೊದಲನೆಯದಾದರೋ ಖರೋಷ್ಠಿಯನ್ನು ಬರೆಯಲಾಗುತ್ತಿದ್ದ ಸ್ಥಳಗಳೂ ಸೇರಿದಂತೆ ಭಾರತದ ಎಲ್ಲೆಡೆಯಲ್ಲಿಯೂ ಬಳಕೆಯಲ್ಲಿತ್ತು. ಮತ್ತೆ ಕ್ರಿ.ಶ. 4 ನೇ ಶತಮಾನಕ್ಕೆ ಮೊದಲೇ ಖರೋಷ್ಠೀ ಸ್ವಾಭಾವಿಕವಾದ ಮೃತಿಯನ್ನು ಅಪ್ಪಿತು. ಬ್ರಾಹ್ಮೀ ಭಾರತದಲ್ಲಷ್ಟೇ ಅಲ್ಲ ಸಿಲೋನ್, ಬರ್ಮ, ಟಿಬೆಟ್‌ಗಳದ್ದೇ ಆದ ಲಿಪಿಗಳಿಗೂ ಮೂಲವೆಂದು ಪರಿಗಣಿಸಲಾಗಿದೆ. ಖರೋಷ್ಠಿಯು ವಿದೇಶಿ ಮೂಲ ಹೊಂದಿದೆ ಎಂಬುದಕ್ಕೆ ವಿರೋಧವಿಲ್ಲ. ಆದರೆ, ಎರಡನೆಯದರ ವಿದೇಶ ಮೂಲತ್ವ ಇನ್ನು ತೀರ್ಮಾನವಾಗಿಲ್ಲ. ಜೊತೆಗೆ ಸಂಸ್ಕೃತ ಹಾಗು ಸಂಸ್ಕೃತ ಸಂಬದ್ಧ ಭಾಷೆಗಳನ್ನು ಬರೆಯಲು ಇದನ್ನು ಧ್ವನಿಶಾಸ್ತ್ರಜ್ಞರು ರೂಪಿಸಿದರೆಂದು ಒಪ್ಪಲಾಗಿದೆ. ಹೀಗೆ ಬ್ರಾಹ್ಮೀ ಭಾರತದ ನಿಜವಾದ ಪ್ರಾಚೀನ ಲಿಪಿ ಎಂದು ಭಾವಿಸುವುದು ಸಮಂಜಸವೇ ಆಗಿದೆ. ಈ ಕಾರಣದಿಂದ ಭಾರತೀಯ ಲಿಪಿಯ ಉಗಮ ಕುರಿತ ಚರ್ಚೆ ಎಂದರೆ ಕೇವಲ ಬ್ರಾಹ್ಮಿಯ ಉಗಮ ಕುರಿತದ್ದೇ ಎಂದು ಭಾವಿಸಬೇಕು.

ಭಾರತದಲ್ಲಿ ಬರವಣಿಗೆಯ ಉಗಮವನ್ನು ಸಮರ್ಪಕವಾಗಿ ಚರ್ಚಿಸುವ ಮೊದಲು ಬರವಣಿಗೆಯನ್ನು ಗುರುತಿಸಬಹುದಾದ ಪ್ರಾಚೀನತಮ ಕಾಲಹಾವುದೆಂದು ತಿಳಿಯುವುದು ಆವಶ್ಯಕ. ಈ ವಿಷಯಕ್ಕೆ ಬಹಳ ಅನ್ಯಾಯವಾಗಿದ್ದುದು ಮ್ಯಾಕ್ಸ್ ಮುಲ್ಲರನ ವಿಮರ್ಶಾರಹಿತ ಟೀಕೆಯಿಂದ. ಆತನಿಗೆ ವೇದವಾಙ್ಮಯದ ಬಗೆಗೆ ಅತಿಶಯವಾದ ಹಾಗು ನೈಜವಾದ ಆದರವಿದ್ದಿತು. ಆದರೆ ವೇದೋತ್ತರ ಯುಗವನ್ನು ಕುರಿತು ಅತ್ಯಲ್ಪ

ಆದರ ಅಥವಾ ಏನೂ ಇದ್ದಿಲ್ಲ. ಆತನ ಪ್ರಕಾರ ಪಾಣಿನಿಗೆ, ಬರವಣಿಗೆ ತಿಳಿದಿದ್ದೇ ಆಗಿದ್ದರೆ, ಅವನ ವ್ಯಾಕರಣ ಪಾರಿಭಾಷಿಕ ಪದಗಳಲ್ಲಿ ಕೆಲವಾದರೂ ಪದಗಳ ಮೂರ್ತ ಸ್ವರೂಪಕ್ಕೆ ಸೂಚನೆ ಕೊಡುತ್ತಲೇ ಇದ್ದುವು. ಲೇಖನದ ಅಸ್ತಿತ್ವದ ಊಹೆಗೆ ಅವಕಾಶ ಕೊಡುವ ಒಂದು ಶಬ್ದವೂ ಪಾಣಿನಿಯ ಪಾರಿಭಾಷಿಕ ಪದಗಳಲ್ಲಿ ಇಲ್ಲವೆಂದು ನಾನು ಸಮರ್ಥಿಸುತ್ತೇನೆ." ಎಂದು ಬರೆಯುತ್ತಾರೆ.1 ಈ ಮಾತು ಅತಿ ದಿಟ್ಟತನದ್ದು ಹಾಗೂ ಆಲೋಚನಾ ರಹಿತವಾದದ್ದು. ಪಾಣಿನಿಯ ಸೂತ್ರಪ್ರಯೋಗದಲ್ಲಿ ಲಿಪಿಕಾರ ಅಥವಾ ಲಿಬಿಕಾರ ಎಂಬ ಪದಗಳೇ ಇವೆ ; 'ಯವನಾನೀ' — ಕಾತ್ಯಾಯನ ಪತಂಜಲಿ ಪ್ರಕಾರ 'ಯವನರಲಿಪಿ' — ಎಂಬ ಪದವನ್ನು ಪ್ರಯೋಗಿಸಿದ್ದಾನೆ. ಮ್ಯಾಕ್ಸ್ ಮುಲ್ಲರ್ ತನ್ನ ಅಭಿಪ್ರಾಯವನ್ನು ಒಮ್ಮೆ ಖಡಾಖಂಡಿತವಾಗಿ ಹೇಳಿದ್ದರ ದುಷ್ಪರಿಣಾಮ ನಡೆದು ಹೋಯಿತು. ಅನಂತರ ಗೋಲ್ಡ್ ಸ್ಟಕರ್ ಈ ಬಗ್ಗೆ ಎತ್ತಿದ ಆಕ್ಷೇಪಗಳು ಎಷ್ಟೇ ಸಮರ್ಥವಾಗಿದ್ದರೂ ಪ್ರಯೋಜನವಾಗಲಿಲ್ಲ. ಮತ್ತು ಮ್ಯಾಕ್ಸ್ ಮುಲ್ಲರ್ ಪ್ರಕಾರ "ಪಾಣಿನಿ ಕ್ರಿ.ಪೂ. 4ನೇ ಶತಮಾನದ ಮಧ್ಯದಲ್ಲಿದ್ದ" ನಾದ್ದರಿಂದ ಕ್ರಿ.ಪೂ. 350ಕ್ಕೆ ಮೊದಲು ಭಾರತೀಯರಿಗೆ ಬರವಣಿಗೆ ತಿಳಿದಿರಲಿಲ್ಲ ಎಂಬ ಅಭಿಪ್ರಾಯ ಹೆಚ್ಚು ಕಡಿಮೆ ಸಾರ್ವತ್ರಿಕವಾಗಿಯೇ ಮೂಡಿತ್ತು.

ಇದಾದ ನಾಲ್ಕು ದಶಕಗಳ ಅನಂತರ ಪರಿಸ್ಥಿತಿ ಬದಲಿತು. ಯೂರೋಪಿನ ವಿದ್ವಾಂಸರು ಹೆಚ್ಚು ತಿಳಿಯಾದ ದೃಷ್ಟಿಯಲ್ಲಿ ಈ ವಿಷಯವನ್ನು ವೀಕ್ಷಿಸತೊಡಗಿದರು. ಇನ್ನೂ ಹೆಚ್ಚಿನ ಸೌಮ್ಯ ದೃಷ್ಟಿ ಹೊಂದಿದವರಲ್ಲಿ ಮೊದಲ ಗೌರವ ಸಲ್ಲಬೇಕಾದ್ದು ಜಾರ್ಜ್ ಬ್ಯೂಲರ್ ಅವರಿಗೆ. ಈ ವಿಷಯದ ಚರ್ಚೆಯಲ್ಲಿ ಈತನನ್ನು ಶೀಘ್ರವೇ ಅನುಸರಿಸಿದ ಪ್ರೊ. ರೈಸ್ ಡೇವಿಡ್ಸ್ ಅವರನ್ನು ಎರಡನೆಯವರಾಗಿ ಗೌರವಿಸಬೇಕು. ಈ ಇಬ್ಬರು ವಿದ್ವಾಂಸರೂ ದಾಕ್ಷಿಣಾತ್ಯ ಬೌದ್ಧರ ಪಾಲೀ ಧರ್ಮಗ್ರಂಥಗಳನ್ನು ಅವರಲ್ಲೂ ಮುಖ್ಯವಾಗಿ 'ಜಾತಕ'ಗಳನ್ನು ಧಾರಾಳವಾಗಿ ಬಳಸಿಕೊಂಡರು. ಬೌದ್ಧ ಸಾಹಿತ್ಯದಿಂದ ಇವರು ಕೂಡಿ ಹಾಕಿದ ಹಲವಾರು ಭಾಗಗಳನ್ನು ಇಲ್ಲಿ ಪುನರುಚ್ಚರಿಸುವುದರಲ್ಲಿ ಉಪಯೋಗವಿಲ್ಲ. ಅನೇಕ ಜನ ಅವರ ಗ್ರಂಥಗಳನ್ನು ಅಗಲೇ ಓದಿಯಾಗಿದೆ. ಅವರ ತೀರ್ಮಾನವನ್ನು ಪ್ರೊ. ರೈಸ್ ಡೇವಿಡ್ಸ್ ಅವರ ಈ ಮಾತುಗಳಲ್ಲಿ ಹೇಳಿದರೆ, ನಮ್ಮ ಉದ್ದೇಶಕ್ಕೆ ಸಾಕಾಗುತ್ತದೆ : "ಆದ ಕಾರಣ ಇದರಿಂದ ತಿಳಿದು ಬರುವುದು ಏನೆಂದರೆ, ಈ ಗ್ರಂಥ ಭಾಗಗಳು ರಚಿತವಾದ ಕಾಲದಲ್ಲಿ ಬರವಣಿಗೆ ಅಭ್ಯಾಸದಲ್ಲಿತ್ತು ; ಅಧಿಕಾರದ ಸೂಚನೆಗಳನ್ನು ಪ್ರಕಟಿಸಲೂ, ಸಾಮಾನ್ಯ ವ್ಯಕ್ತಿಗಳು ತಮ್ಮಲ್ಲಿ ಪತ್ರಮುಖೇನ ವ್ಯವಹರಿಸುವುದಕ್ಕೂ ಅದನ್ನು ಬಳಸಲಾಗುತ್ತಿತ್ತು. ಬರವಣಿಗೆ ಕಲೆ ಒಂದು ಸಾಧ್ಯವಾದ ಹಾಗು ಗೌರವಯುತವಾದ ಜೀವನೋಪಾಯವಾಗಿತ್ತು ; ಬರಹದ ಅರಿವು ಯಾವುದೊಂದು ಸಾಮಾಜಿಕ ವರ್ಗಕ್ಕೆ ಸೀಮಿತವಾಗಿರಲಿಲ್ಲ. ಜನಸಾಮಾನ್ಯರೂ ಸ್ತ್ರೀಯರೂ ಕಲಿಯುತ್ತಿದ್ದರು ; ಮಕ್ಕಳಿಗೆ ಆಟವೊದಗಿಸುವಷ್ಟು ಪ್ರಚಾರದಲ್ಲಿತ್ತು ; ಮೊದಲು ಕೆಲವರಿಗೆ ಮಾತ್ರ ಬರಹ ತಿಳಿದ ಕಾಲದಿಂದ ಈ ಹಂತದ ನಡುವೆ ದೀರ್ಘ

ಕಾಲ, ಬಹುಶಃ ಅನೇಕ ಶತಮಾನಗಳು, ಕಳೆದಿರಬೇಕು."2 ಬ್ಯೂಲರ್‌ನ ಪ್ರಕಾರ, ಕ್ರಿ.ಪೂ. 5 ಅಥವಾ ಬಹುಶಃ 6ನೇ ಶತಮಾನದಲ್ಲಿ ಭಾರತದಲ್ಲಿ ಬರಹ ಸಾಮಾನ್ಯ ಬಳಕೆಯಲ್ಲಿತ್ತು ಎಂಬುವನ್ನು ಪಾಲೀ ಧರ್ಮಗ್ರಂಥಗಳ ಸಾಕ್ಷ್ಯ ಸೂಚಿಸುತ್ತದೆ. ಆದ್ದರಿಂದ ಬರವಣಿಗೆಯ ಪ್ರವೇಶವನ್ನು ಕ್ರಿ.ಪೂ. ಏಳನೇ ಶತಮಾನಕ್ಕೆ ಹಾಕಬೇಕು. ಹೀಗೆ ಕ್ರಿ.ಪೂ. 4ನೇ ಶತಮಾನದಿಂದ 7ನೇ ಶತಮಾನಕ್ಕೆ ತಳ್ಳಿ ಯೂರೋಪು ವಿದ್ವಾಂಸರು ಭಾರತದಲ್ಲಿ ಬರವಣಿಗೆಯ ಪ್ರಾಚೀನತೆಗೆ ಮೂರು ಶತಕಗಳ ಲಾಭ ಮಾಡಿಕೊಟ್ಟರು.

ಈ ಗಡುವಿನಲ್ಲೇ ನಿಲ್ಲಬೇಕೇ, ಇನ್ನೂ ಹಿಂದಕ್ಕೆ ಹೋಗಲು ಸಾಧ್ಯವಿಲ್ಲವೇ ಎಂಬುದನ್ನು ಈಗ ಪರಿಶೀಲಿಸೋಣ. ಇದಕ್ಕೆ ವೇದೋತ್ತರ ವಾಙ್ಮಯದ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಪ್ರಯೋಜನಕಾರಿಯಲ್ಲ. ಏಕೆಂದರೆ, ಪ್ರಕ್ಷೇಪಗಳಿರಬಹುದೆಂಬ ಸಂದೇಹದಿಂದ ಮುಕ್ತವಾದ ಯಾವ ಗ್ರಂಥವೂ ಈ ವಾಙ್ಮಯ ಭಾಗದಲ್ಲಿಲ್ಲ ಎನ್ನಬಹುದು. ಪಾಣಿನಿ ಕಾಲದಲ್ಲಿ ಅತ್ಯಂತ ಪರಿಷ್ಕಾರವನ್ನು ಹೊಂದಿದ ವ್ಯಾಕರಣ ಶಾಸ್ತ್ರ ಆಶಾಕಿರಣ ಮೂಡಿಸುವುದರಲ್ಲಿ ಸಂಶಯವಿಲ್ಲ. ಇನ್ನೂ ಹೆಚ್ಚು ಬೆಳಕು ಚೆಲ್ಲುವುದೇ ಎಂದು ಈ ಶಾಸ್ತ್ರದ ಕಡೆಗೆ ಆಕಾಂಕ್ಷಾ ದೃಷ್ಟಿ ಹಾಯಿಸುವುದು ಸ್ವಾಭಾವಿಕವೆಂದು ನಾನು ಒಪ್ಪುತ್ತೇನೆ. ಏಕೆಂದರೆ, ಶಾಸ್ತ್ರೀಯ ಬಳಕೆಗಾಗಿ ಸಂಸ್ಕೃತ ಧ್ವನಿ ವಿಜ್ಞಾನಿಗಳು ಬ್ರಾಹ್ಮೀ ಲಿಪಿಯನ್ನು ರೂಪಿಸಿದರೆಂದರೆಂಬುದು ಎಲ್ಲರೂ ಒಪ್ಪಿರುವ ಖಚಿತವಾದ ವಿಷಯ. ಆದರೆ, ಈ ವಿಷಯವೂ ಸ್ಥಿರ ಆಧಾರದ ಮೇಲಿಲ್ಲವೇನೋ ಎನಿಸುತ್ತದೆ. ಪಾಣಿನಿಯ ಕಾಲ ತೀವ್ರ ಚರ್ಚೆಗೆ ಒಳಗಾಗಿದೆ. ಗೋಲ್ಡ್ ಸ್ಟುಕರ್ ಮತ್ತು ಆರ್.ಜಿ. ಭಂಡಾರಕರ್ ಹೇಳುವಂತೆ, ಪಾಣಿನಿಯ ಕಾಲ ಕ್ರಿ.ಪೂ. 7 ನೇ ಶತಮಾನವೆಂಬುದರಲ್ಲಿ ನನಗೇನೂ ಸಂಶಯವಿಲ್ಲದಿದ್ದರೂ ಯೂರೋಪಿನ ಬಹುಪಾಲು ವಿದ್ವಾಂಸರು, 4ನೇ ಶತಮಾನಕ್ಕೆ ಮೊದಲು ಈ ವೈಯಾಕರಣಿ ಇದ್ದಿರಲಾರ ಎನ್ನುತ್ತಾರೆ. ಆದಕಾರಣ 'ಅಷ್ಟಾಧ್ಯಾಯೀ' ಒದಗಿಸುವ ಸಾಕ್ಷ್ಯಗಳನ್ನು ನಾವು ಇಚ್ಛಿಸಿದಷ್ಟು ಉತ್ತಮವಾಗಿ ಉಪಯೋಗಿಸಲು ಸಾಧ್ಯವಿಲ್ಲ. ನಾನಾಗಲೇ ತೋರಿಸಿದಂತೆ, ಪಾಣಿನಿ ತನ್ನ ಸೂತ್ರಗಳಲ್ಲಿ ಒಮ್ಮೆ 'ಲಿಪಿಕಾರ) =ಬರಹಗಾರ, ಬರಹ-ವೃತ್ತಿಯುಳ್ಳವ) ಎಂಬ ಪದವನ್ನು ಪ್ರಯೋಗಿಸುತ್ತಾನೆ ಮತ್ತು 'ಯವನಾನೀ' (=ಯವನರ ಬರವಣಿಗೆ)ಯನ್ನು ಉಲ್ಲೇಖಿಸುತ್ತಾನೆ. ಪಾಣಿನಿಗೆ ಬರಹದ ಕಲೆ ತಿಳಿಯದಿದ್ದರೆ, ಅದ್ಭುತವಾದ ರಚನೆಯನ್ನು ತೋರಿಸುವ ಮತ್ತು ಸೂತ್ರಗಳಲ್ಲಿ ಧಾರಾಳವಾಗಿ ಬಳಸಲಾದ ಬೀಜಗಣಿತದಂಥ ಸಂಜ್ಞೆಗಳಿಂದ ಜಟಿಲವಾಗಿರುವ 'ಅಷ್ಟಾಧ್ಯಾಯೀ' ಸಾಧ್ಯವಾಗುತ್ತಿತ್ತೇ ? ಮಾನವ ವ್ಯಕ್ತಿಯೊಬ್ಬನಿಗೆ ಅದೆನಿಷ್ಟೇ ಪ್ರತಿಭಾನ್ವಿತನಾಗಿದ್ದರೂ, ಬರವಣಿಗೆಯ ಒಂದಿಷ್ಟು ಅರಿವಿಲ್ಲದೆ ಇಂತಹ ಬೌದ್ಧಿಕ ಚಮತ್ಕೃತಿಯೊಂದು ಸಾಧ್ಯವೇ ? ಆದ್ದರಿಂದ ಸುಮತಿಯಾದ ಯಾವ ವಿದ್ವಾಂಸನೂ ಮ್ಯಾಕ್ಸ್ ಮುಲ್ಲರನ ಸಂಗಡ ಪಾಣಿನಿಯ ಕಾಲದಲ್ಲಿ ಬರವಣಿಗೆ ಅಸ್ತಿತ್ವದಲ್ಲಿ ಇರಲಿಲ್ಲವೆಂದು ಸಮರ್ಥಿಸಲಾರ. ಪಾಣಿನಿಯ ಕಾಲ ಕ್ರಿ.ಪೂ.

7ನೇ ಶತಮಾನವಾದರೆ, ಲೇಖನದ ಪ್ರವೇಶವನ್ನು ಇನ್ನೆರಡು ಶತಮಾನಗಳು ಮೊದಲಿಗೆ ಹೋಗುತ್ತದೆ. ಆದರೆ ಮೇಲೆ ಹೇಳಿದಂತೆ, ಯೂರೋಪಿನ ಅನೇಕ ವಿದ್ವಾಂಸರು ಪಾಣಿನಿಯನ್ನು 4 ನೇ ಶತಮಾನದವನು ಎನ್ನುತ್ತಾರೆ. ಆದ್ದರಿಂದ ಮೇಲಿನ ವಾದಸರಣಿ ಅವರಿಗೆ ಹಿಡಿಸುವುದಿಲ್ಲ. ಪಾಣಿನಿಗೆ ಮೊದಲೂ ವ್ಯಾಕರಣ ಶಾಸ್ತ್ರದಲ್ಲಿ ಚರ್ಚೆ ನಡೆಯುತ್ತಿದ್ದುದರಲ್ಲಿ ಸಂಶಯವಿಲ್ಲ ; ಆದರೆ ಅದನ್ನಿಲ್ಲಿ ಪ್ರಸ್ತಾಪಿಸಿ ಪ್ರಯೋಜನವಿಲ್ಲ. ಪಾಣಿನಿ ತನ್ನ ಸೂತ್ರಗಳಲ್ಲಿ ಔತ್ತರೇಯ ಹಾಗೂ ಪೌರ್ವಾತ್ಯ ವ್ಯಾಕರಣ ಶಾಖೆಗಳಿಗೆ ಸೂಚನೆಯಿತ್ತಿದ್ದಾನೆ. ಹಾಗೂ ಕಡೆಯ ಪಕ್ಷ ಹತ್ತು ಮಂದಿ ಗ್ರಂಥಕಾರರನ್ನು ಹೆಸರಿಸಿದ್ದಾನೆ. ಉದಾಹರಣೆಗೆ—ಗಾರ್ಗ್ಯ, ಗಾಲವ, ಶಾಕಟಾಯನ, ಶಾಕಲ್ಯ ಇತ್ಯಾದಿ. ಈ ನಾಲ್ಕು ವೈಯಾಕರಣಿಗಳನ್ನು ಪಾಣಿನಿಗೂ ಮೊದಲಿದ್ದ ಯಾಸ್ಕನೂ ಹೆಸರಿಸಿದ್ದಾನೆ. ಆದ್ದರಿಂದ ವ್ಯಾಕರಣ ಕ್ಷೇತ್ರದಲ್ಲಿ ಬೌದ್ಧಿಕ ಚಟುವಟಿಕೆ ಪಾಣಿನಿಗಿಂತಲೂ ಬಹುಕಾಲ ಮೊದಲೇ ನಡೆದಿತ್ತು. ಈ ದೃಷ್ಟಿಗೆ ಅನುಗುಣವಾಗಿ ಬ್ರಾಹ್ಮಣಗಳು, ಆರಣ್ಯಕಗಳು ಹಾಗು ಉಪನಿಷತ್ತುಗಳಲ್ಲಿ ಭಾಷೆಗೆ ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ಚರ್ಚೆಗಳಿಗೆ ಸೂಚನೆಗಳಿರುವುದನ್ನು ಕಾಣುತ್ತೇವೆ. ಇಲ್ಲಿ ಮ್ಯಾಕ್‌ಡೊನೆಲ್ ಮತ್ತು ಕೀತ್ ಅವರು 'ವೇದಿಕ್ ಇಂಡೆಕ್ಸ್'ನಲ್ಲಿ 'ಸ್ವರ ಮತ್ತು 'ಬಹುವಚನ' ಎಂಬ ಪದಗಳ ಬಗ್ಗೆ ಹೇಳಿರುವುದರ ಕಡೆಗೆ ಓದುಗರ ಗಮನ ಸೆಳೆಯಬಯಸುತ್ತೇನೆ. ಆದರೆ ವೇದವಾಙ್ಮಯದಲ್ಲಿನ ಈ ಅಂಶಗಳು ಭಾಷಾ ವಿಜ್ಞಾನ ಮತ್ತೆ ವ್ಯಾಕರಣ ಕ್ಷೇತ್ರಗಳಲ್ಲಿ ನಡೆದ ಪ್ರಥಮ ಪ್ರಯತ್ನದ ವಿಚಾರಗಳೇ ಹೊರತು ಆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಯಾವ ಪಂಥಗಳ ಅಸ್ತಿತ್ವಕ್ಕೂ ಸಾಕ್ಷ್ಯಗಳೆಂದು ಹೇಳಲಾಗುವುದಿಲ್ಲ. ಭಾಷಾ ವಿಜ್ಞಾನ ಅಥವಾ ವ್ಯಾಕರಣಶಾಸ್ತ್ರ ಅಸ್ತಿತ್ವದಲ್ಲಿ ಇವೆ ಎಂದಾಗ ಅದಕ್ಕೆ ಮೊದಲು ಬರಹದ ಅರಿವು ಮತ್ತು ಉಪಯೋಗ ಇತ್ತೆಂದು ಊಹಿಸುವುದು ನ್ಯಾಯಸಮ್ಮತವೇ ಆಗಿದೆ ; ಮತ್ತೆ ಕೇವಲ ಪ್ರಥಮ ಯತ್ನದ ವಿಚಾರಗಳು ಆ ಸಿದ್ಧಾಂತಕ್ಕೆ ಅವಕಾಶವೀಯುವುದಿಲ್ಲ. ಗಾರ್ಗ್ಯ, ಗಾಲವ, ಶಾಕಟಾಯನ ಮತ್ತು ಶಾಕಲ್ಯ--ಇವರುಗಳು ವ್ಯಾಕರಣದ ಕೆಲವು ಪಂಥಗಳನ್ನು ಸ್ಥಾಪಿಸಿದವರಂತೆ ಕಾಣುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಆದರೆ, ಪಾಣಿನಿಯನ್ನೇ ಸರಿಯಾಗಿಯೋ ತಪ್ಪಾಗಿಯೋ ಕ್ರಿ.ಪೂ. 4ನೇ ಶತಕಕ್ಕೆ ತಳ್ಳಿರುವಾಗ, ವ್ಯಾಕರಣದ ಪಂಥಗಳನ್ನು ಸ್ಥಾಪಿಸಿದ ಇವರಾರಿಗೂ ಕ್ರಿ.ಪೂ. 7ನೇ ಶತಕಕ್ಕೂ ಮೊದಲಿನ ಕಾಲವನ್ನು ಹೇಳಲೇಬೇಕಾದುದಿಲ್ಲ. ಈ ಕಾಲದಲ್ಲಿಯೇ ಬ್ಯೂಲರ್ ಮತ್ತಿತರ ಯೂರೋಪಿಯನ್ ವಿದ್ವಾಂಸರ ಪ್ರಕಾರ ಬರಹವೂ ಭಾರತಕ್ಕೆ ಪರಿಚಯವಾದುದು.

ಹೀಗೆ ವೇದೋತ್ತರಕಾಲೀನ ಸಾಮಗ್ರಿಗಳಲ್ಲಿ ತಡಕಾಡುವುದರಿಂದಲೂ ವ್ಯಾಕರಣ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ನಿಲುವು ತಾಳುವುದರಿಂದಲೂ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಮನಗಂಡೆವು. ಕ್ರಿ.ಪೂ. 7ನೇ ಶತಕಕ್ಕೂ ಮೊದಲು ಬರವಣಿಗೆಯ ಕಲೆಯು ಭಾರತಕ್ಕೆ ತಿಳಿದಿತ್ತೇ ಎಂಬುದನ್ನು ಪರೀಕ್ಷಿಸಬೇಕಾ

ದರೆ, ವೇದಕಾಲೀನ ವಾಙ್ಮಯಕ್ಕೆ ಮಾತ್ರವೇ ಗಮನ ಹರಿಸುವುದು ಅವಶ್ಯಕ. ಇದರಲ್ಲಿ ವ್ಯಾಕರಣ, ಛಂದಸ್ಸು, ನಿಘಂಟು ಇವುಗಳಿಗೆ ಸಂಬಂಧಿಸಿದ ಮಾತುಗಳೇ ಅಲ್ಲದೆ ನೇರವಾಗಿ ಅಥವಾ ಅಪರೋಕ್ಷವಾಗಿ ಬರವಣಿಗೆಗೆ ಸಂಬಂಧಪಟ್ಟ ಮಾತುಗಳು ಏನಾದರೂ ಇವೆಯೋ ಎಂಬುದನ್ನು ಅನ್ವೇಷಿಸಬೇಕು. ಅಂತಹ ಸಂದರ್ಭಗಳಲ್ಲಿ ನನಗೆ ತೋರಿಸಲು ಸಾಧ್ಯವಾದ ಕೆಲವನ್ನು ಈ ವಿಷಯದಲ್ಲಿ ಆಸಕ್ತರಾದ ವಿದ್ವಾಂಸರ ಅವಗಾಹನೆಗಾಗಿಯೂ, ಈ ದಿಕ್ಕಿನಲ್ಲಿ ಅವರ ಪರಿಶೀಲನೆಯನ್ನು ಕುದುರಿಸಲೂ ಸಹ ಕೊಡುತ್ತೇನೆ.

ಬರವಣಿಗೆಯ ಎರಡು ಮುಖ್ಯ ಲಕ್ಷಣಗಳೆಂದರೆ, (1) ಸಂಖ್ಯಾ ಚಿಹ್ನೆ ಮತ್ತು (2) ಲಿಪಿ. ಮೊದಲು ವೇದ ಭಾರತದ ಆರ್ಯರಿಗೆ ಅಂಕ ಚಿಹ್ನೆಗಳ ಪರಿಚಯವಿತ್ತೆಂದು ಹೇಳಲು ಸಾಕ್ಷ್ಯವೇನಾದರೂ ಇದೆಯೋ ಎಂದು ನೋಡಬಹುದು. 'ಋಗ್ವೇದ'ದ ಸೂಕ್ತವೊಂದರಲ್ಲಿ (10.62) 'ಅಷ್ಟಕರ್ಣೀ ಹಸುಗಳು' ಎಂಬ ಮಾತು ಬಂದಿದೆ. ಇಲ್ಲಿ 'ಅಷ್ಟಕರ್ಣೀ' ಎಂಬ ಪದದ ಅರ್ಥ ಏನಿರಬಹುದು ? ಪಾಣಿನಿಯ ಅಧ್ಯಯನ ಮಾಡಿರುವವರಿಗೆ, ಈ ಸಂಬಂಧದಲ್ಲಿ ಅವನ ಈ ಸೂತ್ರವೊಂದು ನೆನಪಿಗೆ ಬರುತ್ತದೆ. 'ಕರ್ಣೇ ಲಕ್ಷಣಸ್ಯಾವಿಷ್ಟಾಷ್ಟ – ಪಂಚ – ಮಣಿ – ಭಿನ್ನ – ಭಿನ್ನ – ಸ್ರುವ – ಸ್ವಸ್ತಿಕಸ್ಯ' (6.3.115). 'ಕರ್ಣ' ಪದ ಕೊನೆಯಲ್ಲಿರುವ ಸಮಾಸವೊಂದರ ಅರ್ಥ 'ದನಗಳ ಕಿವಿಗಳ ಮೇಲೆ ಸ್ವಾಮ್ಯ ಸೂಚಕ ಗುರುತು' ಎಂದಾದರೆ, 'ಕರ್ಣ' ಪದದ ಹಿಂದಿನ ಸ್ವರ ದೀರ್ಘವಾಗಿರುತ್ತದೆ ಎಷ್ಟ ಅಷ್ಟ ಇತ್ಯಾದಿ ಗುರುತುಗಳಾದರೆ, ದೀರ್ಘವಿಲ್ಲ— ಎಂದು ಈ ಸೂತ್ರ ಬೋಧಿಸುತ್ತದೆ. ಉದಾ : 'ದಾತ್ರಾಕರ್ಣ' ಎಂದರೆ (ಮಾಲೀಕನಿಂದ) ಕಿವಿಯ ಮೇಲೆ ಗಾತ್ರದ (= ಕುಡುಗೋಲಿನ) (ಗುರುತು ಮಾಡಲ್ಪಟ್ಟ ಪ್ರಾಣಿ) ಎಂದರ್ಥ. ಇದಕ್ಕೆ ಕೆಲವು ಅಪವಾದಗಳಿವೆ. ವಿಷ್ಟ, ಅಷ್ಟ, ಪಂಚ ಮೊದಲಾದ ಒಂಬತ್ತು ಪದಗಳು ಪೂರ್ವಪದಗಳಾಗಿದ್ದರೆ, ದೀರ್ಘ ಬರುವುದಿಲ್ಲ. ಎಂದರೆ ಅಷ್ಟಕರ್ಣ ಎಂಬ ಪದವಿದೆಯೋ ಹೊರತು ಅಷ್ಟಾಕರ್ಣ ಎಂದಲ್ಲ. ದುರ್ದೈವದಿಂದ, ಪತಂಜಲಿ ಈ ಸೂತ್ರದ ಮೇಲೆ ಯಾವ ವ್ಯಾಖ್ಯೆಯನ್ನೂ ಮಾಡುವುದಿಲ್ಲ. ಆದಕಾರಣ, ಈ ಸೂತ್ರದ ಪ್ರಾಚೀನತಮ ವ್ಯಾಖ್ಯಾಕಾರನೆಂದರೆ, ಕಾಶಿಕಾಕಾರ. ಈ ಸೂತ್ರದಲ್ಲಿರುವ 'ಅಷ್ಟ-ಪಂಚ' ಶಬ್ದಗಳನ್ನು 'ಎಂಟು' ಮತ್ತು ('ಐದು') ಎಂಬ ಅರ್ಥದ ಸಂಖ್ಯಾವಾಚಕ 'ಅಷ್ಟನ್' ಮತ್ತು 'ಪಂಚನ್' ಎಂದು ತೆಗೆದುಕೊಳ್ಳುತ್ತಾನೆ ಎಂಬುದರಲ್ಲಿ ಸಂದೇಹವಿಲ್ಲ. ಈ ವಿವರಣೆಯನ್ನು ಅನುಸರಿಸಿದರೆ, 'ಅಷ್ಟಕರ್ಣ' ಎಂದರೆ 'ಕಿವಿಯ ಮೇಲೆ ಎಂಟು (ಸಂಖ್ಯೆಯ) ಚಿಹ್ನೆಯ ಗುರುತು ಹೊಂದಿರುವುದು' ಎಂದಾಗುತ್ತದೆ. ಮತ್ತು ಇದರಿಂದ 'ಋಗ್ವೇದ' ಕಾಲೀನ ಆರ್ಯರಿಗೆ ಸಂಖ್ಯಾ ಚಿಹ್ನೆಗಳ ಪರಿಚಯವಿತ್ತೆಂದೂ ಅವನ್ನು ಮಾಲಿಕತ್ವದ ಗುರುತಿಗಾಗಿ ತಮ್ಮ ದನಗಳ ಕಿವಿಗಳ ಮೇಲೆ ಹಾಕುತ್ತಿದ್ದರೆಂದೂ ಖಚಿತವಾಗಿ ನಿರ್ಣಯಿಸಬಹುದು. 'ಕಾಶಿಕಾ'ದ ವಿವರಣೆ ಸರಿ ಎಂದು ತೋರುವುದಿಲ್ಲ. 'ಮೈತ್ರಾಯಣೀ ಸಂಹಿತೆ"ಯಲ್ಲಿ 'ಗುರುತು ಮಾಡು' ಎಂಬ ಅರ್ಥದಲ್ಲಿ 'ಅಕ್ಷ್' ಎಂಬ ಧಾತುವನ್ನು ಪತ್ತೆ ಹಚ್ಚಲಾಗಿದೆ. ಈ ಸಂಹಿತೆಯ ಒಂದು ಕಡೆ ಜೋಡೊಂದು

ರೀತಿಯ ಕಿವಿ ಗುರುತುಳ್ಳ ದನಗಳ ಬಗ್ಗೆ ಸೂಚಿಸಿವೆ. 'ಅಕ್ಷಿಕ' 'ಅಷ್ಟ' ಎರಡೂ 'ಅಕ್ಷ್' ಧಾತುವಿನ ಭೂತಕೃದಂತ ರೂಪಗಳು. ಎಂದರೆ, 'ಅಷ್ಟಕರ್ಣ' ಎಂದರೆ 'ಗುರ್ತು ಮಾಡಿದ ಕಿವಿಯುಳ್ಳ' ಎಂದು ಅರ್ಥ ಹೇಳುವುದು ಹೆಚ್ಚು ಸರಳವಾಗಿರುತ್ತದೆ. ಇದೇ ಕಾರಣದಿಂದ, 'ಪಂಚ' ಶಬ್ದವನ್ನು 'ಪಂಚಕ' ಎಂಬುದಕ್ಕೆ ಬದಲು 'ಪಂಚ' (=ಹರಡಿದ) ಎಂದು ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆ. ಈ ರೀತಿ 'ಋಗ್ವೇದ'ದಲ್ಲಿ ಕಂಡು ಬರುವ 'ಅಷ್ಟಕರ್ಣ' ಎಂಬ ಪದ ಸಂಖ್ಯಾ ಚಿಹ್ನೆಗಳನ್ನು ಆರ್ಯರು ಬಳಸುತ್ತಿದ್ದರು ಎಂಬುದಕ್ಕೆ ಉಪಷ್ಟಂಭಕವಾದ ಸಾಕ್ಷ್ಯವಾಗುವುದಿಲ್ಲ. ಆದರೆ ಈ ಸಾಕ್ಷ್ಯಕ್ಕೆ ಬೆಲೆಯಿಲ್ಲವಾದರೂ, ಅವರಿಗೆ ಸಂಖ್ಯಾ ಚಿಹ್ನೆಗಳ ಅರಿವಿತ್ತೆಂಬ ಊಹೆಯನ್ನು ಬೇರೊಂದು ರೀತಿಯಲ್ಲಿ ನಿಷ್ಕರ್ಷಿಸಬಹುದು. ವೇದಕಾಲದಲ್ಲಿ ಆರ್ಯರ ಎಣಿಕೆಯ ತಿಳುವಳಿಕೆ ಅತಿ ಪ್ರವೃತ್ತಿ ಸ್ವರೂಪದ್ದೆಂದು ಸಂಶಯಾತೀತವಾಗಿ ಪ್ರತಿಪಾದಿಸಬಹುದಾದರೆ, ಅಂಕಗಳನ್ನು ಗುರುತು ಮಾಡುವ ಅರಿವು ಅವರಿಗಿರಲಿಲ್ಲವೆಂದು ಹೇಳಲು ಸಾಧ್ಯವೇ ಇಲ್ಲ. 'ಋಗ್ವೇದ'ದಲ್ಲಿ 'ಅಯುತ' (=10,000) ಎಂಬ ಪದವನ್ನು ಕಾಣಬಹುದು. ಕೆಲವು ಋಕ್‌ಗಳು ಇನ್ನೂ ಅಧಿಕ ಸಂಖ್ಯೆಯನ್ನು ಹೇಳುತ್ತವೆ ; ಉದಾ : ಶತ-ಸಹಸ್ರ (100,000-ಋ. 4·32·18 ; 8·32·18). ಕಾಲಾನುಕ್ರಮದಲ್ಲಿ 'ಋಗ್ವೇದ'ದಿಂದ ಹೆಚ್ಚು ದೂರವಲ್ಲದ 'ಯಜುರ್ವೇದ'ದಲ್ಲೀಗ ಅತ್ಯಧಿಕ ಅಂಕಗಳ ಹೆಸರುಗಳ ಪಟ್ಟಿಯನ್ನೇ ಕಾಣುತ್ತೇವೆ. 'ವಾಜಸನೇಯೀ ಸಂಹಿತೆ'ಯ ಸೂತ್ರವೊಂದನ್ನು ಹೀಗೆ ಭಾಷಾಂತರಿಸಬಹುದು :

> "(ಯಜ್ಞ ಸಂಬಂಧಿಯಾದ) ಈ ಇಟ್ಟಿಗೆಗಳು ನನಗೆ ಈ ಲೋಕದಲ್ಲಿ ಹಾಗೂ ಪರಲೋಕದಲ್ಲಿ 1(ಏಕ), 10(ದಶ), 100(ಶತ), 1000(ಸಹಸ್ರ), 10,000(ಅಯುತ), 100,000(ನಿಯುತ), 1,000,000(ಪ್ರಯುತ) 10,000,000(ಅರ್ಬುದ), 100,000,000 (ನ್ಯರ್ಬುದ), 1,000,000,000(ಸಮುದ್ರ), 10,000,000,000 (ಮಧ್ಯ) 100,000,000,000 (ಅಂತ), 1,000,000,000,000 (ಪರಾರ್ಧ) —ಈ ಸಂಖ್ಯೆಯ ಹಸುಗಳನ್ನು ಗಳಿಸಿಕೊಡಲಿ."

ಇಲ್ಲಿ ಹೇಳಲಾದ ಅಂಕಿಗಳಲ್ಲಿ ಗರಿಷ್ಠವಾದುದು 'ಪರಾರ್ಧ'—ನೂರು ಶತಕೋಟಿ. 'ತೈತ್ತಿರೀಯ ಸಂಹಿತೆ'ಯಲ್ಲಿ ಮೇಲೆ ಹೇಳಿದ್ದಕ್ಕೆ ಸರ್ವಸಮನಾದ ಪಟ್ಟಿ ಎರಡು ಕಡೆ ಕಂಡುಬರುತ್ತದೆ. ಇದೇ ಪಟ್ಟಿ ಅಲ್ಪ ವ್ಯತ್ಯಾಸಗಳೊಂದಿಗೆ 'ಕಾಠಕಸಂಹಿತೆ'ಯಲ್ಲಿವೆ ; 'ನಿಯುತ'ವನ್ನು 'ಪ್ರಯುತ'ವೆಂದೂ, 'ಪ್ರಯುತ'ವನ್ನು 'ನಿಯುತ' ಎಂದೂ ಹೇಳಿವೆ; ಮತ್ತು 'ನ್ಯರ್ಬುದ'ದ ಅನಂತರ 'ಬದ್ವ' ಎಂಬ ಹೊಸ ಅಂಕವನ್ನು ಸೇರಿಸಲಾಗಿದೆ ; ಇದರಿಂದಾಗಿ ಮುಂದಿನ ಅಂಕಗಳೆಲ್ಲ ಹತ್ತು ಪಟ್ಟು ಹೆಚ್ಚಾಗಿವೆ ಮತ್ತು 'ಪರಾರ್ಧ', ಇದರಲ್ಲಿ ಸಾವಿರ ಶತಕೋಟಿ. 'ಯಜುರ್ವೇದ' ಕಾಲಕ್ಕೆ ಆಗಲೇ ಎಣಿಕೆಯ ಹಲವು ಕ್ರಮಗಳು ಹುಟ್ಟಿದ್ದು 'ಬ್ರಾಹ್ಮಣ' ಕಾಲದಲ್ಲಿ ಅವು ವೃದ್ಧಿ ಹೊಂದಿದವು ಎಂದು

ತೋರುತ್ತವೆ ಮತ್ತೆ ಇದೇ ಕಾಲದಲ್ಲಿಯೇ ಆರ್ಯರ ಅಂಕಗಣಿತ ಜ್ಞಾನವೂ ಪ್ರವೃದ್ಧ ಮಾನಕ್ಕೆ ಬಂದುದನ್ನು ಕಾಣುತ್ತೇವೆ. 'ಪಂಚವಿಂಶ ಬ್ರಾಹ್ಮಣ'ದಲ್ಲಿ ಚಿನ್ನದಲ್ಲಿ ಕೊಡಬೇಕಾದ ದಕ್ಷಿಣೆಗಳ ಒಂದು ದೀರ್ಘಪಟ್ಟಿ ಇದೆ. ಇದರಲ್ಲಿ ಪ್ರತಿಸಂಖ್ಯೆಯೂ ಅದರ ಹಿಂದಿನದರ ಎರಡರಷ್ಟು ಆಗಿದೆ. ಅದು ಹನ್ನೆರಡು ಎಂಬ ಸಂಖ್ಯೆಯಿಂದ ಆರಂಭವಾಗಿ ಜ್ಯಾಮಿತಿ ಸರಣಿಯಲ್ಲಿ ವೃದ್ಧಿ ಹೊಂದುತ್ತ 393,216 ಎಂಬ ಸಂಖ್ಯೆಯನ್ನು ಮುಟ್ಟುತ್ತವೆ. ಈ ಗುಣಾಕಾರದ ವಿಲೋಮ ಸರಣಿಯ ಒಂದು ಉದಾಹರಣೆಯು ಉಪಲಬ್ಧವಿದೆ. ಇದರಲ್ಲಿ ಪ್ರತಿಸಂಖ್ಯೆಯೂ ಅದರ ಹಿಂದಿನದರ 1/15 ರಷ್ಟು ಆಗಿದೆ. ಉದಾ : 'ಶತಪಥಬ್ರಾಹ್ಮಣ'ದಲ್ಲಿ ಹಗಲನ್ನು 15 'ಮುಹೂರ್ತ'ಗಳಾಗಿ, ಮುಹೂರ್ತವೊಂದನ್ನು 15 'ಕ್ಷಿಪ್ರ'ಗಳಾಗಿ. 'ಕ್ಷಿಪ್ರ'ವೊಂದನ್ನು 15 'ಏತರ್ಹಿ'ಗಳಾಗಿ, 'ಏತರ್ಹಿ'ಯೊಂದನ್ನು 15 'ಇದಾನೀಂ'ಗಳಾಗಿ, 'ಇದಾನೀಂ'ಯೊಂದನ್ನು 15 'ಪ್ರಾಣ'ಗಳಾಗಿ ವಿಭಾಗ ಮಾಡಿದ್ದಾರೆ. ಈ ರೀತಿಯಲ್ಲಿ ಹಗಲು 7,59,375 ಭಾಗವಾಗುತ್ತದೆ. ಭಿನ್ನರಾಶಿಗಳ ಅರಿವಾದರೋ ಆರ್ಯರಿಗೆ 'ಋಗ್ವೇದ'ದ ಕಾಲದಲ್ಲಿಯೂ ಇತ್ತು. ಅರ್ಧ($\frac{1}{2}$), ಪಾದ($\frac{1}{4}$), ತ್ರಿಪಾದ($\frac{3}{4}$), ಶಫ (1/8), ಮತ್ತು ಕಲಾ (1/16) ಎಂಬ ಪದಗಳ ಬಳಕೆಯಿದೆ. ಅಂತೆಯೇ, 'ಋಗ್ವೇದ' 6·69·8 ರಲ್ಲಿ, ಇಂದ್ರ, ಮತ್ತು ವಿಷ್ಣು ಸಹಕೃತ ಪ್ರಯತ್ನಗಳಿಂದ ಒಂದು ಸಾವಿರವನ್ನು ಮೂರು ಭಾಗ ಮಾಡಿದರು ಎಂದೂ (ತ್ರೇಧಾ ಸಹಸ್ರಂ ವಿ ತದೈರಯೇಥಾಂ) ಅದೊಂದು ಮಹಾಸಾಧನೆಯೆಂದೂ ಹೇಳಿದೆ. ಸಾಕ್ಷ್ಯ ಸಮೂಹ ಇಷ್ಟು ಅತ್ಯಧಿಕವಾಗಿಯೂ, ನಾನಾ ಪ್ರಕಾರವಾಗಿಯೂ ಇರುವಾಗ, ಅಂಕ ಚಿಹ್ನೆಗಳ ಯಾವ ಒಂದು ವ್ಯವಸ್ಥೆಯನ್ನೂ ಬೆಳೆಸಿಕೊಳ್ಳದೆ ಆರ್ಯರು ವೇದಯುಗದ ಪ್ರಾರಂಭಕ್ಕೇ ಅಂಕ ಗಣಿತ ಕ್ಷೇತ್ರದಲ್ಲಿ ಬಹಳ ಮುನ್ನಡೆದಿದ್ದರು ಎಂಬುದನ್ನು ಪ್ರಶ್ನಿಸುವುದಕ್ಕಾಗಲೀ, ನೂರು ಶತಕೋಟಿ ಅದೂ ಸಾವಿರ ಶತಕೋಟಿಗಳಂಥ ಅಧಿಕ ಸಂಖ್ಯೆಗಳಲ್ಲಿ ವ್ಯವಹರಿಸುತ್ತಿದ್ದರು ಮತ್ತು ಭಿನ್ನರಾಶಿಗಳ ಸೂಕ್ಷ್ಮತೆಯನ್ನು ಗ್ರಹಿಸಲು ಸಾಧ್ಯವಾಗಿತ್ತು ಎಂದು ಊಹಿಸುವುದಕ್ಕಾಗಲೀ ಸಾಧ್ಯವೇ ? ಲಿಪಿಯನ್ನು ಕಲಿತ ಮೇಲೂ ಗ್ರೀಕರು ಕಂಡಿದ್ದ ಅತ್ಯಧಿಕ ಸಂಖ್ಯೆ ಎಂದರೆ 10,000. ರೋಮನ್ನರ ಸ್ಥಿತಿ ಇನ್ನೂ ಹೀನಾಯವಾಗಿತ್ತು ; ಅವರು 1000 ರಿಂದ ಮುಂದಕ್ಕೆ ಹೋಗಲಾರದೆ ಹೋದರು. ಆದ್ದರಿಂದ ಆರ್ಯರು ನಾನಾ ಸಂಖ್ಯೆಗಳಿಗೆ ಚಿಹ್ನೆಗಳನ್ನು ರೂಪಿಸಿಕೊಂಡಿದ್ದರು ಎಂಬುದರಲ್ಲಿ ಯಾವ ನ್ಯಾಯವಾದ ಸಂದೇಹವನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ. ಲಿಪಿಯ ವಿಷಯದಲ್ಲಿಯೂ ಈ ಮಾತುವೇ ಸಾಧುವಾಗಿರುತ್ತದೆ. ಪಾಲಿ ಧರ್ಮಗ್ರಂಥಗಳಲ್ಲಿ ಉಕ್ತವಾದಂತೆ ಲೇಖನ ಕಲೆಯ ಪ್ರಾಚೀನತೆಯ ಪರವಾಗಿ ಬ್ಯೂಲರ್ ಮಂಡಿಸಿರುವ ವಾದಗಳಲ್ಲಿ ಒಂದೆಂದರೆ, 'ಬರೆಯುವುದು' 'ಬರವಣಿಗೆ' ಬರೆಯುವವ' 'ವರ್ಣ' ಅಥವಾ 'ಅಕ್ಷರ'—ಅರ್ಥಗಳಲ್ಲಿ ಪ್ರಯುಕ್ತವಾದ ಪದಗಳ ಬಗೆ. ಎಂದರೆ, 'ಬರವಣಿಗೆ' ಅಥವಾ 'ಬರೆಯುವವ' ಎಂದು ನಿರ್ದೇಶಿಸಲು ಬಳಸಲಾದ ಶಬ್ದಗಳು 'ಲಿಪಿ' ಅಥವಾ 'ಲಿಪಿಕಾರ' ಎಂದಲ್ಲ. ಆದರೆ 'ಲೇಖ' ಅಥವಾ 'ಲೇಖಕ' ಎಂದು ; ಇವುಗಳ ಅರ್ಥವಾದರೋ,

‘ಕೆರೆಯುವುದು’, ಅಥವಾ ‘ಕೆರೆಯುವ’ ಎಂದಾಗಿದೆ.4 ಹೀಗೆ ಒಂದು ವರ್ಣವನ್ನು ಕೆರೆದರೆ ಅಥವಾ ಕೊರೆದರೆ, ಸ್ವಾಭಾವಿಕವಾಗಿಯೇ ಅದು ಸ್ಥಿರತೆಯನ್ನು ಪಡೆಯುತ್ತದೆ. ಮತ್ತು ಈ ಅಭಿಪ್ರಾಯಕ್ಕೆ ಅನುಗುಣವಾಗಿ ‘ವರ್ಣಕ್ಕೆ’ ‘ಅಕ್ಷರ’ (=ಅಳಿಯದುದು) ಎಂಬ ಪದವಿರುವುದನ್ನು ಕಾಣುತ್ತೇವೆ. ಮತ್ತು ಈ ಸಂದರ್ಭದಲ್ಲಿ ಹೆಚ್ಚಾಗಿ ಬಳಸಲ್ಪಡುವ ಪದಸಮೂಹವೆಂದರೆ ‘ಅಕ್ಷರಾಣಿ ಲಿಂಪ’ (=ಅಳಿಯದಿರುವುವುಗಳನ್ನು ಕಂಡರಿಸು) ಎಂಬುದಾಗಿದೆ. ಇಲ್ಲಿ ‘ಲಿಪಿ’ ಎಂಬ ಪದವು ಈಚಿನದೆಂದು ಪರಿಗಣಿಸ ಬಯಸುತ್ತಾರೆ ಬ್ಯೂಲರ್. ಮತ್ತು ಭಾರತೀಯ ಪ್ರಾಚೀನ ಲಿಪಿ ಶಾಸ್ತ್ರವನ್ನು ಕುರಿತ ಅವರ ಗ್ರಂಥಗಳನ್ನು ಓದಿರುವವರಿಗೆ, ಪ್ರಾಚೀನ ಪರ್ಶಿಯನ್ ‘ದಿಪಿ’ ಯಿಂದ ಸಂಸ್ಕೃತ ‘ಲಿಪಿ’ ಬಂದಿದೆ ಎಂದು ಅವರ ಅಭಿಪ್ರಾಯವೆಂಬುದಾಗಿ ತಿಳಿಸಬೇಕಾಗಿಲ್ಲ. ಮತ್ತು ತಮ್ಮ ವಾದದ ಸಮರ್ಥನೆಗೆ ಅವರು ಹೇಳುವುದು ಹೀಗೆ. ಶಹ್‌ಬಾಸ್‌ಘರಿ ಮತ್ತು ಮಾನ್‌ಸೆರ ಶಿಲಾಲೇಖಗಳಲ್ಲಿ ಕಂಡು ಬರುವಂತೆ ಅಶೋಕನ ಶಾಸನಗಳ ಗಾಂಧಾರ ಉಪಭಾಷೆಯಲ್ಲಿ ‘ಲಿಪಿ’ ಎನ್ನಲು ‘ದಿಪಿ’ ಇದೆ ; ದಿಪತಿ(=ಬರೆಯುತ್ತಾನೆ), ದಿಪಪತಿ (=ಬರೆಯಿಸುತ್ತಾನೆ) ಎಂಬ ಕ್ರಿಯಾಪದಗಳೂ ಇವೆ.5 ಆದರೆ, ಈಗೀಗಾಗಲೀ ಈತನ ವಾದಸರಣಿಯನ್ನು ಒಪ್ಪುವವರಾಗಲೀ ಪರ್ಶಿಯನ್ ‘ಲಿಪಿ’ ಆಯಿತೆಂದು ಭಾಷಾ ವಿಜ್ಞಾನದ ಆಧಾರದ ಮೇಲೆ ವಿವರಿಸಿದ ಹೊರತು ಈ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ ಬ್ಯೂಲರನ ವಾದಕ್ಕೆ ಏನೊಂದು ಸ್ವಲ್ಪ ವಿಶ್ವಸನೀಯ ಆಧಾರ ಎನಿಸಿದ್ದಿತೋ, ಅದೂ ಕೂಡ ಈಚೆಗೆ ಪ್ರೊ|| ಹುಲ್ಟ್ಷ್ ಅವರ ಸಂಶೋಧನೆಯಿಂದ ಮಾಯವಾಗಿದೆ. ಗಾಂಧಾರ ಶಿಲಾಲೇಖಗಳ ಅಂದವಾದ ಮತ್ತು ನಂಬಲರ್ಹವಾದ ಪಡಿಯಚ್ಚುಗಳ ಬಲದ ಮೇಲೆ ಇವುಗಳಲ್ಲಿ ಕಂಡು ಬರುವ ಪದಗಳು ನಿಜಕ್ಕೂ ‘ನಿಪಿ’ ಮತ್ತು ಅದರ ಸಾಧಿತ ಪದಗಳೇ ಹೊರತು ‘ದಿಪಿ’ ಅಲ್ಲವೆಂದು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ ಹುಲ್ಟ್ಷ್6. ಅದ ಕಾರಣ ಸಂಸ್ಕೃತ ‘ಲಿಪಿ’ ಎಂಬುದು ಎರವಲು ಪದ ಎಂಬ ಬ್ಯೂಲರನ ಮಂಡನೆ ಮುರಿದು ಬೀಳುತ್ತದೆ. ಈತನ ಈ ಮಂಡನೆಯನ್ನು ಸಮರ್ಥಿಸಲು ಮುಖ್ಯವಾದವೂ ಬರವಣಿಗೆ ಕುರಿತ ಪದಗಳೆಲ್ಲ ಈ ಕಲೆಯೊಡನೆ ಮೊದಲಿಗೆ ಜೋಡಿಸಲಾಗಿದ್ದು, ಕೆರೆಯುವುದು ಅಥವಾ ‘ಕಂಡರಿಸುವುದು’ ಎಂಬುದಕ್ಕೆ ಸಂಬಂಧಿಸಿದೆ ಎಂದೂ, ಕೆರೆಯುವುದರ ಅಥವಾ ಕಂಡರಿಸುವುದರ ಕಾರಣದಿಂದ ಅಳಿದು ಹೋಗದುದರಿಂದ ‘ವರ್ಣ’ವನ್ನು ಸೂಚಿಸಲು ‘ಅಕ್ಷರ’ ಎನ್ನಲಾಯಿತು ಎಂದು ಬ್ಯೂಲರ್ ಸಲಹೆ ಮಾಡಿರುವುದು ಸರ್ವಥಾ ಸಮರ್ಪಕವಾಗಿದೆ ಎನಿಸುತ್ತದೆ. ಬ್ಯೂಲರ್ ಮುಂದುವರಿದು, ಈ ಅರ್ಥ ‘ಅಕ್ಷರ’ ಎಂಬ ಪದ ಪಾಲೀ ಧಾರ್ಮಿಕ ಗ್ರಂಥಗಳಿಗೆ ಪೂರ್ವಕಾಲದ ವಾಙ್ಮಯದಲ್ಲಿ ಕಾಣಲು ಸಾಧ್ಯವೇ ಎಂಬುದನ್ನು ವಿಚಾರಿಸದೆ ಅಲ್ಲಿಗೇ ನಿಂತುದು ಅಂತೂ ವಿಷಾದದ ಸಂಗತಿ ; ಅದರಲ್ಲೂ ನಾನು ಮೊದಲೇ ಹೇಳಿದಂತೆ ಪಾಲಿ ಪಿಟಕಗಳಿಗಿಂತ ಪ್ರಾಚೀನ ಕಾಲದ್ದೆಂದು ನಿಸ್ಸಂದೇಹವಾಗಿ ತೆಗೆದುಕೊಳ್ಳಬಹುದಾದ ಕೇವಲ ವೇದ ಸಾಹಿತ್ಯದಲ್ಲಿ ಎಲ್ಲಿಯಾದರೂ ಈ ಪದ ಬಂದಿದೆಯೋ ಎಂದು ಆತ ಹುಡುಕಬೇಕಾಗಿತ್ತು. ವೇದ ವಾಙ್ಮಯದ ವಿದ್ಯಾರ್ಥಿಗೆ

‘ವರ್ಣ’ ಎಂಬ ಅರ್ಥದಲ್ಲಿ ‘ಅಕ್ಷರ’ ಎಂಬ ಪದ ‘ಬೃಹದಾರಣ್ಯಕ’ ಮತ್ತು ‘ಛಾಂದೋಗ್ಯ ಉಪನಿಷತ್’ಗಳಲ್ಲಿ ಮಾತ್ರವಲ್ಲ, ‘ಐತರೇಯ ಬ್ರಾಹ್ಮಣ’ದಲ್ಲಿ ; ಇದರಲ್ಲಿ ಅಷ್ಟೇ ಅಲ್ಲ ‘ಅಥರ್ವ ವೇದ’ದಲ್ಲಿ ಮತ್ತು ‘ಋಗ್ವೇದ’ದಲ್ಲಿಯೂ (1.164.24) ಬಂದಿದೆ. ಈ ಕೃತಿಗಳಿಂದ ಪಂಕ್ತಿಗಳನ್ನು ಇಲ್ಲಿ ಉದಾಹರಿಸುವುದು ತೊಡಕಾಗುತ್ತದೆ. ಆದರೆ, ವೇದ ವಾಙ್ಮಯದ ಎಲ್ಲ ಹಂತಗಳಲ್ಲಿಯೂ ‘ಅಕ್ಷರ’ ಎಂಬ ಪದ ‘ವರ್ಣ’ ಎಂಬ ಅರ್ಥದಲ್ಲಿ ಬಳಕೆಯಾಗಿರುವದರಲ್ಲಿ ಸಂಶಯವಿಲ್ಲ. ‘ವರ್ಣ’ವನ್ನು ಮೊದಲಿಗೆ ಕೊರೆದು, ಕೆರೆದು ಅಥವಾ ಕೆತ್ತಿ ಅದನ್ನು ಅಳಿಯದಂತೆ ಮಾಡಿದ ಕಾರಣ ಅದನ್ನು ‘ಅಕ್ಷರ’ ಎನ್ನಲಾಯಿತೆಂದು ಬ್ಯೂಲರ್ ಭಾವಿಸಿದ್ದು ಸರಿ ಎಂದು ಈ ಹಿಂದೆ ಗಮನಿಸಲಾಯಿತು. ಆದ್ದರಿಂದ ‘ಋಗ್ವೇದ’ ಕಾಲದಲ್ಲಿಯೂ ಆರ್ಯರಿಗೆ ಅಂಕಗಳ ಚಿಹ್ನೆಗಳ ವ್ಯವಸ್ಥೆ ಹಾಗೂ ಬರವಣಿಗೆಯ ಕಲೆ ಅಥವಾ ‘ವರ್ಣ’ಗಳನ್ನು ‘ಕೆರೆಯುವುದರ’ ಪರಿಚಯವಿತ್ತೆಂಬುದಕ್ಕೆ ಸಾಕ್ಷ್ಯವಿಲ್ಲವೇ ? ಹೀಗೆ ವಿಷಯವನ್ನು ಪಕ್ಷಪಾತವಿಲ್ಲದೇ ಆಗ್ರಹವಿಲ್ಲದೆ, ಪರಿಶೀಲಿಸಿದರೆ, ಪಾಲಿ ಪಿಟಕಗಳ ಆಧಾರದ ಮೇಲೆ ಈಗ ಒಪ್ಪಿರುವಂತೆ ಕೇವಲ ಕ್ರಿ.ಪೂ. 6ನೇ ಶತಕದಲ್ಲಿ ಮಾತ್ರವಲ್ಲ ಅದಕ್ಕೆ ಅತಿ ಹಿಂದಿನಿಂದಲೂ ಕಡೆಯ ಪಕ್ಷ ಕ್ರಿ. ಪೂ. 1200 — ‘ಋಗ್ವೇದ’ದ ಅತ್ಯಂತ ಕಡೆಯ ಅವಧಿ — ರಲ್ಲಿಯೇ ಭಾರತದಲ್ಲಿ ಬರೆಯುವ ಕಲೆ ತಿಳಿದಿತ್ತೆಂದು ಹೇಳದೇ ಇರಲಾಗುವುದಿಲ್ಲ. ಈ ತೀರ್ಮಾನ ಉತ್ಪ್ರೇಕ್ಷೆಯಲ್ಲ, ಬದಲಾಗಿ ಇದು ಹೀನೋಕ್ತಿ ಮತ್ತು ವರ್ಣಮಾಲಾ ಬರಹದ ಭಾರತದಲ್ಲಿಯೂ ಐತಿಹಾಸಿಕ ಪ್ರಾಚೀನ, ಐತಿಹಾಸಿಕ ಮಾತ್ರವಲ್ಲ, ಪ್ರಾಗೈತಿಹಾಸಿಕ ಮೂಲ ಹೊಂದಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುವ ಅತಿ ಹೆಚ್ಚಿನ ಪ್ರಮಾಣದ ಸಾಕ್ಷ್ಯಗಳು ಈಗ ದೊರೆಯುತ್ತವೆ. ಭಾರತದಲ್ಲಿ ಬರವಣಿಗೆಯ ಉಗಮದ ಬಗೆಗಿನ ಈ ಸಾಕ್ಷ್ಯವನ್ನು ಈಗ ಮುಂದಿಡಬಹುದಾಗಿದೆ.

ಭಾರತೀಯ ಲಿಪಿಯ ಉಗಮದ ವಿಷಯದಲ್ಲಿ ವಿವಿಧವಾದ ಅಭಿಪ್ರಾಯಗಳನ್ನು ಮಂಡಿಸಲಾಗಿದೆ. ಅವನ್ನು ಮುಖ್ಯವಾಗಿ ಮೂರು ವಾದಗಳಲ್ಲಿ ಇರಿಸಬಹುದು. ಮೊದಲನೆಯದು ಬ್ರಾಹ್ಮೀ ಲಿಪಿಯ ರಹಸ್ಯವನ್ನು ಮೊದಲಿಗೆ ಭೇದಿಸಿದ ಪ್ರಿನ್ಸೆಪ್ ಮೂಲತಃ ವ್ಯಕ್ತಗೊಳಿಸಿದುದು. ಅವರ ಒಲವು ಅಶೋಕನ ಶಾಸನಗಳ ಲಿಪಿ ಗ್ರೀಕ್ ಮೂಲ ಹೊಂದಿದೆ ಎಂದು ಹೇಳುವುದರಲ್ಲಿತ್ತು. ಈತನ ಈ ದೃಷ್ಟಿಯನ್ನು ಓಟ್‌ಫ್ರೀಡ್ ಮುಲ್ಲರ್ ಮತ್ತೆ ಕೆಲ ಕಾಲಾನಂತರ ಸೆನಾರ್ಟ್ ಕೂಡ ಅನುಸರಿಸಿದರು.[8] ಪ್ರಾಚೀನತಮ ಬ್ರಾಹ್ಮೀ ಮತ್ತು ಗ್ರೀಕ್ ಲಿಪಿಗಳಲ್ಲಿ ಅತಿ ಸಾಮ್ಯವಿರುವುದರಲ್ಲಿ ಸಂದೇಹವಿಲ್ಲ. ಆದರೆ, ಇದರಲ್ಲಿ ಮುಖ್ಯವಾಗಿ ಕಾಲಾನುಕ್ರಮದ ಆಧಾರ ಹೊಂದಿರುವ, ಪರಿಹರಿಸಲು ಅಸಾಧ್ಯವಾದ, ಕ್ಲಿಷ್ಟತೆಗಳಿವೆ. ಬ್ರಾಹ್ಮೀ ಲಿಪಿ ಅಶೋಕನ ಕಾಲದಲ್ಲಿ ಹುಟ್ಟಿತೆಂದು ಈಗ ಯಾರೂ ನಂಬುವುದಿಲ್ಲ. ಈ ಕಾರಣ ಈ ಅಭಿಪ್ರಾಯವನ್ನು ಬಹು ಹಿಂದೆಯೇ ತಿರಸ್ಕರಿಸಲಾಯಿತು. ನಾವು ಪರಿಶೀಲಿಸಬೇಕಾದ ಎರಡನೇ ವಾದವು ಭಾರತೀಯ ಲಿಪಿ ಸ್ವದೇಶದಲ್ಲಿಯೇ ಉಗಮವಾಯಿತೆಂದು ಪರಿಗಣಿಸುತ್ತದೆ. ಈ ಅಭಿಪ್ರಾಯವನ್ನು ಮೊದಲು

ವ್ಯಕ್ತಗೊಳಿಸಿದವನು ಲ್ಯಾಸೆನ್; ಅವನೇ ದಕ್ಷಿಣ ಭಾರತದ ದ್ರಾವಿಡ ಪಂಗಡದವರ ಸೃಷ್ಟಿ ಎಂದು ಭಾವಿಸಿದ. ಎಡ್ವರ್ಡ್ ಥಾಮಸ್ ಇದನ್ನು ಪೋಷಿಸಿದನು.[9] ಈ ವಾದಕ್ಕೆ ಈಚೆಗೆ ದಕ್ಷ ಸಮರ್ಥಕರಾದವರು, ಸರ್ ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಂ. ಇವರು ಆದಿ ಕಾಲದ ಭಾರತೀಯ ಚಿತ್ರ ಲಿಪಿಯೊಂದರಿಂದ ಉಗಮವಾಯಿತೆಂದು ತೋರಿಸಲು ಸಕಲವಾಗಿ ಯತ್ನಿಸಿದರು.[10] ಕನಿಂಗ್ ಹ್ಯಾಂರನ್ನು ಅನುಸರಿಸಿದ ಡಾಸನ್ ಭಾರತೀಯ ಲಿಪಿಯು ಸ್ವತಂತ್ರವಾದ ಸೃಷ್ಟಿ ಎಂದು ಇನ್ನು ಹೆಚ್ಚು ನಿಖರವಾಗಿ ಮಂಡಿಸಿದರು. ಸೆಮೆಟಿಕ್ ಮೂಲವನ್ನು ಹೇಳುವುದೇ ಮೂರನೇ ವಾದವಾಗಿದೆ. ಬಹುಮಂದಿ ಪ್ರಾಚೀನ ಲಿಪಿ ಶಾಸ್ತ್ರಜ್ಞರು ಇದನ್ನು ಎತ್ತಿ ಹಿಡಿದಿದ್ದಾರೆ ಮತ್ತು ಈಗ ಇದು ಉಚ್ಛ್ರಾಯದಲ್ಲಿದೆ. ಈ ಅಭಿಪ್ರಾಯವನ್ನು ಮೊದಲಿಗೆ ಸರ್ ವಿಲಿಯಂ ಜೋನ್ಸ್ 1806 ರ ವೇಳೆಗೇ ಮುಂದಿಟ್ಟಿದ್ದರು.[11] ಈ ವಾದವನ್ನು ಬೆಂಬಲಿಸುವವರಲ್ಲಿ ಈಗ ಎರಡು ಮುಖ್ಯ ಪಂಗಡಗಳು ಗಮನಕ್ಕೆ ಪಾತ್ರವಾಗಿವೆ. ಒಂದು ಗುಂಪಿನಲ್ಲಿ ಅತಿ ಮುಖ್ಯರೆಂದರೆ, ಡೀಕೆ ಮತ್ತು ಐಸಾಕ್ ಟೇಲರ್.[12] ಇವರು ದಕ್ಷಿಣ ಅರೇಬಿಯದ ದಾಕ್ಷಿಣಾತ್ಯ ಸೆಮೈಟರ ವರ್ಣಮಾಲೆಯಿಂದ ಭಾರತೀಯ ವರ್ಣಮಾಲೆ ಹುಟ್ಟಿತೆನ್ನುವರು. ಇನ್ನೊಂದು ಗುಂಪಿನಲ್ಲಿ ಮುಖ್ಯರಾದವರು ವೆಬರ್ ಮತ್ತು ಬ್ಯೂಲರ್[13]. ಔತ್ತರೇಯ ಸೆಮೈಟರ ಲಿಪಿಯಿಂದ ನೇರವಾಗಿ ಭಾರತೀಯ ಲಿಪಿಗಳು ಹುಟ್ಟಿದವು ಎನ್ನುತ್ತಾರೆ. ಪ್ರಾಚೀನತಮ ಫಿನೀಷಿಯ ಲಿಪಿಯಾದ ಇದು ಮೋಲಿಟ್‌ನ ದೊರೆ ಮೇಷನ ದೀರ್ಘ ಲೇಖವಾದ ಸಿಂಜರ್ಲಿ ಶಿಲಾ ಲೇಖದಿಂದ ಮತ್ತು ಅಸ್ಸೀರಿಯಾದ ತೂಕಗಳ ಮೇಲೆ ಕೆತ್ತಿರುವ ಕೆಲವು ಅಕ್ಷರಗಳಿಂದ ತಿಳಿದು ಬರುತ್ತದೆ. ಇವೆಲ್ಲವು ಸುಮಾರು ಕ್ರಿ.ಪೂ. 850ರ ಕಾಲದವು ಎಂದು ಭಾವಿಸಲಾಗಿದೆ. ಈ ಎರಡನೆಯ ದೃಷ್ಟಿಕೋಣವನ್ನು ಅನುಮೋದಿಸುವವರು ಈಗ ಅವೆಷ್ಟು ಮಂದಿ ಇದ್ದಾರೆ ಎಂದರೆ, ಭಾರತೀಯ ಲಿಪಿ ವಿಜ್ಞಾನದಲ್ಲಿ ಎಲ್ಲ ಪರಿಣತರು ಒಪ್ಪಿದ ವಿಷಯವಾದಂತಾಗಿದೆ. ಭಾರತೀಯ ಲಿಪಿ ಫಿನೀಷಿಯನ್ ಮೂಲದ್ದೆಂಬ ವಾದವನ್ನು ಮೊದಲು ಪ್ರತಿಪಾದಿಸಿದವರು ವೆಬರ್ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದನ್ನು ಭದ್ರವಾದ ತಳಹದಿ ಮೇಲೆ ನಿಲ್ಲಿಸಿದ ಕೀರ್ತಿ ಬ್ಯೂಲರ್‌ಗೆ ಸಲ್ಲುತ್ತದೆ. ತನ್ನೆಲ್ಲ ವಿದ್ವತ್ತು ಮತ್ತು ಭಾರತೀಯ ಶಾಸನ ಶಾಸ್ತ್ರದ ಪರಿಣತಿಯ ವೈದುಷ್ಯಗಳನ್ನು ಈ ವಿಷಯದ ಚರ್ಚೆಗೆ ಉಪಯೋಗಿಸಿದವರು ಇವರೇ ಮತ್ತು ಇಂದಿಗೂ ತಿರಸ್ಕರಿಸಲಾಗದ ಹಲವು ತೀರ್ಮಾನಗಳನ್ನು ಪ್ರತಿಪಾದಿಸಿ ಲಿಪಿವಿಜ್ಞಾನಕ್ಕೆ ಘನವಾದ ಸೇವೆ ಸಲ್ಲಿಸಿದ್ದಾರೆ. ಭಾರತದ ಪ್ರಾಚೀನ ಲಿಪಿಯ ಸೆಮಿಟಿಕ್ ಮೂಲತ್ವವನ್ನು ನಿರಾಕರಿಸಲು ಕನಿಂಗ್‌ಹ್ಯಾಂ ಮತ್ತು ಥಾಮಸ್ ಒಡ್ಡಿದ ವಾದಗಳಲ್ಲಿ ಬಲಿಷ್ಠವಾದುದೆಂದರೆ, ಬರಹ ಓಡುವ ದಿಶೆಯ ವ್ಯತ್ಯಾಸ. ಪ್ರಾಚೀನ ಭಾರತದ ಲಿಖಿತ ದಾಖಲೆಗಳೆಲ್ಲವೂ ಎಡದಿಂದ ಬಲಕ್ಕೆ ಬರೆದವಾದರೆ, ಸೆಮಿಟಿಕ್ ಜನಾಂಗದವರು ಬಲದಿಂದ ಎಡಕ್ಕೆ ಬರೆದರು. ಆದ್ದರಿಂದ ಭಾರತೀಯರು ಬಲದಿಂದ ಎಡಕ್ಕೆ ಬರೆಯುತ್ತಿದ್ದರು ಎಂದು ಸಾಧಿಸಿದ ಹೊರತು ಯಾವ ರೀತಿಯ ಸೆಮಿಟಿಕ್

ಮೂಲವಾದವನ್ನು ಒಪ್ಪಲು ಸಾಧ್ಯವಿಲ್ಲವಾಯಿತು. ಎಂದರೆ, ಸೆಮಿಟಿಕ್ ಲಿಪಿಯೊಂದರಿಂದ ಬ್ರಾಹ್ಮಿಯು ಹುಟ್ಟಿದೆ ಎಂಬುದಾಗಿ ಪ್ರತಿಪಾದಿಸಲು ಆಶಿಸುವ ಮೊದಲು ಯಾವುದೇ ಕಾಲದಲ್ಲಿಯಾದರೂ ಬ್ರಾಹ್ಮೀ ನಮಗೆ ಸಾಮಾನ್ಯವಾಗಿ ತಿಳಿದಿರುವಂತೆ ಎಡದಿಂದ ಬಲಕ್ಕಲ್ಲದೆ, ಸೆಮಿಟಿಕ್ ಲಿಪಿಗಳಂತೆ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು ಎಂದು ಸಾಧಿಸಬೇಕಾಗುತ್ತದೆ. ಕನ್ನಿಂಗ್ ಹ್ಯಾಂ ಮತ್ತು ಥಾಮಸ್ ಈ ಅಂಶವನ್ನು ಒತ್ತಿ ಹೇಳಿದರು. ಮತ್ತು ಈಗ ಒಪ್ಪಬೇಕಾದ ಅಂಶವೆಂದರೆ, ಬ್ರಾಹ್ಮೀ ಲಿಪಿ ಸಹ ಮೊದಲಿಗೆ ಬಲದಿಂದ ಎಡಕ್ಕೆ ಬರೆಯಲಾಗುತ್ತಿತ್ತು ಎಂದು ಸೆಮಿಟಿಕ್ ಮೂಲವಾದದ ಪೋಷಕರು ತೋರಿಸಿಕೊಟ್ಟಿದ್ದಾರೆ. ಹೇಗೆಂದರೆ, ಏರಣದಲ್ಲಿ ಮೊದಲು ಕನಿಂಗ್ ಹ್ಯಾಂಗೆ ದೊರೆತು ಈಗ ಬ್ರಿಟಿಷ್ ಮ್ಯೂಸಿಯಂನಲ್ಲಿರುವ ನಾಣ್ಯದ ಮೇಲಿನ ಬರಹದ ಕಡೆ ನಮ್ಮ ಗಮನ ಸೆಳೆದಿದ್ದಾರೆ ಬ್ಯೂಲರ್. ಈ ನಾಣ್ಯದ ಮೇಲಿನ ಅಕ್ಷರಗಳನ್ನು ಬಲದಿಂದ ಎಡಕ್ಕೆ ಓದಲೇಬೇಕಲ್ಲದೆ, ಪ್ರತಿ ಅಕ್ಷರವೂ ಹಿಂದು ಮುಂದಾಗಿದೆ.[14] ಮತ್ತೆ ಅಶೋಕನ ಶಿಲಾಲೇಖಗಳಲ್ಲಿಯೂ ಸಹ ಧ, ತ, ಓ ಗಳಂಥ ಒಂದೊಂದು ಅಕ್ಷರಗಳ ಕೆಲವು ವೇಳೆ ಹಿಂದು ಮುಂದಾಗಿರುವುದನ್ನು ಬ್ಯೂಲರ್ ತೋರಿಸಿಕೊಟ್ಟಿದ್ದಾರೆ. ಇದು ಬಲದಿಂದ ಎಡಕ್ಕೆ ಬರೆಯುತ್ತಿದ್ದುದರ ನೆನಪನ್ನು ತೋರಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಅಂಥ ಇನ್ನೂ ಹಲವು ನೆನಪುಗಳನ್ನು 'ಎಪಿಗ್ರಾಫಿಯಾ ಸಿಲಾನಿಕ'ದ ಘನಸಂಪಾದಕರಾದ ವಿಕ್ರಮಸಿಂಘೆ ಅವರು ತೋರಿಸಿದ್ದಾರೆ. ಸಂಯುಕ್ತ ವ್ಯಂಜನಗಳನ್ನು ಸ್ವಲ್ಪ ವಿಚಿತ್ರವಾದ ರೀತಿಯಲ್ಲಿ ಕಂಡರಿಸಿರುವುದನ್ನು ಅಶೋಕನ ಶಾಸನಗಳ ಅಭ್ಯಾಸಿಗಳು ಬಲ್ಲರು. ಸಂಯುಕ್ತ ವ್ಯಂಜನವನ್ನು ಅದರ ವ್ಯಂಜನಗಳ ಉಚ್ಚಾರಣಾ ಕ್ರಮಕ್ಕೆ ಅನುಸಾರವಾಗಿ ಬರೆಯಬೇಕೆಂಬುದನ್ನು ಹೇಳಬೇಕಾದ ಅವಶ್ಯಕತೆಯಿಲ್ಲ. ನಾವೀಗ ಬರೆಯುವಂಥ ಎಡದಿಂದ ಬಲಕ್ಕೆ ಬರೆಯುವ ಲಿಪಿಯಲ್ಲಿ 'ತ್ಪ' ಎಂಬ ಸಂಯುಕ್ತ ಬರೆಯಬೇಕಾದಾಗ ತ ಮೇಲೆ, 'ಪ' ಅದರ ಕೆಳಗೆ ಬರುತ್ತಿದೆ ; 'ಸ್ತ' ಎಂಬಲ್ಲಿ 'ಸ' ಮೇಲೆ 'ತ' ಕೆಳಗೆ, 'ವ್ಯ' ಎಂಬಲ್ಲಿ ಮೇಲೆ 'ವ', ಕೆಳಗೆ 'ಯ'. ಆದರೆ ಅಶೋಕನ ಶಾಸನಗಳಲ್ಲಿ ಕಾಣುವುದೇನು ? ನಿಯಮದಂತೆ ಮೊದಲು ಉಚ್ಚರಿಸುವುದನ್ನು ಎರಡನೆಯದರ ಮೇಲಲ್ಲ, 'ಕೆಳಗೆ' ಬರೆಯಲಾಗಿದೆ. ಇಂಥ ಕ್ರಮದ ತಿರುವು ಮುರುವು ಬಲದಿಂದ ಎಡಕ್ಕೆ ಬರೆಯುವ ಪ್ರಕಾರದಲ್ಲಿ ಮಾತ್ರ ಸಾಧ್ಯ. ಅಶೋಕನ ಕಾಲದ ಬರವಣಿಗೆ ಪ್ರಾಚೀನವಾದ ಮತ್ತು ಹಿಂದಿನಿಂದಲೂ ನಡೆದು ಬಂದಿದ್ದ ಬಲದಿಂದ ಎಡಕ್ಕೆ ಓಡುವ ವ್ಯವಸ್ಥೆಯಿಂದ ಇನ್ನು ಬಹಳಮಟ್ಟಿಗೆ ಪ್ರಭಾವಿತವಾಗಿರುವುದನ್ನು ಅಶೋಕನ ಶಾಸನಗಳ ಸಂಯುಕ್ತ ವ್ಯಂಜನಗಳು ಸ್ಪಷ್ಟವಾಗಿ ತೋರಿಸುತ್ತವೆ.[15] ಆದರೆ, ಈ ವಿಧಕ್ಕೆ ಉದಾಹರಣೆ ಅಶೋಕನ ಶಾಸನಗಳು ಮಾತ್ರವಲ್ಲ. ಅನೇಕ ಕಡೆಗಳಲ್ಲಿ ಅಕ್ಷರಗಳನ್ನು ಪ್ರತಿಲೋಮವಾಗಿ ಕೆತ್ತಿರುವ ಅಥವಾ ಪೂರ್ತಿಯಾಗಿಯೇ ಬಲದಿಂದ ಎಡಕ್ಕೆ ಓದಬೇಕಾದ ಹತ್ತಾರು ಶಿಲಾಲೇಖಗಳು ಸಿಲೋನ್‌ನಲ್ಲಿ ದೊರಕಿವೆ ಎಂದು ವಿಕ್ರಮ ಸಿಂಘೆ ತಿಳಿಸಿರುತ್ತಾರೆ.[16] ಯಾರಾದರೂ ವಿದ್ವಾಂಸರು ಅಂಥ ಒಂದು ಶಾಸನವನ್ನು ನೋಡಲು ಕುತೂ

ಹಲಿಗಳಾಗಿದ್ದರೆ, ಅಂಥವರು ದುವೆಗಾಲ ಗುಹಾಲೇಖ ಸಂ. 7 ನ್ನು ಪರೀಕ್ಷೆ ಮಾಡುವುದು ಲೇಸು. ಇದನ್ನು ಸಿಲೋನಿನ ಭೂತಪೂರ್ವ ಪ್ರಾಚ್ಯವಸ್ತು ಕಮಿಷನರ್ ಎಚ್.ಸಿ.ಪಿ. ಬೆಲ್ ಅವರು 'ಸಿಲೋನ್ ಆಂಟಿಕ್ವರಿ ಮತ್ತು ಲಿಟರರಿ ರಿಜಿಸ್ಟರ್'ದಲ್ಲಿ (ಸಂ. 3, ಪು. 204 ಪ್ಲೇಟ್ 44, ಸಂ. 1) ರಲ್ಲಿ ಪ್ರತಿಕೃತಿ ಮತ್ತು ಲಿಪ್ಯಂತರದೊಡನೆ ಪ್ರಕಟಿಸಿದ್ದಾರೆ. ಈ ಲೇಖನವನ್ನು ಬಲದಿಂದ ಎಡಕ್ಕೆ ಓದಬೇಕಾಗಿದೆಯಲ್ಲದೆ, ಒಂದು ಹೊರತು ಎಲ್ಲ ಅಕ್ಷರಗಳನ್ನು ಪ್ರತಿಲೋಮ ಅಥವಾ ತಿರುಗು ಮುರುವು ರೀತಿಯಲ್ಲಿ ಕೆತ್ತಲಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಈ ವೈಪರೀತ್ಯ ಕೇವಲ ಅತಿ ಪ್ರಾಚೀನ ಶಾಸನಗಳಲ್ಲಿ ಎಂದರೆ ದಾಕ್ಷಿಣಾತ್ಯ ಅಶೋಕ ಲಿಪಿಯಲ್ಲಿ ಕಾಣಬರುತ್ತದೆ ; ಮತ್ತು ಬಲದಿಂದ ಎಡಕ್ಕೆ ಓದುವಂತಹವಾಗಲೀ, ಒಂದೊಂದು ಅಕ್ಷರಗಳು ಪ್ರತಿಲೋಮ ಮಾದರಿಯಲ್ಲಿ ಇರುವಂಥ ಈಚಿನ ಕಾಲದ ಒಂದಾದರೂ ಲೇಖನ ಭಾರತದಲ್ಲಿ ಇಲ್ಲದಿರುವಂತೆ, ಸಿಲೋನಿನಲ್ಲಿಯೂ ಇಲ್ಲ. ಬಹಳ ಬಹಳ ಮೊದಲು ಬ್ರಾಹ್ಮೀ ಲಿಪಿಯು ಬಲದಿಂದ ಎಡಕ್ಕೆ ಬರೆಯುವಂಥದೂ ಮತ್ತು ಪ್ರತಿಲೋಮ ಮಾದರಿಯಲ್ಲಿರುವುದೂ ಆಗಿತ್ತು. ಆದರೆ ಅಶೋಕನ ಕಾಲಕ್ಕೆ ಸ್ವಲ್ಪ ಮೊದಲು, ಜನ ಎಡದಿಂದ ಬಲಕ್ಕೆ ಬರೆಯಲು ಪ್ರಾರಂಭಿಸಿದ್ದರು. ಇದರ ಫಲವಾಗಿ ಅವನ ಕಾಲದಲ್ಲಿಯೂ ಬಲದಿಂದ ಎಡಕ್ಕೆ ಬರೆಯುವುದು ಇನ್ನು ಪೂರ್ಣವಾಗಿ ಅಳಿಸಿ ಹೋಗಿರಲಿಲ್ಲ ಮತ್ತು ಎಡದಿಂದ ಬಲಕ್ಕೆ ಬರೆಯುವಾಗಲೂ ಒಂದೊಂದು ಅಕ್ಷರಗಳು ಭಾರತೀಯ ಹಾಗು ಸಿಲೋನದ ಲೇಖನಗಳಲ್ಲಿ ಆಗಾಗ್ಗೆ ನುಸುಳಿ ಬರುತ್ತಿತ್ತು ಎಂದು ತೋರಿಸಿಕೊಡುವಷ್ಟು ಬಲಿಷವಾಗಿವೆ ಮೇಲೆ ನಿರೂಪಿತವಾದ ಸಾಕ್ಷ. ಇದಕ್ಕೆ ಅತ್ಯಂತ ಸಾದೃಶ್ಯವನ್ನು 'ಕ್ಯಾಡ್ಮಿರ್ಯ' ಲಿಪಿ ಎಂದು ಕರೆಯಲಾದ ಪ್ರಾಚೀನತಮ ಗ್ರೀಕ್ ಲಿಪಿ ಒದಗಿಸುತ್ತದೆ.[16] ಈಗ ಸಾಂಟೇರಿನ್ ಎಂದು ಕರೆಯಲಾದ ಥೇರ ಎಂಬ ದ್ವೀಪದಿಂದ ಎರಡು ಅಥವಾ ಮೂರು ಶತಕಗಳ ಅವಧಿಯಲ್ಲಿ ಬರುವ ಇಪ್ಪತ್ತಕ್ಕೂ ಹೆಚ್ಚಿನ ಲೇಖಗಳು ದೊರೆತಿವೆ. ಇವುಗಳಲ್ಲಿ ಇತ್ತೀಚಿನವುಗಳನ್ನು ಅಬು ಸಿಮೆಲ್‌ಗೆ ಹತ್ತಿರದ ಮಾದರಿಯಲ್ಲಿಯೂ ಪ್ರಾಚೀನತಮವಾದವುಗಳನ್ನು ಫಿನೀಷಿಯನ್ ಮಾದರಿಯ ಅಕ್ಷರಗಳನ್ನು ಹೋಲುವಂಥ ಬಲದಿಂದ ಎಡಕ್ಕೆ ಮತ್ತು ಪ್ರತಿಲೋಮದಲ್ಲಿರುವ ಗ್ರೀಕ್ ಲಿಪಿಗಳಲ್ಲಿಯೂ ಕಡೆಯಲಾಗಿದೆ. ಹೀಗೆ, ಗ್ರೀಕ್ ವರ್ಣಮಾಲೆಯ ವಿಷಯದಲ್ಲಿ ಏನಾಯಿತೋ ಅದೇ ಬ್ರಾಹ್ಮೀ ಲಿಪಿಯ ಬಗ್ಗೆಯೂ ನಿಸ್ಸಂಶಯವಾಗಿ ಆಗಿರಬೇಕು. ಅಂತು, ಪ್ರಾಚೀನ ಭಾರತೀಯ ಲಿಪಿಯ ವಿದೇಶೀ ಮೂಲತ್ವದ ವಿರುದ್ಧ ಅದು ಯಾವತ್ತೂ ಎಡದಿಂದ ಬಲಕ್ಕೆ ಬರೆಯಲಾಗುತ್ತಿತ್ತು ಎಂದು ಕನಿಂಗ್‌ಹ್ಯಾಂ ಮತ್ತು ಥಾಮಸ್ ಒತ್ತಾಯಪಡಿಸಿದುದು, ಬ್ಯೂಲರ್ ಮತ್ತು ವಿಕ್ರಮಸಿಂಘೆ ಅವರು ಮುಂದಿಟ್ಟ ಸಾಕ್ಷ್ಯದಿಂದ ಮುರಿದು ಬಿತ್ತು. ಆದರೂ, ಸ್ವದೇಶಿ ಮೂಲವನ್ನು ಆಗ್ರಹಪೂರ್ವಕವಾಗಿ ಸಮರ್ಥಿಸಿದ ಮೂರನೆಯ ವಿದ್ವಾಂಸ ಡಾಸನ್ ಉಳಿದರು. ಇವರು ತಮ್ಮ ತಮ್ಮ ಎದುರಾಳಿಗಳಿಗೆ ಧೈರ್ಯವಾಗಿ ಸವಾಲು ಹಾಕಿದರು ; ಭಾರತೀಯ ವರ್ಣಮಾಲೆಯು ವಿದೇಶದಿಂದ ಆಮ

ದಾಗಿದ್ದರೆ, 'ಅದು ಎಲ್ಲಿಂದ ಬಂದಿತೆಂದು ತೋರಿಸಿರಿ'. ಇದಕ್ಕೆ ಕಾರಣ ಆದುವರೆಗೆ ಬ್ರಾಹ್ಮೀ ಅಕ್ಷರಗಳಿಗೂ ಯಾವುದೇ ವರ್ಗದ ಸೆಮಿಟಿಕ್ ವರ್ಣಮಾಲೆಗೂ ಹೋಲಿಕೆಯೂ ಸ್ಥಿರಪಟ್ಟಿರಲಿಲ್ಲ. ಆಗ ಬಂದ ಐಸಾಕ್ ಟೇಲರ್ ಬ್ರಾಹ್ಮೀಗೂ ಅರೇಬಿಯ ಫೆಲಿಕ್ಸ್‌ನ ಸೇಬಿರ್ಯ ಲಿಪಿಗೂ ನಿಕಟ ಸಾಮ್ಯವನ್ನು ತೋರಿಸುವ ಕ್ರಮಬದ್ಧ ಪ್ರಯತ್ನವನ್ನು ಮೊದಲಬಾರಿಗೆ ಮಾಡಿದರು. ಇವರ ಹಿಂದೆಯೇ ಬಂದ ಬ್ಯೂಲರ್ ಬ್ರಾಹ್ಮೀ ಮತ್ತು ಉತ್ತರ ಸೆಮೆಟಿಕ್ ಲಿಪಿಗಳಲ್ಲಿ ಇನ್ನು ನಿಕಟತರ ಸಾಮ್ಯವನ್ನು ತೋರಿಸಿ, ತನ್ಮೂಲಕ, ಹಿಂದೆ ತಾನು ಬರೆದಾಗ ಸಾಮಗ್ರಿಗಳು ಇಲ್ಲದ ಕಾರಣ ವೆಬರ್ ಸಾಧಿಸಲಾಗದ ಅವನ ಊಹೆಯ ತಥ್ಯತೆಯನ್ನು ಸ್ಪಷ್ಟಪಡಿಸಿದನೆಂದು ಭಾವಿಸಿದರು.[17] ಬ್ಯೂಲರ್ ಇನ್ನೂ ಮುಂದುವರಿದು ದಕ್ಷಿಣ ಸೆಮೆಟಿಕ್ ಮೂಲದಿಂದ ಬ್ರಾಹ್ಮಿಯು ಬಂದಿತೆಂಬ ವಾದ ನಿಲ್ಲುವಂಥದಲ್ಲವೆಂದು ತೋರಿಸಿದರು. ಇದಕ್ಕೆ ಕಾರಣ ಆ ಪಕ್ಷದವರು ಎತ್ತಿಹಿಡಿದ ಇವೆರಡು ಲಿಪಿಗಳ ಸಾಮ್ಯ ಅನೇಕ ವೇಳೆ ಕಾಲ್ಪನಿಕವಾಗಿವೆ ಮತ್ತು ಚಿಹ್ನೆಗಳ ಧ್ವನಿ ಮೌಲ್ಯದ ಅತಿಶಯವಾದ ಬದಲಾವಣೆಗಳನ್ನು ಅದರಲ್ಲಿಯೂ ಹಿಂದುಗಳು ಧ್ವನಿ ವಿಚಾರಗಳಲ್ಲಿ ತುಂಬ ಕಟ್ಟು ನಿಟ್ಟು ಪಾಂಡಿತ್ಯವುಳ್ಳವರಾಗಿರುವಾಗ — ಊಹಾತ್ಮಕವಾಗಿ ಸ್ವೀಕರಿಸಿದೆ. ಮತ್ತೊಂದು ದೃಷ್ಟಿಯಲ್ಲಿ, ಬ್ಯೂಲರನ ವಾದಸರಣಿಯಲ್ಲಿ ಸಂಶಯದ ಅಂಶ ಇಲ್ಲದಿಲ್ಲ. ಇದರ ಕಡೆ ಮೊಟ್ಟಮೊದಲು ನಮ್ಮ ಗಮನ ಸೆಳೆದವರು ಪ್ರೊ|| ರೈಸ್ ಡೇವಿಡ್ಸ್.[18] ಕ್ರಿ.ಪೂ. 6ನೇ ಅಥವಾ 7 ನೇ ಶತಕದಲ್ಲಿ ಭಾರತ ಮತ್ತು ದಕ್ಷಿಣ ಅರೇಬಿಯಗಳ ನಡುವೆ ನೇರ ಪರಸ್ಪರ ಸಂಪರ್ಕ ಇದ್ದಿರಲಾರದಾದರೂ ಸಾಧ್ಯವಿತ್ತು. ಏಕೆಂದರೆ, ಇದರ ಆಧಾರದ ಮೇಲೆ ಬ್ರಾಹ್ಮೀ ಲಿಪಿಯ ಮೂಲವನ್ನು ದಕ್ಷಿಣ ಅರೇಬಿಯದಲ್ಲಿ ಗುರ್ತಿಸಲು ಸಾಧ್ಯವಾದೀತು, ಬ್ಯೂಲರ್ ತೋರಿಸಿರುವಂತೆ, ಇತರ ಆಧಾರಗಳ ಮೇಲೆ ಅದು ನಿಲ್ಲತಕ್ಕದಲ್ಲ. "ಆದರೆ, ಪ್ಯಾಲಿಸ್ಟೈನಿನ ಅಂಚಿನಲ್ಲಿ ಸಾದೃಶ್ಯ ಹೆಚ್ಚಾಗಿರುವ ಮೇಷ ಲೇಖವನ್ನು ಕಂಡರಿಸಿದ ಜನರೊಡನೆ ಯಾವುದೇ ನೇರ ವ್ಯವಹಾರ ಸಂಪರ್ಕ ಹೊಂದಿದ್ದರು ಎಂಬುದನ್ನು ಇದುವರೆಗೆ ಯಾರೂ ವಿರೋಧಿಸಿಲ್ಲ." ಆದ್ದರಿಂದ ಪ್ರೊ|| ರೈಸ್ ಡೇವಿಡ್ಸ್ ವಿಧಿಯಿಲ್ಲದೆ ಈ ತರ್ಕವನ್ನು ಮುಂದಿಡಬೇಕಾಯಿತು. ಭಾರತೀಯ ಲಿಪಿಗಳು ಔತ್ತರೇಯ ಇಲ್ಲವೇ ದಾಕ್ಷಿಣಾತ್ಯ ಸೆಮಿಟಿಕ್‌ನಿಂದ ಹುಟ್ಟಲಿಲ್ಲ ; ಆದರೆ ಇವೆರಡೂ ತಮತಮಗೆ ತಾವು ಹುಟ್ಟಿಬಂದ ಮೂಲದಿಂದ — ಯೂಫ್ರೆಟಿಸ್ ಕಣಿವೆಯಲ್ಲಿ ಬಳಸಲಾದ ಸೆಮೆಟಿಕ್ ಪೂರ್ವ ರೂಪದ ಬರವಣಿಗೆಯಿಂದ ಹುಟ್ಟಿತು." ದುರದೃಷ್ಟವಶಾತ್ ಪ್ರೊ|| ರೈಸ್ ಡೇವಿಡ್ಸ್ 'ಯೂಫ್ರೆಟಿಸ್ ಕಣಿವೆಯಲ್ಲಿ ಬಳಸಿದ ಸೆಮಿಟಿಕ್ ಪೂರ್ವ ರೂಪದ ಬರವಣಿಗೆ" ಯಾವುದು? ಇದಕ್ಕೂ ಬ್ರಾಹ್ಮೀ ಲಿಪಿಗೂ ಒಪ್ಪುವಂಥ ಸಾಕಷ್ಟು ಸಾದೃಶ್ಯಗಳಿವೆಯೇ? ಸುಮಾರು ಯಾವ ಕಾಲದಲ್ಲಿ ಇದು ಭಾರತವೊಳಕ್ಕೆ ಬಂದಿತು ? ಎಂಬುದನ್ನು ತೋರಿಸಿಲ್ಲ. ಈ ಅಂಶಗಳ ಮೇಲೆ ಸ್ವಲ್ಪ ಬೆಳಕು ಚೆಲ್ಲಿದ ಹೊರತು ಸೆಮಿಟಿಕ್ ಪೂರ್ವ ರೂಪದ ಬಗೆಗಿನ ಅವರ ವಾದ ಸರಣಿಯು ಯಾವುದೇ ತಿಳಿದ ಸತ್ಯಾಂಶದ ಸಮರ್ಥನೆ

ಯನ್ನು ಪಡೆಯುದ ಕಾರಣ, ಕೇವಲ ಊಹಾತ್ಮಕವಾದುದಾಗಿದೆ. ಅವರ ವಾದದ ಈ ಊಹಾತ್ಮಕ ಸ್ವರೂಪದ ಕಾರಣದಿಂದಲೇ ಪ್ರೊ॥ ರೈಸ್ ಡೇವಿಡ್ಸ್ ಸಮರ್ಪಕವಾಗಿ ತೋರಿಸಿಕೊಟ್ಟ ದೋಷ ಬ್ಯೂಲರನ ವಾದದಲ್ಲಿದ್ದರೂ, ವಿದ್ವಾಂಸರ ಕಣ್ಣಿಗೆ ಬೀಳಲಿಲ್ಲ ಎಂದು ಎನಿಸುತ್ತದೆ. ಕ್ರಿ.ಪೂ. 7 ನೇ ಅಥವಾ 8 ನೇ ಶತಕದಲ್ಲಿ ಪ್ಯಾಲಿಸ್ಟೈನ್ ಗಡಿಯೊಡನೆ ಪರಸ್ಪರ ನೇರ ಸಂಪರ್ಕ ಇತ್ತು ಎಂದು ಸ್ಪಷ್ಟವಾಗಿ ತೋರಿಸಿದ ಹೊರತು, ಬ್ಯೂಲರನು ನಿಸ್ಸಂಶಯವಾಗಿ ಮಾಡಿದಂತೆಯೇ ಆಕಾಲದಲ್ಲಿ ಆ ದೇಶ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದ ವರ್ಣಮಾಲೆಯೊಂದರಿಂದ ಬ್ರಾಹ್ಮೀ ಹುಟ್ಟಿತು ಎಂದು ಹೇಳುವುದರಲ್ಲಿ ಯಾವ ಪ್ರಯೋಜನವಿದೆ? ಏನೇ ಆಗಲಿ ಪ್ರೊ॥ ರೈಸ್ ಡೇವಿಡ್ಸ್ ಅಷ್ಟು ದಕ್ಷತೆಯಿಂದ ಪತ್ತೆ ಹಚ್ಚಿದ ಈ ಪ್ರಖರ ದೋಷವನ್ನು ಯಾವ ವಿದ್ವಾಂಸನೂ ಗಮನಕ್ಕೆ ತಂದುಕೊಳ್ಳಲಿಲ್ಲ. ಮತ್ತೆ ಬ್ಯೂಲರನ ಅಭಿಪ್ರಾಯದೊಂದಿಗೆ, ವಿಚಾರವನ್ನೇ ಮಾಡದೆ ಸಹಮತವನ್ನು ಹೊಂದಿದರು. ಸೆಮಿಟಿಕ್ ವಾದದ ವಿಜಯ ಹೀಗೆ ಮೇಲ್ನೋಟಕ್ಕೆ ಆದರೂ ಸಂಪೂರ್ಣವಾಯಿತು, ಮತ್ತು ಹಿಂದೆ ಮೂರು ವರ್ಷಗಳವರೆಗೂ (1917) ಮುಂದುವರೆಯಿತು. ಆ ಕಾಲದಲ್ಲಿ ನಿಜಾಮು ರಾಜ್ಯದ (ಈಗಿನ ಆಂಧ್ರಪ್ರದೇಶ) ನಲಗೊಂಡ ಡಿಸ್ಟ್ರಿಕ್ಟ್ ರಾಯ್‌ಗೀರ್‌ನಲ್ಲಿ ಪ್ರಾಗೈತಿಹಾಸಿಕ ಅವಶೇಷಗಳನ್ನು ಅಗೆದು ತೆಗೆಯಲಾಯಿತು. ಅಲ್ಲಿ ಅಗೆದು ತೆಗೆದ ಗಡಿಗೆಗಳನ್ನು ತೊಳೆದ ಮೇಲೆ ಪ್ರಾಚ್ಯವಸ್ತು ಅಧೀಕ್ಷಕ ಜಿ. ಯಾಜ್ದಾನಿಯವರು ಅವುಗಳ ಮೇಲಿದ್ದ ವಿಶಿಷ್ಟ ರೀತಿಯ ಗುರುತುಗಳನ್ನು ಕಂಡರು. ಕೆಲವು ಗಡಿಗೆಗಳ ಮೇಲಂತೂ ಅವುಗಳು ಅದೆಷ್ಟು ಮಾಸಿ ಹೋಗಿದ್ದವು ಎಂದರೆ, ಸಾಮಾನ್ಯ ಗೀಚುಗಳೆಂದು ತಿಳಿದು ಅವರ ಗಮನಕ್ಕೆ ಬರದೇ ಹೋಗುತ್ತಿತ್ತು: ಆದರೆ ಅವುಗಳಲ್ಲಿ ಒಂದು ಗುರುತು ಬ್ರಾಹ್ಮೀ ಅಕ್ಷರಕ್ಕೆ ಐಕ್ಯತೆಯನ್ನು ಹೊಂದಿತ್ತು. ಆ ಲಿಪಿ ಅವರ ಮನಸ್ಸಿನಲ್ಲಿ ಇನ್ನೂ ಹಸುರಾಗಿತ್ತು; ಹೊಸದಾಗಿ ಮಸ್ಕಿಯಲ್ಲಿ ಶೋಧಿಸಿದ ಅಶೋಕನ ಶಿಲಾಲೇಖಗಳ ಚಾಕ್ಷುಷ ಪ್ರತಿಯನ್ನು ಆಗ ತಾನೆ ಮಾಡಿ ಮುಗಿಸಿದ್ದರು. ಈ ಐಕ್ಯತೆ ಅವರ ಮನಸ್ಸಿಗೆ ನಾಟಿತು. ಗಡಿಗೆಗಳನ್ನು ತೊಳೆದು ಪರೀಕ್ಷಿಸುವುದನ್ನು ಮುಂದುವರಿಸಿದಂತೆ, ಪ್ರತಿಯೊಂದೂ ಅದೇ ರೀತಿಯಾಗಿ ಗುರುತು ಮಾಡಲ್ಪಟ್ಟಿರುವುದನ್ನು ಕಂಡರು.[19] ಅಂತಹದೇ ಗುರುತುಗಳನ್ನು ಮದ್ರಾಸ್ ಮ್ಯೂಸಿಯಂನಲ್ಲಿ ಪ್ರದರ್ಶಿಸಿರುವ ಪ್ರಾಗೈತಿಹಾಸಿಕ ಗಡಿಗೆಗಳ ಮೇಲೆ ಇರುವುದನ್ನು ಬ್ರೂಸ್‌ಫುಟ್ ಗಮನಿಸಿದ್ದರು. ಸಹಜವಾಗಿಯೇ ಯಾಜ್ದಾನಿಯವರೂ ಈ ಮ್ಯೂಸಿಯಂಗೆ ಹೋಗಿ ಅಲ್ಲಿ ಮದ್ರಾಸ್ ಆಧಿಪತ್ಯದ ನಾಲ್ಕು ಜಿಲ್ಲೆಗಳು, ಮೈಸೂರು (ಈಗಿನ ಕರ್ನಾಟಕ) ಮತ್ತು ತಿರುವಾಂಕೂರು (ಈಗಿನ ಕೇರಳ) ರಾಜ್ಯಗಳಿಂದ ಸಂಗ್ರಹಿಸಲಾದ ಗಡಿಗೆಗಳು, ಗಡಿಗೆ ಚೂರುಗಳನ್ನು ಸ್ವತಃ ಎಚ್ಚರಿಕೆಯಿಂದ ಪರೀಕ್ಷಿಸಿದರು. ಅವರು ನೂರು ಮೂವತ್ತೊಂದು ಬೇರೆ ಬೇರೆ ಗುರುತುಗಳನ್ನು ಕಂಡರು. ಅವುಗಳ ಆಕೃತಿಯನ್ನು ಪ್ರತಿಯೊಂದು ಗಡಿಕೆಯ ಅಲ್ಪ ವರ್ಣನೆಯೊಂದಿಗೆ ಸಿದ್ಧಪಡಿಸಿದರು. ಆದರೆ ಅವುಗಳ ಸಂಖ್ಯೆ ಅಷ್ಟೇ ಅಲ್ಲ, ಪ್ರತಿಯೊಂದು ಹೊಸ ಪ್ರಾಗೈತಿಹಾಸಿಕ ಕ್ಷೇತ್ರದಿಂದ ಲಭ್ಯವಾಗುವ ಗಡಿಗೆಗಳು,

ಅವನ್ನು ವೃದ್ಧಿಪಡಿಸಬಹುದು ಎಂದು ಅವರು ಹೇಳಿರುವುದು ನ್ಯಾಯವೇ. ವಾಸ್ತವವಾಗಿಯೂ ಅಲ್ಲಿಂದೀಚೆಗೆ ಅವುಗಳ ಸಂಖ್ಯೆ ವೃದ್ಧಿಯಾಗಿದೆ. ಪ್ರಾಸಂಗಿಕವಾಗಿ ಇನ್ನೊಂದು ಅಂಶವನ್ನು ಇಲ್ಲಿ ತಿಳಿಸಬಹುದು; ಹೈದರಾಬಾದ್‌ನ ಪ್ರಾಗೈತಿಹಾಸಿಕ ನಿವೇಶನಗಳಲ್ಲಿ ಅಗೆದು ತೆಗೆದ ಗಡಿಗೆಗಳು ಕ್ರಿ.ಪೂ. 1000 ಕ್ಕೆ ಈಚಿನವಲ್ಲದ ಬೃಹತ್ ಶಿಲಾ—ಮೆಗಲಿಥಿಕ್ — ರಚನೆಗಳಿಗೆ ಸಂಬಂಧಪಟ್ಟವಾಗಿವೆ; ಮತ್ತು ಮದ್ರಾಸ್ ಮ್ಯೂಸಿಯಂನಲ್ಲಿ ಪ್ರದರ್ಶಿತವಾದ ಗಡಿಗೆಗಳಲ್ಲಿ ಕೆಲವು ಕ್ರಿ.ಪೂ. 1000ಕ್ಕೆ ಈಚಿನದಲ್ಲದ ಬೃಹತ್ ಶಿಲಾಯುಗಕ್ಕೆ ಸೇರಿವೆ.[20] ಈ ಸಂಬಂಧದಲ್ಲಿ ಅತಿ ಗಮನಾರ್ಹವಾದ ಅಂಶವೆಂದರೆ, ಇವುಗಳಲ್ಲಿ ಕಡೆಯ ಪಕ್ಷ ಐದು ಚಿಹ್ನೆಗಳಾದರೂ ಬ್ರಾಹ್ಮೀ ಲಿಪಿಯ ಅಕ್ಷರಗಳೊಂದಿಗೆ ಐಕ್ಯತೆ ಹೊಂದಿವೆ. ಹಾಗಾದ ಮೇಲೆ ಈ ಲಿಪಿ ವಿದೇಶಿ ಮೂಲ ಹೊಂದಿದೆ. ಪ್ರಾಗೈತಿಹಾಸಿಕವಾದರೂ ಭಾರತೀಯ ಲಿಪಿಯೊಂದರಿಂದ ವಿಕಾಸ ಹೊಂದಿರಲು ಸಾಧ್ಯವಲ್ಲವೇ ? ಸುದೈವದಿಂದ, ಈ ಪ್ರಸಂಗ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ; ಯೂರೋಪಿನಲ್ಲಿಯೂ ಕಂಡುಬಂದಿದೆ. ಫ್ರಾನ್ಸ್‌ನ ಅರಿಜೆನದಿಯ ಎಡದಂಡೆಯ ಮೇಲಿನ 'ಮಸ್ ಡಿ ಅಜಿಲ್' ಎಂಬಲ್ಲಿ ಪ್ರಾಚೀನ ಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಣ ಅವಧಿಗೆ ಸೇರಿದ ಮಣಿಗಳು ಅಧಿಕ ಸಂಖ್ಯೆಯಲ್ಲಿ ಎಂ. ಎಡ್. ಪಿಯಟ್ ಅವರಿಗೆ ದೊರಕಿದೆ. ಈ ಮಣಿಗಳಲ್ಲಿ ಕೆಲವುಗಳ ಮೇಲೆ ವರ್ಣಮಾಲೆಯ ದೊಡ್ಡ ಅಕ್ಷರ (ಕ್ಯಾಪಿಟಲ್ಸ್)ಗಳನ್ನು ಹೋಲುವ ಚಿಹ್ನೆಗಳನ್ನು ಚಿತ್ರಿಸಲಾಗಿದೆ. ಈ ಚಿಹ್ನೆಗಳು ಪೂರ್ವದೇಶದ ಈಚಿನ ಅಕ್ಷರಗಳ ವರ್ಣಗಳ ಆದ್ಯರೂಪಗಳೆಂಬ ಭಾವನೆಯನ್ನು ಪಿಯಟ್ ಅವರೇ ಹೊಂದಿದ್ದರು.[21] ಇವುಗಳಲ್ಲಿ ಒಂಬತ್ತು ಸಿಪ್ರಿಯಟ್ ಅಕ್ಷರಗಳ ರೂಪಕ್ಕೂ ಹನ್ನೊಂದು ಫಿನಿಷಿಯನ್ ವರ್ಣಗಳಿಗೂ ಸರಿಹೊಂದುತ್ತವೆ. ಆದುದರಿಂದ ಭಾರತದ ಪ್ರಾಗೈತಿಹಾಸಿಕ ಗಡಿಗೆಗಳ ಮೇಲಿನ ಚಿಹ್ನೆಗಳಲ್ಲಿ ಬ್ರಾಹ್ಮೀ ಲಿಪಿಗಳ ಪೂರ್ವಭಾವೀ ರೂಪಗಳನ್ನು ಕಾಣುವುದು ಸಂಪೂರ್ಣವಾಗಿ ನ್ಯಾಯಯುತವಾಗಿರುತ್ತದೆ. ಈಗ ಯಾಜ್ದಾನಿಯವರು ತಯಾರಿಸಿದ ಚಿಹ್ನೆಗಳ ರೇಖಾಚಿತ್ರಗಳನ್ನು[22] ಜಾಗರೂಕತೆಯಿಂದ ಪರಿಶೀಲಿಸಿದರೆ ಕೆಲವಂತೂ ಚಿತ್ರಲಿಪಿ ಅಥವಾ ಭಾವಲಿಪಿ (ಇಡಿಯೋಗ್ರಾಂ)ಯಂತೆ ಕಾಣುವುದನ್ನು ಒಪ್ಪಬೇಕು. ಆದರೆ ಈ ಗುರುತುಗಳಲ್ಲಿ ಸಾಕಷ್ಟು ಪಾಲು ವರ್ಣಮಾಲೆಯ ಅಕ್ಷರಗಳಂತೆ ಕಾಣುತ್ತವೆ ಎಂಬುದನ್ನು ತಿರಸ್ಕರಿಸಲಾಗುವುದಿಲ್ಲ. ಈಗ ತಾನೆ ಹೇಳಿರುವಂತೆ, ಅವುಗಳಲ್ಲಿ ಐದು ಖಾಡಿತವಾಗಿಯೂ ಪ್ರಾಚೀನತಮ ಬ್ರಾಹ್ಮೀ ಲಿಪಿಯ ಅಕ್ಷರಗಳೊಡನೆ ಸರ್ವಸಮವಾಗಿವೆ. ಈ ಸಂಖ್ಯೆ ಬಹಳ ಕಡಿಮೆ ಎಂಬುದೇನೋ ಸರಿ ಮತ್ತು ನಾವು ನಿರೀಕ್ಷೆ ಮಾಡಬಹುದಾದರೂ ಅಷ್ಟೇ. ಏಕೆಂದರೆ, ಸಹಸ್ರಾರು ವರ್ಷಗಳ ಅಂತರದಲ್ಲಿರುವ ಲಿಪಿಗಳಲ್ಲಿ ಬಹುಸಂಖ್ಯೆಯ ವರ್ಣಗಳು ಸರ್ವಸಮವಾಗಿರುವುದನ್ನು ನಿರೀಕ್ಷೆ ಮಾಡುವುದು ತಾನೇ ಹೇಗೆ? ಮತ್ತೆ ಇದೇ ಆಧಾರದ ಮೇಲೆ ಎಂದರೆ, ಈ ಲಿಪಿಗಳು ಸಹಸ್ರಾರು ವರ್ಷಗಳ ಅಂತರದಲ್ಲಿವೆ ಎಂಬುದರ ಮೇಲೆಯೇ ಈ ವರ್ಣಗಳ ಸರ್ವಸಮತೆಯನ್ನು ಪ್ರತ್ನಿಸುವುದೂ ಸಮಂಜಸ

ವಾಗಲಾರದು. ಏಕೆಂದರೆ, ಈಜಿಪ್ಟಿನಲ್ಲಿ ಕ್ರಿ.ಪೂ. 5000ಕ್ಕೂ ಮೊದಲಿದ್ದವೆನ್ನಲಾದ ಪ್ರಾಗೈತಿಹಾಸಿಕ ಚಿಹ್ನೆಗಳಲ್ಲಿ ಕೆಲವು, ಕ್ರಿ.ಪೂ ಸುಮಾರು 200ರಲ್ಲಿದ್ದವೆನ್ನಲಾದ ಫಿನಿಷಿಯನ್ ವರ್ಣ ಚಿಹ್ನೆಗಳಲ್ಲಿ ಕೆಲವುಗಳೊಡನೆ ಸರ್ವಸಮವಾಗಿವೆ ಎಂಬುದು ವಿದಿತವಾಗಿದೆ ; ಇವೆರಡರ ನಡುವೆ 4000 ವರ್ಷಗಳ ಅಂತರವಿರುವುದೂ ಗಮನಾರ್ಹ. ನಮ್ಮ ದೇಶದ ವಿಷಯಕ್ಕೆ ಬರುವುದಾದರೆ, ಕ್ರಿ.ಪೂ. ಸುಮಾರು 500 ಕ್ಕೆ ಸೇರಿಸಬಹುದಾದ ಪಿಪ್ರಹ್ವಾ ಸ್ತೂಪದ ಅವಶೇಷ ಭರಣಿಯ ಮೇಲಿನ ಬರವಣಿಗೆಯಲ್ಲಿನ 'ಗ' ಚಿಹ್ನೆಯು ಆಧುನಿಕ ಕನ್ನಡ ಲಿಪಿಯಲ್ಲಿ ಅದೇ ರೀತಿಯಾಗಿ ಉಳಿದುಕೊಂಡು ಬಂದಿರುವುದು ತಿಳಿದಿಲ್ಲವೆ ? ಇನ್ನೊಂದು ಕಾರಣವೆಂದರೆ ಮಧ್ಯ ಸ್ವರಗಳನ್ನು ಸೂಚಿಸುವುದಕ್ಕೂ (ಅಶೋಕನ ಕಾಲದಲ್ಲಿ ಕಂಡು ಬರುವಂತಹ) ಚಿಹ್ನೆಗಳಿರುವಂತೆ ಕಾಣುತ್ತವೆ. ಹೇಗೆ ಯಾಜ್ದಾನಿಯವರ ರೇಖಾಚಿತ್ರಗಳಲ್ಲಿ 3ನೆಯದು ಸ್ಪಷ್ಟವಾಗಿ 'ಗೋ' ಎಂದರೆ, ಮಧ್ಯ ಸ್ವರ ಒಕಾರದ ಚಿಹ್ನೆಯೊಡನೆ ಗ ಕಾರ ಎಂದು ನನಗೆ ತೋರುತ್ತದೆ. ಮತ್ತು 13ನೆಯದು 'ಶೋ' ಇರಬೇಕು; ಇಲ್ಲಿನ ಒಂದು ವ್ಯತ್ಯಾಸವೆಂದರೆ, ಓ ಕಾರವನ್ನು ಸೂಚಿಸುವ ಕೊಟ್ಟು ಮೇಲ್ಭಾಗದಲ್ಲಿಲ್ಲ, ಮಧ್ಯದಲ್ಲಿದೆ. ಇ ಕಾರವೊಂದು ಸಹ ಪ್ರಯೋಗವಾಗಿರುವಂತೆ ಕಾಣುತ್ತದೆ ಉದಾ. ಸಂ. 10 ರಲ್ಲಿ ; ಆದರೆ, ಬ್ರಾಹ್ಮಿಯಲ್ಲಲ್ಲ ಖರೋಷ್ಠಿ ಮಾದರಿಯಲ್ಲಿ ; ಮತ್ತೆ ರೇಖಾಚಿತ್ರವು ಪ್ರತಿಲೋಮ ವರ್ಣಗಳ ಉದಾಹರಣೆಗಳನ್ನು ತೋರಿಸುತ್ತದೆಂಬುದು ಗಮನಾರ್ಹ. ಹೇಗೆಂದರೆ, ಸಂ. 4 ಮತ್ತು 5, 14 ಮತ್ತು 15, ಹಾಗು 18 ಮತ್ತು 19 — ಇವುಗಳಲ್ಲಿ ಪರಸ್ಪರ ಪ್ರತಿಲೋಮ ರೂಪ ಚಿಹ್ನೆಗಳಿವೆ. ಈ ವಿಚಾರಗಳು ರೇಖಾಚಿತ್ರದಲ್ಲಿರುವ ಚಿಹ್ನೆಗಳಲ್ಲಿ ಕೆಲವನ್ನು ಸ್ಪಷ್ಟವಾಗಿ ವರ್ಣ ಚಿಹ್ನೆಗಳೆಂದು ಪರಿಗಣಿಸುವ ಕಡೆಗಿವೆ. ಈ ದೃಷ್ಟಿಗೆ ವಿರೋಧವಾಗಿ ಮುಂದಿಡಬಹುದಾದ ವಾದವೆಂದರೆ ಈ ಚಿಹ್ನೆಗಳನ್ನು ವರ್ಣಗಳೆಂದೇ ಭಾವಿಸುವುದಾದರೆ, ಈ ಗಡಿಗೆಗಳ ಮೇಲೆ ಒಂದೊಂದು ಬಿಡಿ ಅಕ್ಷರಗಳನ್ನು ಕೆತ್ತಲು ಯಾವೊಂದು ಕಾರಣವೂ ಇರುವುದಕ್ಕೆ ಸಾಧ್ಯವಿಲ್ಲ ಮತ್ತು ಇವು ಒಡೆತನದ ಗುರುತುಗಳೆಂಬ ಅಭಿಪ್ರಾಯವೊಂದೇ ಸಾಧ್ಯವೆನಿಸುತ್ತದೆ ಎಂಬುದು. ಈ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ರೇಖಾಚಿತ್ರಗಳ ಹಲವು ಚಿಹ್ನೆಗಳು, ಭಾರತದ ಹೊರಗೆ, ಉದಾ : ಈಜಿಪ್ಟ ಮತ್ತು ಯೂರೋಪ್‌ಗಳಲ್ಲಿ, ಪ್ರಾಗೈತಿಹಾಸಿಕ ಹಾಗು ಇತಿಹಾಸಾದಿ ಕಾಲೀನ ವಸ್ತುಗಳ ಮೇಲಿನ ವರ್ಣಚಿಹ್ನೆಗಳೆಂದು ಸಾಧಿತವಾಗಿರುವ ಗುರುತುಗಳೊಡನೆ ಸರ್ವಸಮವಾಗಿವೆ. ಎರಡನೆಯದಾಗಿ, ಹೆಸರೊಂದರ ಆದ್ಯಕ್ಷರವೂ ಆದ ಒಂದು ಬಿಡಿ ಅಕ್ಷರವನ್ನು ಕೆತ್ತುವ ನಡವಳಿಕೆ ಭಾರತಕ್ಕೆ ತಿಳಿಯದೇ ಇಲ್ಲ. ಪ್ರಸಿದ್ಧ ಸಾಂಚಿ (ಮಧ್ಯ ಪ್ರದೇಶ, ಭೂಪಾಲ್ ಬಳಿ) ಯಲ್ಲಿನ ಮೂರನೇ ಸ್ತೂಪವು ಮಾದರಿ ಉದಾಹರಣೆಯನ್ನು ಒದಗಿಸುತ್ತದೆ. ಇಲ್ಲಿ ಎರಡು ಅವಶೇಷ–ಭರಣಿಗಳು ದೊರೆತಿವೆ : ಇವುಗಳ ಮುಚ್ಚಳಗಳ ಒಳಭಾಗದಲ್ಲಿ ಅಕ್ಷರಗಳಿವೆ ; ಒಂದರಲ್ಲಿ 'ಸ' ಎಂದೂ, ಮತ್ತೊಂದರಲ್ಲಿ 'ಮ' ಎಂದೂ ಇದೆ. ಈ ಭರಣಿಗಳಷ್ಟೇ ಸಾಕ್ಷ್ಯಗಳಾಗಿದ್ದರೆ, ಈ ಬಿಡಿ ಅಕ್ಷರಗಳ ಅರ್ಥ

ತಿಳಿಯುವುದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲವೆಂಬುದು ಖಚಿತ, ಮತ್ತು ಅವುಗಳನ್ನು ಸ್ವಾಮ್ಯದ ಗುರುತುಗಳೆಂದು ಮಾತ್ರ ಭಾವಿಸಬೇಕಾಗಿರುತ್ತಿತ್ತು. ಆದರೆ, ಸುದೈವದಿಂದ, ಇವೆ ಎರಡು ಸಾಮಾನ್ಯ ಕಲ್ಲಿನ ಪೆಟ್ಟಿಗೆಗಳಲ್ಲಿ ಇದ್ದವು ಮತ್ತು ಅವುಗಳ ಮೇಲೆ ಆ ಆದ್ಯಕ್ಷರಗಳ ವಿವರಣೆಯಂತಿರುವ ಬರಹ ಇದ್ದುವು. ಒಂದರ ಮೇಲೆ 'ಸಾರಿಪುತಸ, ಎಂದೂ ಮತ್ತೊಂದರ ಮೇಲೆ 'ಮಹಮೊಗಲಾನಸ' ಎಂದೂ ಇತ್ತು.[22] ಭರಣಿಗಳ ಒಳಗಿನ 'ಸ' ಮತ್ತು 'ಮ' ಎಂಬ ಒಂಟಿ ಅಕ್ಷರಗಳು ಸಾರಿಪುತ್ತ ಮತ್ತು ಮೊಗ್ಗಲಾನ ಎಂಬ ಹೆಸರುಗಳ ಆದ್ಯಕ್ಷರಗಳನ್ನು ಸೂಚಿಸುತ್ತವೆ ಎಂಬುದು ಸ್ಪಷ್ಟವಲ್ಲವೆ ? ಸರಿಯಾಗಿ ಇದೇ ರೀತಿಯಲ್ಲಿ ಭಾರತದ ಪ್ರಾಗೈತಿಹಾಸಿಕ ಗಡಿಗೆಗಳ ಮೇಲೆ ಗೀಚಿರುವ ಒಂಟಿ ಅಕ್ಷರಗಳ ವಿಷಯವೂ ಆಗಿರಬೇಕು ; ಮತ್ತೆ, ಇವು ಗೋರಿಗಳು, ಶವ ಸಮಾಧಿ ಮಾಡುವ ಪ್ರದೇಶಗಳಲ್ಲಿ ದೊರೆತಂತವು ಎಂಬುದು ಗಮನದಲ್ಲಿಡಬೇಕಾದ ಅಂಶ. ಈ ವಿಚಾರದಲ್ಲಿ ಇನ್ನೂ ಸಂಶಯ ಉಳಿದಿದ್ದರೆ ಅದನ್ನು 'ಇಂಡಿಯನ್ ಮ್ಯೂಸಿಯಂ'ನಲ್ಲಿರುವ ಪ್ರಾಗೈತಿಹಾಸಿಕ ವಸ್ತು ಸಂಗ್ರಹಗಳಲ್ಲಿರುವ ಎರಡು ನವಶಿಲಾಯುಗದ ವಸ್ತುಗಳು ಸಂಪೂರ್ಣವಾಗಿ ತೊಡೆದು ಹಾಕುತ್ತವೆ ಎನಿಸುತ್ತದೆ. ಇವುಗಳ ಪ್ರಾಮುಖ್ಯತೆಯನ್ನು ಕಂಡುಕೊಂಡ ಕೀರ್ತಿ ಭಾರತದಲ್ಲಿ ಪ್ರಾಗೈತಿಹಾಸಿಕ ಪುರಾತತ್ವ ಶಾಸ್ತ್ರದ ಬಹುಶಃ ಏಕಮಾತ್ರ ವಿದ್ವಾಂಸರಾದ ಪಂಚಾನನ ಮಿತ್ರ ಅವರಿಗೆ ಸಲ್ಲುತ್ತದೆ. ತಮ್ಮ ಮ್ಯೂಸಿಯಂನ ಪ್ರಾಗೈತಿಹಾಸಿಕ ಕಣ ವಸ್ತುಗಳ ವೀಕ್ಷಣೆಯಲ್ಲಿ ಒಮ್ಮೆ ತೊಡಗಿದ್ದಾಗ, ಅಕಸ್ಮಾತ್ತಾಗಿ ಈ ಶಿಲಾಯುಗ ವಸ್ತುಗಳು ಅವರ ಕಣ್ಣಿಗೆ ಬಿದ್ದವು. ಕೆಲವು ಲಿಪಿಗಳನ್ನು ಕೆತ್ತಿರಬೇಕೆಂದು ಅವರು ನ್ಯಾಯವಾಗಿಯೇ ಊಹಿಸಿ, ಪರೀಕ್ಷೆಗಾಗಿ ನನ್ನ ಮುಂದಿಟ್ಟರು. ನಿಜಕ್ಕೂ ಅವುಗಳಲ್ಲೊಂದು ಅಸ್ಸಾಂನಲ್ಲಿ ದೊರೆತ ಸ್ವಲ್ಪ ಹಸಿರು ಬಣ್ಣದ ಕಲ್ಲಿನ ಉಳಿ[24] ಅದರ ಮೇಲೆ, ಕಾಣುವಂತೆ ನಾಲ್ಕು ಅಕ್ಷರಗಳಿವೆ. ಇವುಗಳಲ್ಲಿ ಎರಡು ಸಂಪೂರ್ಣವಾಗಿಯೂ, ಇನ್ನೆರಡು ಬಹುತೇಕವಾಗಿಯೂ ಈಜಿಪ್ಟಿನ ಪ್ರಾಗೈತಿಹಾಸಿಕ ಲಿಪಿಗೆ ಸರಿಸಮವಾಗಿವೆ. ಡಾ|| ಎಫ್. ಪಿಟ್ರಿಯವರು 'ಸ್ಫೈನ್ಸಿಯ'ದ ಈಚಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿದ ಪಟ್ಟಿಯೊಡನೆ[25] ಹೋಲಿಸುವುದರಿಂದ ಇದನ್ನು ಕಾಣಬಹುದಾಗಿದೆ. ಮತ್ತು ಆಶ್ಚರ್ಯಾಂಶವೇನೆಂದರೆ, ಅವೆಲ್ಲವೂ ಪ್ರಾಗೈತಿಹಾಸಿಕ ಮಿನೋವನ್ ಶಿಲಾಲೇಖಗಳಲ್ಲಿನಂತೆ, ಒಂದೇ ಅನುಸ್ಯೂತ ಪಂಕ್ತಿಯಲ್ಲಿ ಸಂಬದ್ಧವಾಗಿವೆ. ಇನ್ನೊಂದು ನವಶಿಲಾಯುಗದ ತುಂಡು, ರಾಂಚಿಯ ಬಳಿಯಲ್ಲಿ ದೊರೆತುದು. ಇದು ಬಲ ಹಸ್ತಾಕಾರದಲ್ಲಿರುವ ಹಿಮಟೈಟ್ ಕಲ್ಲು.[26] ಇದರ ಮೇಲೆ ಕೆತ್ತಿರುವ ಮೂರೂ ಅಕ್ಷರಗಳು ಮಬ್ಬಾಗಿವೆ ; ಈ ಅಕ್ಷರಗಳಲ್ಲಿ ಎರಡು, ಅಶೋಕಯುಗದ ಬ್ರಾಹ್ಮೀ ಲಿಪಿಗೆ ಬಹಳ ಚೆನ್ನಾಗಿ ಹೋಲುತ್ತವೆ. ಈ ಎರಡಕ್ಷರಗಳು ಎರಡು ತುದಿಗಳವು ; ಒಂದು 'ಮ' ಇನ್ನೊಂದು 'ತ' ಮಧ್ಯಾಕ್ಷರವನ್ನು ಬಹಳ ಕಾಲದವರೆಗೆ ಓದಲಾಗಿರಲಿಲ್ಲ. ಅನಂತರ, ನನಗೆ ಹೀಗೆ ತೋರಿತು. 'ತ' ಅಕ್ಷರ ನಿಜಕ್ಕೂ ವಿಲೋಮ ರೀತಿಯಲ್ಲಿದೆ ; 'ಮ' ವಿಲೋಮವಾದರೂ ಹಾಗೆಯೇ ಇರುತ್ತದೆ. ಅಂತೆಯೇ ಮಧ್ಯಾಕ್ಷರವೂ ವಿಲೋಮ

ವಾಗಿರಬಹುದಲ್ಲವೆ ? ಒಡನೆಯೇ ಆ ಚಿಲ್ಲನ್ನು ಕನ್ನಡಿ ಮುಂದೆ ಹಿಡಿದೆನು. ನನ್ನ ಊಹೆಗೆ ಅನುಗುಣವಾಗಿ ಆ ಅಕ್ಷರ ಅಶೋಕನ 'ಅ' ಕಾರಕ್ಕೆ ಬಹಳ ಹತ್ತಿರವಾಗಿ ಕಂಡಿತು. ಎಲ್ಲ ಅಕ್ಷರಗಳೂ ವಿಲೋಮದಲ್ಲಿರುವುದರಿಂದ ಲೇಖನವನ್ನು ಬಲದಿಂದ ಎಡಕ್ಕೆ ಓದಬೇಕು ; ಹಾಗೆ ಓದಿದರೆ 'ಮ ಅತ' ಎಂದಾಗುತ್ತದೆ. ಈ ಲಿಪಿ ಈಗ ತಾನೆ ತಿಳಿಸಿದಂತೆ, ಬಿಹಾರದಲ್ಲಿ ಸಿಕ್ಕಿದುದು ಅಲ್ಲಿ ಆರ್ಯೇತರ ಭಾಷೆಗಳನ್ನಾಡುವ ಕೆಲವು ಬುಡಕಟ್ಟಿನ ಜನ ಇನ್ನೂ ಇದ್ದಾರೆ ; ಇವರ ಭಾಷೆ ಭಾರತವನ್ನು ಆಕ್ರಮಿಸಿದ ಆರ್ಯರಿಗಿಂತಲೂ ಮೊದಲಿದ್ದವರು ಆಡುತ್ತಿದ್ದ ಭಾಷೆಯ ಸೂಚಕವಾಗಬಹುದೆಂದು ನಂಬಲಾಗಿದೆ. ಮಿತ್ರ ಅವರು ತೋರಿಸಿದಂತೆ27 ಆರ್ಯೇತರ ನುಡಿಯಲ್ಲಿ 'ಮಹತೋ' ಎಂಬುದಕ್ಕೆ 'ಮಹ್ತೋ' ಎಂಬ ರೂಪವೂ ಇದೆ, ಇದಕ್ಕೆ 'ಮುಖ್ಯಸ್ಥ, ನಾಯಕ' ಎಂದರ್ಥ. ಇದು ರಸಲ್ ಅವರ 'ಭಾರತದ ಮಧ್ಯ ಪ್ರಾಂತ್ಯಗಳ ಬುಡಕಟ್ಟುಗಳು ಮತ್ತು ಜಾತಿಗಳು" ಎಂಬ ಪುಸ್ತಕದಿಂದ ಸ್ಪಷ್ಟವಾಗುವುದು. ಲಿಪಿಯ 'ಮಅತ' ಎಂಬುದು 'ಮಹ್ತೋ' ಅಥವಾ 'ಮಹತೋ' ಎಂಬುದಕ್ಕೆ ಸಮನಾಗಿರಬಹುದೇ ? ಈ ಪ್ರಶ್ನೆಗೆ ಉತ್ತರ ಏನೇ ಇರಲಿ, ಇದಷ್ಟು ಖಚಿತ. ನವಶಿಲಾಯುಗಕ್ಕೆ ಸೇರಿದವೆಂಬುದರಲ್ಲಿ ವಿರೋಧವಿಲ್ಲದ, ಆ ಯುಗದ ಎರಡು ಶಿಲೆಗಳು ಇಲ್ಲಿವೆ. ಪ್ರತಿಯೊಂದರಲ್ಲೂ ಒಂದು ಬಿಡಿ ಅಕ್ಷರವಲ್ಲ — ಸ್ವಾಮ್ಯದ ಕುರುಹು ಎಂದು ಭಾವಿಸುವುದಕ್ಕೆ ಹಲವಾರು ಅಕ್ಷರಗಳಿವೆ : ಒಂದರಲ್ಲಿ ಮೂರು ಇನ್ನೊಂದರಲ್ಲಿ ನಾಲ್ಕು. ಆದ್ದರಿಂದ, ಇಲ್ಲಿ ಸ್ವಾಮ್ಯ ಚಿಹ್ನೆಗಳಲ್ಲಿ ವರ್ಣಾಕ್ಷರಗಳೆಂಬುದರಲ್ಲಿ ಸಂಶಯ – ಲೇಶವಿಲ್ಲ. ಈ ನಿರ್ಣಯಕ್ಕೆ ಪೋಷಕವಾಗಿ, ಸ್ಪಷ್ಟವಾಗಿ ವರ್ಣಾಕ್ಷರಗಳೆಂದು ನಮಗೆ ತಿಳಿದಿರುವವುಗಳಿಗೆ ಅವು ಹೋಲಿಕೆಯನ್ನು ಹೊಂದಿವೆ. ಹೀಗೆ ಬ್ರಾಹ್ಮೀ ಲಿಪಿಯ ಮೂಲದ ಪ್ರಶ್ನೆ ಐತಿಹಾಸಿಕ ಕ್ಷೇತ್ರದಿಂದ ಪ್ರಾಗೈತಿಹಾಸಿಕ ಕ್ಷೇತ್ರಕ್ಕೆ ಬದಲಾಯಿತು. ಇದು ನ್ಯಾಯವಾಗಿರಬೇಕಾದುದೇ, ಏಕೆಂದರೆ ಯೂರೋಪಿನಲ್ಲಿಯೂ ಸಹ ಸೆಮಿಟಿಕ್ ಮತ್ತಿತರ ಲಿಪಿಗಳನ್ನೆಲ್ಲ ಪ್ರಾಗೈತಿಹಾಸಿಕ ಕಾಲದಿಂದಲೂ ಗುರ್ತಿಸಲಾಗುತ್ತಿದೆ ಮತ್ತು ಪ್ರಾಗೈತಿಹಾಸಿಕ ಮಾನವನಿಂದಲೇ ಲಿಪಿ ಉಗಮವಾಯಿತೆಂಬ ಅಭಿಪ್ರಾಯವೂ ಕ್ರಮೇಣ ಬಲಗೊಳ್ಳುತ್ತಿದೆ. ಆಧುನಿಕ ಕಾಲದಲ್ಲಿ ಈಜಿಪ್ಟ್ ಶಾಸ್ತ್ರದ ಅತ್ಯಂತ ಪ್ರಸಿದ್ಧ ವಿದ್ವಾಂಸರಾದ ಡಾ|| ಪೆಟ್ರಿ ಅವರು ಪ್ರಾಗೈತಿಹಾಸಿಕ ಈಜಿಪ್ಟನ್ನೇ ಎಲ್ಲ ಲಿಪಿಗಳ ಮಡಿಲೆಂದು ಭಾವಿಸುವುದು ಸರಿಯೇ ; ಏಕೆಂದರೆ, ಅಲ್ಲಿ ಅತಿ ವಿಸ್ತಾರವಾದ ಚಿಹ್ನೆಗಳ ಸಂಗ್ರಹ ದೊರೆಯುತ್ತದೆ : ಇದರಿಂದಲೇ ಫಿನೀಷಿಯನ್ನರು ಮತ್ತು ಗ್ರೀಕರು ತಮ್ಮ ವರ್ಣಮಾಲೆಯ ಪ್ರಯೋಜನಕ್ಕೆ ಬೇಕಾದಷ್ಟು ಚಿಹ್ನೆಗಳನ್ನು ಎರವಲು ಪಡೆದರು. ಈ ಸಿದ್ಧಾಂತ ಎಂದಿಗೂ ಖಂಡಿಸಲು ಆಗದುದು ಏನೂ ಅಲ್ಲವೆಂದು ನನಗೆ ಅನ್ನಿಸುತ್ತದೆ. ಅದರಲ್ಲೂ ಭಾರತದ ಪ್ರಾಗೈತಿಹಾಸಿಕ ಶಾಸ್ತ್ರ ಇನ್ನೂ ಶೈಶವದಲ್ಲಿದೆ. ಮತ್ತು ಇದರ ಅಧ್ಯಯನ ವಿಜ್ಞಾನವಾಗಿ ಬೆಳೆದಂತೆ, ಆರ್ಯರು ಮತ್ತು ಅನಂತರ ಕಾಲದ ಭಾರತದ ಜನರು ಅಷ್ಟೇ ಅಲ್ಲದೆ, ಹೊರದೇಶದವರೂ — ಫಿನೀಷಿಯನ್ನರು, ಗ್ರೀಕರು ಮತ್ತು ಈಜಿಪ್ಷಿಯನ್ನರು — ಬಳಸಿಕೊಂಡ ಇನ್ನೂ ವಿಸ್ತಾರವಾದ ಚಿಹ್ನೆ

ಗಳ ಸಂಗ್ರಹವನ್ನು ಪ್ರಾಗೈತಿಹಾಸಿಕ ಭಾರತ ಒದಗಿಸಬಹುದು. ಆದ್ದರಿಂದ, ಇಂದು ಭಾರತದಲ್ಲಿ ನವಶಿಲಾಯುಗದ ಅಕ್ಷರಗಳು ಪತ್ತೆಯಾಗಿರುವಾಗ, ಪ್ರಾಚೀನ ಬ್ರಾಹ್ಮೀ ಲಿಪಿಯನ್ನು ದಕ್ಷಿಣ ಸೆಮಿಟಿಕ್ ಅಥವಾ ಉತ್ತರ ಸೆಮಿಟಿಕ್ ಅಕ್ಷರಗಳಿಂದ ಹುಟ್ಟಿ ಬಂದಿತೆಂದು ಇನ್ನೂ ಆಗ್ರಹ ಪಡಿಸುವುದಾದರೆ, ಅದನ್ನು ಇಂದಿನ ಇಂಗ್ಲಿಷ್ ಲಿಪಿಯಿಂದ ಹುಟ್ಟಿತೆಂದು ಏಕೆ ತೋರಿಸಬಾರದು ? ಇದು ನಗೆ ತರಬಹುದು ; ಆದರೆ ಇದಕ್ಕೆ ಸಂಬಂಧಿಸಿದ ಘಟನೆಯೊಂದನ್ನು ಇಲ್ಲಿ ಬರೆಯಬಹುದು. 1905ರಲ್ಲಿ, ನಾನು ಕಲ್ಕತ್ತೆಯಲ್ಲಿದ್ದಾಗ ಬುದ್ಧಿವಂತನಾದ ಬೆಂಗಾಲಿ ಯುವಕನೊಬ್ಬ ತನ್ನ ಟಿಪ್ಪಣಿಯೊಂದನ್ನು ತೋರಿಸಿದ. ಅದರಲ್ಲಿ ಪ್ರಾಚೀನ ಬ್ರಾಹ್ಮೀ ಅಕ್ಷರಗಳನ್ನು ಇಂದಿನ ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳಿಂದ ಹುಟ್ಟಿದವೆಂದು ಅತ್ಯಂತ ಚಾತುರ್ಯದಿಂದ ಸಾಬೀತು ಪಡಿಸಲಾಗಿತ್ತು ; ಉತ್ತರ ಸೆಮಿಟಿಕ್ ಚಿಹ್ನೆಗಳಿಂದ ಬಂತೆಂದು ತೋರಿಸಲು ಬ್ಯೂಲರ್ ಯಾವ ತತ್ವಗಳನ್ನು ಅನುಸರಿಸಿದನೋ ಸಂಪೂರ್ಣವಾಗಿ ಅದೇ ತತ್ವಗಳನ್ನೇ ಅತನೂ ಅಳವಡಿಸಿಕೊಂಡಿದ್ದ ಮತ್ತು ಅಂಥದ್ದೇ ಒಂದು ಯತ್ನ ಈಚೆಗೆ ಅಜ್ಮೀರದ ಪಂಡಿತ ಶಂಕರ ಓಝಾ ಅವರು ಮಾಡಿರುವುದು28 ನನಗೆ ತಿಳಿದೇ ಇದೆ. ಮತ್ತು ಕೆಲಕಾಲದ ಹಿಂದೆ (ಜನವರಿ, 1922) ಕಲ್ಕತ್ತೆಯಲ್ಲಿ ನಡೆದ ಎರಡನೇ ಓರಿಯಂಟಲ್ ಕಾನ್ಫರೆನ್ಸ್‌ಗೆ ನೀಡಿದ ಲೇಖನವೊಂದರಲ್ಲಿ ದೇವನಾಗರೀ ಲಿಪಿ ಪರ್ಶಿಯನ್ ಲಿಪಿಯಿಂದ ಬಂದಿತೆಂದು ತೋರಿಸಲು ಯತ್ನಿಸಲಾಗಿತ್ತು. ಈ ನಡುವೆ, ಎಲ್ಲ ಲಿಪಿಗಳನ್ನೂ, ನಾನು ಈಗ ತಾನೆ ತಿಳಿಸಿದಂತೆ, ಪ್ರಾಗೈತಿಹಾಸಿಕ ಯುಗದಲ್ಲಿ ರೂಪಿಸಲಾದ ಒಂದೇ ಲಿಪಿಯಿಂದ ವಿಕಸಿತವಾಯಿತೆಂದು ತಿಳಿಯಲಾಗಿದೆ ಎನ್ನೋಣ. ಆದ ಕಾರಣ ಪೂರ್ವಕಾಲದ ಲಿಪಿಯೊಂದನ್ನು ಉತ್ತರಕಾಲದ ಲಿಪಿಯಿಂದ ಹುಟ್ಟಿತೆಂದು ನಿರೂಪಿಸಿದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ಆಗ್ರಹಪೂರ್ವಕ ನಾನು, ದೃಢಪಡಿಸುವುದೇನೆಂದರೆ : ಈ ಪ್ರಾಗೈತಿಹಾಸಿಕ ಲಿಪಿಯ ಗುರುತುಗಳು ಬ್ರಾಹ್ಮೀ ಲಿಪಿಯ ಕೆಲವಕ್ಕೆ ಅತ್ಯಂತ ಸಾಮ್ಯವನ್ನು ಹೊಂದಿದ್ದು, ಭಾರತದಲ್ಲಿ ಆದಿಮಾನವನ ಪ್ರಾಚೀನತಮ ಅವಶೇಷಗಳ ಮೇಲೆ — ಇವು ಕ್ರಿ.ಪೂ. 3000ಕ್ಕೆ ಈಚಿನವಲ್ಲ ಹಾಗೂ ಕ್ರಿ.ಪೂ. 6000 ದಷ್ಟು ಪ್ರಾಚೀನವೂ ಆಗಿರಬಹುದು—ಸ್ಪಷ್ಟವಾಗಿ ಕಾಣಲು ಆಗಿರುವಾಗ, ಕ್ರಿ.ಪೂ. 700 ರ ಯಾವುದೇ ಸೆಮಿಟಿಕ್ ಲಿಪಿಯಲ್ಲಿ ಬ್ರಾಹ್ಮೀ ಲಿಪಿಯ ಮೂಲವನ್ನು ಹುಡುಕುವುದು ಸರ್ವಥಾ ಅಸಂಗತ. ಬ್ರಾಹ್ಮೀ ಲಿಪಿಯ ಉತ್ಪಾದಕ ಲಿಪಿ ಸ್ಪಷ್ಟವಾಗಿ ಭಾರತೀಯವೇ ಅಲ್ಲವೇ ಎಂಬ ಪ್ರಶ್ನೆ ನಾವೀಗ ವಿಚಾರ ಮಾಡುತ್ತಿರುವುದಕ್ಕಿಂತ ಸಂಪೂರ್ಣವಾಗಿ ಭಿನ್ನವಾದುದು. ಈಗ ಉಪಲಬ್ಧವಿರುವ ಸಾಕ್ಷ್ಯವಂತೂ ಅದಕ್ಕೆ ವಿರುದ್ಧ ದಿಕ್ಕಿಗೆ ತೋರಿಸುತ್ತದೆ. ಏಕೆಂದರೆ, ಅಶೋಕನ ಕಾಲದ ಬ್ರಾಹ್ಮೀ ಅಕ್ಷರಗಳನ್ನು ಹೋಲುವ ಕೆಲವು ಗುರುತುಗಳು ಭಾರತದ ನವಶಿಲಾಯುಗೀನ ಅವಶೇಷಗಳ ಮೇಲೆ ಇದ್ದರೆ, ಅವುಗಳನ್ನು ಫ್ರಾನ್ಸ್‌ನಲ್ಲಿ ದೊರೆತ ಕೆಲವು ಲಿಪಿಯನ್ನು ಕಲಾಕೃತಿಗಳ ಮೇಲೂ ಕಾಣಬಹುದಾಗಿದೆ. ಆದರೆ, ನಾನು ಆಗಲೇ ಹೇಳಿಯಾಗಿದೆ : ಭಾರತದ ಪ್ರಾಗೈತಿಹಾಸಿಕ

ಪುರಾತತ್ತ್ವ ಶಾಸ್ತ್ರವು ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಮತ್ತು ಈ ಪ್ರಾಗೈತಿಹಾಸಿಕ ಪುರಾತತ್ತ್ವ ಶಾಸ್ತ್ರವು ಗಂಭೀರವಾದ ವೈಜ್ಞಾನಿಕ ವಿಚಾರಣೆಯ ವಿಷಯವಾಗುವವರೆಗೆ ಈ ಪ್ರಶ್ನೆಯ ಕ್ರಮಬದ್ಧ ಪರಿಶೀಲನೆಯು ಸಾಧ್ಯವಾಗುವುದಿಲ್ಲ.

o — o — o

ಈ ಲೇಖನದಲ್ಲಿ ಬರುವ ಕೆಲವು ಪ್ರಾಕ್ತನ ಕಾಲಗಣನೆಯ ಸಿದ್ಧಾಂತಗಳು ಈಗಿನ ಪರಿಸ್ಥಿತಿಯಲ್ಲಿ ಅಸಂಗತವಾಗಿದ್ದರೂ, ಲೇಖನದ ಒಟ್ಟು ಭಾವ ಸಮಂಜಸವಾಗಿರುವುದರಿಂದ ಲೇಖನವನ್ನು ಪ್ರಕಟಿಸಲಾಗಿದೆ.

ಸಂಪಾದಕ

ಟಿಪ್ಪಣಿಗಳು

1 *History of Ancient Sanskrit Literature*, p. 507
2 *Buddhist India* p. 109
3 ibid.
4 *Indian Studies* No. III, p. 21
5 Ibid p. 20
6 JRAS 1913, p. 653 f
7 ibid.
8 Isaac Taylor : *The Alphabet* vol. 2 p. 304
9 *Numis. Chro.* (NS). No. III ; JRAS (NS) 5, p. 920
10 C I I, vol. I, p. 52
11 *The Alphabet* 2. p. 304
12 Deecke ; 2 DMG, XXXI, p 589 ft ; Taylor : *The Alphabet* 2, p. 314 ff
13 Weber : 2 DMG X, 389 ff ; Buhler : *Indian Studies*, III ff 53 ff and *Indian Paleaography* p. 9 ff.
14 *Indian Studies* p. III, p. III, f. 44f
15 JRAS 1901 p. 302 ff

16 JRAS 1875 p. 896–7 *The Alphabet* 2 p. 284
17 *Indian Studies* III, pp. 54 ff
18 *Buddhist India* p. 114
19 Journal of Hyderabad Areheological Society, 1917, pp. 57 ff.
20 *Ibid*, p. 65 f. Nos. 113
21 Encyclopedia Brittannica vol I, p. 724 ; vol 28, p. 85
22 J. of Hyd. Arch. Soc. 1917, plate pp. 57
23 Cunningham : *Bhilsa Topes*, pp. 297 & 299, M 22
24 No. 998 on p. 131 of J. Coggin Brown's Cat. raisonne of the prehistopic Antiquities in the Indian Museum at Calcutta
25 *Scientia* p. XXIV, p. 440
26 J. C. Brown's Cat., No. 3177, f 124
27 IA, XLVIII p. 63 f
28 'ಭಾರತೀಯ ಪ್ರಾಚೀನ ಲಿಪಿಮಾಲಾ' (ಹಿಂದಿ) ಪು. 26

ಕರ್ನಾಟಕದಲ್ಲಿ ದೊರೆತ ಮೊದಲ ಶಾಸನಗಳು ಬ್ರಾಹ್ಮೀ ಲಿಪಿಯಲ್ಲಿವೆ. ಈ ಶಾಸನಗಳು ಕೆಲಮಟ್ಟಿಗೆ ದಕ್ಷಿಣದ ಪ್ರಭೇದವನ್ನು ಗುರುತಿಸಬಹುದು ಎಂದು ವಿದ್ವಾಂಸರು ಭಾವಿಸುತ್ತಾರೆ. ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರಗಳಲ್ಲಿರುವ ಅಶೋಕನ ಶಾಸನಗಳ ಕೊನೆಯಲ್ಲಿ ಬರುವ 'ಲಿಪಿಕರೇಣ' ಎಂಬ ಪದ ಖರೋಷ್ಠಿ ಲಿಪಿಯಲ್ಲಿರುವುದೊಂದು ವಿಶೇಷ. ಈ ಬ್ರಾಹ್ಮೀ ಲಿಪಿ ಕಾಲ ಕ್ರಮದಲ್ಲಿ ಬದಲಾವಣೆ ಹೊಂದುತ್ತ ಭಾರತದಲ್ಲಿ ಬಳಕೆಯಲ್ಲಿರುವ ಎಲ್ಲ ಲಿಪಿಗಳಿಗೂ ಮೂಲವಾಯಿತು. ಬ್ರಾಹ್ಮೀ ಲಿಪಿಯನ್ನು ಸಾತವಾಹನರು ಮುಖ್ಯವಾಗಿ ಗವಿಗಳಲ್ಲಿ ತಾವು ಕೊರೆಸಿದ ಶಾಸನಗಳಲ್ಲಿ ಕೆಲವು ಬದಲಾವಣೆಗಳೊಡನೆ ಬಳಸಿದ್ದರಿಂದ ಇವರ ಕಾಲದ ಲಿಪಿಯನ್ನು ಗುಹಾಲಿಪಿ ಎಂದು ಕರೆಯಲಾಗಿದೆ. ಈ ಲಿಪಿ ಕರ್ನಾಟಕದಲ್ಲಿ ಕ್ರಿ.ಶ. 4ನೇ ಶತಮಾನದವರೆಗಿನ ಶಾಸನಗಳಲ್ಲಿ ಬಳಕೆಯಾಗಿದೆ. ಇವುಗಳಿಗೆ ತಲೆಕಟ್ಟುಗಳು ಸ್ಪಷ್ಟವಾಗಿರುವುದಿಲ್ಲ. ಮಳವಳ್ಳಿ ಸ್ತಂಭಶಾಸನ, ಚಂದ್ರವಳ್ಳಿಯ ಮಯೂರಶರ್ಮನ ಶಾಸನ ಹಿರೇಹಡಗಲಿಯ ಪಲ್ಲವ ಶಿವಸ್ಕಂಧವರ್ಮನ ತಾಮ್ರ ಶಾಸನ ಮೊದಲಾದವುಗಳಲ್ಲಿ ಇಂಥ ಲಿಪಿಯನ್ನು ನೋಡಬಹುದು. ಮುಂದಿನ ಕದಂಬರ ಕೆಲವು ಶಾಸನಗಳಲ್ಲಿ ದಪ್ಪನಾದ ಚೌಕಾಕಾರದ ತಲೆಕಟ್ಟುಗಳನ್ನುಳ್ಳ ಲಿಪಿಯನ್ನು ಬಳಸಿದ್ದು ಅದಕ್ಕೆ ಪೆಟ್ಟಿಗೆ ಶಿರಲಿಪಿ ಎಂಬ ಹೆಸರಿದೆ. ತಾಳಗುಂದ, ಬನವಾಸಿ, ಗುಡ್ನಾಪುರ ಸ್ತಂಭಶಾಸನಗಳು ಮತ್ತು ಕದಂಬರ ಕೆಲವು ತಾಮ್ರಶಾಸನಗಳಲ್ಲಿರುವುದು ಇದೇ ಲಿಪಿ. ಅಲ್ಲಿಂದ ಮುಂದೆ ಬೆಳೆದದ್ದು ಕನ್ನಡ ಲಿಪಿ.

ಕೋ. ಚೆನ್ನಬಸಪ್ಪ

ವಿಜ್ಞಾನ ಮತ್ತು ಧರ್ಮಗಳ ಸಾಮರಸ್ಯ*

'ಸೈನ್ಸ್' ಎಂಬ ಆಂಗ್ಲ ಪದವನ್ನು 'ವಿಜ್ಞಾನ' ಎಂಬುದಾಗಿ ಅರ್ಥೈಸಿರು ವುದು ತಪ್ಪು ಕಲ್ಪನೆಗೆ ಎಡೆ ಕೊಡುತ್ತದೆ. 'ವಿಜ್ಞಾನ' ಎಂಬ ಸಂಸ್ಕೃತ ಪದಕ್ಕೆ ಭಾರತೀಯ ತತ್ತ್ವ ಶಾಸ್ತ್ರದಲ್ಲಿ ವಿಶಿಷ್ಟವಾದ ಅರ್ಥ ಇದೆ. ಆರ್ಷೇಯ ಕಾಲದಿಂದಲೂ 'ವಿಜ್ಞಾನ ಎಂಬ ಮಾತು ಭಾರತೀಯ ಶಾಸ್ತ್ರದಲ್ಲಿ ಪ್ರಯೋಗದಲ್ಲಿದೆ. ಗೀತೆಯಲ್ಲಿ "ಜ್ಞಾನ ವಿಜ್ಞಾನಯೋಗ" ಎಂಬ ಒಂದು ಅಧ್ಯಾಯ ಇದೆ. ಆದ್ದರಿಂದ ಧರ್ಮ ಜಿಜ್ಞಾಸೆ, ತತ್ತ್ವಶಾಸ್ತ್ರ ನಿರೂಪಣೆಯ ಸಂದರ್ಭದಲ್ಲಿ ಆದರೂ "ಸೈನ್ಸ್" ಎಂಬ ಮಾತನ್ನು "ಪದಾರ್ಥ ವಿಜ್ಞಾನ" ಅಥವಾ ಭೌತವಿಜ್ಞಾನ ಎಂದು ಬಳಸುವುದು ಹೆಚ್ಚು ಸೂಕ್ತ.

"ಪದಾರ್ಥ ವಿಜ್ಞಾನ" ದೃಗ್ಗೋಚರ ವಿಶ್ವದ ಬಾಹ್ಯ ಸತ್ಯಾನ್ವೇಷಣೆ, ಬಾಹ್ಯ ವಿಶ್ಲೇಷಣೆ ಮಾಡುತ್ತದೆ. ಪಂಚೇಂದ್ರಿಯಗಳ ಮೂಲಕ ಮನಸ್ಸಿಗೆ ವೇದ್ಯವಾಗುವ ಈ ಪ್ರಾತಿಭಾಸಿಕ ವಿಶ್ವದ ಪರೀಕ್ಷೆ ಮಾಡುವುದು ಪದಾರ್ಥ ವಿಜ್ಞಾನದ ಪ್ರಾಥಮಿಕ ಗುರಿ. ಈ ಜ್ಞಾನದ ಸಾಧನಗಳು ಇಂದ್ರಿಯಗಳು. ಈ ಇಂದ್ರಿಯಗಳಿಗೆ ವೇದ್ಯವಾಗುವ ಸಮ್ಮತ ವಾಗುವ, ತರ್ಕ ಬದ್ಧವಾದ ಹೇತು ಪರಿಣಾಮದ ವಿವರಣೆಯನ್ನು ಹುಡುಕುವುದು ಇವರ ಪರಮ ಗುರಿ. ಉದಾಹರಣೆಗೆ ಮನುಷ್ಯನ ದೇಹರಚನೆಯನ್ನು ವಿಶ್ಲೇಷಣೆ ಮಾಡಿ, ಪರೀಕ್ಷೆ ಮಾಡಿ, ಅದರ ರಚನೆ ಮತ್ತು ಕಾರ್ಯ ವಿಧಾನವನ್ನು ನಿರ್ಧರಿಸುವುದು ಶರೀರ ಶಾಸ್ತ್ರ (ಅನಾಟಮಿ)ದ ಗುರಿ. ಅದು ದೇಹದ ಚರ್ಮ ಹಾಗೂ, ಆ ಚರ್ಮದಿಂದ ಮುಚ್ಚಲ್ಪಟ್ಟಿರುವ ಇತರ ಸ್ಥೂಲ ಅಂಗಾಂಗಗಳ ಮತ್ತು ಅಸ್ಥಿಪಂಜರದ ರಚನೆ ಇತ್ಯಾದಿ ಕಾರ್ಯವಿಧಾನವನ್ನು ಹುಡುಕುತ್ತದೆ. ಶರೀರಶಾಸ್ತ್ರ ದೇಹದ ಚರ್ಮ ಸತ್ಯಕ್ಕೆ

---

* ತಾ|| 11-1-1985 ರಂದು ಬೆಂಗಳೂರಿನ ಶ್ರೀರಾಮಕೃಷ್ಣ ಆಶ್ರಮ, ಶ್ರೀಸ್ವಾಮಿ ವಿವೇಕಾನಂದ ಜಯಂತಿಯ ನಿಮಿತ್ತ ಏರ್ಪಡಿಸಿದ್ದ ವಿಚಾರ ಸಂಕೀರ್ಣದಲ್ಲಿ ಮಾಡಿದ ಭಾಷಣ.

ಸೀಮಿತವಾಗಿದೆ. ಆದರೆ ಅದರ ಮರ್ಮ ಸತ್ಯವೇನು ? ಈ ಅಂಗಾಂಗಗಳನ್ನು ಆಡಿಸುವ ಯಾವುದೋ ಒಂದು ಇದೆ ಎಂಬುದನ್ನು ಶರೀರ ಶಾಸ್ತ್ರ ವಿಜ್ಞಾನಿಗಳೂ ಒಪ್ಪುತ್ತಾರೆ. ಈ ದೇಹವೆಂಬ "ಗುಡಿಯೊಳಗೆ ಕುಳಿತಿರುವ ಆ ಪೂಜಾರಿಯಾರು" ವಿಚಾರಕ್ಕೆ ಬಂದಾಗ ತಬ್ಬಿಬ್ಬಾಗುತ್ತಾರೆ. ಅಲೆಕ್ಸ್ ಕ್ಯಾರೆಲ್‌ನಂಥ ವೈದ್ಯ ವಿಜ್ಞಾನಿಗಳು ತುಂಬ ಚಿಂತನೆ ಮಾಡಿದ್ದಾರೆ. ತನ್ನ 'ಇನವಿಸಿಬಲ್ ಮ್ಯಾನ್" ಎಂಬ ಪುಸ್ತಕದಲ್ಲಿ ವಿವರಿಸಿದ್ದಾನೆ.

ಪದಾರ್ಥ ವಿಜ್ಞಾನವನ್ನು ಲೌಕಿಕಜ್ಞಾನ (ಸೆಕ್ಯುಲರ್ ನಾಲೆಜ್) ಎಂದೂ ಪಾರಮಾರ್ಥ ವಿಧಾನವನ್ನು ಆಧ್ಯಾತ್ಮ ಜ್ಞಾನ (ಸ್ಪಿರಿಚುಯಲ್ ನಾಲೆಜ್) ಎಂದೂ ಕರೆಯಬಹುದು. ಅಥವಾ ಗೀತೆಯ ಮಾತನ್ನು ಬಳಸಿ ಪದಾರ್ಥ ವಿಜ್ಞಾನವನ್ನೂ ಅಪರಾಪ್ರಕೃತಿಜ್ಞಾನ — ಅಥವಾ ಅನ್ನಮಯ ಕೋಶಜ್ಞಾನ (ಸೈನ್ಸ್ ಆಫ್ ಮ್ಯಾಟರ್) ಎಂದೂ, ಆತ್ಮ ಜ್ಞಾನವನ್ನು ಪರಾಪ್ರಕೃತಿ ವಿಜ್ಞಾನ (ಸೈನ್ಸ್ ಆಫ್ ದಿ ಸ್ಪಿರಿಟ್) ಎಂದು ಕರೆಯಬಹುದು. ಅಂದರೆ ದೃಗ್ಗೋಚರ ಜಗತ್ತಿನ ಬಾಹ್ಯ ರಚನೆಯ ಜ್ಞಾನ ಸಂಗ್ರಹ ಪದಾರ್ಥ ವಿಜ್ಞಾನದ ಗುರಿ. ಆ ವಿಶ್ಲೇಷಣೆ ಬಹುದೂರದವರೆಗೆ ಬಹು ಸೂಕ್ಷ್ಮ ಮಟ್ಟಕ್ಕೆ ಹೋಗಿದೆ. ಈ ಜಗತ್ತಿಗೆ ಉಪಾದಾನವಾಗಿರುವ ಯಾವುದೋ ಒಂದು ಮೂಲವಸ್ತು—ಅಣು—ಇದೆ ಎಂಬುದನ್ನು ಭೌತವಿಜ್ಞಾನವೂ ಒಪ್ಪಿದೆ. ಅದನ್ನೇ ಭಾರತೀಯ ಕಣಾದ ಋಷಿ ಬಹು ಹಿಂದೆಯೇ ಹೇಳಿದ್ದ. ಆಗಿರುವ ಈ ವಿಶ್ವ ವೆಲ್ಲಕ್ಕೂ 'ಅಣು ಕಣ' ವೇ ಮೂಲಧಾತು ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದ.

ಪದಾರ್ಥ ವಿಜ್ಞಾನಿಗಳ ಜ್ಞಾನ ಸಾಧನೆಗಳು ಪ್ರಥಮ ಪಂಚೇಂದ್ರಿಯಗಳ ಮತ್ತು ಆ ಪಂಚೇಂದ್ರಿಯಗಳಿಗೆ ನೆರವಾಗುವ ಇತರ ಸಾಧನ ಸಂಪತ್ತುಗಳು. ಅವರ ವಿಶ್ಲೇಷಣೆಯ ಕ್ರಮ ಬುದ್ಧಿಗ್ರಾಹ್ಯ ವಸ್ತು ಮತ್ತು ತರ್ಕಬದ್ಧ ಸತ್ಯಗಳನ್ನು ಮಾತ್ರ ಒಪ್ಪಿಕೊಳ್ಳುವುದು. ಯಾವುದು ಬುದ್ಧಿಗ್ರಾಹ್ಯವಲ್ಲವೋ, ಪ್ರಮೇಯ ಪ್ರಾಮಾಣ್ಯಕ್ಕೆ ಅಸ್ಪವೋ ಅದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಕಣ್ಣು ನೋಡುತ್ತದೆ. ಕಂಡವಸ್ತು ವನ್ನು ಕಣ್ಣಿನ ಮೂಲಕ ನಮ್ಮ ಮೆದುಳಿಗೆ ತಲುಪಿಸಿ ಇಂಥಾ ವಸ್ತು ಇದು ಎಂದು ನಿವೇದಿಸುತ್ತದೆ. ಆಗ ನಮಗೆ ವೇದ್ಯವಾಗುತ್ತದೆ. ಅದು ಕಣ್ಣಿಗೆ ಕಾಣುವ ಸತ್ಯ. ಒಂದು ವೇಳೆ ಕಣ್ಣಿಗೆ ಕಾಣದ ಯಾವುದಾದರೂ ಇದ್ದರೆ ಅದನ್ನು ಪದಾರ್ಥ ವಿಜ್ಞಾನಿಗಳು ಅನುಭವಕ್ಕಾದರೂ ಸಿಗದಿದ್ದರೆ ಒಪ್ಪರು. ಇವರ ಈ ದೃಷ್ಟಿಯನ್ನು ಶ್ರೀ ರಾಮಕೃಷ್ಣ ಪರಮಹಂಸರು ಒಂದು ಸಣ್ಣ ಆದರೂ ಸುಂದರವಾದ ದೃಷ್ಟಾಂತದಿಂದ ಎತ್ತಿ ತೋರಿಸುತ್ತಾರೆ. "ರಾತ್ರಿ ಬರಿಗಣ್ಣಿಗೆ ನಕ್ಷತ್ರಗಳು ಕಾಣುತ್ತವೆ. ಹಗಲು ಕಣ್ಣಿಗೆ ನಕ್ಷತ್ರಗಳು ಕಾಣವು. ಅಂದ ಮಾತ್ರಕ್ಕೆ ನಕ್ಷತ್ರಗಳು ಹಗಲಿನಲ್ಲಿ ಇಲ್ಲ ಎನ್ನಬಹುದೇ ?

ಕಣ್ಣಿಗೆ ಕಾಣದ, ಬುದ್ಧಿ ಒಪ್ಪದ, ತರ್ಕ ಮೆಚ್ಚದ ಯಾವುದನ್ನೂ ಭೌತ ವಿಜ್ಞಾನಿಗಳು ಅಂಗೀಕರಿಸುವುದಿಲ್ಲ. ಈ ಪಂಚೇಂದ್ರಿಯಗಳು ಅನುಭವ ವೇದ್ಯವಾಗಿರುವು ದರಿಂದ ಸತ್ಯ ; ಅವು ಇವೆ. ಆ ಪಂಚೇಂದ್ರಿಯಗಳಿಗೆ ಆಧಾರವಾದ ಮನಸ್ಸನ್ನೂ ಇದೆ ಎಂದು ಒಪ್ಪುತ್ತಾರೆ. ಆದರೆ ಆ ಮನಸ್ಸನ್ನು "ಆಡಿಸುವ" ಯಾವುದೋ ಒಂದಿದೆ

ಎಂದರೆ ಕೂಡಲೇ ಒಪ್ಪಲು ಸಿದ್ಧರಿಲ್ಲ. "ಎಲ್ಲಿದೆ ತೋರಿಸಿ ?" ಎನ್ನುತ್ತಾರೆ. ಜಡವಾಗಿ ಅಥವಾ ಲೋಕಾಯತವಾದಿ ಆತ್ಮ ಚೈತನ್ಯ ಇತ್ಯಾದಿ ಮಾತುಗಳನ್ನು ಸುಮ್ಮನೆ ತಿರಸ್ಕರಿಸುತ್ತಾನೆ. ಆಗಲೇ ಆತ್ಮ ವಿದ್ಯೆಗೂ ಲೌಕಿಕ ವಿದ್ಯೆಗೂ ಸೆಣಸಾಟ ಪ್ರಾರಂಭವಾಗುತ್ತದೆ. ಶ್ರೀ ಅರವಿಂದರು 'ಜಡವಾದಿಯ ನಾಸ್ತಿ' ಮತ್ತು 'ವೈರಾಗಿಯ ನೇತಿ' ಎಂಬುದಾಗಿ ಆತ್ಮ ವಿದ್ಯೆ ಮತ್ತು ಲೌಕಿಕವಿದ್ಯೆಯ ಅನಾದಿ ವ್ಯಾಜ್ಯವನ್ನು ಕರೆದಿದ್ದಾರೆ. ಒಂದು ಕಡೆ ಜಡವೇ ಸತ್ಯವೆಂಬ ಜಡವಾದಿ ಇನ್ನೊಂದು ಕಡೆ ಚೈತನ್ಯವೇ ಸತ್ಯ ಎಂಬ ಚೈತನ್ಯವಾದಿ. ಇದರಿಂದಾಗಿ ಆತ್ಮ ವಿದ್ಯಾಕಾಂಕ್ಷಿಗಳು ಲೌಕಿಕ ವಿದ್ಯೆಯನ್ನು ಸಂಪೂರ್ಣ ತಿರಸ್ಕರಿಸದಿದ್ದರೂ ಒಂದು ಬಗೆಯ ತಾತ್ಸಾರದಿಂದ ನೋಡಿದರು. ಅದಕ್ಕೊಂದು ನಿದರ್ಶನ ಶ್ರೀ ರಾಮಕೃಷ್ಣರ ಜೀವನದಲ್ಲಿಯೆ ಸಿಗುತ್ತದೆ. ಶ್ರೀ ರಾಮಕೃಷ್ಣರ ಅಣ್ಣ ರಾಮಕುಮಾರ ಕಲ್ಕತ್ತೆಗೆ ಬಂದ ಮೇಲೆ, ತಮ್ಮನನ್ನು ಸಂಸ್ಕೃತ ಕಲಿತು ಪಾರಂಗತನಾಗಬೇಕೆಂದು ಒತ್ತಾಯ ಮಾಡುತ್ತಾರೆ. ಆಗಲೇ ಭಗವದಭಿಮುಖವಾಗಿ ಸಾಗಿದ್ದ ಅವರಿಗೆ ಈ ಲೌಕಿಕ ವಿದ್ಯೆಯನ್ನು ಕಲಿಯುವುದರಲ್ಲಿ ಏನೇನೂ ಆಸಕ್ತಿ ಇರಲಿಲ್ಲ. ಆಗ ಶ್ರೀ ರಾಮಕೃಷ್ಣರು ಹೇಳುತ್ತಾರೆ. "ಮೂರು ಕಾಸಿನ ಹೊಟ್ಟೆ ಹೊರೆಯುವ ವಿದ್ಯೆಯಿಂದ ನನಗೇನಾಗಬೇಕಾಗಿದೆ. ನನಗೆ ಬೇಕಾದುದು ಎದೆಗೆ ಕಾಂತಿಯನ್ನು ಬಗೆಗೆ ಶಾಂತಿಯನ್ನು ಕೊಡುವ ಬ್ರಹ್ಮ ವಿದ್ಯೆ". ಎಂಬುದಾಗಿ: ಬ್ರಹ್ಮ ವಿದ್ಯೆಯು ಸೂತ್ರ ನಿರೂಪಣೆಯ ಧರ್ಮಶಾಸ್ತ್ರ.

ಲೌಕಿಕ ವಿದ್ಯೆಗೂ ಬ್ರಹ್ಮ ವಿದ್ಯೆಗೂ ಈ ವೈಷಮ್ಯ ಏಕೆ ಹುಟ್ಟಿತು ? ಅದಕ್ಕೊಂದು ಪ್ರಬಲ ಕಾರಣವಿತ್ತು. ಮಾನುಷ ಜೀವನದ ಉದ್ದೇಶವೇನು ? ಅದನ್ನು ಶ್ರೀ ಅರವಿಂದಾಶ್ರಮದ ಮಾತಾಜಿ ಬಹು ಸರಳವಾಗಿ ಸುಂದರವಾಗಿ ಹೇಳುತ್ತಾರೆ. ಜೀವಿಸಲು ನಿಜವಾಗಿಯೂ ಒಂದೇ ಕಾರಣವಿದೆ : ಅದೆಂದರೆ ತನ್ನನ್ನು ತಾನು ತಿಳಿದುಕೊಳ್ಳುವುದು. ನಾವು ಇಲ್ಲಿರುವುದು ಕಲಿಯುವುದಕ್ಕಾಗಿ — ನಾವೇನೆಂಬುದನ್ನು, ಇಲ್ಲಿ ಏಕೆ ಇದ್ದೇವೆಂಬುದನ್ನು ಮತ್ತು ನಾವೇನು ಮಾಡಬೇಕೆಂಬುದನ್ನು ಕಲಿಯುವುದಕ್ಕಾಗಿ. ಮತ್ತು ಅದನ್ನು ನಾವು ತಿಳಿದುಕೊಳ್ಳದಿದ್ದರೆ, ನಮ್ಮ ಜೀವನ ನಮಗೂ, ಇತರರಿಗೂ ಪೂರ್ಣ ಶೂನ್ಯವಾಗುತ್ತದೆ.[1] ಅದನ್ನೇ ನಿಜಗುಣ ಶಿವಯೋಗಿಗಳು 'ಆರು ನೀನೆಂದು, ವಿಚಾರಿಸು ಎಂದರು. "ನಿನ್ನನ್ನು ನೀನು ತಿಳಿಯುವುದು ಹೇಗೆ ?

ಗುರುದೇವ ರವೀಂದ್ರನಾಥ ಠಾಕೂರರ ಶಾಂತಿನಿಕೇತನಕ್ಕೆ ಒಬ್ಬ ಜಿಜ್ಞಾಸು ಹೋಗಿದ್ದರು. ಗಂಗೂಲಿ, ಎಂಬ ಆಪ್ತ ಕಾರ್ಯದರ್ಶಿಗಳನ್ನು ಭೆಟ್ಟಿಯಾಗಿ ಒಂದು ಸಂದೇಶ ಬೇಕೆಂದು ಕೇಳಿದರು ಗಂಗೂಲಿ "ನಿನ್ನನ್ನು ನೀನು ತಿಳಿ" ಎಂದು ಬರೆದು ಕೊಟ್ಟರು. ಆ ಸಂದೇಶವನ್ನು ಹಿಡಿದುಕೊಂಡು ಆ ಜಿಜ್ಞಾಸು ಠಾಕೂರರ ದರ್ಶನಕ್ಕೆ ಹೋಗಿ, ಅವರಿಂದ ಒಂದು ಆಶೀರ್ವಚನ ಬೇಡಿದರು. ಠಾಕೂರರು ಗಂಗೂಲಿ ಬರೆದಿದ್ದ

ಮಾತಿನ ಕಡೆಗೆ "ನಿನ್ನನ್ನು ನೀನು ನೋಡು" ಎಂದು ಬರೆದು ಕೊಟ್ಟಿದ್ದಾನೆ. ಅಂದರೆ "ನಿನ್ನನ್ನು ನೀನು ತಿಳಿಯಲು ನಿನ್ನನ್ನು ನೀನು ನೋಡು" ಎಂಬುದು ಅದರ ಇಂಗಿತ.

ಆತ್ಮ ವಿದ್ಯಾಶಾಸ್ತ್ರಜ್ಞರು, ಬೌದ್ಧಿಕ ವಿಶ್ಲೇಷಣೆಯಿಂದ ಒಂದು ಅಪಾಯವನ್ನು ಕಂಡರು. ಈ ಪ್ರಶ್ನೆಗೆ ಉತ್ತರ ಪ್ರಾಪ್ತಿಯಾಗದೆ ವಸ್ತುವನ್ನು ನಂಬಿ ಅದರ ಬೆನ್ನು ಹತ್ತಿದರೆ ಆ ವಸ್ತುವಿನ ಹಿಂದಿರುವ ಸತ್ಯ ದೃಷ್ಟಿಯಿಂದ ತಪ್ಪಿಹೋಗುತ್ತೇವೆಂಬ ಹೆದರಿಕೆ ಅವರಿಗೆ. ನಾವು ನೋಡುವುದು, ಅನುಭವಿಸುವುದು ವಸ್ತು ಮಾತ್ರ. ಕಾರಣ ತರ್ಕಕ್ಕೆ ನಿಲುಕದ ಆ ಯಾವುದೋ ಒಂದನ್ನು ಬಯಸಿ ಬಾಹ್ಯವಸ್ತುವನ್ನು ಬಿಟ್ಟು ಬಿಡಬಾರದು ಎಂಬುದು ಜಡವಾದಿಗಳ ದೃಢವಿಶ್ವಾಸ. ಬುದ್ಧಿಗಮ್ಯವಲ್ಲದ, ಮನೋವೇದ್ಯವಲ್ಲದ, ಇಂದ್ರಿಯ ಗ್ರಾಹ್ಯವಲ್ಲದ, ಸತ್ಯ ವೆಂದೇ ಕಲ್ಪಿಸಲಾದ — ಅದು ಕಲ್ಪನೆಯಾದ — ಯಾವುದೋ ಒಂದನ್ನು ಬೆನ್ನು ಹತ್ತಿ ಹೋಗುವುದು ವಸ್ತುಗಳನ್ನು ಕಳೆದುಕೊಳ್ಳುವ ಮೂರ್ಖತನವೆಂಬುದು ಅವರ ಮತ.

ಜಡವಾದಿ ಹೇಳುವಂತೆ ಇದನ್ನೇ ನಂಬಿ ಇದರಲ್ಲೇ ನಿಂತರೆ, ಇದಕ್ಕೆಲ್ಲ ಆಧಾರ ವಾಗಿರುವ ಅದರಿಂದ ವಂಚಿತರಾಗಿ, ಜೀವನವೊಂದನ್ನೇ ನಷ್ಟವಾಗಿ ಹೋಗುತ್ತದೆ ಎಂದು ಆತ್ಮ ವಿದ್ಯಾಶಾಸ್ತ್ರಜ್ಞರ ಆಕ್ಷೇಪವಾಗಿತ್ತು. ಅಂದರೆ, ಬದಲಾಗುವ ನಶ್ವರ ವಾಗಿರುವ ಅದನ್ನೇ ನಂಬಿದರೆ ಇದರ ಹಿಂದೆ ನಂಬಿಕೆಯಾಗಿರುವ ಇದರ ಸತ್ಯಕ್ಕೆ ಹತಭಾಗ್ಯರಾಗುತ್ತೇವೆಂಬುದು ಜಡವಾದಿಗಳ ಮಾತು. ಇಲ್ಲಿ 'ಆತ್ಮ' ಎಂಬುದು ಬರೀ ಸಂಶಯದ ಮಾತೆ. ಕಂಡದ್ದು ನಂಬಿಗೆ ಎಂಬುದು ಅವರ ಆಕ್ಷೇಪ.

ಹೌದು. ಕಂಡದ್ದು ನಂಬಿಗೆ ಯೋಗ್ಯವಾದುದು. ಶ್ರೀ ರಾಮಕೃಷ್ಣರು ಅವರ ಶಿಷ್ಯರಿಗೆ ಹೇಳಿದ್ದಾರೆ: "ನಾನು ಹೇಳಿದೆ ಎಂತ ನೀವು ಯಾವುದನ್ನೂ ನಂಬ ಬೇಡಿ. ನೀವೆ ಪರೀಕ್ಷೆ ಮಾಡಿ. ಪರೀಕ್ಷಿಸಿ ಒಪ್ಪಿದರೆ ಮಾತ್ರ ಒಪ್ಪಿಕೊಳ್ಳಿ" ಎನ್ನುತ್ತಾರೆ. ಶ್ರೀ ಸ್ವಾಮಿ ವಿವೇಕಾನಂದರು ಇದನ್ನು ಇನ್ನೂ ಸ್ಪಷ್ಟವಾಗಿ ಕಠೋರ ವಾಗಿ ಹೇಳುತ್ತಾರೆ. "ದೇವರು ಇದ್ದರೆ, ನಾವು ನೋಡಬೇಕು; ಆತ್ಮ ಇದ್ದರೆ, ನಾವು ಅದನ್ನು ಗ್ರಹಿಸಬೇಕು. ಇಲ್ಲವಾದರೆ ನಂಬದಿರುವುದೇ ಉತ್ತಮ. ಅಪ್ರಾಮಾಣಿಕ ನಾಗಿರುವುದಕ್ಕಿಂತ, ಮುಕ್ತ ನಾಸ್ತಿಕನಾಗಿರುವುದೇ ಉತ್ತಮ." (ರಾಜಯೋಗಕ್ಕೆ ಮುನ್ನುಡಿ)

ಹಾಗಾದರೆ ನಾವು ಯಾವುದನ್ನು? ಇದು ಸತ್ಯವೋ? ಅದು ಸತ್ಯವೋ? ಇದನ್ನೇ ನಂಬುವುದೋ? ಅದನ್ನೇ ನಂಬುವುದೋ? ಇದನ್ನೇ ನಂಬಿದರೆ, ಅದರಿಂದ ವಂಚಿತ ರಾಗುತ್ತೇವೆ. ಅದನ್ನೇ ನಂಬಿದರೆ ಇದರಿಂದ ವಂಚಿತರಾಗುತ್ತೇವೆ. ಇದು ಪ್ರತ್ಯಕ್ಷ ದರ್ಶನ. ಅನುಭವವೇದ್ಯ. ಜೀವನ ಬಯಕೆ. ಇದಿಲ್ಲದಿದ್ದರೆ ಮಾನವ ಜೀವಿಸಲಾರನು. ಕಾಮನೆ, ವಾಂಛೆ, ವಾಸನೆ. ಅನುಭವಿಸುವ ಇದನ್ನು ತ್ಯಜಿಸುವುದಾದರೂ ಹೇಗೆ? ತ್ಯಜಿಸುವುದೇ ಇದರ ಪ್ರಯೋಜನವೇ? ಅಥವಾ ಜೀವನ ಗುರಿಯೆ?

ಕೊಳಿಲ್ಲವೆ, ಮೈಗೆ ಬಟ್ಟೆಯಿಲ್ಲವೆ, ದಟ್ಟದಾರಿದ್ರ್ಯದಲ್ಲಿ ಬಿದ್ದು ಬದುಕಿರುವಾಗಲೇ ನರಕ ಯಾತನೆಯನ್ನು ಅನುಭವಿಸುತ್ತಿದ್ದಾರೆ. ಇದು ಘೋರತರವಾದ ಕಗ್ಗತ್ತಲೆಯಲ್ಲದೆ ಮತ್ತೇನು ?

ಅಂದರೆ ಇಹಲೋಕದ ಲೌಕಿಕ ಜ್ಞಾನವನ್ನು ತಿರಸ್ಕರಿಸಕೂಡದು. ಅವರಿಂದ ಜ್ಞಾನಾನ್ವೇಷಣೆಗೆ ಸಹಾಯವಾಗಿದೆ. ಸತ್ಯವನ್ನು ಶೋಧಿಸುವುದರಲ್ಲಿ ಲೋಕಾಯತ ಸಿದ್ಧಾಂತವೂ ಬಹುದೊಡ್ಡ ಪಾತ್ರವಹಿಸಿದೆ. ಅದರ ಪ್ರಯೋಜನವೂ ಇದೆ. ಮಾತ್ರ ವಲ್ಲ! ಮಾನವ ಕುಲಕ್ಕೆ ಅದರಿಂದ ಮಹೋಪಕಾರವಾಗಿದೆ. ಅದಕ್ಕೆ ಕೃತಜ್ಞತೆ ಸಲ್ಲಲೇ ಬೇಕೆಂಬುದಾಗಿ ಶ್ರೀ ಅರವಿಂದರು 'ದಿವ್ಯ ಜೀವನ' ಗ್ರಂಥದಲ್ಲಿ ಮುಕ್ತಕಂಠದಿಂದ ಲೋಕಾ ಯತ ಸಿದ್ಧಾಂತವನ್ನು ಪ್ರಶಂಶಿಸಿದ್ದಾರೆ. ಅಂದ ಮೇಲೆ ತಿರಸ್ಕರಿಸಲಾಗದ, ಹಾಗೂ ತಿರಸ್ಕರಿಸಕೂಡದ ಈ ವ್ಯಕ್ತ ವಿಶ್ವದ ಭೌತವಿಜ್ಞಾನದ ಪ್ರಯೋಜನವನ್ನು ಪಡೆಯುವುದ ರಲ್ಲಿ ಅನುಭೋಗಿಸುವುದರಲ್ಲಿ ತಪ್ಪೇನಿದೆ ? ಆದರೆ ಮಾತ್ರ ಇದನ್ನೇ ಜ್ಞಾನದ ಉತ್ತುಂಗ ಶಿಖರ ಎಂದು ಭ್ರಮಿಸಿದ್ದಾದರೆ ಜೀವಿತೋದ್ದೇಶ ಈಡೇರುವುದಿಲ್ಲ. ಎರಡನ್ನೂ ಸಮ ನ್ವಯ ಮಾಡಿ, ಎರಡರ ಪ್ರಯೋಜನವನ್ನೂ ಪಡೆಯಬೇಕು. ಅದನ್ನೇ ಶ್ರೀರಾಮ ಕೃಷ್ಣರು ಹೀಗೆ ಹೇಳುತ್ತಾರೆ: "ಒಂದು ಕೈಯಿಂದ ಭಗವಂತನ ಪಾದಾರವಿಂದವನ್ನು ಹಿಡಿದು ಇನ್ನೊಂದು ಕೈಯಿಂದ ಕರ್ಮ ಮಾಡು" ಎಂಬುದಾಗಿ.

ಇಹ ಪರಗಳೆರಡನ್ನೂ ಸತ್ಯವೆಂದು ಒಪ್ಪಿಕೊಂಡರೆ ಮಾತ್ರ ಇದು ಸತ್ಯ. ಇಹ ವನ್ನು ಸತ್ಯವೆಂದು ಒಪ್ಪಿಕೊಳ್ಳುವುದಕ್ಕೆ ಪದಾರ್ಥ ವಿಜ್ಞಾನ ನೆರವಾಗುತ್ತದೆ. ಆದರೆ ಪರವನ್ನು ಸತ್ಯವೆಂದು ಒಪ್ಪಿಕೊಳ್ಳುವುದು ವಿಚಾರಯುಕ್ತ ಮನಸ್ಸಿಗೆ ಕಷ್ಟ. "ಬುದ್ಧಿ ತಣಿವನ್ನೆಗಂ ಸಿದ್ಧಿತಾಂ ಸಂದಿಗ್ಧ" ಬುದ್ಧಿಯನ್ನು ಬಾಯ್ಮುಚ್ಚಿಸಿ ಬದುಕುವುದು ಸಾಧ್ಯವಿಲ್ಲ. ಹಾಗೇನಾದರೂ ಬುದ್ಧಿ ಮತ್ತು ವಿಚಾರವನ್ನು ತಡೆಗಟ್ಟಿದರೆ, ವಿವೇಕ ದಾರಿ ತಪ್ಪುತ್ತದೆ. ವಿಚಾರದಿಂದ ವಿವೇಕ ; ವಿವೇಕದಿಂದಲೇ ಜ್ಞಾನ. ಜ್ಞಾನರಹಿತ ಧರ್ಮ ಕುರುಡಾಗುತ್ತದೆ. ಧರ್ಮರಹಿತ ವಿಜ್ಞಾನ ಉಂಟಾಗುತ್ತದೆ. "ವಿಜ್ಞಾನ ಸಹಿತ ಜ್ಞಾನ" ಸರ್ವ ಶ್ರೇಷ್ಠ ಎಂಬುದಾಗಿ ಗೀತಾಚಾರ್ಯ ಸಾರುತ್ತಾನೆ.

ಹೀಗೆ ಪದಾರ್ಥ ವಿಜ್ಞಾನದ ಪ್ರಯೋಜನವನ್ನು ಒಪ್ಪಿಕೊಂಡು, ಅದಕ್ಕಿಂತ ಮುಂದೆ ಹೋಗಿ ಆತ್ಮವಿಜ್ಞಾನವನ್ನೂ ಪಡೆಯಬೇಕು. ಇದು ಪೂರ್ಣ ದೃಷ್ಟಿ. ಆದರೆ ಪದಾರ್ಥ ವಿಜ್ಞಾನ ಸಾಧನಗಳನ್ನೇ ಆತ್ಮಜ್ಞಾನ ಸಾಧನಗಳನ್ನಾಗಿ ಬಳಸಿಕೊಳ್ಳಲು ಬಾರದು, ಹಾಗೇನಾದರೂ ಇಂದ್ರಿಯ ಗ್ರಾಹ್ಯವಾದುದನ್ನೆ ಸತ್ಯವೆಂದು ಹಠಹಿಡಿದಿ ದ್ದಾದರೆ ಇಂದ್ರಿಯಗಳಿಗೆ ಅಗ್ರಾಹ್ಯವಾದ, ಅಪ್ರಮೇಯವಾದ ಕೊನೆಗೆ ಅಚಿಂತ್ಯವಾದ ಆ 'ಆತ್ಮ'ವನ್ನು ಅರಿಯುವುದು, ಪಡೆಯುವುದು ಸಂಶಯಾಸ್ಪದ. 'ಸಂಶಯಾತ್ಮಾ ವಿನ ಶ್ಯತಿ" ಹತ್ತಿ ತೂಗಲು ಉಪಯೋಗಿಸುವ ದೊಡ್ಡ ಚಿಂತಾಲು ಚಿನ್ನ ತೂಗಲು ಬಾರದು. ಹಾಗೆಯೇ ಚಿನ್ನ ತೂಗುವ ಸಣ್ಣ ತ್ರಾಸು, ಅನಿಲವನ್ನು ತೂಗಲು ಅಥವಾ ಅದಕ್ಕಿಂತ ಸೂಕ್ಷ್ಮ ಪದಾರ್ಥಗಳನ್ನು ತೂಗಲು ಉಪಯೋಗಕ್ಕೆ ಬಾರದು. ಕಬ್ಬು ಕತ್ತರಿಸುವ

ಕತ್ತ್ರಿಯಿಂದ ಹೃದಯ ಶಸ್ತ್ರ ಚಿಕಿತ್ಸೆ ಮಾಡಲಾಗದು. ಶ್ರೀ ವಿವೇಕಾನಂದರು ಹೇಳುವಂತೆ ; "ಬಾಹ್ಯಪ್ರಪಂಚದಲ್ಲಿ ಸತ್ಯವನ್ನು ಗ್ರಹಿಸುವುದು ತೌಲನಿಕವಾಗಿ ಸುಲಭ, ಏಕೆಂದರೆ ಅದಕ್ಕಾಗಿ ಹಲವಾರು ಸಾಧನಗಳನ್ನು ಕಂಡು ಹಿಡಿಯಲಾಗಿದೆ, ಆದರೆ ಅಂತರಿಕ ಜಗತ್ತಿನಲ್ಲಿ ನಮಗೆ ಸಹಾಯ ಮಾಡಲು ಅಂಥ ಸಾಧನಗಳಿಲ್ಲ.[2]

ಶ್ರೀ ಅರವಿಂದರು ಸಾಧಕರೊಬ್ಬರಿಗೆ ಬರೆದ ಪತ್ರದಲ್ಲಿ ಪದಾರ್ಥ ವಿಜ್ಞಾನ ಜ್ಞಾನ ಸಾಧನಗಳು ಆತ್ಮವಿದ್ಯಾಜ್ಞಾನಕ್ಕೆ ನೆರವಾಗುವುದಿಲ್ಲ. ಅದಕ್ಕೆ ಬೇರೊಂದು ಸಾಧನ ಸಾಮಗ್ರಿ ಬೇಕೆಂಬುದಾಗಿ ಹೇಳುತ್ತಾರೆ ; ಯೋಗದ ಅನುಭಾವ ಅಂತರಿಕ ಜಗತ್ತಿಗೆ ಸೇರಿದ್ದು, ಅವುಗಳಿಗೆ ತಮ್ಮದೇ ಆದ ಒಂದು ನಿಯಮವಿದೆ ; ತಮ್ಮದೇ ಆದ ಗ್ರಹಿಕೆಯ ಮಾನದಂಡಗಳನ್ನು ಹೊಂದಿವೆ ಮತ್ತು ಭೌತಿಕ ಇಂದ್ರಿಯಗಳ ಅಥವಾ ವಿಚಾರ ಅಥವ ವೈಜ್ಞಾನಿಕ ತರ್ಕದ ಮಿತಿಗೊಳಪಡದ ಪ್ರಮಾಣಗಳನ್ನು ಹೊಂದಿವೆ. ವೈಜ್ಞಾನಿಕ ಅನ್ವೇಷಣೆ ಭೌತಿಕ ಇಂದ್ರಿಯಗಳ ಮೇರೆಯನ್ನು ದಾಟಿ ಹೋಗಿ ಅನಂತ ಮತ್ತು ಸೂಕ್ಷ್ಮಾತಿಸೂಕ್ಷ್ಮದ ಶರಧಿಯನ್ನು ತಲಪುವ ರೀತಿಯಲ್ಲಿ ; ಯಾವುದರ ಬಗ್ಗೆ ಜ್ಞಾನೇಂದ್ರಿಯಗಳು ಏನನ್ನು ತಿಳಿಸಲಾರವೋ ಆ ರೀತಿಯಲ್ಲಿ ಅಧ್ಯಾತ್ಮಿಕ ಅನ್ವೇಷಣೆ ವೈಜ್ಞಾನಿಕ ಅಥವ ವೈಚಾರಿಕತೆಯನ್ನು ದಾಟಿ ಮುಂದುವರೆಯುತ್ತದೆ ; ಸಾಮಾನ್ಯ ವಾಸ್ತವಿಕ ವಾದದ ಸಹಾಯದಿಂದ ಆಧ್ಯಾತ್ಮಿಕ ಅನುಭವಗಳನ್ನು ವಿಮರ್ಶಿಸಲು ಮತ್ತು ಅವು ಅಸ್ತಿತ್ವದಲ್ಲಿವೆಯೋ ಅಥವ ಇಲ್ಲವೋ, ಅವುಗಳ ನಿಯಮಗಳೇನೆಂಬುದನ್ನು ಪರೀಕ್ಷಿಸುವುದು ಅಸಾಧ್ಯ. ವಿಜ್ಞಾನದಲ್ಲಿರುವಂತೆ ಇಲ್ಲಿ ಸಹ ಗುರು ತೋರಿದ ಮಾರ್ಗದಲ್ಲಿ ಅಥವ ಹಿಂದಿನವರ ಮಾರ್ಗದರ್ಶಿತ್ವದಲ್ಲಿ ಅನುಭಾವಗಳ ಸರಣಿಯನ್ನೇ ಒಟ್ಟುಗೂಡಿಸಬೇಕಾಗುತ್ತದೆ.[3] (18-11-34 ರ ದಿನಾಂಕದ ಪತ್ರ)

ಅಂದ ಮೇಲೆ ಈ ಅಂತರಂಗ ಲೋಕದ ವೀಕ್ಷಣೆ, ವಿಶ್ಲೇಷಣೆ, ಭಾಸ, ಕೊನೆಗೆ ಅನುಭವ ಪಡೆಯಲು ಈ ಬಾಹ್ಯ ದೃಗ್ಗೋಚರ ವಿಶ್ವ ವಿಶ್ಲೇಷಣೆಗೆ ಉಪಯೋಗವಾಗುವ ಸಾಧನಗಳು ಉಪಯೋಗಕ್ಕೆ ಬಾರವು. ಅದಕ್ಕಿರುವ ಒಂದೇ ಸಾಧನ ಮನಸ್ಸು. ಆ ಮನಸ್ಸಿನ ಮೂಲಕ ಮನಸ್ಸಿಗೂ ಆಧಾರವಾಗಿರುವ, ಮನಸ್ಸಿಗೂ ಆಚೆಗಿರುವ ಅದನ್ನು ಅರಿತು ಅನುಭವಿಸಬೇಕು. ಶ್ರೀ ಸ್ವಾಮೀಜಿ ಆ ಆತ್ಮವಿದ್ಯಾ ಪ್ರಾಪ್ತಿಗೆ ಬೇಕಾದ ಸಾಧನ ಸಂಪತ್ತು ಮತ್ತು ಸಾಧನೆಯನ್ನು ಈ ರೀತಿ ಹೇಳುತ್ತಾರೆ ; "ಮನಸ್ಸೇ ಅದರ ಸಾಧನ. ಸೂಕ್ತ ಮಾರ್ಗದಲ್ಲಿ ದಾರಿ ತೋರಿದಾಗ ಮತ್ತು ಅಂತರಿಕ ಜಗತ್ತಿನತ್ತ ಒಯ್ದಾಗ ಅವಧಾನ ಶಕ್ತಿಯೇ ಮನಸ್ಸನ್ನು ವಿಶ್ಲೇಷಿಸುತ್ತದೆ ಮತ್ತು ನಮಗೆ ಸತ್ಯದರ್ಶನ ಮಾಡಿಸುತ್ತದೆ. ಮಾನವನ ಮನೋಶಕ್ತಿಗೆ ಒಂದು ಮಿತಿ ಇದೆ.[4]" ಇಂಥ ಆತ್ಮವಿದ್ಯಾ ವಿಷಯಕ ಸೂತ್ರಗಳೇ ಧರ್ಮ.

ಆತ್ಮ ವಿದ್ಯಾ ಸಾಧನೆಯೂ "ವೈಜ್ಞಾನಿಕ" ಪದ್ಧತಿಯನ್ನೇ ಅನುಸರಿಸಬೇಕು. ಪ್ರತ್ಯಕ್ಷವಾಗಿ ಅರಿಯದೆ ಅನುಭವಿಸದೆ ಯಾವುದನ್ನೂ ಸತ್ಯವೆಂದು ಒಪ್ಪಿಕೊಳ್ಳಬೇಕಾಗಿಲ್ಲ ಎಂಬ ಪದಾರ್ಥ ವಿಜ್ಞಾನ ಸೂತ್ರವನ್ನೇ ಆತ್ಮ ವಿದ್ಯಾ ವ್ಯಾಸಂಗಕ್ಕೂ ಅಂದರೆ

ಧರ್ಮಶಾಸ್ತ್ರಕ್ಕೂ ಅನ್ವಯಿಸಬೇಕು. ಕೊನೆಗೆ ಸ್ವಾನುಭವನೇ ಎಲ್ಲ ಜ್ಞಾನದ ತೀರ್ಪುಗಾರ ಎಂದಂತಾಯಿತು. "ಆತ್ಮ" "ಪರಮಾತ್ಮ" "ಅತೀತ" "ಪರಾತ್ಪರನನ್ನು" ಎಂಬುವು ಸಟೆಯೋ ದಿಟವೋ ಎಂಬುದನ್ನು ತಾನೇ ಸಾಧನೆ ಮಾಡಿ, ತಾನೇ ಅರಿತು, ತಾನೇ ಅನುಭವಿಸಿ ನಿರ್ಧಾರಕ್ಕೆ ಬರಬೇಕು. ಇತರರ ಅನುಭವ ನಿನ್ನ ನಂಬುಗೆಗೆ ಆಧಾರವಾಗಬೇಕಾಗಿಲ್ಲ. ನೀನೇ ಸ್ವತಃ ಸಾಧನೆ ಮಾಡು. ಹೀಗೆ ಸಾಧನೆ ಮಾಡಿದರೆ ಇಂಥಿಂಥಾ ಅನುಭವವಾಗುತ್ತದೆ ಎಂದು ಹಿಂದೆ ಸಾಧನೆ ಮಾಡಿದವರು ಹೇಳುತ್ತಾರೆ. ಅದರಂತೆಯೇ ನೀನು ಮಾಡಿದರೆ ಮಾತ್ರ ಅದೇ ಅನುಭವ ನಿನಗೂ ಆಗಬಹುದು. ಹಾಗೆ ಮಾಡದೆ ಇತರರ ಅನುಭವ ಸಟೆಯೆಂದು ತಿರಸ್ಕರಿಸುವುದು ವೈಜ್ಞಾನಿಕ ದೃಷ್ಟಿಯಲ್ಲ. ಈ ಹಂತಕ್ಕೆ ಬಂದಾಗ ತರ್ಕ ಸೋತು ಹೋಗುತ್ತದೆ. ಆಗಲೆ ಅದು 'ತರ್ಕಾತೀತ' "ಮಾತು ಮನಸ್ಸುಗಳಿಗೂ ಅತ್ತತ್ತ" ಎಂದು ಋಷಿವರೇಣ್ಯರು ಸಾರಿದ್ದಾರೆ. ಕೊನೆಗೆ ಈ ತರ್ಕ ವಿಚಾರ, ಆ ಅನುಭವಕ್ಕೆ ಶುದ್ಧ ಅಪ್ರಯೋಜಕ ಅನಾವಶ್ಯಕ ಎಂಬ ಸ್ಥಿತಿಗೆ ಬರುತ್ತಾರೆ. ಅದನ್ನೇ ಶ್ರೀರಾಮಕೃಷ್ಣರು, ತಮ್ಮದೇ ಆದ, ಅನನುಕರಣೀಯ ಸರಳ ಆದರೂ ಸುಂದರ ಮಾತಿನಲ್ಲಿ ಹೀಗೆ ಹೇಳುತ್ತಾರೆ ; "ಮಾವಿನ ತೋಟಕ್ಕೆ ಹೋದ ಮೇಲೆ ಹಣ್ಣಿನ ರುಚಿನೋಡು. ಅಲ್ಲಿರುವ ಮರಗಳನ್ನು ಕೊಂಬೆ ರೆಂಬೆಗಳನ್ನು, ಎಣಿಸುವುದರಿಂದ ಏನು ಪ್ರಯೋಜನ ?"

ಆದ್ದರಿಂದ ಅನುಭವ ಬೇಕೆಂದರೆ ಇದರ ಚರ್ಚೆಯನ್ನು ಕಟ್ಟಿಕೊಂಡು ಏಕೆ ಒದ್ದಾಡಬೇಕು ? ಕೊನೆಗೆ ಎಲ್ಲಿಗೆ ಬರುತ್ತೇವೆಂದರೆ ಆತ್ಮವಿಜ್ಞಾನವನ್ನು ಕುರಿತು ವಿಚಾರ ವಿಮರ್ಶೆಯಲ್ಲಿ ತೊಡಗುವುದು ಕೇವಲ ಅನಗತ್ಯ. ಆತ್ಮ ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಧರ್ಮದಲ್ಲಿ ಶ್ರದ್ಧೆಯಿದ್ದವರು ಅವರ ನಂಬುಗೆಯಂತೆ ಅವರು ನಡೆದುಕೊಳ್ಳಲಿ. ಧರ್ಮ ಶ್ರದ್ಧೆಯುಳ್ಳವರನ್ನು ಮೂರ್ಖರು ಎಂದು ಖಂಡಿಸುವುದು ಎಷ್ಟು ಮೂರ್ಖತನವೋ, ಶ್ರದ್ಧೆಯಿಲ್ಲದವರನ್ನು ಒತ್ತಾಯಿಸುವುದು ಖಂಡಿಸುವುದೂ ಅಷ್ಟೇ ಮೂರ್ಖತನ. ಧರ್ಮ ಅವರವರ ವೈಯುಕ್ತಿಕ ವಿಚಾರ. ಕೊನೆಗೆ ತನಗೆ ತಾನೇ ಗುರು ಎಂಬ ಸ್ಥಿತಿಗೆ ಬರುತ್ತೇವೆ. ಆ ಮೇಲೆ ಮಾತು ಮನಸ್ಸಿಗಿಂತ ಆಚೆಗಿರುವ ಅದನ್ನು ಯಾವ ಮನಸ್ಸು ಯಾವ ಮಾತು ವ್ಯಕ್ತಪಡಿಸೀತು ? ಕೊನೆಗೂ ಮೌನವೇ ಮಹಾ ವ್ಯಾಖ್ಯೆ.

'ಓಂ ತತ್ ಸತ್'

ಟಿಪ್ಪಣಿಗಳು

1 There is but one single true reason for living: it is to know oneself. We are here to learn– to learn what we are, why we are here and what we have

to do. And if we do not know that, our life is altogether empty—for ourselves and for others.

2 "If there is God we must see him ; if there is a soul we must perceive it : otherwise it is better not to believe. It is better to be an outspoken atheist than a hypocrite" (Introduction to Rajayoga)

3 "It is comparatively easy to observe facts in the external world, for many instruments have been invented for the purpose; but in the internal world we have no instruments to help."

4 The experiences of Yoga belong to an inner domain and go according to a law of their own, have their own method of perception criteria and all the rest of it which are neither those of the domain of physical senses nor of the domain of rational or scientific enquiry. Just as scientific enquiry passes beyond that of the physical senses and enters the domain of the infinite and infinitesimal about which senses can say nothing . . . so the spiritual search passes beyond the domain of scientific or rational enquiry and it is impossible by the aid of the ordinary positive reason to test the data of spiritual experience and decide whether those things exist or not or what is their law. As in science, so here you have to accumulate experience on experience, following faithfully the methods laid down by the Guru or by the system of the past." (letter dt. 16-11-34)

5 "The instrument is the mind itself. The power of attention, when properly guided and directed towards the internal world, will analyse the mind and illumine facts for us. There is limit to the power of a human mind."

ಜ್ಞಾನಯೋಗಿ, ವಿಚಾರಪರ, ತತ್ತ್ವಜ್ಞ. ಅವನು ತೋರಿಕೆಯ ಜಗತ್ತನ್ನು ಮೀರಿ ಹೋಗಲೆತ್ನಿಸುವನು. ಪ್ರಪಂಚದ ಅಲ್ಪವಸ್ತುಗಳಿಂದ ಅವನಿಗೆ ತೃಪ್ತಿ ಇಲ್ಲ. ತಿನ್ನುವುದು ಕುಡಿಯುವುದು ಮುಂತಾದ ನಿತ್ಯ ಸ್ಸಂದಿನ ಕ್ರಮಗಳನ್ನು ಮೀರಿ ಹೋಗಲಿಚ್ಛಿಸುವನು. ಸಹಸ್ರಾರು ಗ್ರಂಥಗಳ ಶೋಧನೆಯಿಂದಲೂ ಅವನಿಗೆ ತೃಪ್ತಿ ಇಲ್ಲ. ವಿಜ್ಞಾನವಾವುದೂ ಅವನಿಗೆ ತೃಪ್ತಿಯನ್ನು ತಾರದು. ವಿಜ್ಞಾನವು ಹೆಚ್ಚೆಂದರೆ ಈ ಕ್ಷುದ್ರ ಜಗತ್ತನ್ನು ಅವನ ಮುಂದೆ ತರುವುದು ಅಷ್ಟೆ. ಮತ್ತಾವುದು ಅವನಿಗೆ ತೃಪ್ತಿಯನ್ನು ನೀಡುವುದು ? ಸೃಷ್ಟಿವ್ಯೂಹವೂ ಅವನಿಗೆ ತೃಪ್ತಿಯನ್ನು ತಾರದು. ಇವೆಲ್ಲ ಅಸ್ತಿತ್ವ ಸಾಗರದ ಒಂದು ಬಿಂದು ಮಾತ್ರ. ಅವನ ಆತ್ಮ ಇದನ್ನೆಲ್ಲ ಮೀರಿ ಸತ್ಯ ಹೇಗಿದೆಯೋ ಹಾಗೆಯೇ ತಿಳಿದುಕೊಳ್ಳಲು ಬಯಸುವುದು. ಅದರ ಮೂಲವನ್ನು ಕಂಡುಹಿಡಿಯಲು, ಅದನ್ನು ಸಾಕ್ಷಾತ್ಕಾರ ಮಾಡಿಕೊಂಡು ಅದರಲ್ಲಿ ಒಂದಾಗಿ ವಿಶ್ವಾತ್ಮನಲ್ಲಿ ಐಕ್ಯವಾಗಲು ಯತ್ನಿಸುವುದು. ಇವನೇ ಜ್ಞಾನಿ. ದೇವರನ್ನು ತಂದೆ, ತಾಯಿ, ಸೃಷ್ಟಿಕರ್ತ, ಅದರ ಸಂರಕ್ಷಕ, ಅದರ ಮಾರ್ಗದರ್ಶಕ ಎನ್ನುವ ವರ್ಣನೆ ಪೂರ್ಣವಾಗಿ ಅವನನ್ನು ವರ್ಣಿಸುವುದಿಲ್ಲ. ಅವನಿಗೆ ದೇವರು ತನ್ನ ಜೀವದ ಜೀವ, ಆತ್ಮದ ಆತ್ಮ; ಅವನಿಗೆ ತನ್ನ ಆತ್ಮವೇ ದೇವರಾಗಿರುವನು. ದೇವರಿಲ್ಲದ ಅನ್ಯ ವಸ್ತುವೇ ಇಲ್ಲ. ಜ್ಞಾನಾಘಾತಕ್ಕೆ ಅವನ ಮರ್ತ್ಯ ಭಾಗವೆಲ್ಲ ಜರ್ಝರಿತವಾಗಿ ಉದುರಿಹೋಗುವುದು. ಕೊನೆಗೆ ನಿಜವಾಗಿ, ಏನು ಉಳಿಯುವುದೋ ಅದೇ ದೇವರು.

ಸ್ವಾಮಿ ವಿವೇಕಾನಂದ
(ಜ್ಞಾನಯೋಗ, ಹಿಂದಿನ ರಕ್ಷಾಪುಟ)

ಸೀತಾರಾಮ ಜಾಗೀರ್‌ದಾರ್

ವಡ್ಡರಾವುಳಸುಂಕ

ರಾಜ್ಯದ ಆದಾಯ, ಆಯಾ ಕಾಲದಲ್ಲಿ ಆಳುವ ರಾಜರು ಪ್ರಜೆಗಳ ಮೇಲೆ ಹಾಕುತ್ತಿದ್ದ ಕರಗಳು ಮತ್ತು ಇತರ ಮೂಲಗಳಿಗೆ ಸಂಬಂಧಿಸಿರುತ್ತಿತ್ತು. ಒಳ್ಳೆಯ ರಾಜರು ಆ ಕರಗಳನ್ನು ಸದುಪಯೋಗಕ್ಕೆ ಬಳಸುತ್ತಿದ್ದರು ; ಪ್ರಜೆಗಳಿಂದ ಎತ್ತಿದ ಕರಗಳನ್ನು ಪ್ರಜೆಗಳಿಗೇ ಮತ್ತೆ ಉಪಯುಕ್ತ ರೀತಿಯಲ್ಲಿ ಹಿಂದಕ್ಕೆ ತಿರುಗಿಸುತ್ತಿದ್ದರು. ಕಾಳಿದಾಸ ಒಂದೆಡೆ ಹೀಗೆ ವಿವರಿಸಿದ್ದಾನೆ :

ಪ್ರಜಾನಾಮೇವ ಭೂತ್ಯರ್ಥಂ ಸತಾಭ್ಯೋ ಬಲಿಮಗ್ರಹೀತ್
ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ ||
[ಜನರೆಲ್ಲರೇಳಿಗೆಯು ನೆನೆವೆ ದಲ್ ಕಾಣಿಕೆಯ ಕೊಂಡನು ದಿಲೀಪ
ನೃಪನು
ಮತ್ತೆ ಸಾಸಿರ್ಮಡಿಯನೊಲಿದೀಯಲೆಂದೆ ದಲ್ ರವಿನೀರನೀಂಟದಪನು.][1]

ಈ ಬಗೆಯ ರಾಜರೆಷ್ಟು ಮಂದಿಯೊ? ತೆರಿಗೆಗಳನ್ನು ತಮ್ಮ ಉಪಭೋಗಕ್ಕೇ ಬಳಸುವುದು ಹೆಚ್ಚಾಗಿತ್ತು. ಇಂತಹ ತೆರಿಗೆಗಳಲ್ಲಿ 'ವಡ್ಡರಾವುಳಸುಂಕ' ಎಂಬುದೂ ಒಂದು. ಇದರ ಅರ್ಥ ವಿವರಣೆ ವಿದ್ವಾಂಸರಿಗೆ ಇನ್ನೂ ಸ್ಪಷ್ಟವಾಗಿಲ್ಲ :

"ಸುಂಕದ ರೀತಿಯ ವಡ್ಡರಾವುಳದ ಸುಂಕ, ಪೆಜ್ಜುಣ್ಕ, ಮತ್ತು ಮನ್ನೆಯ ಎಂಬ ಹಲವಾರು ತೆರಿಗೆಗಳನ್ನು ಉಲ್ಲೇಖಿಸಲಾಗಿದೆ ಮತ್ತು ನಿಶ್ಚಿತವಾಗಿ ಇವುಗಳೊಂದೊಂದನ್ನೂ ಜಿಲ್ಲಾಧಿಕಾರಿಗಳು ವಸೂಲು ಮಾಡುತ್ತಿದ್ದರು ; ಹೊಟ್ಟೂರಿನ ಕ್ರಿ.ಶ. 1037ರ ಒಂದು ಶಾಸನದಿಂದ ಇದು ವಿಶದ ಪಡುತ್ತದೆ ; ಅದರಲ್ಲಿ ಪ್ರತಿಯೊಂದು ವರ್ಗದ ಸುಂಕದವರನ್ನು ಪ್ರತ್ಯೇಕವಾಗಿ ಹೆಸರಿಸಲಾಗಿದೆ ಮತ್ತು ಅವರು ಒಟ್ಟಾಗಿ ಸೇರಿ ಒಂದು ಸಾಮಾನ್ಯ ಉದ್ದೇಶಕ್ಕಾಗಿ ಕೆಲಸ ಮಾಡಿದರೆಂಬುದನ್ನು ಹೇಳಲಾಗಿದೆ. 'ವಡ್ಡರಾವುಳದ ಅರ್ಥವು ಅಸ್ಪಷ್ಟವಾಗಿದೆ."[2]

— ಹೀಗೆ ಬರೆದು ಲೇಖಕರು ಮುಂದೆ ತಮ್ಮ ಊಹಾಪೋಹಗಳನ್ನು ಮಂಡಿಸಿದ್ದಾರೆ. ವಡ್ಡರಾವುಳದ ಅರ್ಥವನ್ನು ವಿವೇಚಿಸಬೇಕೆಂದರೆ ನಮಗೆ ಪ್ರಸ್ತುತ ಕೆಲ ಪ್ರಯೋಗಗಳು ಮುಖ್ಯ :

1) ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಾಧಿಪತಿ ಮಹಾಪ್ರಚಂಡ ದಣ್ಡನಾಯಕಂ ವಿಬುಧವರದಾಯಕಂ ಸುಜನಪ್ರಸನ್ನಂ ಸುಡಿಮ ವತ್ರಿಸ್ಸಗೋತ ಪವಿತ್ರಂ ಪರಾಂಗನಾಪುತ್ರಂ ತುರಯರೇವನ್ತಂ ವೈರಿ ಕ್ರಿತಾನ್ತ ಸಾಹಸೋತ್ತುಂಗನಯ್ಯನಸಿಂಗ ನಾಮಾದಿಸಮಸ್ತಪ್ರಸಸ್ತಿಸಹಿತಂ ಶ್ರೀಮನ್ಮಹಾಪ್ರಧಾನಂ ಬಾಣಸವೆರ್ಗ್ಗಡೆ ದಣ್ಡನಾಯಕನನನ್ತಪಾಳಯ್ಯಂಗಳಿರಜುನೂಱುಮಂ ಬನವಸೆಪನ್ನಿಚ್ಛಾಸಿರಮುಂ ಪಲಸಿಗೆಪನ್ನಿಚ್ಛಾಸಿರಮುಂ ವಡ್ಡರಾವುಳದಸುಂಕಮುಮಂ ಸಪ್ತಾರ್ದ್ಧಲಕ್ಕೆಯಚ್ಛಪನ್ನಾಯುಮುಮಂ ಪಡೆದು ಸುಖಸಂಕತಾ ವಿನೋದದಿಂ ಪ್ರತಿಪಾಳಿಸುತ್ತಮಿರೆ . . . .

X X X X X

[ತತ್ಪಾದಪದ್ಮೋಪಜೀವಿ] ಸ್ವಸ್ತಿ ಸಮಸ್ತಗುಣಗಣಾಭರಣನುಂ ವಿಬುಧಜನಶರಣನುಂ ನಿಜಸುದ್ಧಕೀರ್ತಿಚಂದ್ರಿಕಾಪ್ರಭಾವವಿಕಸಿತಜಗದ್ವಳಯಕೈರವನುಂ ರಣರಂಗ ಭೈರವನುಂ ಸಕಳ ಸುಕವಿಜನಕಳಭೂಜನುಂ ವಿಸ್ವಮುಮಾರಮೂಢಮತ್ಸರಾಜನುಂ ವೀರಲಕ್ಷ್ಮೀನಿವಾಸನು ಅನನ್ತಪಾಳ ಪ್ರಸಾದಾಸಾದಿತಾಧಿಕಾರ ಲಕ್ಷ್ಮೀವಿಳಾಸನುಮೆನಿಸಿದ ಮಹಾಪ್ರಚಂಣ್ಡ ದಂಣ್ಡನಾಯಕಂ ಗೋವಿನ್ದರಸರ್ನ್ಮನವಾಸೆ ಪನ್ನಿಚ್ಛಾಸಿರಮುಮಂ ವೇಲ್ವಟ್ಟಿಯ ವಡ್ಡರಾವುಳದ ಸುಂಕಮುಮಂ ಪಡೆದು ದುಷ್ಟನಿಗ್ರಹ ಶಿಷ್ಟಪ್ರತಿಪಾಳನಕ್ರಮದಿಂ ಪ್ರತಿಪಾಳಿಸುತ್ತಮಿರ್ದ್ದು . . . . . . [3]

— ಈ ಶಾಸನದಲ್ಲಿ ಅನನ್ತಪಾಳದಂಡನಾಯಕನು ಎರಡುನೂರು, ಬನವಸೆ-12000, ಪಲಸಿಗೆ-12000 ಭೂಭಾಗದಲ್ಲಿಯ ವಡ್ಡರಾವುಳಸುಂಕವನ್ನು ಇತರ ಸುಂಕಗಳೊಂದಿಗೆ ಅನುಭೋಗಿಸುತ್ತಿದ್ದು ಅವುಗಳಲ್ಲಿ ಬನವಸೆ-12000ದ ವಡ್ಡರಾವುಳ ಸುಂಕವನ್ನು ಆತನ ಅಳಿಯ ಗೋವಿಂದ ದಂಡನಾಯಕನಿಗೆ ಅನುಭೋಗಿಸಲು ಕೊಟ್ಟಿದ್ದನೆಂಬುದು ಬೆಣ್ಣೆಯಷ್ಟು ಬೆಳ್ಳಗಿದೆ, ಸ್ಫಟಿಕ ಶಲಾಕೆಯಷ್ಟು ಸ್ಪಷ್ಟವಿದೆ. ಅನನ್ತಪಾಳಯ್ಯ ಹಾಗೂ ಆತನ ಅಳಿಯ ಗೋವಿಂದದೇವ ಇವರು ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ವಂಶಜರೂ ಅಲ್ಲ, ವೃದ್ಧರಾಜಕುಲದವರೂ ಅಲ್ಲ. ಇದು ಗಮನಾರ್ಹವಾದ ಅಂಶ.

2) ಶ್ರೀ ಬ್ರಹ್ಮೇಶ್ವರ ದೇವರ ತೋಟವಡಕೆಎಲೆಯ ಹೆಜ್ಜುಂಕ ವಡ್ಡರಾವುಳ ಬಿಳ್ಕೊಡೆಯೆಂದಿಂತೀ ಮೂಱು ಸುಂಕಮಂ . . . . [4]

—ಇಲ್ಲಿ ಹೆಜ್ಜುಂಕ, ವಡ್ಡರಾವುಳ ಹಾಗೂ ಬಿಳ್ಕೊಡೆ ಈ ಮೂರು ಬಗೆಯ ಸುಂಕಗಳು ಬೇರೆ ಬೇರೆಯೆಂಬುದು ಸುಸ್ಪಷ್ಟ.

3) ಶ್ರೀಮನ್ಮಹಾಮಂಡಳೇಶ್ವರ ಕುಲೋತ್ತುಂಗಚೋಡಗೊಂಕರಾಜುಲ ಮುದಿಸೇಲಿ ಯಾ ಸೇನವೆಗ್ಗಡ ಪಲ್ಲಿನಾಂಟಿಬೋನುಂದಮುಕು ನಡಚೆಡು ವಡ್ಡರಾವಳಮು ಪಾಲನು . . . . [5]

— ಇಲ್ಲಿಯೂ ವಡ್ಡರಾವುಳ ಸುಂಕವನ್ನು ಮಹಾಮಂಡಲೇಶ್ವರ ಕುಜೋತ್ತುಂಗ ಚೋಳಗೋಂಕರಾಜನ ಭುಜಸಹಾಯಕ (ಮುಜಸೇಲಿ) ಸೇನವೆಗ್ಗಡೆಯು ಅನುಭೋಗಿಸುತ್ತಿದ್ದುದು ಸ್ಪಷ್ಟವಿದೆ. ಈ ಸೇನವೆಗ್ಗಡೆ ವೃದ್ಧರಾಜಕುಲದ ವ್ಯಕ್ತಿಯಲ್ಲ.

ಪ್ರಾಚೀನ ಕಾಲದಲ್ಲಿ ಕೆಲ ಅಧಿಕಾರಿಗಳು ತಾವು ಮಾಡುವ ಸೇವೆಗೆ ವೇತನವನ್ನು ಆಯಾಸುಂಕದಲ್ಲೇ ಪಡೆಯುತ್ತಿದ್ದರು. ರಾಜರು ಸುಂಕದ ವಸೂಲಿಗೆ ವಿಶಿಷ್ಟ ಅಧಿಕಾರಿಗಳನ್ನು ನೇಮಿಸುತ್ತಿದ್ದರು. 'ವಡ್ಡರಾವುಳ' ಸುಂಕದ ವಸೂಲಿಗೂ ಅಧಿಕಾರಿಗಳು ಆಗಾಗ ಅಲ್ಲಲ್ಲಿ ಇದ್ದುದು ಶಾಸನಗಳಿಂದ ತಿಳಿದುಬಂದಿದೆ. ವಡ್ಡರಾವುಳದ ಪೆರ್ಗಡೆ ಜೇಚಯ್ಯ[6] ವಡ್ಡರಾವುಳದ ಸುಂಕದವೆರ್ಗಡೆದಾಸಯ್ಯ[7], ವಡ್ಡರಾವುಳದ ಭೋಗಭಟ್ಟಯ್ಯ[8] ಹೀಗೆ ಅನೇಕರನ್ನು ಉಲ್ಲೇಖಿಸಬಹುದು. ವಡ್ಡರಾವುಳಸುಂಕವನ್ನು ಇವರು ಏತರ ಮೇಲೆ ಸಂಗ್ರಹಿಸುತ್ತಿದ್ದರು ಎಂಬುದು ಮುಂದಿನ ಪ್ರಶ್ನೆ. ಈ ವಿಷಯವನ್ನು ವಿಶ್ಲೇಷಿಸಿದರೆ 'ವಡ್ಡರಾವುಳ' ಶಬ್ದ ವಿಶ್ಲೇಷಣೆಯು ತಂತಾನೆ ಆಗಿ ಅರ್ಥದ ನವನೀತ (ಬೆಣ್ಣೆ) ತಾನೇ ಮೇಲೆ ತೇಲಿಬರುತ್ತದೆ.

ಮೇಲೆ ಉದ್ಧರಿಸಿದ ಒಂದನೆಯ ಉಲ್ಲೇಖದಲ್ಲಿ ಅನಂತಪಾಳಯ್ಯ ಮತ್ತು ಆತನ ಅಳಿಯ ಗೋವಿಂದ ದಂಡನಾಯಕ ಇವರು ಪೇಲ್ವಟ್ಟೆಯ ವಡ್ಡರಾವುಳಸುಂಕವನ್ನು ಅನುಭೋಗಿಸುತ್ತಿದ್ದರೆಂಬುದು ಸುವ್ಯಕ್ತ. 'ಪೇಲ್ವಟ್ಟೆ' ಎಂದರೆ ಹೆದ್ದಾರಿ. 'ವಡ್ಡರಾವುಳಸುಂಕ' ಎಂದರೆ ವ್ಯಾಪಾರಿಗಳು ಹೆದ್ದಾರಿಯಲ್ಲಿ ತಾವು ಸಾಗಿಸುತ್ತಿದ್ದ ವಸ್ತುಗಳ ಮೇಲೆ ಕೊಡುತ್ತಿದ್ದ ಸುಂಕ. ವ್ಯಾಪಾರಿಗಳಲ್ಲಿ ಸಣ್ಣ ವ್ಯಾಪಾರಿಗಳು ಮತ್ತು ದೊಡ್ಡ ವ್ಯಾಪಾರಿಗಳೆಂದು ಇಬ್ಬಗೆಯನ್ನು ಕಾಣಬಹುದು. ದೊಡ್ಡ ವ್ಯಾಪಾರವನ್ನು ಬೃಹತ್ ವ್ಯಾಪಾರ ಎಂದು ಹೇಳಿದರೆ ತಪ್ಪಾಗದು. ಬೃಹತ್ ವ್ಯವಹಾರಿಯೆ 'ವಡ್ಡವ್ಯವಹಾರಿ'! 'ಬೃಹತ್' ಶಬ್ದವೇ 'ವಡ್ಡ' ಎಂದು ತದ್ಭವವಾಗುತ್ತದೆ.[9] ಬೃಹತ್ + ಆಪಣ > ಬೃಹದಾಪಣ > ವಡ್ಡರಾವುಳ—ಎಂದು ರೂಪಾಂತರ ಹೊಂದಿದೆ. 'ಆಪಣಿಕ' ಎಂದರೆ ಅಂಗಡಿಗಳ ಮೇಲೆ ಇಲ್ಲವೇ ವ್ಯಾಪಾರದ ಮೇಲೆ ಕೊಡಲಾಗುತ್ತಿದ್ದ ಸುಂಕ. ಮೂಲತಃ 'ಪಣ' ಎಂಬ ಶಬ್ದವು ವ್ಯಾಪಾರವನ್ನೇ ಸೂಚಿಸುತ್ತದೆ.[10] ಕಾರಣ 'ವಡ್ಡರಾವುಳಸುಂಕ' ಎಂದರೆ ವಡ್ಡವ್ಯವಹಾರಿಗಳು ಕೊಡುತ್ತಿದ್ದ ಸುಂಕ. ಈ ಪೃಥಕ್ಕರಣೆಯಿಂದ ವ್ಯಕ್ತವಾಗುವುದೇನೆಂದರೆ 'ವಡ್ಡರಾವುಳಸುಂಕ' ಎಂದರೆ ವೃದ್ಧರಾಜ ಕುಲಕ್ಕೆ ಕೊಡುತ್ತಿದ್ದ ಸುಂಕವಲ್ಲ. 'ವೃದ್ಧರಾಜಕುಲ'ದ ತದ್ಭವ 'ವಡ್ಡರಾವುಳ' ಎಂದಾಗುವುದಿಲ್ಲ. ಅರ್ಥಾತ್ 'ವಡ್ಡರಾವುಳ' ಶಬ್ದದ ಮೂಲರೂಪವು 'ವೃದ್ಧರಾಜಕುಲ' ಎಂಬುದೂ ಅಲ್ಲ, 'ವಡ್ಡರಾವುಳಸುಂಕ' ವೃದ್ಧರಾಜಕುಲಕ್ಕೆ ಕೊಡುತ್ತಿದ್ದ ಸುಂಕವೂ ಅಲ್ಲ. ಹೀಗೆ ಅನೇಕರು ನಿರೂಪಿಸಿರುವರು. ಅದು ಸರಿಯಲ್ಲ.

ಟಿಪ್ಪಣಿಗಳು

1 ಕಾಳಿದಾಸನ ಕೃತಿಗಳು (ಸಂ. ಮತ್ತು ಅನು : ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟರು) ಪು. 174 ಮತ್ತು 758

2 Early History of the Deccan (Ed. Yazdani) p. 390.

3 SII. vol. XX, No. 87, p. 112 & 114

4 SII. vol. XX, No. 142, p. 181

5 ಶಾಸನ ಶಬ್ದಕೋಶವು (ಕೆ. ಈಶ್ವರದತ್ತ) ಪು. 262

6 EI, XIX, p. 180

7 SII. vol. IX, No. 139

8 ibid, No. 223 ; "ರೇವಡಿ ಬತ್ತರಾಲುಳ ಆಳಿ" ಎಂಬ ಉಕ್ತಿಯೂ ಇಂತಹವೇ ಆದ ಒಬ್ಬ ಅಧಿಕಾರಿಯನ್ನು ಸೂಚಿಸುತ್ತದೆ.

9 ಬೃಹತ್ಕಥಾ> ವಡ್ಡಕಥಾ ; ಬೃಹದಾರಾಧನಾ> ವಡ್ಡರಾಧನೆ ಮುಂತಾವ ರೂಪಗಳನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಇನ್ನು 'ವೃದ್ಧ' ಶಬ್ದವು 'ವಡ್ಡ' ಎಂದಾಗುವುದಿಲ್ಲ ; ಇದೂ ಗಮನಾರ್ಹವಾದ ಅಂಶ.

10 India as Known to Panini (Dr. V. S. Agarwala) pp. 238, 415 etc.

ಡಾ॥ ಕೆ. ಕೆಂಪೇಗೌಡ

ತೌಲನಿಕ ದ್ರಾವಿಡ ಭಾಷಾ ವಿಜ್ಞಾನ

ಸರ್ವನಾಮಗಳು

ದ್ರಾವಿಡ ಸರ್ವನಾಮಗಳು (Dravidian Pronouns)

ಸರ್ವನಾಮಗಳು ನಾಮ ಪದಗಳಂತೆ ಲಿಂಗ, ವಚನ ಮತ್ತು ವಿಭಕ್ತಿ ಪ್ರತ್ಯಯ ಗಳನ್ನು ತೆಗೆದುಕೊಳ್ಳಬಲ್ಲ ಒಂದು ವರ್ಗಕ್ಕೆ ಸೇರಿದ ಶಬ್ದಗಳು. ಇವು ಭಾಷೆಗಳಲ್ಲಿ ಹೆಚ್ಚು ಸ್ಥಿರ ಹಾಗೂ ಅಭೇದ್ಯ ಅಂಶಗಳಾಗಿ ಗೋಚರಿಸುತ್ತವೆ. ಎರಡು ಅಥವಾ ಎರಡ ಕ್ಕಿಂತ ಹೆಚ್ಚು ಭಾಷೆಗಳ ನಡುವಿನ ಸಂಬಂಧವನ್ನು ಕಂಡುಕೊಳ್ಳಲು ಇವು ತುಂಬ ನೆರ ವಾಗುವಂತಹ ವ್ಯಾಕರಣ ಅಂಶಗಳು. ಇವು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅಷ್ಟೊಂದು ಸುಲಭವಾಗಿ ಸ್ವೀಕಾರವಾಗಲಾರವು. ಇವು ಒಂದು ಪಕ್ಷ ಭಾಷೆ ಯಿಂದ ಭಾಷೆಗೆ ಸ್ವೀಕಾರವಾದರೂ ಅವುಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿ ಕೊಳ್ಳುವುದಿಲ್ಲ. ಇಂತಹ ಸಂದರ್ಭಗಳು ಭಾಷೆಗಳಲ್ಲಿ ಬಹಳ ಕಡಿಮೆ. ಈ ಕಾರಣ ದಿಂದಾಗಿಯೇ ಬೇರೆ ಬೇರೆ ವಿದ್ವಾಂಸರು ಸರ್ವನಾಮಗಳು ಸಂಖ್ಯಾವಾಚಕಗಳಿಗಿಂತಲೂ ಹೆಚ್ಚು ಸ್ಥಿರ ಹಾಗೂ ಅಭೇದ್ಯ ವ್ಯಾಕರಣ ಅಂಶಗಳಾಗಿವೆ ಎಂದು ವಿವರಿಸಿಕೊಂಡಿ ದ್ದಾರೆ.

ಸರ್ವನಾಮಗಳು ಭಾಷೆಗಳಲ್ಲಿ ಸರ್ವ ವಿಧದಲ್ಲಿಯೂ ನಾಮಪದಗಳನ್ನೇ ಹೆಚ್ಚು ಹೋಲುತ್ತವೆ. ಆದುದರಿಂದ ಇವಕ್ಕೆ ಸರ್ವನಾಮಗಳು ಎಂಬ ಹೆಸರು ಬರಲು ಸಾಧ್ಯ ವಾಗಿವೆ. ಇವು ನಾಮಪದಗಳು ನಿರ್ವಹಿಸಬಹುದಾದ ಕೆಲಸವನ್ನು ಹೆಚ್ಚು ಖಚಿತ ಹಾಗೂ ನಿಖರವಾಗಿ ನಿರ್ವಹಿಸಬಲ್ಲವು. ಈ ಕಾರಣದಿಂದಲೇ ಇವನ್ನು ನಾಮಪದಗಳ ಸ್ಥಾನದಲ್ಲಿ ಬಹಳ ಸುಲಭವಾಗಿ ಬಳಸಬಹುದಾಗಿದೆ. ಇಂತಹ ಸರ್ವನಾಮಗಳು ಜಗ ತ್ತಿನ ಪ್ರತಿಯೊಂದು ಭಾಷೆಯಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿರುವುದು ಗೋಚರಿಸು ತ್ತವೆ. ದ್ರಾವಿಡ ಭಾಷೆಗಳು ಕೂಡ ತಮ್ಮದೇ ಆದ ಕೆಲವು ಸರ್ವನಾಮಗಳನ್ನು ಸಂಪಾ ದಿಸಿಕೊಂಡಿವೆ. ಇವು ಈ ಭಾಷೆಗಳಲ್ಲಿ ಲಿಂಗ ಮತ್ತು ವಚನ ಭೇದವನ್ನು ತೋರಿಸಬಲ್ಲ ಸಾಮರ್ಥ್ಯವನ್ನು ಪಡೆದುಕೊಂಡಿವೆ.

ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಎಲ್ಲಾ ಸರ್ವನಾಮಗಳನ್ನು ಅವುಗಳ ಅರ್ಥ

ಮತ್ತು ರಚನೆಗಳನ್ನು ಆಧರಿಸಿ ಬೇರೆ ಬೇರೆ ವರ್ಗ ಮತ್ತು ಉಪವರ್ಗಗಳಲ್ಲಿ ವರ್ಗೀಕರಿಸಿ ಕೊಳ್ಳಬಹುದು. ಸರ್ವನಾಮಗಳನ್ನು ಕೆಲವರು ಅವುಗಳ ಅರ್ಥವನ್ನು ಆಧರಿಸಿ ವರ್ಗೀಕರಿಸಿಕೊಂಡರೆ ಮತ್ತೆ ಕೆಲವರು ಅವುಗಳ ರಚನೆಗಳನ್ನು ಆಧರಿಸಿ ವರ್ಗೀಕರಿಸಿಕೊಂಡಿದ್ದಾರೆ, ಮತ್ತೆ ಕೆಲವರು ಸರ್ವನಾಮಗಳನ್ನು ಅವುಗಳ ಲಿಂಗ ವಿವಕ್ಷೆಯನ್ನು ಆಧರಿಸಿ ವರ್ಗೀಕರಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ದ್ರಾವಿಡ ಭಾಷೆಗಳ ಎಲ್ಲಾ ಸರ್ವನಾಮಗಳನ್ನು ಅವುಗಳ ಅರ್ಥ ಮತ್ತು ರಚನೆಗಳನ್ನು ಆಧರಿಸಿ ಸರಳ (ಸಾಮಾನ್ಯ) ಸರ್ವನಾಮಗಳು ಎಂದೂ, ಸಾಧಿತ ಸರ್ವನಾಮಗಳು ಎಂದೂ, ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಸರಳ ಸರ್ವನಾಮಗಳನ್ನು ಮತ್ತೆ ಪುರುಷ ವಾಚಕ, ಆತ್ಮಾರ್ಥಕ ಮತ್ತು ಪ್ರಶ್ನಾರ್ಥಕ ಸರ್ವನಾಮಗಳು ಎಂದು ಮೂರು ಉಪವರ್ಗಗಳಲ್ಲಿಯೂ ಪುರುಷವಾಚಕ ಸರ್ವನಾಮಗಳನ್ನು ಮತ್ತೆ ಉತ್ತಮ ಪುರುಷ, ಮಧ್ಯಮ ಪುರುಷ, ಪ್ರಥಮ ಪುರುಷದ ಸರ್ವನಾಮಗಳು ಎಂದು ಮೂರು ಒಳವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ಅವಕಾಶಗಳಿವೆ. ಪ್ರಥಮ ಪುರುಷ ಸರ್ವನಾಮಗಳನ್ನು ಕೆಲವರು ನಿರ್ದೇಶಕ ಸರ್ವನಾಮಗಳು ಎಂತಲೂ ಕರೆಯುವರು. ಪ್ರಥಮ ಪುರುಷ ಸರ್ವನಾಮಗಳು ಮೂಲತಃ ಕೆಲವು ನಿರ್ದೇಶಕ ಸ್ವರಗಳ ಮೂಲದಿಂದ ಹುಟ್ಟಿ ಬೆಳೆದು ಬಂದ ಅಂಶಗಳಾಗಿವೆ.

ದ್ರಾವಿಡ ಭಾಷೆಗಳ ಉತ್ತಮ ಪುರುಷ, ಮಧ್ಯಮ ಪುರುಷ, ಮತ್ತು ಆತ್ಮಾರ್ಥಕ ಸರ್ವನಾಮಗಳಲ್ಲಿ ಲಿಂಗಭೇದವಿಲ್ಲ. ಅವುಗಳಲ್ಲಿ ವಚನಭೇದ ಮಾತ್ರ ಕಂಡು ಬರುವುದು. ಪ್ರಥಮ ಪುರುಷ ಮತ್ತು ಪ್ರಶ್ನಾರ್ಥಕ ಸರ್ವನಾಮಗಳಲ್ಲಿ ಲಿಂಗ ಮತ್ತು ವಚನಭೇದ ಎರಡು ಸ್ಪಷ್ಟವಾಗಿ ಗೋಚರಿಸುತ್ತವೆ. ದ್ರಾವಿಡ ಭಾಷೆಗಳಲ್ಲಿ ಪುರುಷವಾಚಕ ಪ್ರತ್ಯಯಗಳು ಪ್ರತ್ಯೇಕವಾಗಿರುವುದು ಕಂಡು ಬರುತ್ತವೆ. ಈ ಪುರುಷವಾಚಕ ಪ್ರತ್ಯಯಗಳು ರೂಪಾಂತರಗೊಂಡು ಆಖ್ಯಾತಪ್ರತ್ಯಯಗಳು ಎಂಬ ಹೆಸರಿನಿಂದ ಬೇರೆ ಬೇರೆ ಧಾತುಗಳಿಗೆ ಹತ್ತಬಲ್ಲವು. ಇವು ಬೇರೆ ಬೇರೆ ಧಾತುಗಳಿಗೆ ಮಾತ್ರವಲ್ಲದೆ ಗುಣವಾಚಕ ಸಂಖ್ಯಾ ವಾಚಕ ಮತ್ತು ನಾಮಪದಗಳಿಗೂ ಸಹ ಹತ್ತಬಲ್ಲವು. ಇದು ದ್ರಾವಿಡ ಭಾಷೆಗಳ ಒಂದು ವೈಶಿಷ್ಟ್ಯವೆನ್ನಬಹುದು.

ದ್ರಾವಿಡ ಭಾಷೆಗಳ ಉತ್ತಮಪುರುಷ ಬಹುವಚನ ಸರ್ವನಾಮ ರೂಪಗಳಲ್ಲಿ ಎರಡು ಬಗೆಯ ಬಹುವಚನ ರೂಪಗಳಿರುವುದು ಕಂಡು ಬರುತ್ತವೆ. ಇವುಗಳಲ್ಲಿ ಒಂದನ್ನು ವ್ಯಾವರ್ತಕ ಅಥವಾ ಅಸಮಾವೇಶಕ ಸರ್ವನಾಮ ಬಹುವಚನ ರೂಪವೆಂದೂ, ಇನ್ನೊಂದನ್ನು ಅವ್ಯಾವರ್ತಕ ಅಥವಾ ಸಮಾವೇಶಕ ಸರ್ವನಾಮ ಬಹುವಚನ ರೂಪವೆಂದೂ ಕರೆಯುವರು. ಇದು ದ್ರಾವಿಡ ಭಾಷೆಗಳ ಮತ್ತೊಂದು ವೈಶಿಷ್ಟ್ಯವೆನ್ನಬಹುದು.

ಬ್ರಹೂಈ ಭಾಷೆ ಬಿಟ್ಟು ಉಳಿದೆಲ್ಲಾ ದ್ರಾವಿಡ ಭಾಷೆಗಳಲ್ಲಿ ಅಸಮಾವೇಶಕ ಮತ್ತು ಸಮಾವೇಶಕ ಬಹುವಚನ ಸರ್ವನಾಮಗಳು ಪ್ರತ್ಯೇಕ ಪ್ರತ್ಯೇಕವಾಗಿರುವುದು

ಗೊಳಿಸುತ್ತವೆ. ಬ್ರಹೂಈ ಭಾಷೆಯಲ್ಲಿ ಈ ಭೇದವಿಲ್ಲ. ಸಮಾವೇಶಕ ಬಹುವಚನ ಸರ್ವನಾಮದಲ್ಲಿ ಮಾತನಾಡುವವರನ್ನು ಸೇರಿಸಿಯೂ ಅಸಮಾವೇಶಕ ಬಹುವಚನ ಸರ್ವನಾಮದಲ್ಲಿ ಮಾತನಾಡುವವರನ್ನು ಬಿಟ್ಟು ವ್ಯವಹರಿಸುವ ಪರಿಪಾಠವಿದೆ. ಈ ಎರಡು ಬಗೆಯ ಉತ್ತಮ ಪುರುಷ ಬಹುವಚನ ಸರ್ವನಾಮ ಪ್ರಯೋಗಗಳು ಜಗತ್ತಿನ ಅನೇಕ ಭಾಷೆಗಳಲ್ಲಿ ಇಲ್ಲ. ದ್ರಾವಿಡ ಭಾಷೆಗಳಲ್ಲಿ ಮಾತ್ರ ಈ ಭೇದವಿದೆ. ಇವು ಸಮಾನ ಅರ್ಥವುಳ್ಳ ಪರ್ಯಾಯ ಶಬ್ದಗಳಲ್ಲ. ಇವು ಬೇರೆ ಬೇರೆ ಅರ್ಥವನ್ನು ಸಂಪಾದಿಸಿಕೊಂಡಿರುವ ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆಗೆ ಬರಬಲ್ಲ ಬೇರೆ ಬೇರೆ ಬಹುವಚನ ರೂಪಗಳಾಗಿವೆ.

ದ್ರಾವಿಡ ಭಾಷೆಗಳಲ್ಲಿ ವಾಸ್ತವವಾಗಿ ಸಂಬಂಧ ಸೂಚಕ ಸರ್ವನಾಮಗಳಿಲ್ಲ. ಪ್ರಶ್ನಾರ್ಥಕ ಸರ್ವನಾಮಗಳೇ ಕೆಲವು ವೇಳೆ ಸಂಬಂಧ ಸೂಚಕ ಸರ್ವನಾಮಗಳ ಕೆಲಸವನ್ನು ನಿರ್ವಹಿಸುತ್ತವೆ. ಆದಕಾರಣ ದ್ರಾವಿಡ ಭಾಷೆಗಳಲ್ಲಿ ಪ್ರಶ್ನಾರ್ಥಕ ಸರ್ವನಾಮಗಳಿಗೂ ಸಂಬಂಧ ಸೂಚಕ ಸರ್ವನಾಮಗಳಿಗೂ ಅಂತಹ ಹೆಚ್ಚಿನ ವ್ಯತ್ಯಾಸವೇನನ್ನೂ ಕಾಣಲು ಬರುವುದಿಲ್ಲ. ಸಂಸ್ಕೃತ, ಗ್ರೀಕ್ ಮುಂತಾದ ಇಂಡೋ ಯೂರೋಪಿಯನ್ ಭಾಷೆಗಳಲ್ಲಿ ಪ್ರಶ್ನಾರ್ಥಕ ಮತ್ತು ಸಂಬಂಧ ಸೂಚಕ ಸರ್ವನಾಮಗಳು ಪ್ರತ್ಯೇಕ ಪ್ರತ್ಯೇಕವಾಗಿ ಬಳಕೆಯಲ್ಲಿರುವುದು ಕಂಡುಬರುತ್ತವೆ. ದ್ರಾವಿಡ ಭಾಷೆಗಳಲ್ಲಿ ಪ್ರತ್ಯೇಕ ಸಂಬಂಧ ಸೂಚಕ ಸರ್ವನಾಮಗಳು ಇಲ್ಲದ ಕಾರಣ ಒಂದಕ್ಕಿಂತ ಹೆಚ್ಚು ಸರ್ವನಾಮಗಳನ್ನು ಬಳಸುವುದರ ಮೂಲಕ ಸಂಬಂಧ ಸೂಚಕ ಸರ್ವನಾಮಗಳ ಕೆಲಸವನ್ನು ನಿರ್ವಹಿಸಬಹುದಾದ ಸೌಲಭ್ಯವಿದೆ. ಇದು ದ್ರಾವಿಡ ಭಾಷೆಗಳ ಇನ್ನೊಂದು ವೈಶಿಷ್ಟ್ಯವೆನ್ನಬಹುದು.

ದ್ರಾವಿಡ ಸರ್ವನಾಮಗಳನ್ನು ಅವುಗಳ ಲಿಂಗ ವಿವಕ್ಷೆಯನ್ನು ಆಧರಿಸಿ ಲಿಂಗಭೇದ ರಹಿತ ಸರ್ವನಾಮಗಳು ಎಂದೂ, ಲಿಂಗಭೇದವುಳ್ಳ ಸರ್ವನಾಮಗಳು ಎಂದೂ ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಆಗ ಉತ್ತಮ ಪುರುಷ, ಮಧ್ಯಮ ಪುರುಷ ಮತ್ತು ಆತ್ಮಾರ್ಥಕ ಸರ್ವನಾಮಗಳು ಲಿಂಗವಿವಕ್ಷೆರಹಿತ ಸರ್ವನಾಮ ವರ್ಗಕ್ಕೂ, ಪ್ರಥಮ ಪುರುಷ ಮತ್ತು ಪ್ರಶ್ನಾರ್ಥಕ ಸರ್ವನಾಮಗಳು ಲಿಂಗವಿವಕ್ಷೆಯುಳ್ಳ ಸರ್ವನಾಮವರ್ಗಕ್ಕೂ ಸೇರುತ್ತವೆ.

ದ್ರಾವಿಡ ಭಾಷೆಗಳ ಬೇರೆ ಬೇರೆ ಸರ್ವನಾಮಗಳು ತಮ್ಮ ತಮ್ಮ ಪದ ರಚನೆಗಳಲ್ಲಿ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವುಗಳ ಮೂಲ ರೂಪದ ಆದಿಯಲ್ಲಿ ಅಥವಾ ಆದಿ ವರ್ಣದಲ್ಲಿ ಕಂಡು ಬರುವ ದೀರ್ಘ ಸ್ವರವು ಹ್ರಸ್ವ ಸ್ವರವಾಗಿ ಪರಿವರ್ತನೆಗೊಳ್ಳುವುದು ಸರ್ವೇಸಾಮಾನ್ಯ. ಇಂತಹ ಸಂದರ್ಭಗಳಲ್ಲಿ ಅವುಗಳ ಮೂಲ ರೂಪಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನು ಕಾಣಿಸಿಕೊಳ್ಳುವುದಿಲ್ಲ. ಒಂದು ಪಕ್ಷ ಅವುಗಳಲ್ಲಿ ಅಂತಹ ವ್ಯತ್ಯಾಸ ಕಾಣಿಸಿಕೊಂಡರೂ ಸುಲಭವಾಗಿ ಗುರುತಿಸಿ ವಿವರಿಸಿಕೊಳ್ಳಬಹುದಾದ ಅವಕಾಶಗಳಿವೆ.

ದ್ರಾವಿಡ ಭಾಷೆಗಳಲ್ಲಿ ಪ್ರಥಮ ಪುರುಷ ಸರ್ವನಾಮಗಳು ಮೂಲತಃ ನಿರ್ದೇಶಕ ಸ್ವರಗಳಾದ ಅ, ಇ, ಉ ಎಂಬ ಸ್ವರಗಳ ಮೂಲದಿಂದ ಹುಟ್ಟಿ ಬೇರೆ ಬೇರೆಯಾಗಿ ಬೆಳೆದು ಬಂದ ಸರ್ವನಾಮಗಳಾಗಿ ಗೋಚರಿಸುತ್ತವೆ. ಆದುದರಿಂದಲೇ ಇವಕ್ಕೆ ನಿರ್ದೇಶಕ ಸರ್ವನಾಮಗಳು ಎಂಬ ಹೆಸರು ಬಂದಿದೆ. ಪ್ರಶ್ನಾರ್ಥಕ ಸರ್ವನಾಮಗಳು ಮೂಲತಃ ಯ ಅಥವಾ ಎ ಎಂಬ ಮೂಲದಿಂದ ಹುಟ್ಟಿ ಬೆಳೆದು ಬಂದ ಸರ್ವನಾಮಗಳಾಗಿ ಗೋಚರಿಸುತ್ತವೆ. ಈ ಬೇರೆ ಬೇರೆ ನಿರ್ದೇಶಕ ಸ್ವರಗಳಿಗೆ ಅಂಶ ಮತ್ತು ವಚನ ಪ್ರತ್ಯಯಗಳನ್ನು ಹಚ್ಚಿದಾಗ ಅವು ಪ್ರಶ್ನಾರ್ಥಕ ಮತ್ತು ಪ್ರಥಮ ಪುರುಷ ಸರ್ವನಾಮಗಳಾಗಿ ರೂಪುಗೊಳ್ಳುತ್ತವೆ. ಇದೇ ನಿರ್ದೇಶಕ ಸ್ವರಗಳಿಗೆ ಬೇರೆ ಬೇರೆ ವಿಶೇಷಣ ಮತ್ತು ಕ್ರಿಯಾವಿಶೇಷಣ ಸೂಚಕ ಪ್ರತ್ಯಯಗಳನ್ನು ಹಚ್ಚಿದಾಗ ಬೇರೆ ಬೇರೆ ಸಾಧಿತ ಸರ್ವನಾಮಗಳು ರೂಪುಗೊಳ್ಳುತ್ತವೆ. ಸಾಧಿತ ಸರ್ವನಾಮ ರೂಪಗಳಲ್ಲಿ ಸಾಮಾನ್ಯವಾಗಿ ಲಿಂಗ ಮತ್ತು ವಚನಸೂಚಕ ಯಾವ ಪ್ರತ್ಯಯಗಳೂ ದೊರೆಯುವುದಿಲ್ಲ. ಪ್ರಶ್ನಾರ್ಥಕ ಮತ್ತು ಪ್ರಥಮ ಪುರುಷ ಸರ್ವನಾಮಗಳಲ್ಲಿ ಲಿಂಗ ಮತ್ತು ವಚನಸೂಚಕ ಬೇರೆ ಬೇರೆ ಪ್ರತ್ಯಯಗಳು ಪ್ರತ್ಯೇಕವಾಗಿರುವುದು ಗೋಚರಿಸುತ್ತವೆ. ದ್ರಾವಿಡ ಭಾಷೆಗಳಲ್ಲಿ ಪ್ರಥಮ ಪುರುಷ, ಪ್ರಶ್ನಾರ್ಥಕ ಮತ್ತು ಸಾಧಿತ ಸರ್ವನಾಮಗಳು ಸಾಮಾನ್ಯವಾಗಿ ಏಕಾಕ್ಷರ ರೂಪಗಳಾಗಿರುತ್ತವೆ. ಅಲ್ಲದೆ ಅವುಗಳ ಮೂಲದಲ್ಲಿ ಈ ಬೇರೆ ಬೇರೆ ನಿರ್ದೇಶಕ ಸ್ವರಗಳು ಇರುವುದು ಕಂಡುಬರುತ್ತವೆ. ಈ ಬೇರೆ ಬೇರೆ ಸರ್ವನಾಮಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳಬಹುದು. ಅ, ಇ, ಉ ಮತ್ತು ಎ ಎಂಬ ಮೂಲ ಸ್ವರಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಉಂಟಾಗುವ ಬೇರೆ ಬೇರೆ ಬಗೆಯ ಸರ್ವನಾಮ ರೂಪಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಆ ಸ್ವರಗಳ ಆದಿಯಲ್ಲಿ ಕೆಲವು ವ್ಯಂಜನ ಧ್ವನಿಗಳು ಉಚ್ಚಾರದ ಸೌಲಭ್ಯಕ್ಕಾಗಿ ಬಂದು ಸೇರಿಕೊಳ್ಳಬಹುದಾದ ಸಾಧ್ಯತೆಗಳಿವೆ.

ದ್ರಾವಿಡ ಭಾಷೆಗಳ ಪ್ರಥಮ ಪುರುಷ ಸರ್ವನಾಮಗಳನ್ನು ಮುಖ್ಯವಾಗಿ ಸಮೀಪವರ್ತಿ, ದೂರವರ್ತಿ, ಮಧ್ಯವರ್ತಿ ಸರ್ವನಾಮಗಳು ಎಂದು ಮೂರು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಸಮೀಪದಲ್ಲಿರುವ ವ್ಯಕ್ತಿ ಅಥವಾ ವಸ್ತುವನ್ನು ಸೂಚಿಸುವ ಸರ್ವನಾಮಗಳನ್ನು ಸಮೀಪವರ್ತಿ ಸರ್ವನಾಮವೆಂತಲೂ, ದೂರದಲ್ಲಿರುವ ವ್ಯಕ್ತಿ ಅಥವಾ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು ದೂರವರ್ತಿ ಸರ್ವನಾಮವೆಂತಲೂ, ಈ ಎರಡರ ನಡುವಿನ ವ್ಯಕ್ತಿ ಅಥವಾ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು ಮಧ್ಯವರ್ತಿ ಸರ್ವನಾಮವೆಂದೂ ಕರೆಯಲಾಗುತ್ತಿದೆ. ಈ ಮೂರು ಬಗೆಯ ಪ್ರಥಮ ಪುರುಷ ಸರ್ವನಾಮಗಳಲ್ಲಿ ಲಿಂಗ ಮತ್ತು ವಚನಗಳನ್ನೂ ಸೂಚಿಸುವ ಬೇರೆ ಬೇರೆ ಪ್ರತ್ಯಯಗಳಿರುವುದು ಕಂಡುಬರುತ್ತವೆ. ಈ ಬಗೆಯ ಸರ್ವನಾಮಗಳು ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಕಂಡು ಬರುವುದಿಲ್ಲ.

ಪ್ರಸ್ತುತ ಲೇಖನದಲ್ಲಿ ದ್ರಾವಿಡ ಭಾಷೆಗಳಲ್ಲಿ ಪ್ರಧಾನವಾಗಿ ಕಂಡು ಬರುವ ಎಲ್ಲಾ

ಬಗೆಯ ಸರ್ವನಾಮಗಳನ್ನು ಆಯಾ ಭಾಷೆ, ಲಿಂಗ ಮತ್ತು ವಚನಗಳಿಗೆ ಅನುಗುಣವಾಗಿ ಬೇರೆ ಬೇರೆ ಪಟ್ಟಿ ಮಾಡಿಕೊಡಲಾಗಿದೆ. ಇವುಗಳಿಂದ ದ್ರಾವಿಡ ಭಾಷೆಗಳ ಸರ್ವನಾಮಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿ ತಿಳಿಯಲು ಸಹಾಯಕವಾಗುವುದಲ್ಲದೆ ಅವುಗಳ ನಡುವಣ ಸಾಮ್ಯವನ್ನು ನಿರ್ಧರಿಸಿಕೊಳ್ಳಲು ಸುಲಭವಾಗುವುದು. ಈ ಪಟ್ಟಿಗಳನ್ನು ಗಮನಿಸಿ ದ್ರಾವಿಡ ಭಾಷೆಗಳ ಸರ್ವನಾಮಗಳು ಹೇಗೆ ಬೆಳೆದು ಬಂದಿವೆ ಎಂಬುವನ್ನು ಗುರುತಿಸಿಕೊಳ್ಳಲು ತುಂಬ ಸಹಾಯಕವಾಗುವುದಲ್ಲದೆ, ಇದರಿಂದ ಬೇರೆ ಬೇರೆ ಸರ್ವನಾಮ ರೂಪಗಳಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಸುಲಭವಾಗಿ ಗುರುತಿಸಿಕೊಳ್ಳಲು ನೆರವಾಗುವುದು. ಇದರಿಂದ ಅವುಗಳ ಮೂಲ ದ್ರಾವಿಡ ಸರ್ವನಾಮ ರೂಪಗಳನ್ನು ಪುನರ್ರಚಿಸಿಕೊಳ್ಳಲು ಸುಲಭವಾಗುವುದು.

ಪ್ರಸ್ತುತ ಲೇಖನದಲ್ಲಿ ಕೊಟ್ಟಿರುವ ದ್ರಾವಿಡ ಸರ್ವನಾಮಗಳ ಪಟ್ಟಿಯನ್ನು ಪರಿಶೀಲಿಸಿದಾಗ ಉತ್ತರ ದ್ರಾವಿಡ ಭಾಷೆಗಳು ಮಧ್ಯ ಮತ್ತು ದಕ್ಷಿಣ ದ್ರಾವಿಡ ಭಾಷೆಗಳಿಗಿಂತಲೂ ಹೆಚ್ಚು ಮೂಲ ದ್ರಾವಿಡಾಂಶಗಳನ್ನು ಉಳಿಸಿಕೊಂಡು ಬಂದಿರುವುದು ಗೋಚರಿಸುತ್ತವೆ. ದಕ್ಷಿಣ ಮತ್ತು ಮಧ್ಯ ದ್ರಾವಿಡ ಭಾಷೆಗಳ ಸರ್ವನಾಮ ರೂಪಗಳಲ್ಲಿ ಅನೇಕ ಸಮಾನ ಅಂಶಗಳಿದ್ದರೆ ಮತ್ತೆ ಕೆಲವು ಭಾಷೆಗಳಲ್ಲಿ ಸರ್ವನಾಮಗಳು ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರವಾಗಿ ಪರಿವರ್ತನೆಗೊಂಡು ಬೆಳೆದು ಬಂದಿರುವುದು ತಿಳಿದುಬರುವುದು.

3:1 ಸರಳ ಸರ್ವನಾಮಗಳು :

3:1:1 ಪುರುಷವಾಚಕ ಸರ್ವನಾಮಗಳು 3:1:1:1 ಉತ್ತಮ ಪುರುಷ ಸರ್ವನಾಮಗಳು.

(1) ಉತ್ತಮ ಪುರುಷ ಏಕವಚನ :

		(ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡಾಗ ಮೂಲದಲ್ಲಿ ಉಳಿಯುವ ರೂಪಗಳು)
ತಮಿಳು	ಯ್ಯಾನ್ /ಯಾನ್ /ನಾನ್	ಎನ್–(ಷಷ್ಠಿ)
		ಎನ್ನ್–(ದ್ವಿತಿ)
		ಎನ–(ಚತು)
ಮಲೆಯಾಳಂ	ಞಾನ್ /ನ್ಯಾನ್	ಎನ್–(ಚತು)
		ಎನ್–
ಕೋತ	ಆನ್	ಎನ್–
ತೋದ	ಓನ್	ಎನ್–

ಕನ್ನಡ	ಆನ್/ನಾನ್/ನಾನು	ಎನ-(ಚತು)
		ಎನ್ನ-
		ನನ್ನ-
		ನನ-(ಚತು)
ಕೊಡಗು	ನಾ(ನು)	ನಾ-(ಚತು)
		ನನ್-(ಚತು)
ತುಳು	ಯಾನಿ/ಏನಿ	ಎನ್-
		ನನ್-(ದ್ವಿತಿ)
ತೆಲುಗು	ಏನು/ನೇನು	ಎನ್-
ಕೊಲಾಮಿ	ಆನ್	ಆನ್-
ನಾಯ್ಕಿ	ಆನ್	ಅನ್-
ಪರ್ಜಿ	ಆನ್	ಅನ್-
ಗದಬ	ಆನ್	ಆನ್-
ಗೋಂಡಿ	ಅನಾ/ನನ್(ನ್)/ಆ	ನಾಕ್-(ದ್ವಿತಿ)
		(ಚತು)
		ನಾಹ್-(ಸಪ್ತ)
		(ಪಂಚ)
		ನಾ-
ಕೊಂಡ	ನಾನ್	ನಾ-
		ನ-(ದ್ವಿತಿ)
ಪೆಂಗೊ	ಆನ್(ಎನ್)	ನಂಗ್-(ದ್ವಿತಿ)
		ನಾ-
ಮಂಡ	ಆನ್	—
ಕುಯಿ	ಆನ/ಆನಾ/ನಾನು	ನಾಂಗ್-(ದ್ವಿತಿ)
		ನಾನ್-(ಚತು)
		ನಾ-
ಕುವಿ	ನಾನು	ನಾ—
ಕುರುಖ್	ಏನ್	ಎಂಗಾ-(ಚತು)
		ಎಂಗ್-
ಮಲ್ತೊ	ಏನ್	ಎಂಗಾ-(ಚತು)
		ಎಂಗ್-
ಬ್ರಹೂಈ	ಈ	ಕನ್-

ಪೂರ್ವದ್ರಾವಿಡ *ಯ್ಞಾನ್ *ಯ್ಞನ್-

ಮೇಲೆ ಕೊಟ್ಟಿರುವ ದ್ರಾವಿಡ ಭಾಷೆಗಳ ಉತ್ತಮಪುರುಷ ಏಕವಚನ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ತಮಿಳು ಮತ್ತು ತುಳು ಭಾಷೆಗಳಲ್ಲಿ ಯ್ಞಾನ್, ಯಾನ್, ಯಾನಿ ಎಂಬ ರೂಪಗಳೂ, ತಮಿಳು, ಕನ್ನಡ, ಕೊಡಗು, ತೆಲುಗು, ಗೋಂಡಿ, ಕೊಂಡ, ಕುಯಿ, ಕುವಿ ಮುಂತಾದ ಭಾಷೆಗಳಲ್ಲಿ ನಾನ್, ನಾನು, ನೇನು, ನನ್ ಎಂಬಿತ್ಯಾದಿ ರೂಪಗಳೂ, ಕೋತ, ಹಳಗನ್ನಡ, ಕೊಲಾಮಿ, ನಾಯ್ಕಿ, ಪರ್ಜಿ, ಗದಬ, ಪೆಂಗೊ, ಮಂಡ ಮುಂತಾದ ಭಾಷೆಗಳಲ್ಲಿ ಆನ್ ಎಂಬ ರೂಪವೂ, ತೋದಭಾಷೆಯಲ್ಲಿ ಓನ್ ಎಂಬ ರೂಪವೂ, ಕುರುಖ್ ಮತ್ತು ಮಲ್ತೊ ಭಾಷೆಗಳಲ್ಲಿ ಏನ್ ಎಂಬ ರೂಪವೂ, ಬ್ರಹೂಈ ಭಾಷೆಯಲ್ಲಿ ಈ ಎಂಬ ರೂಪವೂ, ತೆಲುಗು ಮತ್ತು ತುಳು ಭಾಷೆಗಳಲ್ಲಿ ಏನು, ಏನಿ ಎಂಬ ರೂಪಗಳೂ, ಮಲೆಯಾಳಂ ಭಾಷೆಯಲ್ಲಿ ಞಾನ್ /ನ್ಞಾನ್ ಎಂಬ ರೂಪವೂ ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ.

ಕೆಲವು ದ್ರಾವಿಡ ಭಾಷೆಗಳಲ್ಲಿ ಉತ್ತಮ ಪುರುಷ ಏಕವಚನಕ್ಕೆ ಎರಡೆರಡು ಪರ್ಯಾಯ ರೂಪಗಳು ಬಳಕೆಯಲ್ಲಿದ್ದರೆ, ಮತ್ತೆ ಕೆಲವು ಭಾಷೆಗಳಲ್ಲಿ ಎರಡಕ್ಕಿಂತ ಹೆಚ್ಚು ರೂಪ ಬಳಕೆಯಲ್ಲಿರುವುದು ಕಂಡುಬರುತ್ತವೆ. ಇವು ಏಕಕಾಲದಲ್ಲಿ ಭಾಷೆಗಳಲ್ಲಿ ಬಳಕೆಯಲ್ಲಿದ್ದರೂ ಇವು ಬೇರೆ ಬೇರೆ ಕಾಲಾವಧಿಗಳಲ್ಲಿ ಬಂದು ಸೇರಿಕೊಂಡ ರೂಪಗಳಾಗಿವೆ. ಗೋಂಡಿ, ಕುಯಿ ಮುಂತಾದ ಭಾಷೆಗಳಲ್ಲಿ ಉತ್ತಮ ಪುರುಷ ಏಕವಚನಕ್ಕೆ ಅನ | ಅನಾ | ಅನಾ | ಆ ಎಂಬಿತ್ಯಾದಿ ರೂಪಗಳಿವೆಯಾದರೂ ಇವು ಕೆಲವು ವೇಳೆ ಸ್ವಚ್ಛಂದ ರೂಪಗಳಾಗಿಯೂ ಬಳಕೆಯಲ್ಲಿರುವುದು ಕಂಡುಬರುತ್ತವೆ.

ತಮಿಳು ಭಾಷೆಯಲ್ಲಿ ಕಂಡುಬರುವ ಯ್ಞಾನ್ ಮತ್ತು ಯಾನ್ ಎಂಬ ರೂಪಗಳಲ್ಲಿ ಯ್ಞಾನ್ ಎಂಬ ರೂಪವೇ ಹೆಚ್ಚು ಪ್ರಾಚೀನವಿರಬಹುದೆಂದು ಕೆಲವರು ಊಹಿಸಿದರೆ ಮತ್ತೆ ಕೆಲವರು ಇವುಗಳಲ್ಲಿ ಯ್ಞಾನ್‌ಗಿಂತಲೂ ಯಾನ್ ಎಂಬ ರೂಪವೇ ಹೆಚ್ಚು ಪ್ರಾಚೀನವಿರಬಹುದೆಂದು ಊಹಿಸಿದ್ದಾರೆ. ತಮಿಳು ಭಾಷೆಯ ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾದ ತೊಲ್‌ಕಾಪ್ಪಿಯಂ ಎಂಬುದರಲ್ಲಿ ಉತ್ತಮ ಪುರುಷ ಏಕವಚನಕ್ಕೆ ಈ ಎರಡು ರೂಪಗಳು ಬಳಕೆಯಲ್ಲಿರುವುದು ಕಂಡುಬರುತ್ತವೆ. ಇವುಗಳಲ್ಲಿ ಯಾವುದು ಹೆಚ್ಚು ಪ್ರಾಚೀನ ಎಂಬುದರ ಬಗ್ಗೆ ಯಾವ ಆಧಾರಗಳೂ ದೊರೆಯುವುದಿಲ್ಲ. ತಮಿಳು ಭಾಷೆ ಮತ್ತು ಉಪಭಾಷೆಗಳಲ್ಲಿ ಯ್ಞಕಾರಾದಿ ಅನೇಕ ಶಬ್ದಗಳು ಬಳಕೆಯಲ್ಲಿವೆ. ಅಂತೆಯೇ ಯಕಾರಾದಿ ಶಬ್ದಗಳೂ ಕೂಡ ಹೆಚ್ಚು ಬಳಕೆಯಲ್ಲಿವೆ.

ತಮಿಳು ಭಾಷೆಯಲ್ಲಿ ಕಂಡುಬರುವ ಯ್ಞಾನ್ ಎಂಬ ರೂಪದಿಂದ ಯಾನ್ ಎಂಬ ರೂಪ ಸುಲಭವಾಗಿ ವಿಕಾಸಗೊಳ್ಳಬಲ್ಲದು. ಆದರೆ ಯಾನ್ ಎಂಬ ರೂಪದಿಂದ ಯ್ಞಾನ್ ಎಂಬ ರೂಪ ಅಷ್ಟೊಂದು ಸುಲಭವಾಗಿ ವಿಕಾಸಗೊಳ್ಳಲಾರದು. ಈ ಕಾರಣದಿಂದ ಯ್ಞಾನ್ ಎಂಬ ರೂಪವೇ ಹೆಚ್ಚು ಪ್ರಾಚೀನವಿರಬಹುದೆಂದು ಊಹಿಸಬಹುದಾಗಿದೆ. ತಮಿಳು ಭಾಷೆಯಲ್ಲಿ ಕಂಡು ಬರುವ ಪ್ರಾಚೀನ ಯ್ಞಾನ್ ಎಂಬ ರೂಪ

ದಿಂದಲೇ ಆ ಬೇರೆ ಬೇರೆ ದ್ರಾವಿಡ ಭಾಷೆಗಳ ಬೇರೆ ಬೇರೆ ಉತ್ತಮ ಪುರುಷ ಏಕವಚನ ರೂಪಗಳು ಹುಟ್ಟಿ ಬೆಳೆದು ಬಂದಿರಬಹುದೆಂದು ಭಾವಿಸಿ ಈ ರೂಪವನ್ನೇ ಪೂರ್ವ ದ್ರಾವಿಡವಿರಬಹುದೆಂದು ಪುನರ‍್ರಚಿಸಿಕೊಂಡರೆ ಮತ್ತೆ ಕೆಲವರು ತಮಿಳಿನ ಯಾನ್ ಎಂಬ ರೂಪವನ್ನೇ ಪೂರ್ವ ದ್ರಾವಿಡವಿರಬಹುದೆಂದು ಪುನರ‍್ರಚಿಸಿಕೊಂಡಿದ್ದಾರೆ.

ತಮಿಳು ಭಾಷೆಯಲ್ಲಿ ಕಂಡು ಬರುವ ಉತ್ತಮ ಪುರುಷ ಏಕವಚನ ಯ್ಞಾನ್ ಎಂಬ ರೂಪದಿಂದ ಮೂಲತಃ ಎಲ್ಲಾ ದ್ರಾವಿಡ ಭಾಷೆಗಳ ರೂಪಗಳು ಮುಖ್ಯವಾಗಿ ಎರಡು ಕವಲುಗಳಲ್ಲಿ ಪರಿವರ್ತನೆಗೊಂಡು ಬೆಳೆದು ಬಂದಿವೆ.

ತಮಿಳು ಭಾಷೆಯ ಉತ್ತಮ ಪುರುಷ ಏಕವಚನ ರೂಪದ ಆದಿಯಲ್ಲಿ ಕಂಡು ಬರುವ ತಾಲವ್ಯ ಅನುನಾಸಿಕವು ಲೋಪವಾದಾಗ ಅದರ ಯಾನ್ ಎಂಬ ಇನ್ನೊಂದು ರೂಪವು ಕಾಣಿಸಿಕೊಳ್ಳುವುದು. ಅದೇ ಯ್ಞಾನ್ ಎಂಬ ರೂಪ ಮತ್ತೆ ನಾನ್ ಎಂಬ ರೂಪವಾಗಿ ಪರಿವರ್ತನೆಗೊಳ್ಳಬಹುದು. ಆದರೆ ಯಾನ್ ಎಂಬ ರೂಪ ನಾನ್ ಎಂಬ ರೂಪವಾಗಿ ಪರಿವರ್ತನೆಗೊಳ್ಳಲಾರದು. ಯ ಕಾರವು ನ ಕಾರವಾಗಿ ಪರಿವರ್ತನೆಗೊಂಡು ಬೆಳೆದು ಬಂದಿರುವ ಯಾವ ಆಧಾರಗಳೂ ದ್ರಾವಿಡ ಭಾಷೆಗಳಲ್ಲಿ ದೊರೆಯುವುದಿಲ್ಲ. ತಮಿಳು ಭಾಷೆಯ ಯ್ಞಾನ್ ಎಂಬ ರೂಪದ ಆದಿಯ ಯ ಕಾರವು ಲೋಪಗೊಂಡು ಮಲೆಯಾಳಂ ಭಾಷೆಯ ಞಾನ್ ಎಂಬ ರೂಪವಾಗಿ ಬೆಳೆದು ಬರಬಲ್ಲದು. ಅಲ್ಲದೇ ಅದೇ ಮುಂದೆ ನ್ಞಾನ್, ನಾನ್, ನಾನು, ನೇನು, ನನ್ ಎಂಬಿತ್ಯಾದಿ ರೂಪಗಳಾಗಿ ಬೆಳೆದು ಬರಬಲ್ಲ ಸಾಧ್ಯತೆಗಳು ಇವೆ.

ತಮಿಳು, ಕನ್ನಡ, ತೆಲುಗು, ಕೊಡಗು ಗೋಂಡಿ, ಕೊಂಡ, ಕುಯಿ, ಕುವಿ ಮುಂತಾದ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಉತ್ತಮ ಪುರುಷ ಏಕವಚನ ರೂಪಗಳು ಮೂಲತಃ ಯ್ಞಾನ್ ಎಂಬ ರೂಪದಿಂದಲೇ ಹುಟ್ಟಿ ಬೆಳೆದು ಬಂದಿರಬಹುದೆಂದು ಸುಲಭವಾಗಿ ಊಹಿಸಬಹುದಾದ ಸಾಧ್ಯತೆಗಳಿವೆ. ಇವು ತಮಿಳು ಭಾಷೆಯ ಯಾನ್ ಎಂಬ ರೂಪದಿಂದ ಪರಿವರ್ತನೆಗೊಂಡು ಬೆಳೆದು ಬಂದ ರೂಪಗಳಲ್ಲ. ಈ ಬೇರೆ ಬೇರೆ ರೂಪಗಳ ಆದಿಯಲ್ಲಿ ಕಂಡು ಬರುವ ನ ಕಾರವು ಲೋಪಗೊಂಡು ಕೋತ, ಹಳೆಯ ಕನ್ನಡ, ಕೊಲಾಮಿ, ನಾಯ್ಕಿ, ಪರ್ಜಿ, ಗಡಬ, ಮಂಡ್ ಮುಂತಾದ ಭಾಷೆಗಳಲ್ಲಿ ಆನ್ ಎಂಬ ರೂಪವಾಗಿ ಕಾಣಿಸಿಕೊಂಡಿವೆ ಇಲ್ಲವೇ ತಮಿಳು ಭಾಷೆಯ ಯಾನ್ ಎಂಬ ರೂಪದ ಆದಿಯಲ್ಲಿ ಕಂಡು ಬರುವ ಯ ಕಾರವು ಲೋಪಗೊಂಡು ಅವುಗಳಲ್ಲಿ ಆನ್ ಎಂಬ ರೂಪ ಉಳಿದುಕೊಂಡಿರಬಹುದು. ತಮಿಳು ಭಾಷೆಯತೊಲ್‌ಕಾಪಿಯಂ ಎಂಬ ವ್ಯಾಕರಣ ಗ್ರಂಥದಲ್ಲಿ ಉತ್ತಮ ಪುರುಷ ಏಕವಚನಕ್ಕೆ ನ ಕಾರವುಳ್ಳ ಯಾವ ರೂಪವೂ ದೊರೆಯುವುದಿಲ್ಲ. ನನ್ನೂಲ್, ವೀರ ಸೂಳಿಯಂ ಮುಂತಾದ ಗ್ರಂಥಗಳಲ್ಲಿ ಮಾತ್ರ ನಕಾರವುಳ್ಳ ಕೆಲವು ರೂಪಗಳು ದೊರಯುತ್ತವೆ. ಇದು ಮೂಲತಃ ಯ್ಞಾನ್ ಎಂಬ ರೂಪದಿಂದ ಪರಿವರ್ತನೆಗೊಂಡು ಬೆಳೆದು ಬಂದಿದ್ದು, ಹಾಗೆಯೇ ಕೋತ, ಹಳೆಯ ಕನ್ನಡ, ಕೊಲಾಮಿ, ನಾಯ್ಕಿ, ಪರ್ಜಿ, ಗಡಬ, ಮಂಡ ಮುಂತಾದ

ಭಾಷೆಗಳಲ್ಲಿ ಕಂಡುಬರುವ ಅನ್ ಎಂಬ ರೂಪವು, ತೊದ ಭಾಷೆಯಲ್ಲಿ ಓನ್ ಎಂದಾಗಿಯೂ, ಕುರುಖ್ ಮತ್ತು ಮಲ್ತೋ ಭಾಷೆಗಳಲ್ಲಿ ಏನ್ ಎಂದಾಗಿಯೂ ಬ್ರಹೂಈ ಭಾಷೆಯಲ್ಲಿ ಈ ಎಂಬ ರೂಪವಾಗಿಯೂ ಪರಿವರ್ತನೆಗೊಂಡಿರಬಹುದು. ಈ ಅನ್ ಎಂಬ ರೂಪವು ತೆಲುಗು ತುಳು ಭಾಷೆಗಳಲ್ಲಿ ಏನು, ಏನಿ ಎಂಬ ರೂಪಗಳಾಗಿಯೂ ಕೋಂಡ, ಕುಯಿ ಭಾಷೆಗಳಲ್ಲಿ ಅನ್ | ಅನಾ | ಅನಾ | ಆ ಎಂಬ ರೂಪಗಳಾಗಿಯೂ ಬೆಳೆದು ಬಂದಿರಬಹುದಾದ ಸಾಧ್ಯತೆಗಳೂ ಕೂಡ ಇವೆ.

ದ್ರಾವಿಡ ಭಾಷೆಗಳ ಉತ್ತಮ ಪುರುಷ ಸರ್ವನಾಮ ಕುರಿತು ವಿವರವಾಗಿ ವಿವೇಚಿಸಿದವರಲ್ಲಿ ಕೆ. ವಿ. ಸುಬ್ಬಯ್ಯ ಅತಿ ಮುಖ್ಯರು. ಇವರು ತಮಿಳು ಭಾಷೆಯಲ್ಲಿ ಕಂಡು ಬರುವ ಉತ್ತಮ ಪುರುಷ ಏಕವಚನ ಯಾನ್, ನಾನ್ ಎಂಬ ರೂಪಗಳು ಮೂಲತಃ ಲ್ಯ ಎಂಬ ಮೂಲ ಸ್ವರದಿಂದ ಹುಟ್ಟಿ ಬೆಳೆದು ಬಂದಿರಬಹುದೆಂದು ಊಹಿಸಿದ್ದಾರೆ. ಆದ ಕಾರಣದಿಂದಲೇ ಇವರು ಲ್ಯ ಎಂಬುದನ್ನು ಮೂಲ ದ್ರಾವಿಡ ರೂಪವಿರಬಹುದೆಂದು ವಿವರಿಸಿಕೊಂಡಿದ್ದಾರೆ. ತಮಿಳು ಭಾಷೆಯ ಯಾನ್ ಎಂಬ ರೂಪವು ಲ್ಯದಿಂದ ಸುಲಭವಾಗಿ ಬೆಳೆದು ಬರಬಲ್ಲದು. ಈ ತಮಿಳಿನ ಯಾನ್ ಎಂಬ ರೂಪದ ಆದಿಯಲ್ಲಿ ತಾಲವ್ಯ ಅನುನಾಸಿಕವು ಕಾಲಕ್ರಮೇಣ ಕಾಣಿಸಿಕೊಂಡು ಅದೇ ಮುಂದೆ ಯ್ಞಾನ್ ಎಂಬ ರೂಪವಾಗಿ ಬೆಳೆದು ಬಂದಿರಬಹುದು ಇಲ್ಲವೆ ಯಾನ್ ಎಂಬ ರೂಪದ ಆದಿಯಲ್ಲಿ ಅನುನಾಸಿಕವು ಕಾಣಿಸಿಕೊಂಡು ನಾನ್, ನೇನ್, ನಾನು, ನನ್ ಎಂಬಿತ್ಯಾದಿ ರೂಪಗಳು ಬೆಳೆದು ಬಂದಿರಬಹುದು, ಅದೇ ನಾನ್ ಎಂಬ ರೂಪವು ಮಲೆಯಾಳಂ ಭಾಷೆಯಲ್ಲಿ ಞಾನ್ ಎಂಬ ರೂಪವಾಗಿ ಪರಿವರ್ತನೆಗೊಂಡಿರಬಹುದಾದ ಸಾಧ್ಯತೆಗಳು ಇಲ್ಲದೆ ಇಲ್ಲ. ನಾನ್, ಞಾನ್, ನೇನು, ನಾನು, ನನ್ ಎಂಬಿತ್ಯಾದಿ ರೂಪಗಳ ಆದಿಯಲ್ಲಿ ಕಂಡು ಬರುವ ಅನುನಾಸಿಕವು ಪೂರ್ಣವಾಗಿ ಲೋಪಗೊಂಡು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಅನ್ ಎಂಬ ರೂಪವು ಕಾಣಿಸಿಕೊಂಡಿರಬಹುದು. ಅದೇ ಮುಂದೆ ಏನ್> ಓನ್> ಈ ಆಗಿ ಪರಿವರ್ತನೆಗೊಂಡು ಬೆಳೆದು ಬಂದಿರಬಹುದಾದ ಅವಕಾಶಗಳೂ ಇವೆ.

ಆಧುನಿಕ ದ್ರಾವಿಡ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಗಳಿಸಿಕೊಂಡಿರುವ ಟಿ. ಬರೊ ಮತ್ತು ಎಂ. ಬಿ. ಎಮೆನೊ ಎಂಬ ಇಬ್ಬರು ಭಾಷಾ ವಿಜ್ಞಾನಿಗಳು ಉತ್ತಮ ಪುರುಷ ಏಕವಚನ ರೂಪವನ್ನು ಕುರಿತು ವಿವರವಾಗಿ ವಿವೇಚಿಸಿದ್ದಾರೆ. ತಮಿಳು ಭಾಷೆಯ ಶಬ್ದಗಳ ಆದಿಯಲ್ಲಿ ಯ ಕಾರವಿರುವ ಅನೇಕ ಶಬ್ದಗಳು ಬಳಕೆಯಲ್ಲಿರುವುದು ಕಂಡು ಬರುತ್ತವೆ, (ಉದಾ : ಯಾನ್ಯೆ, ಯಾಮ್ಯೆ, ಯಾಟು). ಇವುಗಳಿಗೆ ಸಂವಾದಿಯಾಗಿ ಕನ್ನಡದಲ್ಲಿ ಅಕಾರಾದಿ ಶಬ್ದಗಳು ಬಳಕೆಯಲ್ಲಿದ್ದರೆ, ತೆಲುಗು ಭಾಷೆಯಲ್ಲಿ ಏಕಾರಾದಿ ಶಬ್ದಗಳು ಬಳಕೆಯಲ್ಲಿವೆ. ಕನ್ನಡ ಮತ್ತು ತೆಲುಗು ಶಬ್ದಗಳಲ್ಲಿ ತಮಿಳು ಶಬ್ದಗಳ ಆದಿಯಲ್ಲಿ ಕಂಡು ಬರುವ ಯ ಕಾರವು ಪೂರ್ಣವಾಗಿ ಲೋಪವಾಗಿ ಹೋಗಿದೆ. ಆ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಅನ್, ಏನ್ ಎಂಬ ಇತ್ಯಾದಿ ರೂಪಗಳು ಮೂಲತಃ ತಮಿಳು ಭಾಷೆಯ ಯಾನ್ ಎಂಬ ಮೂಲದಿಂದ

ಹುಟ್ಟಿ ಬೆಳೆದು ಬಂದಿರಬಹುದೆಂದು ಭಾವಿಸಿದ ಅವರು ಯಾನ್ ಎಂಬ ರೂಪವನ್ನು ಪೂರ್ವದ್ರಾವಿಡವಿರಬಹುದೆಂದು ಪುನರ್ರಚಿಸಿಕೊಂಡಿದ್ದಾರೆ. ಯಾನ್ ಎಂಬ ರೂಪದ ಆದಿಯಲ್ಲಿ ಅನುನಾಸಿಕವು ಕಾಣಿಸಿಕೊಂಡು ಞಾನ್. ನ್ಞಾನ್, ನಾನ್ ನಾನ, ನನ್, ನೇನು ಎಂಬಿತ್ಯಾದಿ ರೂಪಗಳು ವಿಕಾಸಗೊಂಡು ಬೆಳೆದು ಬಂದಿರಬಹುದಾದ ಸಾಧ್ಯತೆಗಳು ಇವೆ ಎಂದು ಇವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಮಗ್ರ ದ್ರಾವಿಡ ಭಾಷೆಗಳ ಎಲ್ಲಾ ಉತ್ತಮ ಪುರುಷ ಏಕವಚನ ರೂಪಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಕಂಡು ಬರುವ ಆನ್ ಎಂಬ ರೂಪವೇ ಹೆಚ್ಚು ಪ್ರಾಚೀನವಿರಬಹುದೆಂದು ಕೆಲವರು ಊಹಿಸಿದ್ದಾರೆ. ಹಳೆಯ ಕನ್ನಡ ಭಾಷೆಯಲ್ಲಿ ಇದಕ್ಕೆ ಆನ ಎಂಬ ರೂಪವಿದೆ. ಇದು ಕುರುಖ್ ಮತ್ತು ಮಾಲ್ತೋ ಮುಂತಾದ ಭಾಷೆಗಳಲ್ಲಿ ಏನ್ ಆಗಿಯೂ, ಬ್ರಹೂಈ ಭಾಷೆಯಲ್ಲಿ ಈ ಆಗಿಯೂ, ತೊದ ಭಾಷೆಯಲ್ಲಿ ಓನ್ ಆಗಿಯೂ ಪರಿವರ್ತನೆಗೊಂಡು ಬೆಳೆದು ಬಂದಿರಬಹುದು ಅದೇ ರೀತಿ, ತೆಲುಗು ಮತ್ತು ತುಳು ಭಾಷೆಗಳ ಏನು, ಏನಿ, ಎಂಬ ರೂಪಗಳೂ, ಗೋಂಡಿ, ಕುಯಿ ಮುಂತಾದ ಭಾಷೆಗಳ ಅನ| ಅನಾ|ಆನಾ| ಆ ಎಂಬ ರೂಪಗಳು ನಾನಾ ರೀತಿಯಲ್ಲಿ ಪರಿವರ್ತನೆಗೊಂಡು ಬೆಳೆದು ಬಂದಿರಬಹುದಾದ ಸಾಧ್ಯತೆಗಳೂ ಇವೆ. ಕೋತ, ಹಳೆಯ ಕನ್ನಡ, ಕೊಲಾಮಿ, ನಾಯ್ಕಿ, ಪರ್ಜಿ, ಗದಬ, ಮಂಡ ಮುಂತಾದ ಭಾಷೆಗಳಲ್ಲಿ ಕಂಡು ಬರುವ ಆನ್ ಎಂಬ ರೂಪದ ಆದಿಯಲ್ಲಿ ಯ ಕಾರವು ಕಾಣಿಸಿಕೊಂಡು ಯಾನ್ ಎಂಬ ತಮಿಳು ರೂಪವೂ. ಅದರ ಆದಿಯಲ್ಲಿ, ಕಾಲಕ್ರಮೇಣ ನ ಕಾರ ಕಾಣಿಸಿಕೊಂಡು ತಮಿಳು, ಮಲೆಯಾಳಂ, ಕೊಡಗು, ಕನ್ನಡ, ತೆಲುಗು, ಕೊಂಡ, ಕುಯಿ, ಕುವಿ ಮುಂತಾದ ಭಾಷೆಗಳ ಬೇರೆ ಬೇರೆ ರೂಪಗಳು ಬೆಳೆದು ಬಂದಿರಬಹುದಾದ ಸಾಧ್ಯತೆಗಳು ಇವೆ. ಗೋಂಡಿ ಮತ್ತು ಕುಯಿ ಭಾಷೆಗಳಲ್ಲಿ ಕಂಡು ಬರುವ ಉತ್ತಮ ಪುರುಷ ಏಕವಚನ ರೂಪಗಳು ಹೇಗೆ ಬೆಳೆದು ಬಂದಿವೆ ಎಂಬುದರ ಬಗ್ಗೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಇವು ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರವಾಗಿ ಪರಿವರ್ತನೆಗೊಂಡು ಬೆಳೆದು ಬಂದ ರೂಪಗಳಾಗಿವೆ ಎನ್ನಬಹುದು.

ದ್ರಾವಿಡ ಭಾಷೆಗಳ ಉತ್ತಮ ಪುರುಷ ಏಕವಚನ ರೂಪಗಳು ಮೂಲತಃ ಒಂದೇ ಮೂಲದಿಂದ ಹುಟ್ಟಿ ಬೆಳೆದು ಬಂದ ಬೇರೆ ಬೇರೆ ರೂಪಗಳಾಗಿರುವುದರಿಂದ ಅವುಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಅಲ್ಲದೆ ಅವುಗಳಲ್ಲಿ ಸಾಕಷ್ಟು ಸಾಮ್ಯ ಉಳಿದುಕೊಂಡು ಬಂದಿರುವುದು ಗೋಚರಿಸುವುದೆಂದು ಕಾಲ್ಡ್‌ವೆಲ್ ಮಹಾಶಯನು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಈ ಬೇರೆ ಬೇರೆ ದ್ರಾವಿಡ ಭಾಷೆಗಳ ಉತ್ತಮ ಪುರುಷ ಸರ್ವನಾಮ ರೂಪಗಳ ಅಂತ್ಯದಲ್ಲಿ —ನ್ ಎಂಬುದು ಕಂಡು ಬರುವುದು. ಬ್ರಹೂಈ ಮುಂತಾದ ಭಾಷೆಗಳಲ್ಲಿ ಇದು ಕಣ್ಮರೆಯಾಗಿ ಹೋಗಿದೆ. ಈ ಬೇರೆ ಬೇರೆ ದ್ರಾವಿಡ ಭಾಷೆಗಳ ಅಂತ್ಯದಲ್ಲಿ ಕಂಡು ಬರುವ —ನ್ ಎಂಬುದನ್ನು ಉತ್ತಮ ಪುರುಷ ಏಕವಚನ ಪ್ರತ್ಯಯ ಎನ್ನಾ— ಪರಿಗಣಿಸಿಕೊಳ್ಳಬಹುದಾದ ಅವಕಾಶಗಳಿವೆ. ಈ ಏಕ

ವಚನ ಪ್ರತ್ಯಯ ಕೆಲವು ಭಾಷೆಗಳಲ್ಲಿ ಲೋಪವಾಗಿ ಹೋಗಿದ್ದರೆ ಮತ್ತೆ ಕೆಲವು ಭಾಷೆಗಳಲ್ಲಿ ಅದು ಬೇರೆಯಾಗಿ ಪರಿವರ್ತನೆಗೊಂಡು ಬಳಕೆಯಲ್ಲಿರಬಹುದು.

ಕಾಲ್ಡ್‌ವೆಲ್, ಕೆ. ವಿ. ಸುಬ್ಬಯ್ಯ, ಕಾಮಿಲ್ ಜ್ವೆಲ್‌ಬಿಲ್, ಭ. ಕೃಷ್ಣಮೂರ್ತಿ, ಟಿ. ಬರೋ, ಎಂ. ಬಿ, ಎಮೆನೊ, ಎಸ್. ವಿ. ಷಣ್ಮುಗಂ ಮುಂತಾದ ವಿದ್ವಾಂಸರು ದ್ರಾವಿಡ ಭಾಷೆಗಳ ಉತ್ತಮ ಪುರುಷ ಏಕವಚನ ಸರ್ವನಾಮಗಳನ್ನು ಒಗೆ ಒಗೆಯಲ್ಲಿ ಚರ್ಚಿಸಿ ವಿವರವಾಗಿ ವಿವೇಚಿಸಿದ್ದಾರೆ. ಇವರು ಉತ್ತಮ ಪುರುಷ ಏಕವಚನ ಸರ್ವನಾಮ ರೂಪಗಳು ಪರಿವರ್ತನೆಗೊಂಡು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬೆಳೆದು ಬಂದ ವಿಧಾನವನ್ನು ಗುರುತಿಸಿ ಪವರಿಸಿಕೊಂಡಿದ್ದಾರೆ. ಅಲ್ಲದೆ ಅವುಗಳ ಪೂರ್ವ ದ್ರಾವಿಡ ರೂಪಗಳನ್ನು ಒಗೆ ಒಗೆಯಲ್ಲಿ ಪುನರ್ರಚಿಸಿಕೊಂಡಿದ್ದಾರೆ ಎನ್ನಬಹುದು.

3:1:2 ಉತ್ತಮ ಪುರುಷ ಬಹುವಚನ

3:1:2:1 ಅಸಮಾವೇಶಕ ಬಹುವಚನ

ತಮಿಳು	ಯಾಮ್ । ಯಾಂಗಳ್ । ನಾಂಗಳ್	ಎಮ್—
		ಎಂಕಳ್—
ಮಲೆಯಾಳಂ	ಞಾಜಳ್ । ನ್ನಾಜಳ್	ಎನ್ನಳ್—
		ನಸ್ನಳ್—
ಕೋತ	ಆಮ್	—
ತೊದ	ಎಮ್	—
ಕೊಡಗು	ಎಂಗ	ಎಂಗ—
		ನಂಗ—
ಕನ್ನಡ	ಆಮ್ (ಶಾ)	ಎಮ್—
ತುಳು	ಯಾಂಕಳು । ಎಂಕಳು	ಯೊಂಕುಳೆ—
		ಎಂಕುಳೆ—
ತೆಲುಗು	ಏಮು । ಮೋಮು । ನೇಮು	ಮಾ—
		ಮಮ್—
ಗೋಂಡಿ	ಅಮ್ಮೊಟ್ । ನಮ್ಮೊಟ್ ।	
	ಅಮ್ಮೋಟ್ । ನಮ್ಮೋಟ್	
	ಆಮ್ಮೊಕ್	ಮಾ—
ಕೊಂಡಿ	ಮಾಪ್	ಮಾ—(ಷಷ್ಠಿ)
		ಮ—(ದ್ವಿತಿ)
ಕುಯಿ	ಆಮು । ಆಜು	ಮಾ—
ಕುವಿ	ಮಾಂಬು । ಮಾರೋ	ಮಾ—

		ಮಾ—
ಪೆಂಗೋ	ಅಪ್ (ಎನ್)	ಅವ್—
ಕೊಲಾಮಿ	ಅವ್	ಅವ್—
ನಾಯ್ಕಿ	ಅವ್	ಅವ್—
ಪರ್ಜಿ	ಆಮ್	ಅವ್—
ಗಡಬ	ಅಮ್	ಎವ್—
ಕುರುಖ್	ಏಮ್	ಎವ್—
ಮಲ್ತೊ	ಏಮ್	*ಯಮ್—
ಪೂರ್ವ ದ್ರಾವಿಡ	*ಯಾಮ್	

3:1:2:2 ಸಮಾವೇಶಕ ಬಹುವಚನ

ತಮಿಳು	ನಾಮ್	ನಮ್—
		ನಂಗಳ್—
ಮಲೆಯಾಳಂ	ನಾಮ್ । ನೋಮ್	ನಮ್—
ಕೋತ	ಅಮ್	ಅಮ್—
ತೊದ	ಓಮ್	ಒಮ್—
ಕನ್ನಡ	ನಾಮ್ । ನಾವು	ನಮ್—
ಕೊಡಗು	ನಂಗ	ನಮ್—
ತುಳು	ನಮ	ನಮ್—
ತೆಲುಗು	ಮನುಮು	ಮನ—
ಕೊಲಾಮಿ	ನೇಂಡ್ । ನೇಮ್	ನೇಂಡ್—
ಗೋಂಡಿ	ನಮೇತ್	ನಮ್—
ಕುರುಖ್	ನಾಮ್	ನಮ್—
ಮಲ್ತೊ	ನಾಮ್	ನಮ್—
ಬ್ರಹೂಈ	ನನ್ । ನಾನ್	ನಮ್—
ಪೂರ್ವ ದ್ರಾವಿಡ	*ನಾಮ್	*ನಮ್

ಮೇಲೆ ಕೊಟ್ಟಿರುವ ದ್ರಾವಿಡ ಭಾಷೆಗಳ ಉತ್ತಮ ಪುರುಷ ಬಹುವಚನ ಸರ್ವನಾಮ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಅಸಮಾವೇಶಕ ಮತ್ತು ಸಮಾವೇಶಕ ಎಂಬ ಎರಡು ಬಗೆಯ ಬಹುವಚನ ರೂಪಗಳಿರುವುದು ಗೋಚರಿಸುತ್ತವೆ. ಇವುಗಳಲ್ಲಿ ಒಂದನ್ನು ವ್ಯಾವರ್ತಕ ಅಥವಾ ಅಸಮಾವೇಶಕ ಬಹುವಚನವೆಂದೂ, ಇನ್ನೊಂದನ್ನು ಅವ್ಯಾವರ್ತಕ ಅಥವಾ ಸಮಾವೇಶಕ ಬಹುವಚನವೆಂದೂ ಕರೆಯುವರು. ಈ ಎರಡು ಬಗೆಯ ಬಹುವಚನ ರೂಪಗಳು ಅವುಗಳಲ್ಲಿ ಪರ್ಯಾಯ ರೂಪಗಳಾಗಿರದೆ ಅವು ಬೇರೆ ಬೇರೆ ಅರ್ಥ ಸಂಪಾದಿಸಿಕೊಂಡಿರುವ ಬಹುವಚನ ರೂಪ

ಗಳಾಗಿ ಕಂಡುಬರುತ್ತವೆ. ಉತ್ತಮ ಪುರುಷ ಏಕವಚನಕ್ಕೆ ಯಾನ್ ಎಂಬ ರೂಪವನ್ನು ಮೂಲ ದ್ರಾವಿಡವೆಂದು ಪುನರ್ರಚಿಸಿಕೊಂಡಿರುವಂತೆ ಉತ್ತಮ ಪುರುಷ ಅಸಮಾವೇಶಕ ಬಹುವಚನಕ್ಕೆ ಯಾಮ್ ಎಂಬ ರೂಪವನ್ನು ಸಮಾವೇಶಕ ಬಹುವಚನಕ್ಕೆ ನಾಮ್ ಎಂಬ ರೂಪವನ್ನು ಪೂರ್ವ ದ್ರಾವಿಡವೆಂದು ಪುನರ್ರಚಿಸಿಕೊಳ್ಳಲಾಗಿದೆ. ಈ ಬೇರೆ ಬೇರೆ ಪೂರ್ವ ದ್ರಾವಿಡ ಬಹುವಚನ ರೂಪಗಳಿಂದಲೇ ಆ ಬೇರೆ ಬೇರೆ ದ್ರಾವಿಡ ಭಾಷೆಗಳ ಉತ್ತಮ ಪುರುಷ ಬಹುವಚನ ರೂಪಗಳು ಹುಟ್ಟಿ ಬೆಳೆದು ಬಂದಿರಬಹುದೆಂದು ಊಹಿಸಬಹುದಾಗಿದೆ. ದ್ರಾವಿಡ ಭಾಷೆಗಳ ಉತ್ತಮ ಪುರುಷ ಬಹುವಚನ ರೂಪಗಳಲ್ಲಿ ಯಾಮ್ ಮತ್ತು ನಾಮ್ ಎಂಬ ರೂಪಗಳು ಮಾತ್ರ ಹೆಚ್ಚು ಪ್ರಾಚೀನ ರೂಪಗಳಾಗಿ ಗೋಚರಿಸುತ್ತವೆ. ಉತ್ತಮ ಪುರುಷ ಏಕವಚನ ರೂಪ ಯ್ಯಾನ್ ಎಂಬುದು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬೆಳೆದು ಬಂದ ರೀತಿಯಲ್ಲಿಯೇ ಉತ್ತಮ ಪುರುಷ ಅಸಮಾವೇಶಕ ಬಹುವಚನ ರೂಪ ಯಾಮ್ ಎಂಬುದು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬೆಳೆದು ಬಂದಿರಬಹುದಾದ ಸಾಧ್ಯತೆಗಳಿವೆ. ಆದರೆ ನಾಮ್ ಎಂಬ ಸಮಾವೇಶಕ ಬಹುವಚನ ರೂಪ ಆ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಹೇಗೆ ಬೆಳೆದು ಬಂದಿದೆ ಎಂಬುದಕ್ಕೆ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಆದರೂ ಸಮಾವೇಶಕ ಬಹುವಚನ ರೂಪ ನಾಮ್ ಎಂಬುದು ಆ ಬೇರೆ ಬೇರೆ ಭಾಷೆಗಳಲ್ಲಿ ತನ್ನದೇ ಆದ ರೀತಿಯಲ್ಲಿ ಬೆಳೆದು ಬಂದಿರುವುದು ಗೋಚರಿಸುವುದು.

ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಬೇರೆ ಬೇರೆ ಉತ್ತಮ ಪುರುಷ ಬಹುವಚನ ರೂಪಗಳನ್ನು ಅವುಗಳ ಅರ್ಥವನ್ನು ಆಧರಿಸಿ ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ಅವಕಾಶಗಳಿವೆ. ಅಸಮಾವೇಶಕ ಬಹುವಚನ ರೂಪಗಳು ಯಾರನ್ನು ಕುರಿತು ಮಾತನಾಡುತ್ತೇವೆಯೋ ಅವರನ್ನು ಬಿಟ್ಟು ವ್ಯವಹರಿಸುವ ಅರ್ಥವನ್ನು ಸೂಚಿಸಿದರೆ ಸಮಾವೇಶಕ ಬಹುವಚನ ರೂಪಗಳು ಯಾರನ್ನು ಕುರಿತು ಮಾತನಾಡುತ್ತೇವೆಯೋ ಅವರನ್ನು ಸೇರಿಸಿಕೊಂಡು ವ್ಯವಹರಿಸುವ ಅರ್ಥವನ್ನು ಸೂಚಿಸುತ್ತವೆ. ಕಾಲ್ಡ್‌ವೆಲ್ ಮಹಾಶಯನು ತನ್ನ ಗ್ರಂಥದಲ್ಲಿ ಈ ಎರಡು ಬಗೆಯ ಅಸಮಾವೇಶಕ ಮತ್ತು ಸಮಾವೇಶಕ ಬಹುವಚನ ರೂಪಗಳನ್ನು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾನೆ ಅಲ್ಲದೆ ಇವು ದ್ರಾವಿಡ ಭಾಷೆಗಳ ವಿಶಿಷ್ಟವಾದ ಅಂಶಗಳು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಅಸಮಾವೇಶಕ ಮತ್ತು ಸಮಾವೇಶಕ ಎಂಬ ಎರಡು ಬಗೆಯ ಬಹುವಚನ ಭೇದ ಆಸ್ಟ್ರೋ ಏಷ್ಯಾಟಿಕ್ ಭಾಷಾ ಪರಿವಾರಕ್ಕೆ ಸೇರಿದ ಮುಂಡಾ ಮುಂತಾದ ಭಾಷೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುವುದು. ಬ್ರಹೂಈ ಭಾಷೆ ಬಿಟ್ಟು ಉಳಿದ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಈ ಭೇದ ಕಂಡು ಬರುತ್ತದೆ. ಮರಾಠಿ, ಗುಜರಾತಿ, ಸಿಂಧಿ ಮುಂತಾದ ಭಾರತೀಯ ಭಾಷೆಗಳಲ್ಲಿಯೂ ಈ ಬಗೆಯ ಭೇದವು ಕಂಡು ಬರುವುದು. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಸಮಾವೇಶಕ

ಮತ್ತು ಅಸಮಾವೇಶಕ ಬಹುವಚನ ರೂಪಗಳಿಗೂ ಗುಜರಾತಿ, ಮರಾಠಿ, ಸಿಂಧಿ ಮುಂತಾದ ಭಾಷೆಗಳಲ್ಲಿ ಕಂಡುಬರುವ ಬಹುವಚನ ರೂಪಗಳಿಗೂ ಯಾವ ಬಗೆಯ ಸಾಮ್ಯವು ಕಂಡು ಬರುವುದಿಲ್ಲ. ಇವು ಉತ್ತರ ದ್ರಾವಿಡ ಭಾಷೆಗಳ ಬಹುವಚನ ರೂಪಗಳನ್ನು ಹೆಚ್ಚು ಹೋಲುತ್ತವೆ. ಉತ್ತರ ಭಾರತದಲ್ಲಿ ಬಳಕೆಯಲ್ಲಿರುವ ಮುಂಡಾ ಭಾಷೆಗಳ ಪ್ರಭಾವವು ಇದಕ್ಕೆ ಮುಖ್ಯ ಕಾರಣವಿರಬಹುದು. ಇದು ಆರ್ಯಭಾಷೆಗಳ ಪ್ರಭಾವವೇನಲ್ಲ. ಗುಜರಾತಿ, ಮರಾಠಿ, ಸಿಂಧಿ (ಮುಂತಾದ ಭಾಷೆಗಳನ್ನು ಬಿಟ್ಟು ಉಳಿದ ಯಾವ ಆರ್ಯ ಭಾಷೆಗಳಲ್ಲಿಯೂ ಈ ಭೇದ ಕಾಣಿಸಿಕೊಳ್ಳುವುದಿಲ್ಲ. ಇದಕ್ಕೆ ಆರ್ಯೇತರ ಭಾಷೆಗಳ ಪ್ರಭಾವ ಮುಖ್ಯ ಕಾರಣವಿರಬಹುದು. ಈ ಬಗೆಯ ಭೇದ ಯಾವ ಇಂಡೋ ಯೂರೋಪಿಯನ್ ಭಾಷೆಗಳಲ್ಲಿಯೂ ಕಂಡು ಬರುವುದಿಲ್ಲ. ಭಾರತೀಯ ಭಾಷೆಗಳ ಸರ್ವೇಕ್ಷಣ ಕಾರ್ಯವನ್ನು ಕೈಗೊಂಡ ಸ್ಟೆನ್ ಕೊನೋ ಎಂಬುವವನು ಉತ್ತಮ ಪುರುಷ ಬಹುವಚನಗಳಲ್ಲಿ ಕಂಡು ಬರುವ ಈ ಭೇದಕ್ಕೆ ದ್ರಾವಿಡ ಭಾಷೆಗಳು ಮೂಲವಿರಲಾರವು. ಇದಕ್ಕೆ ಯಾವುದೋ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳ ಪ್ರಭಾವವಿರಬಹುದೆಂದು ಊಹಿಸಿ ಬಹುಶಃ ಇದಕ್ಕೆ ಕೊಲರಿನ್ ಅಥವಾ ಮುಂಡಾ ಭಾಷಾ ಪರಿವಾರದ ಭಾಷೆಗಳ ಮುಖಾಂತರ ಈ ಭೇದ ದ್ರಾವಿಡ ಭಾಷೆಗಳಿಗೆ ಬಂದಿದ್ದರೂ ಬಂದಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದನು.

ತಮಿಳು, ಮಲೆಯಾಳಂ. ತೆಲುಗು, ತುಳು ಭಾಷೆಗಳಲ್ಲಿ ಕಂಡು ಬರುವ ಯಾವನ್ ನಾಂಗಳ್, ಇಾಜಳ್ | ಇಾಜ್ಙಳ್, ಮೋಮು ಎಂಕ್ಳು ಎಂಬಿತ್ಯಾದಿ ಬಹುವಚನ ರೂಪಗಳು ಅಸಮಾವೇಶಕ ಅರ್ಥವನ್ನು ಸೂಚಿಸಿದರೆ, ತಮಿಳು, ಮಲೆಯಾಳಂ, ತೆಲುಗು ತುಳು ಮುಂತಾದ ಭಾಷೆಗಳಲ್ಲಿ ಕಂಡು ಬರುವ ನಾಮ್, ನೋಮ್, ನೇಮು| ಮನಮು, ನಮ ಎಂಬಿತ್ಯಾದಿ ಬಹುವಚನ ರೂಪಗಳು ಸಮಾವೇಶಕ ಬಹುವಚನ ಅರ್ಥವನ್ನು ಸೂಚಿಸುತ್ತವೆ.

ಕಾಲ್ಡ್‌ವೆಲ್ ಮಹಾಶಯನು ಕನ್ನಡದಲ್ಲಿ ಸಮಾವೇಶಕ ಮತ್ತು ಅಸಮಾವೇಶಕ ಬಹುವಚನ ಭೇದ ಕಂಡು ಬರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಆರ್. ನರಸಿಂಹಾಚಾರ್ ಮುಂತಾದವರು ಈ ವಿಚಾರವನ್ನು ಆಳವಾಗಿ ಪರಿಶೀಲಿಸಿ ಈ ಬಗೆಯ ಭೇದವು ಕನ್ನಡದಲ್ಲಿಯೂ ಇದೆ ಎಂದು ತೋರಿಸಿಕೊಟ್ಟಿದ್ದಾರೆ. ಹೊಸಗನ್ನಡ ಭಾಷೆಯಲ್ಲಿ ಮಾತ್ರ ಈ ಭೇದವಿಲ್ಲ, ಎರಡು ಬಗೆಯ ಆ ಬೇರೆ ಬೇರೆ ಬಹುವಚನ ರೂಪಗಳು ಪರಸ್ಪರ ಒಂದರಲ್ಲಿಯೇ ಐಕ್ಯವಾಗಿ ಹೋಗಿವೆ.

ಕನ್ನಡದಂತೆಯೇ ಬ್ರಹೂಈ ಮತ್ತು ಗೋಂಡಿ ಭಾಷೆಗಳಲ್ಲಿಯೂ ಕೂಡ ಈ ಭೇದವಿಲ್ಲವೆಂದು ಟಿ. ಬರೊ ಮಹಾಶಯನು ಅಭಿಪ್ರಾಯ ವ್ಯಕ್ತಪಡಿಸಿದನು. ಗೋಂಡಿ ಭಾಷೆಯಲ್ಲಿ ಕಂಡು ಬರುವ ಸಮಾವೇಶಕ ಮತ್ತು ಅಸಮಾವೇಶಕ ಬಹುವಚನ ರೂಪಗಳು ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಬಹುವಚನ ರೂಪಗಳನ್ನು ಹೋಲುವುದಿಲ್ಲ. ಇವು ಮುಂಡಾ ಭಾಷೆಗಳಲ್ಲಿ ಕಂಡು ಬರುವ ಬಹುವಚನ ರೂಪಗಳನ್ನು ಹೆಚ್ಚು ಹೋಲು

ತ್ತವೆ. ಇವಕ್ಕೆ ಕಾರಣವೇನೆಂದರೆ ಈ ಭಾಷೆಯ ಮೇಲೆ ಮುಂಡಾ ಭಾಷೆಗಳ ಪ್ರಭಾವವು ಹೆಚ್ಚಾಗಿ ಉಂಟಾಗಿರಬಹುದಾದ ಸಾಧ್ಯತೆಗಳಿವೆ.

ದ್ರಾವಿಡ ಉತ್ತಮ ಪುರುಷ ಬಹುವಚನ ರೂಪಗಳನ್ನು ಕುರಿತು ಯೂಲ್ಸ್ ಬ್ಲಾಕ್, ಟಿ. ಬರೋ, ಕಾಮಿಲ್ ಜ್ವೆಲೆಬಿಲ್, ಎಂ. ಎಸ್. ಆಂಡ್ರೋನೊವ್, ಎಸ್. ವಿ. ಷಣ್ಮುಗಂ, ಜಿ. ಎಸ್. ಗಾಯ್, ಪಿ.ಜಿ. ಕುಲಕರ್ಣಿ ಮುಂತಾದವರು ಬಗೆ ಬಗೆಯಲ್ಲಿ ವಿಶ್ಲೇಷಿಸಿ ವಿವರಿಸಿಕೊಂಡಿದ್ದಾರೆ. ತಮಿಳು ಪ್ರಾಚೀನ ಗ್ರಂಥಗಳಲ್ಲಿ ಯಾಮ್ । ನಾಮ್ ಎಂಬ ಎರಡು ಬಹುವಚನ ರೂಪಗಳ ಉಲ್ಲೇಖವಿದೆಯಾದರೂ ಅವುಗಳ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲಾಗಿಲ್ಲ. ಆದ್ದರಿಂದ ಅಂತಹ ಪ್ರಾಚೀನ ಗ್ರಂಥಗಳು ಯಾವುದಕ್ಕೂ ನೆರವಾಗಲಾರವು. ತೊಲ್‌ಕಾಪಿಯಂ ವ್ಯಾಕರಣದ ವ್ಯಾಖ್ಯಾನಕಾರ ನಚ್ಚಿನಾರ್ಕಿನಿಯಾರ್ ಎಂಬುವವನು ಯಾಮ್ ಎಂಬುದು ಅಸಮಾವೇಶಕ ಬಹುವಚನವೆಂದೂ, ನಾಮ್ ಎಂಬುದು ಸಮಾವೇಶಕ ಬಹುವಚನವೆಂದೂ ಖಚಿತಪಡಿಸಿದ್ದಾನೆ.

ದ್ರಾವಿಡ ಭಾಷೆಗಳಲ್ಲಿ ಕಂಡುಬರುವಂತೆ ಉತ್ತಮ ಪುರುಷ ಸಮಾವೇಶಕ ಮತ್ತು ಅಸಮಾವೇಶಕ ಬಹುವಚನ ರೂಪಗಳು ಪೂರ್ವ ದ್ರಾವಿಡ ಭಾಷೆಯಲ್ಲಿ ಇದ್ದುವೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಈ ಬಗೆಯ ಬಹುವಚನ ಭೇದವು ಉತ್ತರ ದ್ರಾವಿಡ ಭಾಷೆಗಳಲ್ಲಿ ಸ್ಪಷ್ಟವಾಗಿದ್ದರೆ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಈ ಭೇದ ಸ್ಪಷ್ಟವಾಗಿಲ್ಲ. ಇದಕ್ಕೆ ಬೇರೆ ಯಾವುದೋ ಭಾಷೆಗಳ ಪ್ರಭಾವವು ಕಾರಣವಿರಬಹುದೆಂದು ಕೆಲವರ ಊಹೆ. ಹಳಗನ್ನಡ ಗ್ರಂಥಗಳಲ್ಲಿ ಈ ಭೇದವು ಸ್ಪಷ್ಟವಾಗಿದೆ ಎಂದು ಜಿ. ಎಸ್. ಗಾಯ್ ವಿವರಿಸಿ ತೋರಿಸಿದ್ದಾರೆ. ಕೇಶಿರಾಜ, ನಾಗವರ್ಮ ಮುಂತಾದ ಪ್ರಾಚೀನ ವೈಯಾಕರಣಿಗಳು ತಮ್ಮ ಗ್ರಂಥಗಳಲ್ಲಿ ಇವುಗಳ ಬಗ್ಗೆ ಯಾವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಹಾಗೆಯೇ ಭಟ್ಟಾಕಳಂಕನು ತನ್ನ ಕರ್ನಾಟಕ ಶಬ್ದಾನುಶಾಸನದಲ್ಲಿ ನಾನ್ । ನಾಮ್, ನನ್ನಂ । ನಮ್ಮಂ ಎಂದು ಪ್ರಸ್ತಾಪಿಸಿದ್ದಾನೆ ಅಷ್ಟೆ. ಈ ಯಾವ ಕನ್ನಡದ ವೈಯಾಕರಣಿಗಳೂ ಈ ವಿಚಾರವನ್ನು ಗಮನಿಸಿದಂತಿಲ್ಲ. ಈ ಕಾರಣದಿಂದಾಗಿಯೇ ಪಿ.ಜಿ. ಕುಲಕರ್ಣಿ ಎಂಬುವವರು ಪ್ರಾಚೀನಕಾಲದ ಯಾವ ಕನ್ನಡದ ವೈಯಾಕರಣಿಯೂ ಈ ವಿಚಾರವಾಗಿ ಯಾವುದನ್ನು ಹೇಳದಿರುವ ಕಾರಣದಿಂದ ಈ ಎರಡು ಬಗೆಯ ಬಹುವಚನ ಪ್ರಭೇದ ಕನ್ನಡದಲ್ಲಿ ಇದ್ದಿರಲಾರದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನನ್ನೂಲ್, ವೀರಸೋಳಿಯಂ ಮುಂತಾದ ತಮಿಳು ಗ್ರಂಥಗಳಲ್ಲಿ ಎರಡು ಬಗೆಯ ಬೇರೆ ಬೇರೆ ಅರ್ಥ ಸೂಚಿಸುವ ಬಹುವಚನ ರೂಪಗಳಿವೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಆಧುನಿಕ ದ್ರಾವಿಡ ಭಾಷಾ ವಿಜ್ಞಾನಿಗಳು ಈ ವಿಚಾರವನ್ನು ಆಳವಾಗಿ ಪರಿಶೀಲಿಸಿ ಪೂರ್ವ ದ್ರಾವಿಡದಲ್ಲಿಯೂ ಸಮಾವೇಶಕ ಮತ್ತು ಅಸಮಾವೇಶಕ ಬಹುವಚನ ಭೇದವಿದ್ದು ಅದು ಮೂಲ ಭಾಷೆಯಿಂದ ಪ್ರಮುಖವಾಗಿ ಮೂರು ಕವಲುಗಳಲ್ಲಿ ಪರಿವರ್ತನೆಗೊಂಡು ಬೆಳೆದು ಬಂದಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು

ದಕ್ಷಿಣ ದ್ರಾವಿಡ ಭಾಷೆಗಳಾದ ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿಯೂ, ಮಧ್ಯ ದ್ರಾವಿಡ ಭಾಷೆಗಳಾದ ತೆಲುಗು, ಕುಯಿ, ಕುವಿ ಮುಂತಾದ ಭಾಷೆಗಳಲ್ಲಿಯೂ ಉತ್ತರ ದ್ರಾವಿಡ ಭಾಷೆಗಳಾದ ಕುರುಖ್ ಮತ್ತು ಮಲ್ತೊ ಭಾಷೆಗಳಲ್ಲಿಯೂ ಮೂರು ಕವಲುಗಳಲ್ಲಿ ವಿಭಜನೆಗೊಂಡು ಬೆಳೆದು ಬಂದಿರುವುದನ್ನು ಗುರುತಿಸಿಕೊಳ್ಳಬಹುದಾಗಿದೆ. ಇವು ಕಾಲಕ್ರಮೇಣ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬೇರೆ ಬೇರೆಯಾಗಿ ಸ್ವತಂತ್ರವಾಗಿ ಬೆಳೆದು ಬಂದು ಈ ಭೇದ ಕೆಲವು ಭಾಷೆಗಳಲ್ಲಿ ಕಾಲಕ್ರಮೇಣ ಕಡಿಮೆಯಾಗುತ್ತಾ ಬಂದು, ಮತ್ತೆ ಕೆಲವು ಭಾಷೆಗಳಲ್ಲಿ ಅದು ಕಣ್ಮರೆಯಾಗಿ ಹೋಗಿರಬಹುದಾದ ಸಾಧ್ಯತೆಗಳೂ ಇವೆ. ಈ ವಿಚಾರವನ್ನು ಎಂ. ಎಸ್. ಆಂಡ್ರೊನೊವ್, ಕಾಮಿಲ್ ಜ್ವೆಲ್‌ಬಿಲ್ ಮುಂತಾದ ವಿದ್ವಾಂಸರು ತಮ್ಮ ಪುಸ್ತಕದಲ್ಲಿ ವಿವರವಾಗಿ ವಿಶದಿಸಿ ತೋರಿಸಿದ್ದಾರೆ.

ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಎಲ್ಲಾ ಭಾಷೆಗಳಲ್ಲಿ ಈ ಭೇದವಿದ್ದು ಬ್ರಹೂಈ ಭಾಷೆಯಲ್ಲಿ ಮಾತ್ರ ಈ ಭೇದವಿಲ್ಲದಿರುವುದಕ್ಕೆ ಬೇರೆ ಯಾವುದೋ ಕಾರಣವಿರಬಹುದೆಂದು ಕೆಲವರ ಭಾವನೆ. ಇದು ದ್ರಾವಿಡ ಭಾಷೆಗಳಲ್ಲಿ ಸಹಜವಾಗಿ ಮೂಡಿದ ಗುಣವಲ್ಲವೆಂದು ಕೆಲವರು ಊಹಿಸಿದ್ದಾರೆ. ಭಾರತದ ಮರಾಠಿ, ಗುಜರಾತಿ ಮತ್ತು ಸಿಂಧಿ ಭಾಷೆಗಳಲ್ಲಿ ಕಂಡು ಬರುವ ಈ ಭೇದಕ್ಕೆ ದ್ರಾವಿಡ ಇಲ್ಲವೇ ಮುಂಡಾ ಭಾಷೆಗಳ ಪ್ರಭಾವ ಮುಖ್ಯವಾಗಿರಬಹುದು. ಮೂಲ ಮುಂಡಾ ಭಾಷೆಗಳ ಪ್ರಭಾವ ಮೂಲ ದ್ರಾವಿಡ ಭಾಷೆಯ ಮೇಲೆ ಬೀಳುವುದಕ್ಕೆ ಮೊದಲೇ ಬ್ರಹೂಈ ಭಾಷೆ ಅದರಿಂದ ಬೇರೆಯಾಗಿದ್ದರೂ ಆಗಿರಬಹುದು. ಬ್ರಹೂಈ ಭಾಷೆಯಲ್ಲಿ ಈ ಭೇದವಿಲ್ಲದಿರುವುದಕ್ಕೆ ಮತ್ತೊಂದು ಕಾರಣವಿದೆ. ಬಲೂಚಿ ಮುಂತಾದ ಇಂಡೋ ಇರಾನಿಯನ್ ಭಾಷೆಗಳಲ್ಲಿ ಈ ಭೇದವಿಲ್ಲ. ಬ್ರಹೂಈ ಭಾಷೆಯಲ್ಲಿ ಬಲೂಚಿ ಮುಂತಾದ ಇರಾನಿ ಭಾಷೆಗಳ ಪ್ರಭಾವವಿರುವುದರಿಂದ ಈ ಭೇದ ಆದರಲ್ಲಿ ಕಣ್ಮರೆಯಾಗಿ ಹೋಗಿರಬಹುದಾದ ಸಾಧ್ಯತೆಗಳು ಇವೆ.

ದ್ರಾವಿಡ ಭಾಷೆಗಳಲ್ಲಿ ಉತ್ತಮ ಪುರುಷ ಏಕವಚನ ಸರ್ವನಾಮ ರೂಪಗಳ ಅಂತ್ಯದಲ್ಲಿ – ನ್ ಎಂಬ ಏಕವಚನ ಪ್ರತ್ಯಯವಿರುವಂತೆಯೇ ಎಲ್ಲಾ ದ್ರಾವಿಡ ಭಾಷೆಗಳ ಉತ್ತಮ ಪುರುಷ ಬಹುವಚನ ಸರ್ವನಾಮಗಳ ಅಂತ್ಯದಲ್ಲಿ – ಮ್ ಎಂಬ ರೂಪವಿರುವುದು ಕಂಡು ಬರುವುದು. ಇದು ಕೆಲವು ದ್ರಾವಿಡ ಭಾಷೆಗಳಲ್ಲಿ ಕಣ್ಮರೆಯಾಗಿ ಹೋಗಿದ್ದರೆ ಅದು ಮತ್ತೆ ಕೆಲವು ಭಾಷೆಗಳಲ್ಲಿ ತನ್ನದೇ ಆದ ರೀತಿಯಲ್ಲಿ ಪರಿವರ್ತನೆಗೊಂಡಿದೆ. ಇಲ್ಲಿ ಕಂಡುಬರುವ–ಮ್ ಎಂಬ ರೂಪವನ್ನು ಉತ್ತಮ ಪುರುಷ ಬಹುವಚನ ಪ್ರತ್ಯಯವೆಂದು ವಿವರಿಸಿಕೊಳ್ಳಬಹುದಾಗಿದೆ. ಹೀಗೆ ಕಂಡು ಬರುವ — ಮ್ ಎಂಬ ಬಹುವಚನ ರೂಪದಲ್ಲಿ ಯಾವುದು ಸಮಾವೇಶಕ ಬಹುವಚನ ಪ್ರತ್ಯಯ ಯಾವುದು ಅಸಮಾವೇಶಕ ಬಹುವಚನ ಪ್ರತ್ಯಯ ಎಂಬುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅವುಗಳ — ಮ್ ಎಂಬ ಪ್ರತ್ಯಯದ ಹಿಂದೆ ಅಡಗಿರುವ

ಅರ್ಥವನ್ನು ಆಧರಿಸಿ ಅವನ್ನು ಬೇರೆ ಪ್ರತ್ಯಯಗಳನ್ನಾಗಿ ವಿವರಿಸಿಕೊಳ್ಳಬಹುದಾದ ಅವಕಾಶಗಳಿವೆ.

ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಬೇರೆ ಬೇರೆ ಬಹುವಚನ ರೂಪಗಳಿಗೆ ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲರೂಪದ ಆದಿಯ ಅಥವಾ ಆದಿವರ್ಣದ ದೀರ್ಘ ಸ್ವರವು ಹ್ರಸ್ವಸ್ವರವಾಗಿ ಪರಿವರ್ತನೆಗೊಳ್ಳುವುದು. ಇದು ಮತ್ತೆ ಕೆಲವು ಭಾಷೆಗಳಲ್ಲಿ ಬೇರೆ ಬೇರೆ ಹ್ರಸ್ವಸ್ವರಗಳಾಗಿಯೂ ಪರಿವರ್ತನೆಗೊಳ್ಳಬಲ್ಲದು.

ತಮಿಳು ಭಾಷೆಯಲ್ಲಿ ಕಂಡು ಬರುವ ಯಾಂಗಳ್, ನಾಂಗಳ್ ಎಂಬ ಎರಡು ಬಹುವಚನ ರೂಪಗಳು ಬಳಕೆಯಲ್ಲಿವೆ. ಇವು ಮೂಲತಃ ಯಾನ್+ಕಳ್=ಯಾಂಗಳ್, ನಾನ್+ಕಳ್=ನಾಂಗಳ್ ಆಗಿ ಬೆಳೆದು ಬಂದಿರಬಹುದು ಇಲ್ಲವೇ ಅವು ಮೂಲತಃ ಯಾವ್+ಕಳ್=ಯಾಂಗಳ್, ನಾವ್+ಕಳ್=ನಾಂಗಳ್ ಆಗಿಯೂ ಬೆಳೆದು ಬಂದಿರಬಹುದು. ಈ ಯಾಂಗಳ್ ಮತ್ತು ನಾಂಗಳ್ ಎಂಬ ಬಹುವಚನ ರೂಪಗಳಲ್ಲಿ ಎರಡೆರಡು ಬಹುವಚನ ರೂಪಗಳು ಕೂಡಿಕೊಂಡಿರುವುದು ಗೋಚರಿಸುತ್ತವೆ. ಇವನ್ನು ಕೆಲವು ವೇಳೆ ಏಕವಚನದಲ್ಲಿಯೂ ಬಳಸುವುದನ್ನು ಕಾಣಬಹುದಾಗಿದೆ. ಕನ್ನಡದಲ್ಲಿ ನಾವುಗಳು, ನೀವುಗಳು ಅವರುಗಳು ಎಂಬ ಬಹುವಚನ ರೂಪಗಳು ಏಕವಚನದಲ್ಲಿಯೂ ಬಳಕೆಯಲ್ಲಿರುವುದನ್ನು ಕಾಣಬಹುದು.

3:1::3:0 ಮಧ್ಯಮ ಪುರುಷ ಸರ್ವನಾಮಗಳು

3:1:3:1 ಮಧ್ಯಮ ಪುರುಷ ಏಕವಚನ :

ತಮಿಳು	ನೀನ್ | ನೀ	ನಿನ್—
		ನಿನ್ನ್—
		ಉನ್—
		ನಿಱ್ಕ್—
ಮಲೆಯಾಳಂ	ನೀನ್ | ನೀ	ನಿನ್—
ಕೋತ	ನೀ	ನಿನ್—
		ನಿ—
ತೊದ	ನೀ	ನಿನ್—
ಕನ್ನಡ	ನೀನ್ | ನೀನು	ನಿನ್—
ಕೊಡಗು	ನೀ | ನೀನು	ನಿನ್—
		ನೀ—
ತುಳು	ಈ	ನಿನ್—
		ಇನ್ಡ್—
ತೆಲುಗು	ಈವು | ನೀವು | ನುವ್ವು	ನಿನ್—ನೀ

ಕೊಲಾಮಿ	ನೀವ್	ಇನ್—
ನಾಯ್ಕಿ	ಈನ್ | ಈವ್	ನೀವ್—
ಪರ್ಜಿ	ಈನ್	ಇನ್—
ಗದಬ	ಈನ್	ಇನ್—
ಗೋಂಡಿ	ಇಮ್ಮಾ | ನಿಮ್ಮ | ನಿಮ್ಮೆ	ನೀ—
ಕೊಂಡ	ನೀನ್	ನೀ—
ಪೆಂಗೋ	ಏನ್	ನೀ—
		ನಿಂಗ್—
ಮಂಡ	ಈನ್	—
ಕುಯಿ	ಈನು | ನೀನು	ನೀ—
		ನಿಂಗ್—
ಕುರುಖ್	ನೀನ್	ನಿನ್—
		ನಿಂಗ್—
ಮಲ್ತೊ	ನೀನ್	ನಿಂಗ್—
ಬ್ರಹೂಈ	ನೀ	ನೇ—
ಪೂರ್ವ ದ್ರಾವಿಡ	*ನೀನ್	*ನಿನ್ —

3:1:3:2 ಮಧ್ಯಮ ಪುರುಷ ಬಹುವಚನ

ತಮಿಳು	ನೀವಿರ್ | ನೀಯಿರ್	ನುಮ್—
	ನೀಂಕಳ್ | ನೀವಿರ್	ಉಮ್—
	ನೀಂಗಳ್ | ನೀರ್	ಉಂಗಳ್—
		ನುಂಕಳ್—
ಮಲೆಯಾಳಂ	ನೀಙ್ಙಳ್ | ನೀಙಾಙ್ಙಳ್	ನಿನ್ನಳ್—
		ನಿಙ್ಙಳ್—
ಕೋತ	ನೀಮ್	ನಿಮ್—
ತೊದ	ನಿಮ್	ನಿಮ್—
ಕನ್ನಡ	ನೀಮ್ | ನೀವು	ನಿಮ್—
		ನೀ—
ಕೊಡಗು	ನಿಂಗ	ನಿಂಗ—
ತುಳು	ನೀಕ್ಳು | ಈರು ನೀಂಕ್ಳು	ನೀಂಕ್ಳೆ—
ತೆಲುಗು	ಈರು | ಮೀರು	ಮಿಮ್—ಮೀ

ಕೊಲಾಮಿ	ನೀರ್	ಇವ್—
ನಾಯ್ಕಿ	ಈವ್	ಇವ್—
ಪರ್ಜಿ	ಈವ್	ಇವ್—
ಗದಬ	ಈವ್	ಇವ್—
ಗೋಂಡಿ	ಇವ್ಮಾಟ್ | ನಿಮಟ್ | ಮೀರಾಟ್	—
ಕೊಂಡ	ಮಿರಾಟ್	ಮೀ—
ಪೆಂಗೊ	ಏಪ್ (ಎನ್) ಮೀರ	ಮೀ—
		ಮೀಂಗ್—
ಮಂಡ	ಈವ್	—
ಕುಯಿ	ಈರು | ಮೀರು	ಮೀ—
ಕುವಿ	ಮೀಂಬು | ಮೀವು	ಮೀ—
ಕುರುಖ್	ನೀವ್	ನಿವ್—
ಮಲ್ತೊ	ನೀವ್	ನಿವ್—
ಬ್ರಹೂಈ	ನುವ್	ನುವ್—
ಪೂರ್ವ ದ್ರಾವಿಡ	*ನೀವ್	*ನಿವ್—

ಮೇಲೆ ಕೊಟ್ಟಿರುವ ದ್ರಾವಿಡ ಭಾಷೆಗಳ ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಸಾಕಷ್ಟು ಸಾಮ್ಯವಿರುವುದು ಕಂಡು ಬರುವುದು. ತಮಿಳು, ಮಲಿಯಾಳಂ, ಕನ್ನಡ, ಕೊಂಡ, ಕುಯಿ, ಕುವಿ, ಕುರುಖ್ ಮತ್ತು ಮಲ್ತೊ ಮುಂತಾದ ಭಾಷೆಗಳಲ್ಲಿ ಮಧ್ಯಮ ಪುರುಷ ಏಕವಚನಕ್ಕೆ ನೀನ್ ಎಂಬ ರೂಪವೂ ಬಹುವಚನಕ್ಕೆ ನೀವ್ ಎಂಬ ರೂಪವೂ ಬಳಕೆಯಲ್ಲಿರುವುದನ್ನು ಕಾಣಬಹುದು. ತಮಿಳು, ಕೋತ, ತೊದ, ಕೊಡಗು ಮತ್ತು ಬ್ರಹೂಈ ಭಾಷೆಗಳಲ್ಲಿ ಮಧ್ಯಮ ಪುರುಷ ಏಕವಚನಕ್ಕೆ ನೀ ಎಂಬ ರೂಪವಿದೆ. ನಾಯ್ಕಿ, ಪರ್ಜಿ, ಗದಬ, ಮಂಡ ಮುಂತಾದ ಮಧ್ಯ ದ್ರಾವಿಡ ಭಾಷೆಗಳಲ್ಲಿ ಮಧ್ಯಮ ಪುರುಷ ಏಕವಚನಕ್ಕೆ ಈನ್ ಎಂಬ ರೂಪವೂ ಬಹುವಚನಕ್ಕೆ ಈವ್ ಎಂಬ ರೂಪವೂ ಬಳಕೆಯಲ್ಲಿರುವುದು ಗೋಚರಿಸುತ್ತವೆ. ಇವುಗಳನ್ನು ಪೂರ್ಣವಾಗಿ ಪರಿಶೀಲಿಸಿದಾಗ ದ್ರಾವಿಡ ಭಾಷೆಗಳ ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ಮೂಲತಃ ನೀನ್ ಮತ್ತು ನೀವ್ ಎಂಬ ಮೂಲ ರೂಪಗಳಿಂದ ಬೇರೆ ಬೇರೆಯಾಗಿ ಹುಟ್ಟಿ ಬೇರೆಯಾಗಿ ಬೆಳೆದು ಬಂದಿರಬಹುದೆಂದು ಊಹಿಸಬಹುದಾಗಿದೆ. ಈ ಎಲ್ಲಾ ಕಾರಣಗಳಿಂದಲೇ ಕೆಲವು ವಿದ್ವಾಂಸರು ಮಧ್ಯಮ ಪುರುಷ ಏಕವಚನ ಮತ್ತು ಬಹುವಚನಗಳಿಗೆ ನೀನ್ ಮತ್ತು ನೀವ್ ಎಂಬ ರೂಪಗಳನ್ನು ಪೂರ್ವ ದ್ರಾವಿಡವೆಂದು ಪುನರ್ರಚಿಸಿಕೊಂಡಿದ್ದಾರೆ.

ತೆಲುಗು, ತುಳು, ಗೋಂಡಿ, ಮುಂತಾದ ಭಾಷೆಗಳಲ್ಲಿ ಕಂಡು ಬರುವ ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ಸ್ವತಂತ್ರವಾಗಿ ತಮ್ಮದೇ ಆದ ರೀತಿಯಲ್ಲಿ ಬೆಳೆದು ಬಂದ ರೂಪಗಳಾಗಿ ಗೋಚರಿಸುತ್ತವೆ. ಇವು ಆ ಮೂಲ ರೂಪಗಳಿಂದ ಹೇಗೆ ಬೆಳೆದು ಬಂದಿವೆ ಎಂಬುದರ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಇದಕ್ಕೆ ಯಾವ ಆಧಾರಗಳು ದೊರೆಯುವುದಿಲ್ಲ. ತಮಿಳು ಮತ್ತು ಕನ್ನಡ ಮುಂತಾದ ಭಾಷೆಗಳ ಹೆಚ್ಚು ಪ್ರಾಚೀನ ವ್ಯಾಕರಣ ಗ್ರಂಥಗಳಲ್ಲಿ ಮಧ್ಯಮ ಪುರುಷ ಏಕವಚನಕ್ಕೆ ನೀನ್ ಎಂಬ ರೂಪವೂ ಬಹುವಚನಕ್ಕೆ ನೀವಿರ್ ಎಂಬ ರೂಪವೂ ಬಳಕೆಯಾಗಿರುವುದು ಕಂಡು ಬರುತ್ತವೆ. ಈ ಕಾರಣದಿಂದ ಈ ರೂಪಗಳೇ ಮೂಲ ದ್ರಾವಿಡವಿರಬಹುದೆಂದು ಭಾವಿಸಿ ವಿವರಿಸಿಕೊಂಡಿದ್ದಾರೆ.

ಕಾಲ್ಡ್‌ವೆಲ್ ಮಹಾಶಯನು ತೆಲುಗಿನ ನೀವು ಎಂಬ ಏಕವಚನ ರೂಪವು ನೀ ಎಂಬುದಕ್ಕೆ ಸಂಬಂಧಿಸಿದ್ದು, ಇದರಲ್ಲಿ ಉಚ್ಚಾರದ ಸೌಲಭ್ಯಕ್ಕಾಗಿ ಅದಕ್ಕೆ ವು ಎಂಬುದನ್ನು ಸೇರಿಸಿಕೊಳ್ಳಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ತೆಲುಗು ಭಾಷೆಯ ಈವು ಎಂಬ ರೂಪವು ಈ ಎಂಬ ನಾಮ ಪ್ರಕೃತಿಯ ಮೂಲದಿಂದ ವಿಕಾಸಗೊಂಡು ಬೆಳೆದು ಬಂದಿರಬಹುದೆಂದು ಕೆಲವರ ಊಹೆ. ತೆಲುಗಿನ ನೇವು | ಮೇಮು | ನೀಮು | ಮೀರು ಮುಂತಾದ ರೂಪಗಳು ತೆಲುಗು ಭಾಷೆಯ ವರ್ಣವ್ಯತ್ಯಯ ತತ್ವಕ್ಕೆ ಅನುಗುಣವಾಗಿ ರೂಪುಗೊಂಡು ಬೆಳೆದು ಬಂದಿವೆ. ತೆಲುಗಿನಲ್ಲಿ ಮಧ್ಯಮ ಪುರುಷ ಸೂಚಕ ಏಕವಚನ ಮತ್ತು ಬಹುವಚನ – ನ್ ಮತ್ತು – ವ್ ಎಂಬ ಪ್ರತ್ಯಯಗಳಿಗೆ ಬದಲಾಗಿ ವು | ವಿ, ರು | ರಿ ಎಂಬ ರೂಪಗಳು ಬಳಕೆಯಲ್ಲಿರುವುದು ಗೋಚರಿಸುತ್ತವೆ. ಹೀಗಾಗಿ ತೆಲುಗಿನಲ್ಲಿ ಮಧ್ಯಮ ಪುರುಷ ಏಕವಚನಕ್ಕೆ ಈವು ಎಂಬ ರೂಪವೂ ಬಹುವಚನಕ್ಕೆ ಈರು ಎಂಬ ರೂಪವು ಇವೆ. ಇದೇ ಬಗೆಯ ಸಮಾನ ಅಂಶಗಳು ಕೆಲವು ಮಧ್ಯ ದ್ರಾವಿಡ ಭಾಷೆಗಳಲ್ಲಿಯೂ ಇರುವುದನ್ನು ಕಾಣಬಹುದು. ಆದರೆ ತುಳು ಮತ್ತು ಗೋಂಡಿ ಭಾಷೆಗಳಲ್ಲಿ ಮಧ್ಯಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ತಮ್ಮದೇ ಆದ ರೀತಿಯಲ್ಲಿ ಬೆಳೆದು ಬಂದಿವೆ.

ನಾಯ್ಕಿ, ಪರ್ಜಿ, ಗಡಬ ಮುಂಡ ಮುಂತಾದ ಭಾಷೆಗಳಲ್ಲಿ ಮಧ್ಯಮ ಪುರುಷ ಏಕವಚನಕ್ಕೆ ಈನ್ ಎಂಬ ರೂಪವೂ, ಬಹುವಚನಕ್ಕೆ ಈವ್ ಎಂಬ ರೂಪವು ಇರುವುದು ಕಂಡು ಬರುತ್ತವೆಯಾದರೂ ಇವು ಮೂಲತಃ ನೀನ್ ಮತ್ತು ನೀವ್ ಎಂಬ ರೂಪಗಳಿಂದ ವಿಕಾಸಗೊಂಡು ಬೆಳೆದು ಬಂದ ರೂಪಗಳು. ಅವುಗಳ ಆದಿಯಲ್ಲಿ ಕಂಡು ಬರುವ ನ ಕಾರವು ಇವುಗಳಲ್ಲಿ ಪೂರ್ಣವಾಗಿ ಲೋಪವಾಗಿ ಹೋಗಿದ್ದು ಈನ್, ಈ ವ್ ಎಂಬ ರೂಪಗಳು ಮಾತ್ರ ಉಳಿದುಕೊಂಡಿವೆ. ಇದನ್ನು ಗಮನಿಸಿದ ಭ. ಕೃಷ್ಣಮೂರ್ತಿಯವರು ನಾಯ್ಕಿ, ಪರ್ಜಿ, ಗದಬ ಮತ್ತು ಮುಂಡ ಮುಂತಾದ ಮಧ್ಯ ದ್ರಾವಿಡ ಭಾಷೆಗಳಲ್ಲಿ ಉಂಟಾದ ಬದಲಾವಣೆ ಹೊಸ ಬದಲಾವಣೆ ಇರಬಹುದೆಂದು ಊಹಿಸಿದ್ದಾರೆ. ತುಳು, ತೆಲುಗು, ಕುಯಿ ಮತ್ತು ಪೆಂಗೊ ಮುಂತಾದ ದ್ರಾವಿಡ ಭಾಷೆಗಳಲ್ಲಿ ಕಂಡು

ಬರುವ ವ್ಯತ್ಯಾಸಗಳನ್ನು ಗಮನಿಸಿದ ಸುಬ್ರಮಣ್ಯಂ ಎಂಬ ವಿದ್ವಾಂಸನು ಇವು ಪೂರ್ವ ಮಧ್ಯ ದ್ರಾವಿಡ ಭಾಷೆಯ ಹಂತದಲ್ಲಿಯೇ ಉಂಟಾಗಿರಬಹುದಾದ ಬದಲಾವಣೆಗಳಿರ ಬಹುದೆಂದು ಅನುಮಾನಿಸಿದ್ದಾನೆ. ಮಧ್ಯ ದ್ರಾವಿಡ ಭಾಷೆಗಳ ಕೆಲವು ಕಲಾಪಗಳು ತೆಲುಗು ಭಾಷೆಯ ವರ್ಣ ವ್ಯತ್ಯಯ ಪ್ರಭಾವಕ್ಕೆ ಸಿಕ್ಕಿ ಉಂಟಾಗಿರಬಹುದಾದ ಬದ ಲಾವಣೆಗಳಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಮಿಳು, ಮಲೆಯಾಳಂ, ಕೊಂಡ, ಕುಯಿ, ಕುರುಖ್ ಮಲ್ತೊ ಮುಂತಾದ ಭಾಷೆಗಳಲ್ಲಿ ಕಂಡು ಬರುವ ಏಕವಚನ ಮತ್ತು ಬಹುವಚನ ನೀನ್ ಮತ್ತು ನೀಮ್ ಎಂಬ ರೂಪಗಳು ನಾಯ್ಕಿ, ಪರ್ಜಿ, ಗದಬ, ಮಂಡ ಮುಂತಾದ ಭಾಷೆಗಳಲ್ಲಿ ಕಂಡು ಬರುವ ಏಕವಚನ ಮತ್ತು ಬಹುವಚನ ಈನ್ ಮತ್ತು ಈಮ್ ಎಂಬ ರೂಪಗಳು ಇವೆ. ಈ ಬೇರೆ ಬೇರೆ ದ್ರಾವಿಡ ಭಾಷೆಗಳ ಏಕವಚನ ರೂಪಗಳ ಅಂತ್ಯದಲ್ಲಿ — ನ್ ಎಂಬುದು ಬಹುವಚನ ರೂಪಗಳ ಅಂತ್ಯದಲ್ಲಿ — ಮ್ ಎಂಬುದು ಇರುವುದು ಗೋಚ ರಿಸುತ್ತವೆ. ಮಧ್ಯಮ ಪುರುಷ ಏಕವಚನ ರೂಪಗಳ ಅಂತ್ಯದಲ್ಲಿ ಕಂಡು ಬರುವ ಏ–ನ್ ಎಂಬುದನ್ನು ಏಕವಚನ ಪ್ರತ್ಯಯವೆಂದು ಬಹುವಚನ ರೂಪಗಳ ಅಂತ್ಯದಲ್ಲಿ ಕಂಡು ಬರುವ ಏ–ಮ್ ಎಂಬುದನ್ನು ಬಹುವಚನ ಪ್ರತ್ಯಯವೆಂದು ವಿಭಜಿಸಿ ವಿವರಿಸಿಕೊಳ್ಳ ಬಹುದಾದ ಅವಕಾಶಗಳಿವೆ. ಮಧ್ಯಮ ಪುರುಷ ಏಕವಚನ ಪ್ರತ್ಯಯ–'ನ್'ವು ಕೋತ, ತೊದ, ಕೊಡಗು ಮತ್ತು ಬ್ರಹೂಈ ಭಾಷೆಗಳಲ್ಲಿ ಪೂರ್ಣವಾಗಿ ಕಣ್ಮರೆಯಾಗಿ ಹೋಗಿದೆ. ತೆಲುಗು ಭಾಷೆಯಲ್ಲಿ ಏಕವಚನ ರೂಪದ ಆದಿ ಮತ್ತು ಅಂತ್ಯದ ನ ಕಾರವು ಪೂರ್ಣವಾಗಿ ಲೋಪವಾಗಿದ್ದು ಅದರ ಸ್ಥಾನದಲ್ಲಿ ಈವು ಎಂಬ ಏಕವಚನ ರೂಪವು ಬಳಕೆಯಲ್ಲಿವೆ. ತಮಿಳು, ತುಳು, ತೆಲುಗು, ಕೊಂಡ, ಕುಯಿ ಮುಂತಾದ ಭಾಷೆಗಳಲ್ಲಿ ನೀಮ್ ಎಂಬ ಬಹುವಚನ ರೂಪವು ನೀರ್ ಆಗಿ ಪರಿವರ್ತನೆಗೊಂಡಿವೆ. ಮಧ್ಯ ದ್ರಾವಿಡ ಭಾಷೆಗಳ ಕೆಲವು ಭಾಷೆಗಳಲ್ಲಿ ಮಧ್ಯಮ ಪುರುಷ ಬಹುವಚನ ಪ್ರತ್ಯಯ – 'ಮ್'ಕ್ಕೆ ಬದಲಾಗಿ ಇರ್ । ರ್ ಎಂಬ ರೂಪಗಳಿವೆ. ಇಲ್ಲಿ ಕಂಡು ಬರುವ ಬಹುವಚನ ಪ್ರತ್ಯಯ ಗಳು ಕ್ರಿಯಾಪದಗಳಿಗೆ ಹತ್ತುವ ಆಖ್ಯಾತ ಪ್ರತ್ಯಯಗಳಾಗಿವೆ. ಇದು ಮಧ್ಯಮ ಪುರುಷ ಬಹುವಚನ – ಮ್ ಎಂಬ ಪ್ರತ್ಯಯದಿಂದ ಬಂದಿದ್ದಲ್ಲ. ತಮಿಳು ಭಾಷೆಯಲ್ಲಿ ನೀಯಿರ್ ಎಂಬ ಏಕವಚನ ರೂಪವಿದೆ. ಇದು ನೀನ್ + ಇರ್ ಎಂಬ ರೂಪಗಳಿಂದ ಆದದ್ದು ; ಇದರಲ್ಲಿ ನೀನ್ ಎಂಬ ಏಕವಚನ ಮೂಲ ರೂಪಕ್ಕೆ – ಇರ್ ಎಂಬ ಬಹುವಚನ ಸೇರಿ ಕೊಂಡು ನೀಯಿರ್ ಎಂಬ ರೂಪವಾಗಿದೆ. ಇದಕ್ಕೆ ಕ್ರಿಯಾಪದಗಳಿಗೆ ಹತ್ತುವ ಬಹು ವಚನ ಪ್ರತ್ಯಯ– ಇರ್‌ನ ಪ್ರಭಾವವು ಮುಖ್ಯ ಕಾರಣವಿರಬಹುದು.

ತಮಿಳು, ಮಲೆಯಾಳಂ, ಕನ್ನಡ ಮುಂತಾದ ಭಾಷೆಗಳಲ್ಲಿ ನೀಂಗಳ್ ನೀಙ್ಙಳ್ ನೀವು ಎಂಬ ಬಹುವಚನ ರೂಪಗಳನ್ನು ಏಕವಚನದಲ್ಲಿಯೂ ಬಳಸುವುದನ್ನು ಕಾಣ ಬಹುದು. ನೀಂಗಳ್ (ನೀಙ್ + ಕಳ್) ನೀಙ್ಙಳ್ (ನೀಙ್ + ಕಳ್) ಎಂಬಿತ್ಯಾದಿ ರೂಪಗಳಲ್ಲಿ ಎರಡೆರಡು ಬಹುವಚನ ರೂಪಗಳು ಕೂಡಿಕೊಂಡು ಬಳಕೆಯಲ್ಲಿವೆ. ಕನ್ನಡ

ದಲ್ಲಿ ನೀವುಗಳು ಎಂಬುದನ್ನು ಕೂಡ ಏಕವಚನದಲ್ಲಿ ಬಳಸುವ ಅವಕಾಶವೂ ಇದೆ. ಇದ ರಲ್ಲಿಯೂ ಎರಡೆರಡು ಬಹುವಚನ ರೂಪಗಳಿರುವುದು ಕಂಡು ಬರುತ್ತವೆ. ಮಧ್ಯಮ ಪುರುಷ ಬಹುವಚನ ರೂಪಗಳನ್ನು ಕೆಲವು ವೇಳೆ ಏಕವಚನದಲ್ಲಿ ಬಳಸುವುದು ಗೌರವ ಸೂಚಕವಾಗಿದ್ದರೂ ಇದು ದ್ರಾವಿಡ ಭಾಷೆಗಳ ಇನ್ನೊಂದು ವೈಶಿಷ್ಟ್ಯವೆಂದು ಭಾವಿಸ ಬಹುದಾಗಿದೆ.

3:2 ಆತ್ಮಾರ್ಥಕ ಸರ್ವನಾಮಗಳು

3:2:1 ಆತ್ಮಾರ್ಥಕ ಏಕವಚನ

ತಮಿಳು	ತಾನ್	ತನ್—
ಮಲೆಯಾಳಂ	ತಾನ್	ತನ್—
ಕೋತ	ತಾನ್	ತನ್— ತ—
ತೊದ	ತೋನ್	ತನ್—
ಕನ್ನಡ	ನಾನ್ । ತಾನು	ತನ್—
ಕೊಡಗು	ತಾನು । ತಾನಿ	ತನ್—
ತುಳು	ತಾನು	ತನ್—
ತೆಲುಗು	ತಾನು	ತನ್—
ಕೊಲಾಮಿ	ತಾನ್	ತನ್—
ಪರ್ಜಿ	ತಾನ್	ತನ್—
ಗದಬ	ತಾನ್	ತನ್—
ಗೋಂಡಿ	ತಾನ್	ತನ್—
ಕುಯಿ	ತಾನು । ತನು	ತನ್—
ಕುವಿ	ತಾನು । ತನು	ತನ್—
ಪೆಂಗೊ	ತಾನ್	ತಾ— ತಂಗ್—
ಕುರುಖ್	ತಾನ್	ತಾ— ತಂಗ್—
ಮಲ್ತೊ	ತನ್ । ತನಿ	ತಂಗ್—
ಬ್ರಹೂಈ	ತೇನ್	—
ಪೂರ್ವ ದ್ರಾವಿಡ	*ತಾನ್	*ತನ್—

3:2:2 ಆತ್ಮಾರ್ಥಕ ಬಹುವಚನ

ತಮಿಳು	ತಾಮ್	ತಾಂಗಳ್	ತಮ್—
		ತಂಕಳ್—
ಮಲೆಯಾಳಂ	ತಾಮ್	ತಮ್—
ಕೋತ	ತಾಮ್	ತಮ್—
ತೊದ	ತಾಮ್	ತಮ್	ತಮ್—
ಕನ್ನಡ	ತಾಮ್ | ತಾವು	ತಮ್—
ಕೊಡಗು	ತಂಗ	ತಂಗ—
ತೆಲುಗು	ತಾಮು | ತಮರು | ತಾರು	ತಮ್—
ಕೊಲಾಮಿ	ತಾಮ್	ತಮ್—
ಪರ್ಜಿ	ತಾಮ್	ತಮ್—
ಗದಬ	ತಾಮ್	ತಮ್—
ಗೋಂಡಿ	ತಮ್ಮಾ	—
ಕುಯಿ	ತಾರು (ಪುಂ)	ತಾಡನ್—
	ತಾಯಿ (ನಪುಂ)	
ಕುವಿ	ತಂಬೂ | ತಾಂಬೂ	ತಮ್—
ಕುರುಖ್	ತಾಮ್	ತಮ್—
ಮಾಲ್ತೊ	ತಮ್ | ತಮಿ	ತಮ್—
ಪೂರ್ವ ದ್ರಾವಿಡ	*ತಾಮ್	*ತಮ್—

ಈ ಮೇಲೆ ಕೊಟ್ಟಿರುವ ಆತ್ಮಾರ್ಥಕ ಏಕವಚನ ಮತ್ತು ಬಹುವಚನ ರೂಪಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಇವುಗಳಲ್ಲಿ ಏಕವಚನಕ್ಕೆ ತಾನ್ ಎಂಬ ರೂಪವೂ ಬಹುವಚನಕ್ಕೆ ತಾಮ್ ಎಂಬ ರೂಪವೂ ಹೆಚ್ಚು ಬಳಕೆಯಲ್ಲಿವೆ. ಆತ್ಮಾರ್ಥಕ ಏಕವಚನ ಸರ್ವನಾಮ ರೂಪ ತಾನ್ ಎಂಬುದು ತೊದ ಭಾಷೆಯಲ್ಲಿ ತೋನ್ ಆಗಿಯೂ ಬ್ರಹೂಈ ಭಾಷೆಯಲ್ಲಿ ತೇನ್ ಆಗಿಯೂ ಪರಿವರ್ತನೆಗೊಂಡು ಬಳಕೆಯಲ್ಲಿದ್ದರೆ, ಮತ್ತೆ ಕೆಲವು ದ್ರಾವಿಡ ಭಾಷೆಗಳಲ್ಲಿ ತಾನ್ ಎಂಬುದರ ಆದಿವರ್ಣವು ಹ್ರಸ್ವ ಸ್ವರವಾಗಿ ಪರಿವರ್ತನೆಗೊಂಡು ಬಳಕೆಯಲ್ಲಿರುವುದನ್ನು ಕಾಣಬಹುದು.

ಈ ಮೇಲಿನ ಪಟ್ಟಿಯಲ್ಲಿ ಕಂಡು ಬರುವ ಆತ್ಮಾರ್ಥಕ ಸರ್ವನಾಮ ರೂಪಗಳಲ್ಲಿ ತಾನ್ ಮತ್ತು ತಾಮ್ ಎಂಬ ರೂಪಗಳು ಹೆಚ್ಚು ಪ್ರಾಚೀನ ರೂಪಗಳಾಗಿ ಗೋಚರಿಸುತ್ತವೆ. ತಮಿಳು ಮತ್ತು ಕನ್ನಡ ಭಾಷೆಗಳ ಹೆಚ್ಚು ಪ್ರಾಚೀನ ವ್ಯಾಕರಣ ಗ್ರಂಥಗಳಲ್ಲಿ ತಾನ್ ಎಂಬ ರೂಪವು ಆತ್ಮಾರ್ಥಕ ಏಕವಚನ ರೂಪವಾಗಿಯೂ, ತಾಮ್ ಎಂಬ

ರೂಪವು ಬಹುವಚನ ರೂಪವಾಗಿಯೂ ಬಳಕೆಯಲ್ಲಿರುವುದು ಕಂಡುಬರುತ್ತವೆ. ಈ ಕಾರಣದಿಂದಲೇ ತಾನ್ ಮತ್ತು ತಾವರ್ ಎಂಬ ರೂಪಗಳನ್ನು ಪೂರ್ವದ್ರಾವಿಡ ಆತ್ಮಾರ್ಥಕ ಏಕವಚನ ಮತ್ತು ಬಹುವಚನ ರೂಪಗಳಿಗೆ ಕ್ರಮವಾಗಿ ಪುನಸ್ರಚಿಸಿ ಕೊಳ್ಳಲಾಗಿವೆ. ದ್ರಾವಿಡ ಭಾಷೆಗಳ ಈ ಬೇರೆ ಬೇರೆ ಆತ್ಮಾರ್ಥಕ ಸರ್ವನಾಮಗಳು ಮೂಲತಃ ತಾನ್ ಎಂಬ ಏಕವಚನ ರೂಪದಿಂದಲೂ ತಾವರ್ ಎಂಬ ಬಹುವಚನ ರೂಪದಿಂದಲೂ ಬೇರೆ ಬೇರೆ ಏಕವಚನ ಮತ್ತು ಬಹುವಚನ ರೂಪಗಳು ಹುಟ್ಟಿ ಬೇರೆ ಬೇರೆಯಾಗಿ ಬೆಳೆದು ಬಂದಿವೆ ಎಂದು ಸುಲಭವಾಗಿ ಊಹಿಸಬಹುದಾಗಿದೆ. ಈ ಬೇರೆ ಬೇರೆ ಆತ್ಮಾರ್ಥಕ ಸರ್ವನಾಮ ರೂಪಗಳು ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವುಗಳ ಆದಿವರ್ಣದ ದೀರ್ಘಸ್ವರವು ಹ್ರಸ್ವ ಸ್ವರವಾಗಿ ಪರಿವರ್ತನೆ ಗೊಳ್ಳುವುದು.

ದಕ್ಷಿಣ, ಮಧ್ಯ ಮತ್ತು ಉತ್ತರ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಬೇರೆ ಬೇರೆ ಆತ್ಮಾರ್ಥಕ ಏಕವಚನ ಮತ್ತು ಬಹುವಚನ ಸರ್ವನಾಮ ರೂಪಗಳನ್ನು ಗಮನಿಸಿದಾಗ ಅವುಗಳಲ್ಲಿ ಏಕವಚನ ರೂಪಗಳ ಅಂತ್ಯದಲ್ಲಿ —ನ್ ಎಂಬ ಪ್ರತ್ಯಯವು ಇರುವುದು ಕಂಡು ಬಂದರೆ ಅವುಗಳ ಬಹುವಚನ ರೂಪಗಳ ಅಂತ್ಯದಲ್ಲಿ —ವರ್ ಎಂಬ ಪ್ರತ್ಯಯವು ಇರುವುದು ಗೋಚರಿಸುವುದು. ಆತ್ಮಾರ್ಥಕ ಏಕವಚನ ರೂಪಗಳ ಅಂತ್ಯದಲ್ಲಿ ಕಂಡು ಬರುವ —ನ್ ಎಂಬುದನ್ನು ಏಕವಚನ ಪ್ರತ್ಯಯವೆಂದೂ, ಬಹುವಚನ ರೂಪಗಳ ಅಂತ್ಯದಲ್ಲಿ ಕಂಡುಬರುವ ... ವರ್ ಎಂಬುದನ್ನು ಬಹುವಚನ ಪ್ರತ್ಯಯವೆಂದು ವಿಭಜಿಸಿ ಕೊಳ್ಳಬಹುದಾಗಿದೆ.

ಆತ್ಮಾರ್ಥಕ ಸರ್ವನಾಮಗಳು ಅನೇಕ ದ್ರಾವಿಡ ಭಾಷೆಗಳಲ್ಲಿ ಪ್ರಥಮ ಪುರುಷ ದಲ್ಲಿಯೂ ಬಳಕೆಯಲ್ಲಿರುವುದನ್ನು ಕಾಣಬಹುದು. ಇವು ಈ ಭಾಷೆಗಳಲ್ಲಿ ನಿಶ್ಚಿತಾರ್ಥ ವನ್ನು ಸೂಚಿಸುತ್ತವೆ ಅಲ್ಲದೆ ಅವು ಕೆಲವು ವೇಳೆ ಗೌರವ ಸೂಚಕ ರೂಪಗಳಾಗಿಯೂ ಬಳಕೆಯಲ್ಲಿವೆ. ಈ ಕಾರಣದಿಂದಲೇ ಕಾಲ್ಡ್‌ವೆಲ್ ಮಹಾಶಯನು ಈ ಆತ್ಮಾರ್ಥಕ ಸರ್ವನಾಮಗಳನ್ನು ನಿರ್ದೇಶಕ ಸರ್ವನಾಮಗಳು ಎಂದು ಪರಿಗಣಿಸಿಕೊಳ್ಳಬಹುದಾದ ಅವಕಾಶಗಳಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಅಲ್ಲದೆ ಇವು ಮೂಲತಃ ನಿರ್ದೇಶಕ ಪ್ರಕೃತಿಯೊಂದರಿಂದ ಬೆಳೆದು ಬಂದಿರಬಹುದೆಂದೂ ಊಹಿಸಿದ್ದಾನೆ.

ಆತ್ಮಾರ್ಥಕ ಸರ್ವನಾಮಗಳು ವಾಸ್ತವವಾಗಿ ವ್ಯಾಕರಣ ಗ್ರಂಥಗಳಲ್ಲಿ ಪ್ರಥಮ ಪುರುಷ ಸರ್ವನಾಮಗಳಿಗಿಂತ ಬೇರೆಯಾಗಿ ಕಂಡುಬರುತ್ತವೆಯಾದರೂ ಅವು ಕೆಲವು ವೇಳೆ ನಿರ್ದೇಶಕ ಸರ್ವನಾಮಗಳಂತೆಯೇ ಕೆಲಸ ನಿರ್ವಹಿಸುತ್ತವೆ. ಆತ್ಮಾರ್ಥಕ ಬಹುವಚನ ರೂಪಗಳನ್ನು ಕೆಲವು ವೇಳೆ ದ್ರಾವಿಡ ಭಾಷೆಗಳಲ್ಲಿ ಏಕವಚನದಲ್ಲಿ ಗೌರವ ಸೂಚಕವಾಗಿ ಬಳಸುವುದು ರೂಢಿಯಲ್ಲಿರುವುದನ್ನು ಕಾಣಬಹುದು.

3:4 ಪ್ರಥಮ ಪುರುಷ ಸರ್ವನಾಮಗಳು

3:4:1 ಪ್ರಥಮ ಪುರುಷ ಏಕವಚನ

	ಪುಂ	ಸ್ತ್ರೀ	ನಪುಂ
ತಮಿಳು	ಅವನ್	ಅವಳ್	ಅದ್ | ಅದು
ಮಲೆಯಾಳಂ	ಅವನ್	ಅವಳ್	ಅದ್ | ಅದು
ಕೋತ	ಅವ್ನ್	ಅವ್ಳ್	ಅದ್
ಇರುಳ	ಅವೆ	ಅವ	ಅದು
ತೊದ	—	—	ಅಥ್
ಯರಕುಲ	—	—	ಅತು
ಕನ್ನಡ	ಅವನ್ | ಅವನು	ಅವಳ್ | ಅವಳು	ಅದು
ಕೊಡಗು	ಅವೆನ್	ಅದ | ಅವ	ಅದಿ
ತುಳು	ಆಯೆ	ಆಳು	ಅವು
ತೆಲುಗು	ವಾಡು	—	ಅದಿ
ಕೊಲಾಮಿ	ಅವ್ನ್ | ಅವ್ನ್‌ದ್		ಅದ್
ನಾಯ್ಕಿ	ಅವ್‌ನ್ದ್	—	ಅದ್
ಪರ್ಜಿ	ಅನೆದ್ | ಓದ್	—	ಅದ್ | ಅನೊತ್
ಗದಬ	ಓಂಡ್	—	ಅದ್
ಗೋಂಡಿ	ಓರ್ | ವೊರ್	—	ಅದ್
ಕೊಂಡ	ವಾನ್ರು	—	ಅದಿ
ಕೊಯ	ಓಂಡು	—	ಅದ್ದು
ಪೆಂಗೊ	ಅವ್‌ನ್	ಅಬೆಲ್	ಅದು
ಕುಯಿ	ಆಂಜು	—	ಅರಿ
ಕುವಿ	ಆಸಿ	—	ಅದಿ
ಕುರುಖ್	ಆಸ್	—	ಅಥ್
ಮಲ್ಟೊ	ಆಹ್	—	ಅಥ್
ಬ್ರಹೂಈ	—	—	ಓದ್ | ಓಥ್
ಪೂರ್ವ ದ್ರಾವಿಡ	*ಅವನ್	*ಅವಳ್	*ಅದು

3:4:2 ಪ್ರಥಮ ಪುರುಷ ಬಹುವಚನ

	ಪುಂ ಸ್ತ್ರೀ	ನಪುಂ
ತಮಿಳು	ಅವರ್ | ಅವರ್ಗಳ್	ಅವೈ | ಅವೈಗಳ್

ಮಲೆಯಾಳಂ	ಅವರ್	ಅವೈ
ಕೋತ	ಅವ್ರ್	ಅದ್
ಇರುಳ	ಅವರ್	ಅವೆ
ತೊದ	—	ಅಥಾನ್
ಯರಕುಲ	—	ಅಯ್
ಕನ್ನಡ	ಅವರು	ಅವು
ಕೊಡಗು	ಅವ‌ಙ್ಗ	ಅದಿ
ತುಳು	ಓಕ್ಳು । ಅರ್	ಐಕ್ಳು । ಅವು

	ಪುಂ	ಸ್ತ್ರೀ	ನಪುಂ
ತೆಲುಗು	ವಾರು	—	ಅವಿ
ಕೊಲಾಮಿ	ಅವ್ರ್	—	ಅದವ್
ನಾಯ್ಕಿ	ಅವ್ರ್	—	ಅಧವ್
ಪರ್ಜಿ	ಅನೆರ್ । ಓರ್	—	ಅನೊವ್ । ಅವ್
ಗದಬ	ಓರ್	—	ಅವ್
ಗೋಂಡಿ	ವೂರ್ । ಓಡ್‌ಅವ್	—	ಅವ್ । ಒಡ್‌ಕ್
ಕೊಂಡ	ವಾರ್	—	ಅವಿ
ಕೊಯ	ಓರು	—	ಅವ್ವ
ಕುಯಿ	ಆರು	—	ಆವಿ
ಕುವಿ	ಆರಿ	—	ಆವಿ । ಅತಿ
ಪೆಂಗೊ	ಅವರ್	ಅವೆಕ್	ಅವಂಗ್
ಕುರುಖ್	ಆರ್ । ಅಬ್ದರ್	—	ಅಬ್ದಾ
ಮಾಲ್ತೊ	ಆರ್	—	ಅಥ್
ಬ್ರಹೂಈ	—	—	ದಾಫ್‌ಕ್
ಪೂರ್ವದ್ರಾವಿಡ	*ಅವರ್		*ಅವೈ

ಮೇಲೆ ಕೊಟ್ಟಿರುವ ದ್ರಾವಿಡ ಭಾಷೆಗಳ ಬೇರೆ ಬೇರೆ ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳನ್ನು ಪರಸ್ಪರ ಹೋಲಿಸಿ ಪರಿಸಿದಾಗ ಅವುಗಳಲ್ಲಿ ಸಾಕಷ್ಟು ಸಾಮ್ಯ ಇರುವುದು ಕಂಡು ಬರುವುದು. ಇವುಗಳಲ್ಲಿ ತಮಿಳು, ಮಲೆಯಾಳಂ ಮತ್ತು ಕನ್ನಡ ಭಾಷೆಗಳ ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ಹೆಚ್ಚು ಪ್ರಾಚೀನ ರೂಪಗಳಾಗಿ ಗೋಚರಿಸುತ್ತವೆ. ಆದ ಕಾರಣ ಅವನ್ನು ಮೂಲ ದ್ರಾವಿಡ ವಿರಬಹುದೆಂದು ಭಾವಿಸಿ ಪುನರ್ರಚಿಸಿಕೊಳ್ಳಬಹುದಾಗಿದೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ತೆಲುಗು ಭಾಷೆ ಬಿಟ್ಟು ಉಳಿದೆಲ್ಲ ಭಾಷೆಗಳಲ್ಲಿ ಏಕವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ,

ನಪುಂಸಕ ಲಿಂಗ ಎಂಬ ಮೂರು ಬಗೆಯ ಲಿಂಗ ಸೂಚಕ ಪ್ರತ್ಯಯಗಳಿದ್ದರೆ, ಬಹುವಚನ ರೂಪಗಳಲ್ಲಿ ಪುಲ್ಲಿಂಗ, ಮತ್ತು ನಪುಂಸಕಲಿಂಗ ಎಂಬ ಎರಡು ಬಗೆಯ ಲಿಂಗ ಸೂಚಕ ಪ್ರತ್ಯಯಗಳಿರುವುದು ಗೋಚರಿಸುತ್ತವೆ. ತಮಿಳು, ಮಲೆಯಾಳಂ ಮತ್ತು ಕನ್ನಡ ಭಾಷೆಗಳಲ್ಲಿ ಅವನ್ ಎಂಬುದು ಪುಲ್ಲಿಂಗ ಪ್ರಥಮ ಪುರುಷ ಏಕವಚನ ರೂಪವಾಗಿಯೂ, ಅವಳ್ ಎಂಬುದು ಸ್ತ್ರೀಲಿಂಗ ಏಕವಚನ ರೂಪವಾಗಿಯೂ, ಅದ್ | ಅದು ಎಂಬುದು ನಪುಂಸಕ ಲಿಂಗ ಏಕವಚನ ರೂಪವಾಗಿಯೂ ಅವರ್ ಎಂಬುದು ಪುಲ್ಲಿಂಗ ಸ್ತ್ರೀಲಿಂಗ ಪ್ರಥಮ ಪುರುಷ ಬಹುವಚನವಾಗಿಯೂ ಅನ್ವೈ | ಅವು ಎಂಬುದು ನಪುಂಸಕ ಲಿಂಗ ಬಹುವಚನ ರೂಪವಾಗಿಯೂ ಕಾಣಿಸಿಕೊಳ್ಳುವುವು. ಇವುಗಳಲ್ಲಿ *ಅವನ್ *ಅವಳ್ *ಅದ್ ಎಂಬ ಪ್ರಥಮ ಪುರುಷ ಏಕವಚನ ರೂಪಗಳನ್ನು *ಅವರ್, *ಅನ್ವೈ ಎಂಬ ಪ್ರಥಮ ಪುರುಷ ಬಹುವಚನ ರೂಪಗಳನ್ನು ಪೂರ್ವ ದ್ರಾವಿಡ ರೂಪಗಳನ್ನಾಗಿ ಪುನರ್ರಚಿಸಿಕೊಳ್ಳಲಾಗಿದೆ. ಈ ಬೇರೆ ಬೇರೆ ಮೂಲರೂಪಗಳಿಂದಲೇ ದ್ರಾವಿಡ ಭಾಷೆಗಳ ಎಲ್ಲಾ ಬೇರೆ ಬೇರೆ ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ಹುಟ್ಟಿ ನಾನಾ ರೀತಿಯಲ್ಲಿ ಬೆಳೆದು ಬಂದಿವೆ ಎಂದು ಊಹಿಸಬಹುದಾಗಿದೆ.

ಪೂರ್ವ ದ್ರಾವಿಡ ಭಾಷೆಗಳಲ್ಲಿ ಸ್ತ್ರೀಲಿಂಗ ಸೂಚಕ ರೂಪ(ಅವಳ್) ಪ್ರತ್ಯೇಕವಾಗಿ ಇರಲಿಲ್ಲವೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ ಮಧ್ಯ ಮತ್ತು ಉತ್ತರ ದ್ರಾವಿಡ ಭಾಷೆಗಳ ಕೆಲವು ಭಾಷೆಗಳಲ್ಲಿ ಸ್ತ್ರೀ ಸೂಚಕ ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ಪ್ರತ್ಯೇಕವಾಗಿರುವುದು ಕಂಡು ಬರುವುದಿಲ್ಲ. ಈ ಭಾಷೆಗಳಲ್ಲಿ ಇದು ಅಸ್ತಿತ್ವದಲ್ಲಿಯೇ ಇರಲಿಲ್ಲವೆಂದು ಕೆಲವರ ಭಾವನೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮಾತ್ರ (ತೆಲುಗು ಬಿಟ್ಟು) ಪ್ರಥಮ ಪುರುಷ ಏಕವಚನದಲ್ಲಿ ಸ್ತ್ರೀ ಸೂಚಕ ರೂಪಗಳು ಪ್ರತ್ಯೇಕವಾಗಿ ಬಳಕೆಯಲ್ಲಿವೆ. ತೆಲುಗು ಭಾಷೆಯಲ್ಲಿ ಮಾತ್ರ ಇದು ಇಲ್ಲ. ಪುಲ್ಲಿಂಗ ಮತ್ತು ಸ್ತ್ರೀಲಿಂಗ ಪ್ರಥಮ ಪುರುಷ ಬಹುವಚನ ರೂಪಗಳು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಪರಸ್ಪರ ಒಂದರಲ್ಲಿಯೇ ಐಕ್ಯವಾಗಿ ಹೋಗಿವೆ. ನಪುಂಸಕ ಲಿಂಗ ಬಹುವಚನ ರೂಪಗಳು ಪ್ರತ್ಯೇಕವಾಗಿವೆ. ಪೂರ್ವ ದ್ರಾವಿಡ ಸ್ತ್ರೀಲಿಂಗ ಸೂಚಕ ರೂಪವು ಮಧ್ಯ ಮತ್ತು ಉತ್ತರ ದ್ರಾವಿಡ ಭಾಷೆಗಳಲ್ಲಿ ನಪುಂಸಕ ಲಿಂಗದಲ್ಲಿ ಐಕ್ಯವಾಗಿ ಹೋಗಿದೆ. ಪೆಂಗೊ ಭಾಷೆಯಲ್ಲಿ ಮಾತ್ರ ಮೂರು ಬಗೆಯ ಲಿಂಗಗಳು ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ಎರಡರಲ್ಲಿಯೂ ಆಯಾ ಲಿಂಗಗಳಿಗೆ ಅನುಗುಣವಾಗಿ ಪ್ರತ್ಯೇಕ ಪ್ರತ್ಯೇಕವಾಗಿರುವುದು ಕಂಡುಬರುತ್ತವೆ. ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಈ ಲಿಂಗ ವ್ಯವಸ್ಥೆಯು ಕಾಲಕಾಲಕ್ಕೆ ಬದಲಿಸಿಕೊಂಡಿರಬಹುದೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬ್ರಹೂಈ, ತೊದ, ಯರಕುಲ ಮುಂತಾದ ಭಾಷೆಗಳಲ್ಲಿ ಯಾವ ಲಿಂಗಭೇದವೂ ಕಂಡು ಬರುವುದಿಲ್ಲ. ಇವುಗಳಲ್ಲಿ ಬಹುವಚನ ಭೇದ ಮಾತ್ರ ಗೋಚರಿಸುತ್ತವೆ. ತೆಲುಗು ಭಾಷೆಯಲ್ಲಿ ಪೂರ್ವ ದ್ರಾವಿಡ ಪ್ರಥಮ ಪುರುಷ ಏಕವಚನ ಅವನ್ ಎಂಬುದು ಅದರ ವರ್ಣವ್ಯತ್ಯ

ಯಕ್ಕೆ ಅನುಗುಣವಾಗಿ> ವಾನ್> ವಾಮ ಎಂಬುದಾಗಿಯೂ, ಬಹುವಚನ ಅವರ್ ಎಂಬುದು> ವಾರು ಎಂದಾಗಿಯೂ ಪರಿವರ್ತನೆಗೊಂಡು ಬೆಳೆದು ಬಂದಿವೆ. ಇದೇ ರೀತಿ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ತಮ್ಮದೇ ಆದ ರೀತಿಯಲ್ಲಿ ಬೆಳೆದು ಬಂದು ಬಳಕೆಯಲ್ಲಿರುವುದನ್ನು ಗುರುತಿಸಿ ಕೊಳ್ಳಬಹುದಾಗಿದೆ.

ಪ್ರಥಮ ಪುರುಷ ಏಕವಚನ ಮತ್ತು ಬಹುವಚನ ರೂಪಗಳು ದ್ರಾವಿಡ ಭಾಷೆ ಗಳಲ್ಲಿ ಮೂಲತಃ ಕೆಲವು ನಿರ್ದೇಶಕ ಸ್ವರಗಳಾದ ಅ ಮತ್ತು ಇ ಎಂಬ ಮೂಲದಿಂದ ಕಾಲ ಕಾಲಕ್ಕೆ ಹುಟ್ಟಿ ಬೆಳೆದು ಬಂದಿರಬಹುದೆಂದು ಕೆಲವರು ಊಹಿಸಿದ್ದಾರೆ. ಈ ನಿರ್ದೇಶಕ ಸ್ವರಗಳಿಗೆ ಕ್ರಮವಾಗಿ ಬೇರೆ ಬೇರೆ ಲಿಂಗ ಮತ್ತು ವಚನ ಪ್ರತ್ಯಯಗಳನ್ನು ಹಚ್ಚಿದಾಗ ಈ ಬೇರೆ ಬೇರೆ ಪ್ರಥಮ ಪುರುಷ ಸರ್ವನಾಮ ರೂಪಗಳು ರೂಪುಗೊಳ್ಳು ತ್ತವೆ. ಈ ಕಾರಣದಿಂದಲೇ ಪ್ರಥಮ ಪುರುಷ ಸರ್ವನಾಮಗಳು ಕೆಲವು ಅಂಶಗಳಲ್ಲಿ ನಿರ್ದೇಶಕ ಸರ್ವನಾಮಗಳಾಗಿ ಕಾಣಿಸಿಕೊಳ್ಳುತ್ತವೆ. ಈ ಕಾರಣದಿಂದ ಪೂರ್ವ ದ್ರಾವಿಡ ಪ್ರಥಮ ಪುರುಷ ಸರ್ವನಾಮಗಳಿಗೆ *ಅ ಮತ್ತು *ಇ ಎಂಬ ಸ್ವರಗಳನ್ನು ಪುನರ್ರಚಿಸಿಕೊಳ್ಳುವವರೂ ಇದ್ದಾರೆ

ಹಳೆಯ ತಮಿಳು, ಮಲೆಯಾಳಂ ಮತ್ತು ಕನ್ನಡ ಭಾಷೆಗಳಲ್ಲಿ ಮೂರು ಬಗೆಯ ಪ್ರಥಮ ಪುರುಷ ಸರ್ವನಾಮಗಳಿರುವುದು ಗೋಚರಿಸುತ್ತವೆ. ಇವನ್ನೇ ದೂರವರ್ತಿ ಸಮೀಪವರ್ತಿ, ಮಧ್ಯವರ್ತಿ ಸರ್ವನಾಮಗಳು ಎಂದು ಹೆಸರಿಸಿಕೊಳ್ಳಬಹುದು. ದೂರ ವರ್ತಿ ಸರ್ವನಾಮಗಳು ಅ ಎಂಬ ನಿರ್ದೇಶಕ ಸ್ವರದ ಮೂಲದಿಂದಲೂ, ಸಮೀಪವರ್ತಿ ಸರ್ವನಾಮಗಳು ಇ ಎಂಬ ನಿರ್ದೇಶಕ ಸ್ವರದ ಮೂಲದಿಂದಲೂ, ಮಧ್ಯವರ್ತಿ ಸರ್ವ ನಾಮಗಳು ಉ ಎಂಬ ನಿರ್ದೇಶಕ ಸ್ವರದ ಮೂಲದಿಂದಲೂ ಕಾಲ ಕಾಲಕ್ಕೆ ಹುಟ್ಟಿ ಬೆಳೆದು ಬಂದ ಸರ್ವನಾಮ ರೂಪಗಳಾಗಿ ಗೋಚರಿಸುತ್ತವೆ. ಬೇರೆ ಬೇರೆ ನಿರ್ದೇಶಕ ಸ್ವರಗಳಿಗೆ ಬೇರೆ ಬೇರೆ ಲಿಂಗ ಮತ್ತು ವಚನ ಪ್ರತ್ಯಯಗಳನ್ನು ಹಚ್ಚಿದಾಗ ಬೇರೆ ಬೇರೆ ಬಗೆಯ ನಿರ್ದೇಶಕ ಸರ್ವನಾಮ ರೂಪಗಳು ರೂಪುಗೊಳ್ಳುತ್ತವೆ. ಇವು ಕೆಲವು ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವುದನ್ನು ಕಾಣಬಹುದು. ಕಾಲ್ಡ್ ವೆಲ್ ಮಹಾಶಯನು ಈ ಮೂರು ಬಗೆಯ ನಿರ್ದೇಶಕ ಸರ್ವನಾಮಗಳನ್ನು ಪಟ್ಟಿ ಮಾಡಿ ತೋರಿಸಿದ್ದಾನೆ. ಅವು ಹೀಗಿವೆ.

	ಸಮೀಪವರ್ತಿ ಸರ್ವನಾಮಗಳು	ದೂರವರ್ತಿ ಸರ್ವನಾಮಗಳು	ಮಧ್ಯವರ್ತಿ ಸರ್ವನಾಮಗಳು
ಕನ್ನಡ			
ಪುಂ. ಏ.	ಇವನ್	ಅವನ್	ಉವನ್
ಸ್ತ್ರೀ.	ಇವಳ್	ಅವಳ್	ಉವಳ್

ನಪುಂ.	ಇದು	ಅದು	ಉದು
ಪುಂ.ಸ್ತ್ರೀ.ಬ	ಇವರ್	ಅವರ್	ಉವರ್
ನಪುಂ.	ಇವು	ಅವು	ಉವು

ತಮಿಳು :

ಪುಂ. ಏ.	ಇವನ್	ಅವನ್	ಉವನ್
ಸ್ತ್ರೀ	ಇವಳ್	ಅವಳ್	ಉವಳ್
ನಪುಂ.	ಇದ್	ಅದ್	ಉದ್
ಪುಂ.ಸ್ತ್ರೀ.ಬ.	ಇವರ್	ಅವರ್	ಉವರ್
ನಪುಂ.	ಇವೈ	ಅವೈ	ಉವೈ
ತೆಲುಗು	ಇದಿ	ಅದಿ	—
ಗೋಂಡಿ	ಇದ್	ಅದ್	—
ಕುರುಖ್	ಇದ್	ಅದ್	ಕೊಡ್
ಪೂರ್ವ ದ್ರಾವಿಡ	*ಇ	*ಅ	*ಉ

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಹಳೆಯ ತಮಿಳು, ಕನ್ನಡ ಭಾಷೆಗಳಲ್ಲಿ ಸಮೀಪ ದರ್ಶಕ, ದೂರದರ್ಶಕ ಮತ್ತು ಮಧ್ಯ ದರ್ಶಕ ಎಂಬ ಮೂರು ಬಗೆಯ ನಿರ್ದೇಶಕ ಸರ್ವನಾಮಗಳಿದ್ದರೆ, ಆಧುನಿಕ ಕನ್ನಡ, ತೆಲುಗು, ತುಳು, ಗೋಂಡಿ ಮುಂತಾದ ಭಾಷೆಗಳಲ್ಲಿ ಸಮೀಪವರ್ತಿ ಮತ್ತು ದೂರವರ್ತಿ ಎಂಬ ಎರಡು ಬಗೆಯ ಸರ್ವನಾಮಗಳು ಮಾತ್ರ ಗೋಚರಿಸುತ್ತವೆ. ಇವುಗಳಲ್ಲಿ ಮಧ್ಯವರ್ತಿ ಸರ್ವನಾಮಗಳು ಕಂಡುಬರುವುದಿಲ್ಲ. ಈ ಬೇರೆ ಬೇರೆ ಸರ್ವನಾಮಗಳ ಅಂತ್ಯದಲ್ಲಿ ಬೇರೆ ಬೇರೆ ಲಿಂಗ ಮತ್ತು ವಚನ ಪ್ರತ್ಯಯಗಳು ಸೇರಿಕೊಂಡಿವೆ. ಇವುಗಳಲ್ಲಿ ಮೂಲದಲ್ಲಿ ಅ, ಇ ಮತ್ತು ಉ ಎಂಬ ನಿರ್ದೇಶಕ ಸ್ವರಗಳು ಮಾತ್ರ ಇವೆ. ಬೇರೆ ಬೇರೆ ಬಗೆಯ ಸರ್ವನಾಮಗಳ ವಿಕಾಸಕ್ಕೆ ನಿರ್ದೇಶಕ ಸ್ವರಗಳಾದ ಅ, ಇ, ಉ ಎಂಬ ಮೂಲ ಸ್ವರಗಳು ಕಾರಣವಾಗಿರಬಹುದು. ಈ ಮೂಲ ಸ್ವರಗಳಿಂದಲೇ ಬೇರೆ ಬೇರೆ ಬಗೆಯ ಸರ್ವನಾಮಗಳು ಹುಟ್ಟಿ ಬೆಳೆದು ಬಂದಿರಬಹುದೆಂದು ಭಾವಿಸಬಹುದಾಗಿದೆ. ಮಧ್ಯ ದರ್ಶಕ ಸರ್ವನಾಮಗಳು ಕೆಲವು ದ್ರಾವಿಡ ಭಾಷೆಗಳಲ್ಲಿ ಕಂಡು ಬರುವುದಿಲ್ಲವಾದ ಕಾರಣ ಇವು ಮೂಲ ದ್ರಾವಿಡ ಭಾಷೆಯಲ್ಲಿ ಇದ್ದುವೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಕೆಲವರು ಇವು ಮೂಲ ದ್ರಾವಿಡ ಭಾಷೆಯಲ್ಲಿಯೂ ಇದ್ದಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಧ್ಯ ಮತ್ತು ಉತ್ತರ ದ್ರಾವಿಡ ಭಾಷೆಗಳಲ್ಲಿ ಇದು ಕೆಲವು ಕಡೆ ನಶಿಸಿ ಹೋಗಿರಬಹುದಾದ ಸಾಧ್ಯತೆಗಳೂ ಇವೆ. ಕೆಲವು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮಾತ್ರ ಇವು ಸ್ಪಷ್ಟವಾಗಿವೆ. ಈ ಮೂರು ಬಗೆಯ ಸರ್ವನಾಮಗಳು ಮೂಲತಃ ಅ, ಇ, ಮತ್ತು ಉ ಎಂಬ ಮೂರು ಸ್ವರಗಳಿಗೆ ಬೇರೆ ಬೇರೆ ಲಿಂಗ ಮತ್ತು

ವಚನ ಪ್ರತ್ಯಯಗಳು ಸೇರಿ ಇವು ರೂಪುಗೊಳ್ಳುತ್ತವೆ. ಅಲ್ಲದೆ ಅವುಗಳ ಅವನ್ ಎಂಬುದು ಆ ಮನುಷ್ಯ ಎಂತಲೂ, ಇವನ್ ಈ ಮನುಷ್ಯ ಎಂತಲೂ ಉವನ್ ಎಂಬುದು ಇಬ್ಬರ ನಡುವಿನ ಮನುಷ್ಯ ಎಂಬ ಅರ್ಥವನ್ನು ಸೂಚಿಸುತ್ತವೆ. ಬೇರೆ ಬೇರೆ ನಿರ್ದೇಶಕ ಸರ್ವನಾಮಗಳನ್ನು ಒಂದು ರೀತಿಯಲ್ಲಿ ಪ್ರಥಮ ಪುರುಷ ಸರ್ವನಾಮವೆಂದು ಹೆಸರಿಸಿಕೊಳ್ಳಬಹುದು. ಕಾರಣವೇನೆಂದರೆ ಇವುಗಳಲ್ಲಿ ಪ್ರತ್ಯೇಕವಾದ ಲಿಂಗ ಮತ್ತು ವಚನ ಪ್ರತ್ಯಯಗಳು ಇವೆ. ಇವುಗಳನ್ನು ಇಲ್ಲಿ ಸಾಧಿತ ಸರ್ವನಾಮಗಳು ಎಂದು ಹೆಸರಿಸಿಕೊಳ್ಳಲು ಬರುವುದಿಲ್ಲ. ಇವೇ ರೀತಿ ಕೆಲವು ಪ್ರಶ್ನಾರ್ಥಕ ಸರ್ವನಾಮಗಳು ದ್ರಾವಿಡ ಭಾಷೆಗಳಲ್ಲಿ ಎ ಎಂಬ ಮೂಲಸ್ವರದ ಮೂಲದಿಂದ ಹುಟ್ಟಿ ಬೆಳೆದ ರೂಪಗಳಾಗಿ ಗೋಚರಿಸುತ್ತವೆ. ಇವನ್ನು ಒಂದು ರೀತಿಯಲ್ಲಿ ನಿರ್ದೇಶಕ ಸರ್ವನಾಮಗಳ ವರ್ಗಕ್ಕೂ ಸೇರಿಸಿಕೊಳ್ಳಬಹುದು. ಆದರೂ ಇವು ಪ್ರಥಮ ಪುರುಷ ಸರ್ವನಾಮಗಳಂತಲ್ಲ.

ಕನ್ನಡ, ತೆಲುಗು ಮುಂತಾದ ದ್ರಾವಿಡ ಭಾಷೆಗಳಲ್ಲಿ ಕೆಲವು ಗೌರವ ಸೂಚಕ ಸರ್ವನಾಮಗಳಿರುವುದು ಗೋಚರಿಸುತ್ತವೆ. ಕೆಲವು ದ್ರಾವಿಡ ಭಾಷೆಗಳಲ್ಲಿ ಇವು ಕಂಡು ಬರುವುದಿಲ್ಲ. ಅವುಗಳಲ್ಲಿ ಕೆಲವು ಏಕವಚನ ಮತ್ತು ಬಹುವಚನ ರೂಪಗಳೇ ಆ ಕೆಲಸವನ್ನು ನಿರ್ವಹಿಸುತ್ತವೆ. ಇವು ಸಮೀಪವರ್ತಿ ಮತ್ತು ದೂರವರ್ತಿ ನಿರ್ದೇಶಕ ಸರ್ವನಾಮಗಳು ಎಂಬ ಎರಡು ವರ್ಗಗಳಲ್ಲಿ ದೊರೆಯುತ್ತವೆ. ಪುಲ್ಲಿಂಗ ಮತ್ತು ಸ್ತ್ರೀಲಿಂಗ ಎರಡರಲ್ಲಿಯೂ ಏಕವಚನ ಮತ್ತು ಬಹುವಚನಗಳಿಗೆ ಅನುಗುಣವಾಗಿ ಬೇರೆ ಬೇರೆ ಪ್ರತ್ಯಯಗಳಿರುವುದನ್ನು ಕಾಣಬಹುದು.

	ದೂರದರ್ಶಕ ಸರ್ವನಾಮಗಳು	ಸಮೀಪದರ್ಶಕ ಸರ್ವನಾಮಗಳು
ಕನ್ನಡ :		
ಪುಂ. ಏ.	ಆತಂ | ಆತನು	ಈತಂ | ಈತನು
ಸ್ತ್ರೀ	ಆಕೆ	ಈಕೆ
ಪುಂ.ಬ.	ಆತರು | ಆತಂಗಳ್	ಈತರು | ಈತಂಗಳ್
ಸ್ತ್ರೀ	ಆಕೆಯರು	ಈಕೆಯರು
ತೆಲುಗು :		
ಪುಂ.ಏ	ಆತಡು | ಅತಡು	ಈತಡು | ಇತಡು
ಸ್ತ್ರೀ	ಆಮೆ | ಆಪೆ	ಈಮೆ | ಈಪೆ

ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಕಂಡುಬರುವ ಸಮೀಪವರ್ತಿ ಮತ್ತು ದೂರವರ್ತಿ ಗೌರವ ಸೂಚಕ ಸರ್ವನಾಮಗಳು ಆಯಾ ಲಿಂಗ ಮತ್ತು ವಚನಗಳಿಗೆ ಅನುಗುಣವಾಗಿ ಬೇರೆ ಬೇರೆಯಾಗಿ ಬೆಳೆದು ಬಂದಿರುವುದು ಕಂಡುಬರುತ್ತವೆ. ಇವು ತಮಿಳು,

ಮಲೆಯಾಳಂ, ಕೊಡಗು ಮುಂತಾದ ದಕ್ಷಿಣ ದ್ರಾವಿಡ ಭಾಷೆಗಳಲ್ಲಿಯೂ ಇರುವುದು ಕಂಡುಬರುತ್ತವೆ. ಆದರೆ ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಬೇರೆ ಬೇರೆ ಗೌರವ ಸೂಚಕ ಸರ್ವನಾಮಗಳು ಇವೆಯೋ ಅಥವಾ ಇಲ್ಲವೆ ಎಂಬುದರ ಬಗ್ಗೆ ಯಾವ ಆಧಾರಗಳು ದೊರೆಯುವುದಿಲ್ಲ. ಈ ದಿಕ್ಕಿನಲ್ಲಿ ಆಳವಾದ ಸಂಶೋಧನೆ ನಡೆಯ ಬೇಕಾಗಿವೆ.

3:5 ಪ್ರಶ್ನಾರ್ಥಕ ಸರ್ವನಾಮಗಳು

3:5!1 ಪ್ರಶ್ನಾರ್ಥಕ ಏಕವಚನ

	ಪುಂ	ಸ್ತ್ರೀ	ನಪುಂ
ತಮಿಳು	ಯಾವನ್ । ಏವನ್	ಯಾವಳ್ । ಎವಳ್	ಯಾದು । ಏದು। ಏನ್
ಮಲೆಯಾಳಂ	ಯಾವನ್ । ಎವನ್	ಯಾವಳ್ । ಎವಳ್	ಯಾದು । ಏದು । ಏನ್
ಕನ್ನಡ	ಯಾವನ್ । ಯಾವನು । ಆವನ್ । ಆವನು	ಯಾವಳ್ । ಯಾವಳು । ಆವಳ್ । ಆವಳು	ಯಾವುದು । ಆವುದು । ಏನ್ । ಏನು
ತೆಲುಗು	ಎವಡು । ಏಡು	ಏದಿ । ಎವತೆ । ಏವರಿತೆ	ಏದಿ । ಎದಿ
ತುಳು	ಏರು	ಏರಣಿ	ದಾದ
ಕುರುಖ್	ನೇ	ನೇನೆ	ಏಂದ್ರ
ಮಾಲ್ತೊ	ನೆರೆ	ನೆರಿ(ಥ್)	ನೇ(ಥ್)
ಬ್ರಹೂಈ	ದೇರ್	—	—
ಪೂರ್ವದ್ರಾವಿಡ	*ಯಾವನ್	*ಯಾವಳ್	*ಯಾದು

3:5:2 ಪ್ರಶ್ನಾರ್ಥಕ ಬಹುವಚನ

	ಪು	ಸ್ತ್ರೀ	ನಪುಂ
ತಮಿಳು	ಯಾವರ್ । ಎವರ್	—	ಯಾವೈ । ಏವೈ
	ಯಾರ್ । ಆರ್	—	
ಮಲೆಯಾಳಂ	ಯಾವರ್ । ಯಾರ್	—	ಏನ್ । ಏವ್
	ಎವರ್ । ಆರ್	—	
ಕನ್ನಡ	ಯಾರ್ । ಆರ್	—	ಆವುವು ।

<table>
<tr><td>ಕನ್ನಡ</td><td>ಯಾರು | ಆರು</td><td>—</td><td>ಯಾವುವು</td></tr>
<tr><td>ತೆಲುಗು</td><td>ಎವರು | ಏರು</td><td>—</td><td>ಏವಿ</td></tr>
<tr><td>ಕೊಡಗು</td><td>ಯೇವು</td><td>—</td><td>—</td></tr>
<tr><td>ತುಳು</td><td>ದಾ | ದಾದವು | ದಾಯ | ದಾನೆ</td><td>—</td><td>ವಾ</td></tr>
<tr><td>ಕುರುಖ್</td><td>ಎಂದ್ರ</td><td>—</td><td>ಎಂದ್ರ</td></tr>
<tr><td>ಮಾಲ್ತೊ</td><td>ನೆರೇ (ರ್)</td><td>—</td><td>ಇಕ್(ಹ್)</td></tr>
<tr><td>ಬ್ರಹೂಈ</td><td>ದೇ (ರ್) | ಅರಾ</td><td>—</td><td>—</td></tr>
<tr><td>ಪೂರ್ವ ದ್ರಾವಿಡ</td><td>*ಯಾವರ್ | *ಯಾರ್</td><td>—</td><td>*ಯಾವ್ವೈ</td></tr>
</table>

ಮೇಲೆ ಕೊಟ್ಟಿರುವ ಬೇರೆ ಬೇರೆ ದ್ರಾವಿಡ ಭಾಷೆಗಳ ಪ್ರಶ್ನಾರ್ಥಕ ಏಕವಚನ ಮತ್ತು ಬಹುವಚನ ಸರ್ವನಾಮಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಕೆಲವು ರೂಪಗಳ ಆದಿಯಲ್ಲಿ ಯ ಕಾರ ಕಂಡು ಬಂದರೆ. ಮತ್ತೆ ಕೆಲವು ರೂಪಗಳ ಆದಿಯಲ್ಲಿ ಏ ಕಾರವು ಕಂಡು ಬರುವುದು. ಮತ್ತೆ ಕೆಲವು ಭಾಷೆಗಳ ರೂಪಗಳಲ್ಲಿ ನ ಕಾರವು ಕಂಡು ಬರುವುದು. ಇನ್ನೂ ಕೆಲವು ಭಾಷೆಗಳಲ್ಲಿ ಬೇರೆ ಬೇರೆ ವ್ಯಂಜನ ಧ್ವನಿಗಳಿರುವುದು ಗೋಚರಿಸುತ್ತವೆ. ಇವು ಮೂಲತಃ ಯಾ ಅಥವಾ ವ ಸ್ವರದ ಮೂಲದಿಂದ ಹುಟ್ಟಿ ಬೆಳೆದು ಬಂದ ಪ್ರಶ್ನಾರ್ಥಕ ಸರ್ವನಾಮಗಳು ಎಂದು ಕೆಲವರು ಊಹಿಸಿದ್ದಾರೆ. ಈ ಕಾರಣದಿಂದಲೇ ಕೆಲವರು ಪೂರ್ವ ದ್ರಾವಿಡಕ್ಕೆ ಯಾ ಎಂಬುದನ್ನು ಪುನರ್ರಚಿಸಿ ಕೊಂಡರೆ ಮತ್ತೆ ಕೆಲವರು ವ ಸ್ವರವನ್ನು ಪುನರ್ರಚಿಸಿಕೊಂಡಿದ್ದಾರೆ. ಮತ್ತೆ ಕೆಲವು ಭಾಷೆಗಳಲ್ಲಿ ದೀರ್ಘ ವ ಸ್ವರವು ಹ್ರಸ್ವ ಸ್ವರವಾಗಿ ಪರಿವರ್ತನೆಗೊಂಡು ಬಳಕೆಯಲ್ಲಿರುವುದು ಕೂಡ ಕಂಡು ಬರುವುದು. ಕಾಲ್ಡ್‌ವೆಲ್ ಮಹಾಶಯನು ಎಲ್ಲಾ ಪ್ರಶ್ನಾರ್ಥಕ ಸರ್ವನಾಮಗಳು ಮೂಲತಃ ಯಾ ಎಂಬುದರಿಂದಲೇ ಹುಟ್ಟಿ ಬೆಳೆದು ಬಂದಿರಬಹುದೆಂದು ಊಹಿಸಿ ಕೆಲವು ಭಾಷೆಗಳಲ್ಲಿ ಈ ಯ ಕಾರವು > ವ ಕಾರವಾಗಿ ಪರಿವರ್ತನೆಗೊಂಡಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಪ್ರಶ್ನಾರ್ಥಕ ಸರ್ವನಾಮಗಳು ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಒಂದೇ ಸಮನಾಗಿಲ್ಲ. ಅವುಗಳಲ್ಲಿ ಕೆಲವು ಏ ಮೂಲವನ್ನು ಮತ್ತೆ ಕೆಲವು ಯಾ ಮೂಲವನ್ನು, ಮತ್ತೆ ಕೆಲವು ಹ್ರಸ್ವ ವ ಸ್ವರವನ್ನು ಉಳಿಸಿಕೊಂಡಿವೆ. ಮತ್ತೆ ಕೆಲವು ಸ್ವತಂತ್ರವಾಗಿ ಪರಿವರ್ತನೆಗೊಂಡು ಬೆಳೆದು ಬಂದು ಬೇರೆ ಬೇರೆ ಮೂಲ ರೂಪಗಳನ್ನು ಉಳಿಸಿಕೊಂಡಿವೆ. ಪ್ರಶ್ನಾರ್ಥಕ ಸರ್ವನಾಮ ರೂಪಗಳು ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ದೊರೆಯುತ್ತವೆಯಾದರೂ ಉತ್ತರ ದ್ರಾವಿಡ ಭಾಷೆಗಳ ಪ್ರಶ್ನಾರ್ಥಕ ಸರ್ವನಾಮಗಳ ಆದಿಯಲ್ಲಿ ನ್ ಮತ್ತು ದ್ ಎಂಬ ವ್ಯಂಜನ ಧ್ವನಿಗಳು ಪ್ರಧಾನವಾಗಿವೆ. ಇವು ಅನೇಕ ಭಾಷೆಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಪರಿವರ್ತನೆಗೊಂಡಿವೆ. ಈ ಬೇರೆ ಬೇರೆ ಬೇರೆ ಮೂಲ ರೂಪಗಳನ್ನು ಉಳಿಸಿಕೊಂಡಿರುವ ಬೇರೆ ಬೇರೆ ದ್ರಾವಿಡ ಭಾಷೆಗಳ ಪ್ರಶ್ನಾರ್ಥಕ ಸರ್ವ

ನಾಮಗಳು ಮೂಲತಃ ಹೇಗೆ ಬೆಳೆದು ಬಂದಿವೆ ಎಂಬುದರ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ.

ದ್ರಾವಿಡ ಭಾಷೆಗಳಲ್ಲಿ ಪುರುಷ ವಾಚಕ ಸರ್ವನಾಮ ಪ್ರತ್ಯಯಗಳು ಆಖ್ಯಾತ ಪ್ರತ್ಯಯಗಳು ಎಂಬ ಹೆಸರಿನಿಂದ ಪ್ರತ್ಯೇಕವಾಗಿವೆ. ಇವು ಕ್ರಿಯಾಧಾತು ಮತ್ತು ನಾಮ ಧಾತುಗಳಿಗೆ ಹತ್ತಬಲ್ಲವು. ಈ ಬಗೆಯ ಪುರುಷ ವಾಚಕ ಸರ್ವನಾಮ ಪ್ರತ್ಯಯಗಳು ಕ್ರಿಯಾಪದಗಳ ಅಂತ್ಯದಲ್ಲಿ ಸೇರಿರುತ್ತವೆ. ದಕ್ಷಿಣ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಇವು ಕೆಲವು ಕಡೆ ಸಮಾನವಾಗಿದ್ದರೆ ಮತ್ತೆ ಕಡೆ ಸ್ವತಂತ್ರವಾಗಿ ಪರಿವರ್ತನೆಗೊಂಡು ಬೆಳೆದುಬಂದು ಬಳಕೆಯಲ್ಲಿವೆ.

3:2 ಸಾಧಿತ ಸರ್ವನಾಮಗಳು

	ದೂರವರ್ತಿ ಸರ್ವನಾಮಗಳು	ಸಮೀಪವರ್ತಿ ಸರ್ವನಾಮಗಳು	ಪ್ರಶ್ನಾರ್ಥಕ ಸರ್ವನಾಮಗಳು
ತಮಿಳು :	ಅಂಡ್ರ	ಇಂಡ್ರ	ಎಂಡ್ರ
	ಅಪ್ಪೋದು	ಇಪ್ಪೋದು	ಎಪ್ಪೋದು
	ಅತ್ತನ್ನೈ	ಇತ್ತನ್ನೈ	ಎತ್ತನ್ನೈ
	ಅಂಗೆ	ಇಂಗೆ	ಎಂಗೆ
	ಅವ್ವಾರ್	ಇವ್ವಾರ್	ಎವ್ವಾರ್
	ಅವ್ವಿದಮ್	ಇವ್ವಿದಮ್	ಎವ್ವಿದಮ್
	ಅಂದ್	ಇಂದ್	ಎಂದ್
	ಅವ್ವಳವು	ಇವ್ವಳವು	ಎವ್ವಳವು
	ಅಪ್ಪಡಿ	ಇಪ್ಪಡಿ	ಎಪ್ಪಡಿ
ಕನ್ನಡ :	ಆಗ	ಈಗ	ಯಾವಾಗ
	ಅಂದು	ಇಂದು	ಎಂದು
	ಆಕಡೆ	ಈಕಡೆ	ಯಾವ ಕಡೆ
	ಅಷ್ಟು	ಇಷ್ಟು	ಎಷ್ಟು
	ಅಲ್ಲಿ	ಇಲ್ಲಿ	ಎಲ್ಲಿ
	ಹಾಗೆ	ಹೀಗೆ	ಹೇಗೆ
	ಅಂತಹ	ಇಂತಹ	ಎಂತಹ
ತೆಲುಗು :	ಅಪ್ಪುಡು	ಇಪ್ಪುಡು	ಎಪ್ಪುಡು
	ಆರೋಜು	ಈರೋಜು	ಏರೋಜು
	ಅಂತ	ಇಂತ	ಎಂತ
	ಅಕ್ಕಡ	ಇಕ್ಕಡ	ಎಕ್ಕಡ

	ಅಟ್ಲ	ಇಟ್ಲ	ಎಟ್ಲ
	ಅಲಾ	ಇಲಾ	ಎಲಾ
ಮಲೆಯಾಳಂ :	ಅಪ್ಪಡಿ।	ಇಪ್ಪಡಿ।	ಎಪ್ಪಡಿ।
	ಅಪ್ಪಡಿಯಾನ	ಇಪ್ಪಡಿಯಾನ	ಎಪ್ಪಡಿಯಾನ
	ಅಪ್ಪೋೞ್	ಇಪ್ಪೋೞ್	ಎಪ್ಪೋೞ್
	ಅನ್ನ	ಇನ್ನ	ಎನ್ನ
	ಅತ್ರ	ಇತ್ರ	ಎತ್ರ
	ಅಂಗನೆ	ಇಂಗನೆ	ಎಂಗನೆ
	ಅಂತ	ಇಂತ	ಎಂತ
	ಅವಿಡೆ	ಇವಿಡೆ	ಎವಿಡೆ
ಪೂರ್ವ ದ್ರಾವಿಡ	*ಅ	*ಇ	*ಯ *ಎ

ತಮಿಳು, ಕನ್ನಡ, ತೆಲುಗು ಮತ್ತು ಮಲೆಯಾಳಂ ಭಾಷೆಗಳ ಕೆಲವು ಸಾಧಿತ ಸರ್ವನಾಮಗಳನ್ನು ಇಲ್ಲಿ ಪಟ್ಟಿ ಮಾಡಿ ಕೊಡಲಾಗಿದೆ. ಇದೇ ರೀತಿ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿಯೂ ಇಂತಹ ಸಾಧಿತ ಸರ್ವನಾಮಗಳಿರುವುದು ಗೋಚರಿಸುತ್ತವೆ. ದ್ರಾವಿಡ ಭಾಷೆಗಳಲ್ಲಿ ಮುಖ್ಯವಾಗಿ ದೂರದರ್ಶಕ ಸಮೀಪದರ್ಶಕ ಮತ್ತು ಪ್ರಶ್ನಾರ್ಥಕ ಎಂಬ ಮೂರು ಬಗೆಯ ಸಾಧಿತ ಸರ್ವನಾಮಗಳಿವೆ. ಇವು ಪ್ರಥಮ ಪುರುಷ ಸರ್ವನಾಮಗಳಿಗಿಂತ ಬೇರೆ. ಇವು ಕೂಡ ಒಂದು ರೀತಿಯಲ್ಲಿ ನಿರ್ದೇಶಕ ಸರ್ವನಾಮಗಳಾಗಿ ಗೋಚರಿಸುತ್ತವೆಯಾದರೂ ಇವು ಅ, ಇ ಮತ್ತು ಎ ಎಂಬ ಮೂಲ ಸ್ವರಗಳಿಗೆ ಬೇರೆ ಬೇರೆ ಕ್ರಿಯಾವಿಶೇಷಣ ಮತ್ತು ವಿಶೇಷಣ ಸೂಚಕ ಪ್ರತ್ಯಯಗಳು ಸೇರಿಕೊಂಡು ರೂಪುಗೊಂಡಿರುವ ಸಾಧಿತ ಸರ್ವನಾಮಗಳಾಗಿವೆ. ಇವುಗಳ ಮೂಲದ ಸ್ವರಗಳು ಮಾತ್ರ ಆ ನಿರ್ದೇಶಕ ಮತ್ತು ಪ್ರಶ್ನಾರ್ಥಕ ಸರ್ವನಾಮ ಮೂಲರೂಪಗಳಾಗಿಯೇ ಗೋಚರಿಸುತ್ತವೆ. ಇವುಗಳಲ್ಲಿ ಯಾವ ಬಗೆಯ ಲಿಂಗ ಮತ್ತು ವಚನಭೇದವು ಕಂಡು ಬರುವುದಿಲ್ಲ. ಪ್ರಥಮ ಪುರುಷ ಮತ್ತು ಪ್ರಶ್ನಾರ್ಥಕ ಸರ್ವನಾಮಗಳಲ್ಲಿ ಲಿಂಗ ಮತ್ತು ವಚನ ಸೂಚಕ ಪ್ರತ್ಯಯಗಳು ಪ್ರತ್ಯೇಕವಾಗಿ ಸೇರಿಕೊಂಡಿರುತ್ತವೆ. ಸಾಧಿತ ಸರ್ವನಾಮಗಳಲ್ಲಿ ಕ್ರಿಯಾ ವಿಶೇಷ ಮತ್ತು ವಿಶೇಷಣ ಸೂಚಕ ಪ್ರತ್ಯಯಗಳು ಮಾತ್ರ ಸೇರಿಕೊಂಡಿರುತ್ತವೆ. ದ್ರಾವಿಡ ಭಾಷೆಗಳಲ್ಲಿ ಯಾವ ಬಗೆಯ ಲಿಂಗ ಮತ್ತು ವಚನಭೇದವು ಗೋಚರಿಸದ ಕಾರಣ ಇವನ್ನು ಸಾಧಿತ ಸರ್ವನಾಮಗಳು ಎಂದು ಹೆಸರಿಸಿಕೊಳ್ಳಬಹುದಾಗಿದೆ. ಇದೇ ರೀತಿ ಇನ್ನೂ ಬೇರೆ ಬೇರೆ ಬಗೆಯ ಸಾಧಿತ ಸರ್ವನಾಮಗಳು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಇರಬಹುದು. ಅವುಗಳನ್ನು ಇಲ್ಲಿ ಗಮನಿಸಲಾಗಿಲ್ಲ.

ಆಧಾರ ಗ್ರಂಥಗಳು

1 Comparative Grammar of the Tamil Language, P. S. Subramanya, 1947

2 The Grammatical Structure of Dravidian Languages, Jules Bloch. 1954

3 Dravidian Comparative Grammar, R. Caldwell, 1956

4 Collected Papers in Dravidian Linguistics, T. Burrow, 1968

5 History of Kannada Language, R. Narasimha charya, 1969

6 Dravidian Languages, M. S. Andronov, 1970

7 Dravidian Nouns, S. V. Shanmugam

8 Comparative Dravidian Morphology — A Sketch. Kamil Zwelebil. part I, 1977

9 Dravidic Studies, K. V. Subbaiya, 1974

10 Reconstruction of proto-Dravidian pronouns, C. R. Shankaran, BDCRI, vol. No. 1, 1939

11 The Inclusive and exclusive First person plural in Kannada, G. S. Gai, BDCRI, Vol, No. 2, 1940

12 Dravidian personal pronouns, Studies in Linguistics, Bh. Krishna Murthy, 1968.

13 ದ್ರಾವಿಡ ಭಾಷಾ ವಿಜ್ಞಾನ, ಹಂಪನಾಗರಾಜಯ್ಯ, 1966

14 ಕನ್ನಡ ಭಾಷೆಯ ಚರಿತ್ರೆ, ಪ್ರ. ಗೋ. ಕುಲಕರ್ಣಿ, 1967

15 ದ್ರಾವಿಡ ಭಾಷಾ ಪ್ರ್ಯಾಸಂಗ, ಸಂಗಮೇಶ ಸವದತ್ತಿಮಠ, 1976

16 ದ್ರಾವಿಡ ಭಾಷಾವಿಜ್ಞಾನ ಪರಿಚಯ, ಸಂಗಮೇಶ ಸವದತ್ತಿಮಠ, 1985.

ಪ್ರೊ|| ಭದ್ರಿರಾಜು ಕೃಷ್ಣಮೂರ್ತಿ

ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಭಾಷಾ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಬಿ. ಕೃಷ್ಣಮೂರ್ತಿಯವರು ಭಾರತೀಯ ಭಾಷಾ ವಿಜ್ಞಾನಿಗಳಲ್ಲಿ ಖ್ಯಾತನಾಮರು. "ಭಾಷೆ ಒಂದು ಅನಿರ್ಬಂಧಿತ ವಾತಾವರಣದಲ್ಲಿ ಸ್ವತಂತ್ರವಾಗಿ ಬೆಳೆಯುತ್ತದಲ್ಲದೆ ಪರಿಣತರ ಸಮಿತಿಗಳು ಸೃಷ್ಟಿಸಿ ಬಲವಂತವಾಗಿ ವಿಧಿಸಿದ ಪದಗುಚ್ಛಗಳ ಸಹಾಯದಿಂದಲ್ಲ" ಎಂಬುದು ಅವರ ಪ್ರಧಾನವಾದ ನಂಬಿಕೆ. ಭಾಷೆಯನ್ನು ಬಳಸುವ ಸಾಮಾನ್ಯ ಜನರು ತಾವಾಗಿ ರೂಪಿಸಿದ ಅಥವ ಸ್ವೀಕರಿಸಿದ ಹೊಸ ಪದಗಳಿಂದ ಜೀವಂತ ಭಾಷೆಗಳು ಸಮೃದ್ಧಗೊಳ್ಳುತ್ತವೆ. ಪರಿಸರಕ್ಕೆ, ಸಂದರ್ಭಕ್ಕೆ ಅನುಗುಣವಾಗಿ ಪದಗಳನ್ನು ಹುಟ್ಟು ಹಾಕುವುದು, ಸ್ವೀಕಾರಕ್ಕೂ ಪೂರ್ವವೇ ಹೊಸ ಪದಗಳ ಬಳಸುವಿಕೆ, ಹೊಸಪದಗಳ ಅರ್ಥವ್ಯಾಪ್ತಿಯ ವಿಶದೀಕರಣ ಇವು ಭಾಷಾ ಬೆಳವಣಿಗೆಯ ಕೆಲವು ಮೂಲತತ್ವಗಳೆಂದು ಅವರು ನಂಬಿದ್ದಾರೆ. ಭಾಷಾ ಪರಿಸರದ ತಿಳಿವಳಿಕೆ ಇಲ್ಲದ ಪರಿಣತರ ಸಮಿತಿಗಳು ತಮ್ಮ ಕಸಸಿನ ಮನೆಗಳಲ್ಲಿ ಕುಳಿತು ರಚಿಸುವ ಭಾಷಾ ಕೋಶಗಳು ಭಾಷೆಯ ಬೆಳವಣಿಗೆಗೆ ಸಹಾಯಕವಾಗಲಾರವು ; ಆಯಾ ಜ್ಞಾನ ವಿಭಾಗಗಳಲ್ಲಿ ಕಾರ್ಯ ಪ್ರವೃತ್ತರಾಗಿರುವ ಅಭ್ಯಾಸಿಗಳ ಸಹಕಾರದಿಂದ ರೂಪಿಸಿದ ಪದಗುಚ್ಛಗಳು ಭಾಷೆಯ ಸಹಜ ಬೆಳವಣಿಗೆಗೆ ಸಾಧಕವೆಂಬುದು ಅವರ ನಂಬಿಕೆ.

ವಾರ್ತಾ ಮಾಧ್ಯಮದಲ್ಲಿ ಭಾರತೀಯ ಭಾಷೆಗಳ ಆಧುನೀಕರಣದ ಬಗ್ಗೆ ಒಂದು ಗ್ರಂಥವನ್ನು ಸಂಪಾದಿಸಿರುವ ಕೃಷ್ಣಮೂರ್ತಿ ಸಮಾಚಾರ ಪತ್ರಿಕೆಗಳು ಪದಗಳ ಸೃಷ್ಟಿ ಮತ್ತು ಅವುಗಳ ಆಯ್ಕೆ ಮತ್ತು ನಿರಾಕರಣೆಯ ಮೂಲಕ ಒಂದು ಸ್ವೀಕಾರಾರ್ಹವಾದ ಮಟ್ಟವನ್ನು ನಿರ್ಮಿಸಿವೆಯೆಂದು ತಿಳಿಸುತ್ತಾರೆ ; ಉದಾ : "ಎಮರ್ಜೆನ್ಸಿ" ಎಂಬ ಆಂಗ್ಲ ಪದಕ್ಕೆ 'ಅತ್ಯವಸರ ಪರಿಸ್ಥಿತಿ' ಮತ್ತು 'ಆತ್ಯಯಿಕ ಪರಿಸ್ಥಿತಿ' ಎಂಬ ಪದಗುಚ್ಛಗಳನ್ನು ಸೃಷ್ಟಿಸಿದರೂ, ಕಾಲಕ್ರಮದಲ್ಲಿ, 'ಅತ್ಯವಸರ ಪರಿಸ್ಥಿತಿ' ಎಂಬ ಪದ ಸರ್ವಸ್ವೀಕೃತವಾಯಿತು. ಪ್ರೊ || ಕೃಷ್ಣಮೂರ್ತಿಯವರು ನಿಘಂಟು ರಚನೆ, ಭಾಷಾ ಒಳಭೇದ ಶಾಸ್ತ್ರಗಳಲ್ಲಿ ಅಧ್ಯಯನದಲ್ಲಿ ಆಸಕ್ತಿವಹಿಸಿ, ವಿಶೇಷ ಸಂಶೋಧನೆ ನಡೆಸಿ ಆಂಧ್ರಪ್ರದೇಶ ರಾಜ್ಯ ಸಾಹಿತ್ಯ ಅಕಾದೆಮಿಗಾಗಿ ಭಾಷಾ ಪ್ರಭೇದ ನಿಘಂಟಿನ ಎರಡು ಸಂಪುಟಗಳನ್ನು ಸಂಪಾದಿಸಿದ್ದಾರೆ ; ಅವರು ಶಿಷ್ಯರು ಮುಂದಿನ ಸಂಪುಟಗಳ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಅಧ್ಯಯನದಿಂದ ಆಂಧ್ರದಲ್ಲಿ ನಾಲ್ಕು ಪ್ರತ್ಯೇಕ ಭಾಷಾ ಪ್ರಭೇದಗಳಿವೆಯೆಂದು ಅವರು ಶ್ರುತಪಡಿಸಿದ್ದಾರೆ.

ಪ್ರೊ|| ಕೃಷ್ಣಮೂರ್ತಿಯವರ ಪ್ರಧಾನ ಅಧ್ಯಯನ ಕ್ಷೇತ್ರ ವಿವರಣಾತ್ಮಕ ಮತ್ತು ತೌಲನಿಕ ದ್ರಾವಿಡ ಭಾಷಾ ವಿಜ್ಞಾನದ ಅವರ ಪ್ರಕಾರ, ತೆಲುಗು ತನ್ನ ಉತ್ತರದ ನೆರೆಯಾದ ಗೋಂಡಿಯೊಂದಿಗೆ ದಕ್ಷಿಣದ ನೆರೆಭಾಷೆಗಳಾದ ತಮಿಳು, ಕನ್ನಡ, ಮಲೆಯಾಳ ಮತ್ತು ತುಳುಭಾಷೆಗಳಿಗಿಂತ ಹೆಚ್ಚಿನ ಸಾಮ್ಯವನ್ನು ಹೊಂದಿದೆ ; ಈ ಭಾಷೆಗಳೆಲ್ಲ ಒಂದೇ ಮೂಲ ದ್ರಾವಿಡ ಭಾಷಾ ಸಂತತಿಗೆ ಸೇರಿದವೆಂಬುದರಲ್ಲಿ ಸಂಶಯವಿಲ್ಲ.

ರಾಧಾ ಎಂ. ಪಟೇಲ್

ವಿಜಯನಗರ ನಾಣ್ಯಗಳಲ್ಲಿ ಆಯುಧಗಳ ಚಿತ್ರಗಳು

ಹದಿನಾಲ್ಕನೆಯ ಶತಮಾನದ ಪ್ರಥಮಾರ್ಧದಲ್ಲಿ ದಕ್ಷಿಣ ಭಾರತವು ದಕ್ಷಿಣದಲ್ಲಿ ಹಿಂದೂಗಳ ಕೊನೆಯ ಬೃಹತ್ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದುದನ್ನು ವೀಕ್ಷಿಸಿತು. ವಿಜಯನಗರ ಸಾಮ್ರಾಜ್ಯವೇ ಆ ಬೃಹತ್ ಸಾಮ್ರಾಜ್ಯ. ಹಲವಾರು ಅಂಶಗಳಲ್ಲಿ ಈ ಸಾಮ್ರಾಜ್ಯ ದಕ್ಷಿಣದ ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ಯುಚ್ಚ ಮಟ್ಟವನ್ನು ಮುಟ್ಟಿತ್ತು.[1] ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಭೌಗೋಳಿಕ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ದಕ್ಷಿಣ ಭಾರತ ಇತಿಹಾಸದಲ್ಲಿ ಪರಾಕಾಷ್ಠೆಯನ್ನು ತಲುಪಿತು.

ವಿಜಯನಗರ ಸಾಮ್ರಾಜ್ಯದಲ್ಲಿ ಸುವ್ಯವಸ್ಥಿತ ನಾಣ್ಯ ವ್ಯವಸ್ಥೆಯೂ ಇದ್ದಿತು. ಅವರು ಚಿಹ್ನೆಗಳು ಹಾಗೂ ಆಲೇಖ್ಯಗಳಿಂದ ಕೂಡಿದ ಅನೇಕ ಹೊಸ ಬಗೆಯ ನಾಣ್ಯಗಳನ್ನು ಚಲಾವಣೆಯಲ್ಲಿ ತಂದರು. ವಿಜಯನಗರ ನಾಣ್ಯಗಳ ಮೇಲೆ ಚಿತ್ರಿಸಲಾಗಿರುವ ನಾಣ್ಯಗಳ ಅಧ್ಯಯನವು ಆ ಕಾಲದಲ್ಲಿ ಬಳಕೆಯಲ್ಲಿದ್ದ ಸಮರಾಯುಧಗಳ ವಿವಿಧ ರೀತಿಗಳ ಮೇಲೆ ಬೆಳಕು ಚೆಲ್ಲುವುದರಿಂದ ಅವು ಹೆಚ್ಚು ಉಪಯುಕ್ತವೂ, ಆಸಕ್ತಿದಾಯಕವೂ ಆಗಿದೆ. ಸಾಮಾನ್ಯವಾಗಿ ಆಯುಧಗಳನ್ನು ನಾಣ್ಯಗಳ ಮೇಲ್ಮುಖ ಮತ್ತು ಹಿಂಭಾಗಗಳೆರಡರಲ್ಲಿಯೂ ಚಿತ್ರಿಸಲಾಗಿದೆ. ಬಿಲ್ಲು, ಈಟಿ, ಕತ್ತಿ, ಕಠಾರಿ, ಗಂಡುಗೊಡಲಿ, ಗದೆ, ತ್ರಿಶೂಲ, ಚಕ್ರ, ಇವು ಆ ಅವಧಿಯ ನಾಣ್ಯಗಳಲ್ಲಿ ಚಿತ್ರಿಸಲಾಗಿರುವ ಆಯುಧಗಳಾಗಿವೆ.

ಬಿಲ್ಲು :

ಬಿಲ್ಲಿನ ರೇಖನ ವಿರಳ ; ತಿರುಮಲರಾಯನ ಚಿನ್ನದ ನಾಣ್ಯದ ಮೇಲೆ ಮಾತ್ರ ಇದು ಕಂಡುಬಂದಿದೆ.[2] ಸೀತೆಯೊಡಗೂಡಿ ರಾಮ ಕುಳಿತಿರುವ ಚಿತ್ರ ಮೇಲ್ಮುಖದಲ್ಲಿದೆ. ಲಕ್ಷ್ಮಣ ತನ್ನ ಬಲಭುಜದಲ್ಲಿ ಬಲವಾದ ಬಿಲ್ಲನ್ನು ಹಿಡಿದು ಹಿಂಭಾಗದಲ್ಲಿ ನಿಂತಿರುವನು. ವೇದಗಳ ಕಾಲದಿಂದ ಬಿಲ್ಲಿನ ಬಗ್ಗೆ ಪ್ರಾಸಂಗಿಕವಾಗಿ ಪ್ರಸ್ತಾಪಿಸಲಾಗಿದೆ. ಧನುರ್ವಿದ್ಯೆಗೆ ಭಾರತೀಯ ಸಮರ ವಿದ್ಯೆಯಲ್ಲಿ ಪ್ರಮುಖಸ್ಥಾನ ನೀಡಲಾಗಿದೆ.

ಧನುರ್ವಿದ್ಯೆಯಲ್ಲಿನ ಪ್ರಾವೀಣ್ಯಕ್ಕೆ ಎಷ್ಟರಮಟ್ಟಿನ ಪ್ರಾಮುಖ್ಯ ನೀಡಲಾಗಿತ್ತೆಂದರೆ ಧನುರ್ವೇದ[3] ಬಿಲ್ವಿದ್ಯೆಯ ತತ್ತ್ವಗಳು, ಬಿಲ್ಲುಗಳ ಸಂಗ್ರಹಣ, ಬಿಲ್ಲು ಬಿಡುವುದು ಹಾಗೂ ಅದರಲ್ಲಿನ ಪ್ರಾವೀಣ್ಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಿದೆ. ಪದಾತಿಪಡೆ ಬಿಲ್ಲು - ಬಾಣಗಳಿಂದ ಸುಸಜ್ಜಿತವಾಗಿದ್ದು, ಅದು ಸೇನೆಯ ಬೆನ್ನೆಲುಬಾಗಿತ್ತು.

ಈಟಿ :

ಈ ಆಯುಧವನ್ನು ಬಿಂಬಿಸಿರುವುದು ಅಪೂರ್ವವೇ. ಇಮ್ಮಡಿ ದೇವರಾಯನ 4 ಗಜ ಮತ್ತು 'ಗಜಬೇಂಟೆಕಾರ' ನಾಣ್ಯದ ರೀತಿಯದರಲ್ಲಿ ನಾಣ್ಯದ ಹಿಮ್ಮುಖದಲ್ಲಿ ದೊರೆಯುವ ಚಿಕ್ಕ ಶಿರಸ್ತ್ರಾಣ ಹಾಗೂ ತುಂಡುದಟ್ಟಿ ಧರಿಸಿ, ಕೈಯಲ್ಲಿ ಈಟಿ ಹಿಡಿದು ಆನೆಯನ್ನು ಅಂಕೆಗೊಳಪಡಿಸುತ್ತಿರುವ ಚಿತ್ರವಿದೆ. ಮೃಗಯಾವಿಹಾರಿ ದೊರೆ ಈ ಘಟನೆ ಯನ್ನು ಎಷ್ಟು ಪ್ರಮುಖವೆಂದು ಪರಿಗಣಿಸಿದ್ದನೆಂದರೆ ತಾನು 'ಗಜ ಬೇಂಟೇಕಾರ' ಎಂಬ ಬಿರುದನ್ನು ತುಂಬ ಹೆಮ್ಮೆಯಿಂದ ಧರಿಸಿದ್ದನು. ಸಾಮಾನ್ಯವಾಗಿ ಈಟಿಯು ಉದ್ದವಾಗಿರುವ ಮರ ಅಥವಾ ಬೊಂಬು ಆಗಿದ್ದು, ತುದಿಯಲ್ಲಿ ಚೂಪಾಗಿರುವ ಕಬ್ಬಿಣದ ಅಲಗು ಇರುತ್ತದೆ. ಇದು ಚುಚ್ಚುವ ಆಯುಧವಾಗಿದ್ದು ಪದಾತಿ ಪಡೆಯ ವರು, ಅಶ್ವದಳದವರು ಬಳಸುತ್ತಿದ್ದರು.

ಕತ್ತಿ :

ಇದು ಭಾರತೀಯ ಶಸ್ತ್ರಾಸ್ತ್ರಗಳ ಪ್ರಮುಖ ಆಯುಧವಾಗಿದೆ. ಇಮ್ಮಡಿ ದೇವ ರಾಯನ 5 ತಾಮ್ರ ನಾಣ್ಯಗಳ ಮುಮ್ಮುಖದಲ್ಲಿ ತನ್ನ ಸೊಂಡಿಲಲ್ಲಿ ಪಟ್ಟದ ಕತ್ತಿಯನ್ನು ಹಿಡಿದಿರುವ ಪಳಗಿಸಿದ ಆನೆಯ ಚಿತ್ರವಿದೆ. ಇದೇ ನಾಣ್ಯದ ಹಿಮ್ಮುಖದಲ್ಲಿ ಸಹ ಕತ್ತಿಯ ಚಿತ್ರವಿದೆ. ಕೃಷ್ಣದೇವರಾಯನ 6 ತಾಮ್ರದ ನಾಣ್ಯದ (M ಬಗೆಯದು) ಮುಮ್ಮುಖದಲ್ಲಿ ಸಾಂಪ್ರದಾಯಿಕವಾದ ಕತ್ತಿ, ಅದರ ಎರಡು ಬದಿಗಳಲ್ಲಿ ಶಂಖ, ಚಕ್ರಾಯುಧಗಳಿವೆ. ಸಾಮಾನ್ಯವಾಗಿ ಲೋಹದ ಅಲಗಿರುವ ಇದರ ಉದ್ದ ವ್ಯತ್ಯಾಸ ಗೊಳ್ಳುತ್ತವೆ ; ಹಿಡಿದುಕೊಳ್ಳಲು ಸಣ್ಣ ಹಿಡಿಯಿರುತ್ತದೆ. ಸಾಧಾರಣವಾಗಿ ಕತ್ತಿ ಯನ್ನು ಎಡಭಾಗದಲ್ಲಿ ಧರಿಸುತ್ತಿದ್ದರು. ಶತಮಾನಗಳಿಂದಲೂ ಕತ್ತಿಯು ಯುದ್ಧಾಸ್ತ್ರ ಗಳಲ್ಲಿ ಮುಖ್ಯವಾಗಿದೆ. ಮಹಾನ್ ಸಾಮ್ರಾಜ್ಯಗಳ ನಿರ್ಮಾಣವಾದುದು ಕತ್ತಿಯ ಬಲದಿಂದಲೇ. ಕತ್ತಿಯು ದಾಳಿಯ ಪ್ರಮುಖ ಆಯುಧ. ಭಾರತೀಯರ ರಾಜರ ಲಾಂಛನ ಗಳಲ್ಲಿ ಅವರ ಆನೆ, ಕುದುರೆ, ಕತ್ತಿಗಳು, ಛತ್ರಿಚಾಮರಗಳು ಸೇರಿವೆ.

ಕಠಾರಿ :

ವಿಜಯನಗರದ ಹಲವಾರು ನಾಣ್ಯಗಳಲ್ಲಿ ಕಠಾರಿಯ ಚಿತ್ರವಿದೆ. ಇಮ್ಮಡಿ ಹರಿ ಹರನ ಒಂದು ತಾಮ್ರನಾಣ್ಯದ 7 (F ಬಗೆಯದರ) ಮುಮ್ಮುಖದಲ್ಲಿ ಅರ್ಧಚಂದ್ರ

ಹಾಗೂ ವೃಷಭಗಳ ಜೊತೆಗೆ ಕಠಾರಿಯೂ ಇದೆ. ಎರಡನೆಯ ಬುಕ್ಕ, ಇಮ್ಮಡಿ ದೇವ ರಾಯ ತಿರುಮಲರಾಯ ಹಾಗೂ ಶ್ರೀರಂಗರಾಯ–ಇವರು ಇದೇ ರೀತಿಯ ನಾಣ್ಯ ಗಳನ್ನು ಹೊರಡಿಸಿದ್ದರು. ಕಠಾರಿಯನ್ನು ಆಪತ್ತಿನ ಪರಿಸ್ಥಿತಿಗಳಲ್ಲಿ ಆತ್ಮ ರಕ್ಷಣೆಗಾಗಿ ತಿವಿಯಲು, ಇರಿಯಲು ಉಪಯೋಗಿಸುತ್ತಿದ್ದರು.

ಗಂಡುಗೊಡಲಿ :

ಗಂಡುಗೊಡಲಿ ಮೇಲ್ತುದಿಯಲ್ಲಿ ಅರ್ಧಚಂದ್ರಾಕೃತಿಯ ಅಲಗು ಸೇರಿಸಿರುವ, ಚಿಕ್ಕಮರದ ಹಿಡಿಕೆಯನ್ನು ಹೊಂದಿರುವುದು. ಇಮ್ಮಡಿ ಹರಿಹರನ 8 ಚಿನ್ನದ ನಾಣ್ಯದ ಮೇಲ್ಮುಖದಲ್ಲಿ, ಶಿವ ತನ್ನ ಹಿಂಬದಿಯ ಕೈಯಲ್ಲಿ ಗಂಡುಗೊಡಲಿ ಹಿಡಿದಿರುವ ಚಿತ್ರ ವಿದೆ. ಮೊದಲನೆಯ ದೇವರಾಯ ಮತ್ತು ಎರಡನೆಯ ದೇವರಾಯ ಇದೇ ಬಗೆಯ ನಾಣ್ಯಗಳನ್ನು ಹೊರಡಿಸಿದ್ದರು.9

ಗದೆ :

ಇದು ಅಷ್ಟೊಂದು ಜನಪ್ರಿಯವಾಗಿರದಿದ್ದರೂ, ಮೊದಲನೆ ದೇವರಾಯನ 10 ಚಿನ್ನದ ನಾಣ್ಯದ ಮೇಲೆ ಇದರ ಚಿತ್ರವಿದೆ. ಶಿವ ತನ್ನ ವಾಮಹಸ್ತದಲ್ಲಿ ಖಟ್ವಾಂಗ ಹಿಡಿದಿದ್ದಾನೆ. ಗದೆಯು ಸಾಮಾನ್ಯವಾಗಿ ಮರದ ಹಿಡಿಕೆಯಿಂದ ಕೂಡಿದ್ದು, ಒಂದು ತುದಿಯಲ್ಲಿ ಗುಂಡಾಗಿರುವ ಆಯುಧವಾಗಿದೆ. ಶತ್ರುವಿನ ತಲೆ ಒಡೆಯಲು ಇದನ್ನು ಬಳಸು ತ್ತಿದ್ದರು.

ತ್ರಿಶೂಲ :

ತ್ರಿಶೂಲಧಾರಿಯಾದ ಶಿವನ ಸಂಕೇತವು ವಿಜಯನಗರ ನಾಣ್ಯಗಳಲ್ಲಿ ಉತ್ತಮ ವಾಗಿ ಚಿತ್ರಿತವಾಗಿವೆ ಇಮ್ಮಡಿ ಹರಿಹರ ಮತ್ತು ಕೃಷ್ಣದೇವರಾಯ11 ಅರ್ಧವರಹ ನಾಣ್ಯಗಳನ್ನು ಹೊರಡಿಸಿದ್ದು, ಇವುಗಳ ಮೇಲ್ಮುಖದಲ್ಲಿ ಶಿವನನ್ನು ತ್ರಿಶೂಲಧಾರಿಯಾಗಿ ಚಿತ್ರಿಸಲಾಗಿದೆ. ಜರೂರಿನ, ಆಪತ್ತಿನ ಪರಿಸ್ಥಿತಿಗಳಲ್ಲಿ ಈ ಆಯುಧವನ್ನು ಬಳಸ ಲಾಗುತ್ತಿತ್ತು.

ಚಕ್ರ :

ಇದು ಪೌರಾಣಿಕ ಆಯುಧವಾಗಿದ್ದು, ವಿಶಿಷ್ಟಾಂಶಗಳ ಪೈಕಿ ಇದೂ ಒಂದಾ ಗಿದೆ. ಇಮ್ಮಡಿ ಹರಿಹರ 12, ಮೊದಲನೆಯ ದೇವರಾಯ, ಇಮ್ಮಡಿ ವಿಜಯರಾಯ, ಕೃಷ್ಣದೇವರಾಯ, ಸದಾಶಿವರಾಯ ಮತ್ತು ಇಮ್ಮಡಿ ಶ್ರೀರಂಗರಾಯರ ನಾಣ್ಯಗಳಲ್ಲಿ ಈ ಆಯುಧದ ಪ್ರತಿರೂಪ ಕಂಡುಬಂದಿದೆ.

ವಿಜಯನಗರ ಸಾಮ್ರಾಜ್ಯದ ನಾಣ್ಯಗಳ ಮೇಲೆ ಚಿತ್ರಿತವಾಗಿರುವ ಆಯುಧಗಳ ಈ ಸಂಕ್ಷಿಪ್ತ ಅಧ್ಯಯನ ಯುದ್ಧ ಕಾರ್ಯಾಚರಣೆಯ ಭಾರತೀಯ ಪದ್ಧತಿಯ

ವಿಶಿಷ್ಟಾಂಶಗಳ ನಿರಂತರತೆಯ ಬಗ್ಗೆ ಉತ್ತಮ ಬೆಳಕನ್ನು ಚೆಲ್ಲುತ್ತವೆ ಹಾಗೂ ಆ ಯುಗದ ಪ್ರಾತಿನಿಧಿಕ ವಿಗ್ರಹಾದಿಗಳಿಂದ ತಿಳಿದಿರುವ ಆಯುಧಗಳ ವಿವಿಧ ಬಗೆಗಳನ್ನು ಸಮರ್ಥಿಸಿ ದೃಢೀಕರಿಸುತ್ತವೆ. ಮೂಲಭೂತವಾಗಿ ಈ ಯುದ್ಧ ಪ್ರವೃತ್ತಿಯು ಹಿಂದೂ ಸಾಮ್ರಾಜ್ಯ ಹೋರಾಟ ಹಾಗೂ ಆಯುಧಗಳ ಬಳಕೆಗೆ ನೀಡಿದ್ದ ಪ್ರಾಮುಖ್ಯವು ನಾಣ್ಯಗಳ ಮೇಲೂ ಅವುಗಳ ರೇಖನದಿಂದ ಸಮರ್ಥಿತವಾಗಿದೆ.

ಟಿಪ್ಪಣಿಗಳು

1 *Vijayanagar Sexcentenary Volume*, ಪು. 29
2 ಎಂ.ಎ.ಆರ್., 1931, ಪು. 71
3 ಜಿ. ಎನ್. ಪಂತ್, *Studies in Indian Weapons and Warfare*, ಪು. 96
4 ಎಂ.ಎ.ಆರ್., 1932, ಪು. 95
5 ಎ. ವಿ. ನರಸಿಂಹಮೂರ್ತಿ, *Coins of Karnataka*, ಪು. 158
6 ಎಂ.ಎ.ಆರ್., 1930, ಪು. 95
7 ಅದೇ, 1932, ಪು. 81, 86, 1931, ಪು. 72, 73
8 ಅದೇ, ಪು, 81
9 ಅದೇ.
10 ಅದೇ. ಪುಟ. 85
11 ಅದೇ. ಪುಟ. 81 ; 1930, ಪು. 69
12 ಅದೇ. 1930, ಪುಟ. 68, 70 ; 1931, ಪುಟ. 75 ; 1932, ಪುಟ. 97

ಪಿ. ಎನ್. ಹರೀಶ್

ದನಗಳ ಸುಳಿಗಳು : ಒಂದು ಅಧ್ಯಯನ

ಭಾರತೀಯ ಸಂಸ್ಕೃತಿಯಲ್ಲಿ ಗೋವಿಗೆ ಗೌರವ ಸ್ಥಾನವಿದೆ. ಗೋವಿನಿಂದ ಮಾನವನಿಗೆ ಆಗಿರುವಷ್ಟು ಸಹಾಯ ಬೇರಾವ ಸಾಕುಪ್ರಾಣಿಯಿಂದಲೂ ಆಗಿಲ್ಲವೆಂದು ಹೇಳಬಹುದು. ಗೋವು ಕಾಮಧೇನು. ಅದರ ದೇಹದಲ್ಲಿ 33 ಕೋಟಿ ದೇವತೆಗಳು ನೆಲೆಸಿದ್ದಾರೆ ಎಂಬ ನಂಬಿಕೆಯಿದೆ. ಹಸು ನೀಡುವ ಹಾಲು ಅಮೃತ ಸಮಾನ. ಸಾಮಾನ್ಯವಾಗಿ ಇತರ ಪ್ರಾಣಿಗಳ ಮಲಮೂತ್ರವನ್ನು ಅಪವಿತ್ರವೆಂದು ಭಾವಿಸುವ ಹಿಂದೂಗಳು ದನದ ಗಂಜಲ ಮತ್ತು ಸಗಣಿಯನ್ನು ಪವಿತ್ರವೆಂದು ಭಾವಿಸುವುದಲ್ಲದೆ ಜನನ–ಮರಣಗಳ ನಡುವಣ ವೈಲಿಗೆ ಸೂತಕಗಳನ್ನು ಕಳೆದುಕೊಳ್ಳಲು ಇವು ಇದ್ದೇ ತೀರಬೇಕು.

ಮಾನವ ಬೇಟೆಗಾರಿಕೆ ಹಂತದಿಂದ ಪಶುಪಾಲನೆಯಲ್ಲಿ ತೊಡಗಿದ ; ಹಾಗೂ ಕೃಷಿಹಂತಕ್ಕೆ ಕಾಲಿರಿಸಿದ ಅನಂತರ ಗೋವು ಒಕ್ಕಲು ವೃತ್ತಿಗೆ ಮೂಲ ಸಾಧನವಾಯಿತು. ಹಾಗೆಯೇ ಗೋವು ಅವನ ಆರ್ಥಿಕ ಮತ್ತು ವಾಣಿಜ್ಯ ಸಂಪತ್ತೂ ಆಯಿತು. ಹೀಗಾಗಿ ಗೋವು ಕೃಷಿಕ ಹುಟ್ಟುವಳಿಯಲ್ಲಿ ಪ್ರಧಾನವಾದ ಸ್ಥಾನವನ್ನು ಪಡೆಯಿತು. ಬೇಸಾಯ ಶ್ರಮದ ಕೆಲಸವಾದ್ದರಿಂದ ಉತ್ತಮ ತಳಿಯ ಎತ್ತು (ಹೋರಿ)ಗಳಿಗೆ ಪ್ರತಿಯೊಬ್ಬ ರೈತ ಹೆಚ್ಚು ಆಸಕ್ತಿ ವಹಿಸುತ್ತಾನೆ. ಎತ್ತು ಬೇಸಾಯದ ಬೆನ್ನೆಲುಬು. ಅವು ಗಟ್ಟಿ ಮುಟ್ಟಾಗಿದ್ದರೆ ಮಾತ್ರ ಪೂರ್ತ ಅನ್ನ. ಆದುದರಿಂದಲೇ ಜನಪದದಲ್ಲಿ 'ಎಳೆಯಲಾರದ ಎತ್ತು ಮೆಳೆಮೇಲೆ ಬಿತ್ತು' ಎಂಬ ಗಾದೆ ಹುಟ್ಟಿಕೊಂಡಿದೆ. 'ಎತ್ತಿಲ್ಲದಿದ್ದರೆ ರೈತನಿಗೆ ಎಡೆಯೇ ಇಲ್ಲ' ಎಂಬ ಇನ್ನೊಂದು ಮಾತು ಸಹ ಬಳಕೆಯಲ್ಲಿದೆ. ರೈತನ ಜೀವನದ ಉಸಿರು ಅವನ ಬದುಕು ಈ ಎತ್ತುಗಳು.

ಗೋವುಗಳು ಇತರ ಸಾಕುಪ್ರಾಣಿಗಳಿಗಿಂತ ಹೆಚ್ಚಿನ ಪ್ರತಿಫಲ ಕೊಡುವುದರಿಂದ ಹಾಗೂ ಹೆಚ್ಚು ಕಾಲ ಬದುಕುವುದರಿಂದ, ಶ್ರಮದ ಕಲಸ ನಿರ್ವಹಿಸುವುದರಿಂದ ಅವುಗಳಿಗೆ ಒಳ್ಳೆಯ ಬೇಡಿಕೆಯುಂಟಾಯಿತು. ಅವುಗಳದೇ ಆದ ಒಂದು ಮಾರಾಟ ವ್ಯವಸ್ಥೆ ಸಹ ರೂಪುಗೊಂಡಿತು. ಇಂತಹ ಮಾರುಕಟ್ಟೆಗೆ ದನಗಳು ಬಂದ ನಂತರವೇ ಗಿರಾಕಿಗಳು ಅವುಗಳ ಮೌಲ್ಯವನ್ನು ನಿರ್ಧರಿಸುತ್ತಾರೆ.

ಹೆಣ್ಣು-ಹೊನ್ನು-ಮಣ್ಣು ಈ ಮೂರು ಲಭಿಸಬೇಕಾದರೆ ಅದೃಷ್ಟವಿರಬೇಕೆಂಬುದು ಜನಪದದ ನಂಬಿಕೆ. ಒಂದು ಮನೆಯ ಸಿರಿತನ ಮತ್ತು ಬಡತನವನ್ನು ಹೊಸದಾಗಿ ಮನೆಗೆ ಬಂದುದರ ಕಾಲ್ಗುಣ ಎಂದು ಹೇಳುವುದುಂಟು. ಹೆಣ್ಣಾಗಲಿ-ಗಂಡಾಗಲಿ-ದನಕರುವಾಗಲಿ ಮನೆ ತುಂಬಿಸಿಕೊಳ್ಳುವಾಗ ಬಲಗಾಲಿಟ್ಟು ಬರುವುದನ್ನೇ ಎಲ್ಲರೂ ನಿರೀಕ್ಷಿಸುತ್ತಾರೆ. ಮುಂದೆ ಅದರಿಂದ ಒಳ್ಳೆಯದೋ, ಕೆಟ್ಟದೋ ಆದಾಗ ಇಂಥಾದರ ಕಾಲ್ಗುಣವೆಂದು ಬೆರಳು ಮಾಡಿ ತೋರಿಸುವ ವಾಡಿಕೆಯುಂಟು. ಆದ್ದರಿಂದ ಹೆಣ್ಣು ತರುವಾಗ ನೋಡುವ ಅನೇಕ ಲಕ್ಷಣಗಳನ್ನು ದನಗಳನ್ನು ಖರೀದಿಸುವಾಗಲೂ ಗಮನಿಸುತ್ತಾರೆ. ಹೀಗೆ ಅವುಗಳ ಬೆಲೆ ಅಥವಾ ಮೌಲ್ಯವನ್ನು ನಿರ್ಧರಿಸುವಾಗ ಇಂಥಹ ಲಕ್ಷಣಗಳಿದ್ದರೆ ಉತ್ತಮ ರಾಸು ಇಂಥಹ ಲಕ್ಷಣಗಳಿದ್ದರೆ ಅದು ನಿಕೃಷ್ಟ ರಾಸು ಎಂದು ನಿರ್ಧರಿಸುವ ಕ್ರಮ, ಮದುವೆಯ ಪರಿಕಲ್ಪನೆಯಲ್ಲಿ ಹುಟ್ಟಿಕೊಂಡಿದ್ದಿರಬಹುದು.

ದನಗಳ ವ್ಯಾಪಾರ ವ್ಯವಹಾರ ಹೆಚ್ಚಾಗಿ ನಡೆಯುವುದು ಸಂತೆ-ಜಾತ್ರೆಗಳಲ್ಲಿ; ಎಲ್ಲ ವ್ಯಾಪಾರ ವ್ಯವಹಾರಗಳಲ್ಲಿ ಇರುವಂತೆ ಪ್ರಾಣಿ ವ್ಯಾಪಾರದಲ್ಲಿ ಪ್ರತ್ಯೇಕವಾದ ಕ್ರಮವೊಂದಿದೆ. ಅದನ್ನು 'ಸುಳಿ ನೋಡುವುದು' ಎಂದು ಕರೆಯುತ್ತಾರೆ. ಆದರ ಮೂಲಕವೇ ಒಂದು ರಾಸಿನ ಗುಣ ಅರ್ಹತೆಯನ್ನು ನಿರ್ಧರಿಸುತ್ತಾರೆ. ವ್ಯವಹಾರದ ದೃಷ್ಟಿಯಿಂದ ಸುಳಿಯನ್ನು ಕುರಿತಂತೆ ಸಾಕು ಪ್ರಾಣಿಗಳಾದ ದನ, ಕುದುರೆಗಳಲ್ಲಿ ಮಾತ್ರ ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಎಮ್ಮೆ ಮತ್ತು ಕೋಣಗಳ ವ್ಯಾಪಾರದಲ್ಲಿ ಅವುಗಳಲ್ಲಿ ಸುಳಿಗಳು ಇದ್ದರೂ ಅವನ್ನು ಗಮನಿಸುವುದಿಲ್ಲ. ಬದಲಿಗೆ 'ಕಂಠ' ಮತ್ತು 'ಲಿಂಗದಕಾಯಿ' ಎಂಬ ಎರಡು ಲಕ್ಷಣಗಳನ್ನು ನೋಡುತ್ತಾರೆ. ಹಾಲು ಕೊಡುವ ಎಮ್ಮೆಯಾದರೆ ಅದರ ಕೊರಳಿನಲ್ಲಿ ಒಂದು ಬಿಳಿಪಟ್ಟೆ ಇರಬೇಕು. ಇದನ್ನು ಕಂಠವೆಂದು, ಮತ್ತೊಂದು ಗಂಟಲಿನ ಅಂಗಳು ಭಾಗದಲ್ಲಿ ಒಂದು ಗೋಲಿಗಾತ್ರದ 'ಗಂಟು' ಇರಬೇಕು ಇದನ್ನು 'ಲಿಂಗದಕಾಯಿ' ಎಂದು ಪರಿಗಣಿಸುತ್ತಾರೆ. ಈ ಎರಡು ಲಕ್ಷಣಗಳಿಲ್ಲದ ಎಮ್ಮೆಯು ಹಾಲು ಬಳಕೆಗೆ ಯೋಗ್ಯವಲ್ಲವೆಂದೂ ಇಂತಹ ಎಮ್ಮೆಗಳನ್ನು ಸಾಕುವ ಮನೆಯ ಯಜಮಾನನಿಗೆ ಏಳಿಗೆಯಾಗುವುದಿಲ್ಲವೆಂದು ಹೇಳುತ್ತಾರೆ. ಕೋಣಗಳಲ್ಲಿ ಈ ಯಾವ ಲಕ್ಷಣಗಳನ್ನೂ ನೋಡುವುದಿಲ್ಲವೆಂದು ತಿಳಿದುಬರುತ್ತದೆ. ಹಾಲು ಕೊಡುವ ಎಮ್ಮೆಗೆ ಮಾತ್ರ ಕಂಠ ಒಂದು ಕೊಡುಗೆ, ಅದಿಲ್ಲದಿದ್ದರೆ ಎಮ್ಮೆಗೆ ಬೆಲೆಯೆ ಇಲ್ಲ.

ದನ ಮತ್ತು ಕುದುರೆಯ ಸುಳಿಗಳು ಆಕಾರದಲ್ಲಿ ವೈವಿಧ್ಯಮಯವಾಗಿರುತ್ತವೆ. ಅವು ಕಣ್ಣಿನ ದೃಷ್ಟಿಗೆ ಸುಲಭವಾಗಿ ಗೋಚರಿಸುವುದರಿಂದ ಅವುಗಳಿಗೆ ತಕ್ಕ ಹೆಸರುಗಳನ್ನು ಸೂಚಿಸಿರುವುದರಲ್ಲಿ ಅರ್ಥಪೂರ್ಣವಾಗಿವೆ. ದನಗಳ ಸುಳಿಗಳಿಗಿಂತ ಕುದುರೆಯ ಸುಳಿಗಳು ಆಕಾರದಲ್ಲಿ ದೊಡ್ಡವು (ಕುದುರೆಯಲ್ಲಿ 101 ಬಗೆಯ ಸುಳಿಗೆಗಳನ್ನು ಗುರುತಿಸುತ್ತಾರೆ). ಅವು ಆಕಾರದಲ್ಲಿ ಅಗಲ ಮತ್ತು ಉದ್ದವಾಗಿರುತ್ತವೆ. ಆದರೆ ದನಗಳಲ್ಲಿ ಸುಳಿ

ಗಳು ಹೆಚ್ಚಿನ ಮಟ್ಟಿಗೆ ಸುರಳಿ ಆಕಾರದಲ್ಲಿ ಚಿಕ್ಕದಾಗಿರುತ್ತವೆ. ಕೆಲವು ಸುಳಿಗಳು 2-3 ಇಂಚು ಉದ್ದವಾಗಿರುತ್ತವೆ. ಇವುಗಳ ರೋಮಗಳು ನೆಟ್ಟಗೆ ಕಣ್ಣಿನ ರೆಪ್ಪೆಯ ರೋಮಗಳಂತೆ ಮೇಲ್ಮುಖವಾಗಿರುವುದರಿಂದ ಇವುಗಳನ್ನು ದೂರದಿಂದಲೇ ಗುರುತಿಸಬಹುದು.

ಪಶುಸಂಗೋಪನೆ ಮಾನವನ ಆರ್ಥಿಕ ಬಂಡವಾಳವಾದ್ದರಿಂದ ಗಿರಾಕಿಯಾಗಲಿ ಅಥವಾ ದಳ್ಳಾಳಿಯಾಗಲಿ ಅವುಗಳಿಂದ ಭವಿಷ್ಯದ ಲಾಭವನ್ನು ನಿರೀಕ್ಷಿಸುವುದರಿಂದ ತನ್ನ ಬಂಡವಾಳಕ್ಕೆ ತಕ್ಕುದಾದ ರಾಸು ಕಂಡರೆ ವ್ಯಾಪಾರಕ್ಕೆ ಮುನ್ನ ದನದ ಬಲಿಷ್ಠತೆ, ಬಣ್ಣ, ಕೋಡು, ಸಡಿಗೆ, ಮೈಕಟ್ಟಿನ ರಚನೆ, ಹಲ್ಲು ಮತ್ತು ಸುಳಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಇವುಗಳ ಆಧಾರದ ಮೇಲೆ ದನಗಳಲ್ಲಿ ಕಂಡುಬರುವ ದೋಷಗಳನ್ನು 'ಖೋಟ ಮಾಲು' ಎಂದು ಗುರುತಿಸುತ್ತಾರೆ, ಈ ಮೇಲಿನವುಗಳಲ್ಲಿ ಸುಳಿಯನ್ನು ಕುರಿತಂತೆ ಹದಿನಾರು ಬಗೆಯ ಸುಳಿಗಳನ್ನು ಗುರುತಿಸಲಾಗಿದೆ. ಅವುಗಳಾವುವೆಂದರೆ — ರಾಜಸುಳಿ ಅಥವಾ ಕಯಾಮ್ ಸುಳಿ, ಬಾಸಿಂಗ ಸುಳಿ, ಮುಕ್ಕಣ್ಣ ಸುಳಿ, ದವಣಿ ಸುಳಿ, ಪಾತಾಳಸುಳಿ, ಜೇಡಿ ಸುಳಿ ಅಥವಾ ಸಂಕೋಲೆ ಸುಳಿ, ನೊಗಮುರ್ಕ ಸುಳಿ ಅಥವಾ ಹೊಟ್ಟೆ ಸುಳಿ, ಪರಕೆ ಸುಳಿ, ಕತ್ತರಿ ಸುಳಿ, ಕೀಲ್ ಸುಳಿ ಅಥವಾ ಕಾಗ್ಸುಳಿ, ಜೊತಿಗೆ ಸುಳಿ, ಕೊಡೆಮೇಲ್ಕೊಡೆ ಅಥವಾ ರೆಪ್ಪೆ ಸುಳಿ, ಸಮುಬುಡ್ಡ ಹಾಗೂ ಜವಾಬು ಸುಳಿಗಳೆಂದು ಗುರುತಿಸಲಾಗಿದೆ.

ಇವುಗಳ ಲಕ್ಷಣವನ್ನು ಕುರಿತಂತೆ ಒಳ್ಳೆಯ ಸುಳಿಗಳು ಮತ್ತು ಕೆಟ್ಟ ಸುಳಿಗಳೆಂದು ಅವುಗಳನ್ನು ಹೀಗೆ ವರ್ಗೀಕರಿಸಬಹುದು.

ಒಳ್ಳೆಯ ಸುಳಿಗಳು :

ರಾಜ ಸುಳಿ, ಅಥವಾ ಕಯಾಮ್ ಸುಳಿ, ಬಾಸಿಂಗ ಸುಳಿ, ನಾಮ ಸುಳಿ, ಮುಕ್ಕಣ್ಣ ಸುಳಿ, ದವಣಿ ಸುಳಿ, ನಗಾರಿ ಸುಳಿ ಅಥವಾ ಜೋಡಿ ಸುಳಿ ಮತ್ತು ಜವಾಬು ಸುಳಿ. ಈ ಏಳು ಸುಳಿಗಳಲ್ಲಿ ರಾಜಸುಳಿ ಅಥವಾ ಕಯಾಮ್ ಸುಳಿ ಶ್ರೇಷ್ಠವೆಂದು ಉಳಿದವುಗಳು — ವ್ಯಾಪಾರದಲ್ಲಿ ಹಣವನ್ನು ಕಡಿಮೆ ಮಾಡಲು ಚೌಕಾಸಿಗೆ ಎಡೆ ಮಾಡಿಕೊಡುತ್ತವೆ ಎಂದು ಹೇಳುತ್ತಾರೆ.

ಕೆಟ್ಟ ಸುಳಿಗಳು :

ಹೀನ ಸುಳಿ ಅಥವಾ ಪಾತಾಳ ಸುಳಿ, ಜೇಡಿ ಸುಳಿ ಅಥವಾ ಸಂಕೋಲೆ ಸುಳಿ, ನೊಗಮುರ್ಕ ಸುಳಿ ಅಥವಾ ಹೊಟ್ಟೆ ಸುಳಿ, ರೆಪ್ಪೆ ಸುಳಿ ಅಥವಾ ಕೊಡೆ ಮೇಲ್‌ಕೊಡೆ ಅಥವಾ ಛತ್ರಿ ಸುಳಿ, ಪರ್ಕ ಸುಳಿ, ಕೀಲ ಸುಳಿ ಅಥವಾ ಕಾಗ್ಸುಳಿ, ಕತ್ತರಿ ಸುಳಿ, ಸಮುಬುಡ್ಡ ಗಲ್ಲದ ಸುಳಿ ಅಥವಾ ಜೊತಿಗೆ ಸುಳಿ ಇವುಗಳನ್ನು ಅಶುಭಸೂಚಕ ಸುಳಿಗಳೆಂದು ಬಳಕೆಯಲ್ಲಿ ಪರಿಗಣಿಸಲಾಗುತ್ತದೆ.

ಸುಳಿಗಳ ಬಗ್ಗೆ ಇರುವ ನಂಬಿಕೆಗಳು :

ಸುಳಿಗಳ ಹಿನ್ನೆಲೆಯಲ್ಲಿ ನಂಬಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. 'ಹೀನಸುಳಿ ಬೋಳಿ ಪ್ರೈ ಹೋದಾತಾ' ಎಂಬ ಗಾದೆಯಂತೆ ಇವುಗಳ ಬಗ್ಗೆ ಇರುವ ನಂಬಿಕೆಗಳು ಇಂದಿಗೂ ತಮ್ಮ ಅರ್ಥವನ್ನು ಕಾಪಾಡಿಕೊಂಡಿವೆ. ಸುಳಿಗಳು ಜೈವಿಕವಾಗಿ ಬಂದವು. ಅವುಗಳಿಗೆ ನಂಬಿಕೆಗಳ ಸಂಬಂಧವನ್ನು ಕಲ್ಪಿಸಿದವನು ಮಾನವ. ಸಾಕು ಪ್ರಾಣಿಗಳನ್ನೇ ಮುಖ್ಯ ವೃತ್ತಿಯನ್ನಾಗಿಸಿಕೊಂಡ ಸಮಾಜದ ಒಂದು ವರ್ಗ ರಾಸುಗಳಲ್ಲಿ ಕಂಡುಬಂದ ಸುಳಿಗಳ ವೈವಿಧ್ಯಮಯ ರೂಪ (ಆಕಾರ) ಮತ್ತು ಅವುಗಳ ಸ್ಥಾನಪಲ್ಲಟವನ್ನು ಗಮನಿಸಿ ಅವುಗಳ ನಡವಳಿಕೆಗೆ ಸಂಬಂಧಪಟ್ಟಂತೆ ಸುಳಿಗಳ ಲಕ್ಷಣಗಳನ್ನು ಗುರುತಿಸಿದ್ದಾರೆ. ಸುಳಿಗಳನ್ನು ಕುರಿತ ನಂಬಿಕೆಗಳು ಮೂಢನಂಬಿಕೆಗಳೆನಿಸಿದರೂ, ಅವುಗಳಲ್ಲಿ ಕೆಲವು ನಂಬಿಕೆಗಳು ಸತ್ವಪೂರ್ಣವಾಗಿರುವುದನ್ನು ಇಂದಿಗೂ ಕಾಣಬಹುದು. ಆದ್ದರಿಂದಲೆ ಮೇಲಿನ ಗಾದೆ ಅರ್ಥಪೂರ್ಣವಾಗಿದೆ. ಖೋಟಾ ರಾಸುಗಳನ್ನು ವಿಕ್ರಯ ಮಾಡುವ ಸಂದರ್ಭದಲ್ಲಿ ಕೆಟ್ಟ ಸುಳಿಗಳಿರುವ ಜಾಗವನ್ನು ಕೆರೆದು ಗಾಯ ಮಾಡುವುದುಂಟು. ಇಂತಹ ಗಾಯಗಳನ್ನು ಅನುಮಾನಿಸಿದಾಗ ನೀರು ಕುಡಿಸಲು ಕೆರೆಗೆ ಇಳಿಸಿದಾಗ ಕಲ್ಲು ತರಚಿಯೋ, ಮೇಯುವಾಗ ಬೇಲಿಯ ಮುಳ್ಳು ಒಡೆದೋ, ಆದ ಗಾಯವೆಂದು ಹೇಳಿ ನುಣುಚಿಕೊಳ್ಳುವುದುಂಟು. ಆದರೆ ಇಂಥಹ ದನಗಳನ್ನು ಧೈರ್ಯವಾಡಿ ಕೊಂಡು ತಂದವನು ಜನರ ಅಪಹಾಸ್ಯಕ್ಕೆ ಗುರಿಯಾಗುವುದಲ್ಲದೆ ಆ ರಾಸನ್ನು ಸಾಗುಹಾಕಲು ಮುಂದಿನ ಸಂತೆಯನ್ನೋ, ಜಾತ್ರೆಯನ್ನೋ ಕಾಯುತ್ತಾ ಕೂಡಬೇಕಾಗುತ್ತದೆ. ಆದ್ದರಿಂದ ಕೊಳ್ಳುವವರು ರಾಸಿನ ಐಬುಗಳನ್ನು ಪರೀಕ್ಷಿಸಿದ ನಂತರವೇ ವ್ಯಾಪಾರಕ್ಕೆ ತೊಡಗುವುದು ರೂಢಿ. ಬೆಲೆ ಇತ್ಯರ್ಥವಾಗಿ 'ಹಗ್ಗದ ಕಾಸೆಂದು' ಹತ್ತು ಪೈಸವೋ — ಹದಿನೈದು ಪೈಸವನ್ನೋ ಕೊಟ್ಟ ನಂತರ ಏನೇ ಖೋಟಾವಿದ್ದರೂ ಮಾರಿದವನು ಜವಾಬ್ದಾರನಾಗುವುದಿಲ್ಲ. ಇಲ್ಲಿ ವ್ಯಾಪಾರ ತೆರೆದ ಮಾರುಕಟ್ಟೆಯಲ್ಲಿ ನಡೆಯುವುದರಿಂದ ಹಗ್ಗದ ಕಾಸೇ ವ್ಯಾಪಾರವನ್ನು ತೀರ್ಮಾನಿಸುವ ಅಂಶವಾಗಿರುತ್ತದೆ.

ರಾಸುಗಳಲ್ಲಿ ಕಂಡುಬರುವ ಸುಳಿಗಳ ಲಕ್ಷಣಗಳನ್ನು ಅವು ನೆಲೆಗೊಂಡಿರುವ ಸ್ಥಳಗಳ ಆಧಾರದ ಮೇಲೆ ಅವುಗಳಿಗೆ ನಂಬಿಕೆಯ ಅರ್ಥವನ್ನು ಕಲ್ಪಿಸಿರುವುದು ಕಂಡುಬರುತ್ತದೆ. ಇವಕ್ಕೂ ಸಹ ಮಾನವನ ಸೌಂದರ್ಯ ಪ್ರಜ್ಞೆಯ ಪ್ರಚೋದನೆ ಪರಿಣಾಮವಿರಬಹುದೆಂದು ಇವುಗಳನ್ನು ಕಂಡ ಯಾರಾದರೂ ಊಹಿಸಬಹುದು. ಒಳ್ಳೆಯ ಸುಳಿಗಳೆಂದು ಹೇಳಲಾದ ಏಳು ಸುಳಿಗಳಲ್ಲಿ—

ರಾಜ ಸುಳಿ ಅಥವಾ ಕಯಾಮ್ ಸುಳಿ :

ಈ ಸುಳಿ ಉಳಿದ ಎಲ್ಲಾ ಸುಳಿಗಳಿಗಿಂತ ಬಹಳ ಒಳ್ಳೆಯದೆಂದು ಹೇಳುತ್ತಾರೆ. ಎಲ್ಲಾ ದನಗಳಿಗೂ ರಾಜಸುಳಿ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಇದು ಅನು

ವಂಶೀಯವೂ ಅಲ್ಲವೆಂದು ಹೇಳುತ್ತಾರೆ. ಈ ಸುಳಿಗೆ ಯಾವುದೇ ಕೆಟ್ಟ ನಂಬಿಕೆ ಇಲ್ಲದಿರುವುದರಿಂದ ವ್ಯಾಪಾರದಲ್ಲಿ ಈ ಸುಳಿಯ ದನಗಳಿಗೆ ಒಳ್ಳೆಯ ಬೆಲೆ ಇದೆ. ಈ ಸುಳಿ ಹಣೆಯ ಉಬ್ಬಿನ ಮೇಲೆ ಒಂದು ಬೊಟ್ಟಿನಂತೆಯೂ ಮತ್ತೊಂದು ಭುಜದ ಹಿಣಿಲಿನಿಂದ ನಾಲ್ಬೆಟ್ಟು (ನಾಲ್ಕು ಬೆರಳುಗಳ ಅಗಲದಷ್ಟು) ಮುಂದಕ್ಕೆ ಬೆನ್ನು ಹುರಿಯ ಮೇಲೆ ಅಥವಾ ಮೂತ್ರದ್ವಾರಕ್ಕೆ ಬೆನ್ನಿನ ಸರಿಸಮವನ್ನು ಬಿಟ್ಟು ಹಿಂದೆ_ಮುಂದಕ್ಕೆ ಸುಳಿ ಇದ್ದರೆ ಅಂಥಹ ಸುಳಿಗಳನ್ನು ರಾಜಸುಳಿ ಅಥವಾ ಕಯಾಮ್ ಸುಳಿ ಎಂದು ಕರೆಯುತ್ತಾರೆ. ಈ ಸುಳಿಯನ್ನು ಬಿಟ್ಟು ಉಳಿದ ಒಳ್ಳೆಯ ಸುಳಿಗಳೆಂದು ಪರಿಗಣಿಸಿರುವ ಯಾವುದೇ ಸುಳಿಗಳು ರಾಸಿನಲ್ಲಿ ಇದ್ದರೂ ಅವು ಮಾರುಕಟ್ಟೆಯಲ್ಲಿ ದೃಷ್ಟಿಯಲ್ಲಿ ಬೆಲೆಯ ಚೌಕಾಸಿಗೆ ದಾರಿಮಾಡಿಕೊಡುತ್ತವೆ.

2 ಬಾಸಿಂಗ ಸುಳಿ

ಹೆಸರೇ ಸೂಚಿಸುವಂತೆ ಈ ಸುಳಿ ಶುಭಕರವಾದುದು. ಮದುಮಕ್ಕಳಿಗೆ ಕಟ್ಟುವ ಬಾಸಿಂಗದಂತೆ ಕಾಣುವ ಸುಳಿಯನ್ನು ಬಾಸಿಂಗ ಸುಳಿ ಎಂದು ಕರೆಯುತ್ತಾರೆ. ಈ ಸುಳಿ ದನಗಳ ಮುಖದ ಎರಡೂ ಕಣ್ಣುಗಳ ಮೇಲಕ್ಕೆ ಒಂದೊಂದು ಸುಳಿಗಳಿದ್ದು ಅವುಗಳ ನಡುವೆ ಸ್ವಲ್ಪ ಮೇಲ್ಭಾಗಕ್ಕೆ ಮತ್ತೊಂದು ಸುಳಿ ಇರುತ್ತದೆ. ಈ ಮೂರು ಸುಳಿಗಳು ಸೇರಿದರೆ ಬಾಸಿಂಗವನ್ನು ಹೋಲುವಂತೆ ಕಾಣುತ್ತವೆ. ಈ ಸುಳಿವುಳ್ಳ ರಾಸು ಸೇರಿದ ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುತ್ತವೆ ಎಂದು ನಂಬಿಕೆ ಇದೆ.

3 ಮುಕ್ಕಣ್ಣ ಸುಳಿ

ಮೂರು ಕಣ್ಣುಳ್ಳವನೇ ಮುಕ್ಕಣ್ಣ (ಈಶ್ವರ); ಹಾಗೆಯೇ ದನಗಳಲ್ಲಿ ಈ ಬಗೆಯ ಸುಳಿಗಳಿದ್ದರೆ ಮುಕ್ಕಣ್ಣ ಸುಳಿ ಎಂದು ಕರೆಯುತ್ತಾರೆ. ಈ ಸುಳಿ ಮುಖದ ಎರಡೂ ಕಣ್ಣುಗಳ ಸಮರೇಖೆಯ ನಡುವಿನಲ್ಲಿ ಸುಳಿ ಇದ್ದರೆ ಅದು ಕಣ್ಣಿನಂತೆ ಕಾಣುವುದರಿಂದ ಮುಕ್ಕಣ್ಣ ಸುಳಿ ಎಂದು ಕರೆದಿರಬಹುದು. ಈ ಸುಳಿ ಇರುವ ದನಗಳನ್ನು ಬಲು ಭಯ ಭಕ್ತಿಯಿಂದ ಸಾಕಬೇಕು ಹಾಗು ಕಸದ ಪೊರಕೆ (ಬರ್ಲು) ತಗಲಿಸಬಾರದು. ಸೂರ್ಯಾಸ್ತಮಾನಕ್ಕೆ ಮುಂಚೆ ಮನೆಗೆ ಕಟ್ಟಬೇಕು, ಮುಟ್ಟು ಮೈಲಿಗೆಯಾಗಬಾರದೆಂದು ನಂಬಿಕೆ ಇದೆ. ಆದ್ದರಿಂದ ಇಂತಹ ರಾಸುಗಳನ್ನು ಜವಾಬ್ದಾರಿಯಿಂದ ಸಾಕಬೇಕಾಗುವುದರಿಂದ ಈ ಸುಳಿ ಇರುವ ದನಗಳನ್ನು ಖರೀದಿಸಲು ಹಿಂಜರಿಯುತ್ತಾರೆ. ಶಿವಭಕ್ತರು ಮಾತ್ರ ಇಂತಹ ರಾಸುಗಳನ್ನು ಇಷ್ಟಪಡುತ್ತಾರೆ.

4 ನಾಮ ಸುಳಿ

ದನಗಳ ಹಣೆಯ ನಡುಭಾಗದಲ್ಲಿ ಉದ್ದನೆಯ ಕಡ್ಡಿನಾಮದಂತೆ ಕಾಣುವ ಸುಳಿಯನ್ನು ನಾಮಸುಳಿ ಎಂದು ಕರೆಯುತ್ತಾರೆ. ಈ ಸುಳಿಯುಳ್ಳ ದನಗಳನ್ನು ಸಾಕುವವರು

ಮೋಸ–ವಂಚನೆಗೆ ಗುರಿಯಾಗುತ್ತಾರೆ ಎಂದು ನಂಬಿಕೆ ಇದೆ. ಈ ಬಗೆಯ ಸುಳಿಗಳ ದನಗಳು ಗಿರಾಕಿಗಳನ್ನು ಆಕರ್ಷಿಸುವುದಿಲ್ಲ, ಆದರೂ ಮುಕ್ಕಣ್ಣ ಸುಳಿಯನ್ನು ಒಂದು ವರ್ಗ ಇಷ್ಟಪಡುವಂತೆ ನಾಮ ಸುಳಿಯನ್ನೂ ಸಹ ವೈಷ್ಣವ ಪಂಗಡದವರು ಇಷ್ಟಪಡುವುದಾಗಿ ತಿಳಿದುಬರುತ್ತದೆ.

5 ದವಣಿ ಸುಳಿ

ದನಗಳ ಬೆನ್ನಿನ ಹುರಿಯ ಮೇಲೆ ಒಂದರ ಪಕ್ಕದಲ್ಲೊಂದು ಸುಳಿಗಳಿರುತ್ತವೆ. ಇವು ನೋಡಲು ದನದ ಕೊಟ್ಟಿಗೆಯಲ್ಲಿ ದನಕಟ್ಟುವ ಗೂಟಗಳಂತೆ ಗೋಚರಿಸುವುದರಿಂದ ದವಣಿ ಸುಳಿ ಎಂದು ಕರೆದಿರಬಹುದು. ಈ ಸುಳಿವುಳ್ಳ ದನಗಳು ಸೇರಿದ ಮನೆಯಲ್ಲಿ ದನಗಳ ಅಭಿವೃದ್ಧಿಯಾಗುವುದೆಂಬ ನಂಬಿಕೆಯನ್ನು ಜನಪದರು ಹೀಗೆ ಹೇಳುತ್ತಾರೆ 'ದವಣಿ ಸುಳಿ ದನದ ಕಾಲ್ಗುಣದಿಂದ ಕೊಟ್ಟಿಗೆ ತುಂಬ ದನ ಹೆಚ್ಚಿದೊ' ಎಂದು ಪ್ರಶಂಸಿಸುತ್ತಾರೆ.

6 ನಗಾರಿ ಅಥವಾ ನಕಾರಿ

ನಕಾರಿ ಅಥವಾ ನಗಾರಿ ಎಂಬುದು ಒಂದು ವಾದ್ಯ. ಧರ್ಮಪ್ರಚಾರ ಕಾರ್ಯದಲ್ಲಿ ಶರಣರು ಬಳಸಲ್ಪಡುವ ಎರಡು ತಮಟೆಯಂತಿರುವ ಈ ವಾದ್ಯವನ್ನು ನಗಾರಿ ಎಂದು ಕರೆಯುತ್ತಾರೆ. ಇದೇ ಬಗೆಯಲ್ಲಿ ಕಂಡುಬರುವ, ದನಗಳ ಬೆನ್ನಿನ ಹುರಿಯ ಎಡಬಲಕ್ಕೆ ಒಂದೊಂದು ಸುಳಿ ಇದ್ದರೆ ಅಂತಹ ಸುಳಿಗಳನ್ನು ನಗಾರಿ ಅಥವಾ ನಕಾರಿ ಸುಳಿ ಅಥವಾ ಜೋಡಿಸುಳಿ ಎಂಬುದಾಗಿ ಕರೆಯುತ್ತಾರೆ. ಈ ಮೇಲಿನ ಬಾಸಿಂಗ ಸುಳಿ, ಮುಕ್ಕಣ್ಣ ಸುಳಿ, ನಾಮಸುಳಿ, ದವಣಿ ಸುಳಿ, ನಗಾರಿ ಸುಳಿಯೂ ಸೇರಿದಂತೆ ಇರುವ ದನಗಳನ್ನು ವ್ಯವಹಾರ ದೃಷ್ಟಿಯಿಂದ ಕೊಳ್ಳುವವರು ಹಿಂಜರಿಯುತ್ತಾರೆ. ಏಕೆಂದರೆ ಈ ಐದೂ ಸುಳಿಗಳಲ್ಲಿ ದೈವೀಕಶಕ್ತಿ ಇದೆ ಎಂಬ ನಂಬಿಕೆ ಇರುವುದರಿಂದ ಕೆಲಸ ಮಾಡುವಾಗ ಹೊಡೆಯುವುದು ಅಥವಾ ಬೈಯುವುದು ತೀರಾ ಸಾಮಾನ್ಯವಾದ್ದರಿಂದ ಹಾಗೆ ಅವುಗಳೊಂದಿಗೆ ವರ್ತಿಸಿದರೆ ನಮಗೆ ಅಭಿವೃದ್ಧಿಯಾಗುವುದಿಲ್ಲವೆಂದು ಅಥವಾ ಕೆಡುಕುಂಟಾಗಬಹುದು ಎಂದು ಜನಪದರು ನಂಬುತ್ತಾರೆ.

7 ಜವಾಬು ಸುಳಿ

ಈ ಸುಳಿ ಒಂದು ರೀತಿಯಲ್ಲಿ ಶುಭ ಸುಳಿಯೇ ಆಗಿದೆ. ಇದು ಇಸ್ಪೀಟು ಆಟದ ಜೋಕರ್ ಇದ್ದಂತೆ. ಹೀನಸುಳಿ ಅಥವಾ ಬೇಡಿ ಸುಳಿಗಳೆಂಬ ಅತ್ಯಂತ ನಿಕೃಷ್ಟ ಸುಳಿಗಳೆಂದು ಪರಿಗಣಿಸಲಾದ ಸುಳಿಯ ಬದಿಯಲ್ಲಿ ಮತ್ತೊಂದು ಸುಳಿ ಇದ್ದರೆ ಅದನ್ನು 'ಜವಾಬು ಸುಳಿ' ಎಂದು ಕರೆಯುತ್ತಾರೆ. ಜವಾಬು ಎಂದರೆ 'ಪ್ರತ್ಯುತ್ತರ' ಅಥವಾ

'ಸಮುಜಾಯಿಷಿ' ಎಂಬ ಅರ್ಥದಲ್ಲಿ ಈ ಸುಳಿಯನ್ನು ಬಳಸುತ್ತಾರೆ. ಕೆಟ್ಟ ಸುಳಿಗಳ ಬದಿಯಲ್ಲಿ ಮತ್ತೊಂದು ಸುಳಿ ಇದ್ದರೆ ಅಂತಹ ರಾಸುಗಳನ್ನು ಖೋಟಾ ಮಾಡಲು ಸಾಧ್ಯವಾಗುವುದಿಲ್ಲ. ಇಂತಹ ಸುಳಿಗಳನ್ನು ಒಳ್ಳೆಯದೆಂದು ತಿಳಿಯುತ್ತಾರೆ.

ಕೆಟ್ಟ ಸುಳಿಗಳು

ದನಗಳಲ್ಲಿ ಒಳ್ಳೆಯ ಸುಳಿಗಳಂತೆ ಕೆಟ್ಟ ಸುಳಿಗಳೂ ಇವೆ. ಇವು ಉಳಿದ ಎಲ್ಲಾ ಸುಳಿಗಳಿಗಿಂತ ಕನಿಷ್ಠವಾದುದಾಗಿವೆ. ಅವುಗಳಲ್ಲಿ ಅತ್ಯಂತ ನಿಕೃಷ್ಟವಾದ ಸುಳಿಗಳೆಂದರೆ ಜೇಡಿ ಸುಳಿ ಮತ್ತು ಹೀನ ಸುಳಿಗಳು. ಈ ಸುಳಿ ಇರುವ ದನಗಳನ್ನು ಮನೆಯಲ್ಲಿ ಸಾಕಲೇಬಾರದು ಎಂಬ ನಂಬಿಕೆಯಿದೆ.

1 ಜೇಡಿ ಸುಳಿ ಅಥವಾ ಸಂಕೋಲೆ ಸುಳಿ

ಹೆಸರೇ ಭಯಾನಕವಾಗಿರುವಂತೆ ಸುಳಿಯುಳ್ಳ ರಾಸುಗಳನ್ನು ಕಟ್ಟಲು ಅಷ್ಟೇ ಭಯಪಡುವುದುಂಟು. ಇದು ದನಗಳ ಮುಂಗಾಲಿನ ಯಾವುದೇ ಭಾಗದಲ್ಲಿದ್ದರೂ ಅದನ್ನು ಜೇಡಿಸುಳಿ ಎಂದು ಕರೆಯುತ್ತಾರೆ. ಈ ಬಗೆಯ ಸುಳಿಯ ದನಗಳು ಹುಟ್ಟಿದ ಮನೆಯಲ್ಲಿ ಅಥವ ಕೊಂಡವರ ಮನೆಯಲ್ಲಿ ಸದಾ ಕಲಹಗಳೇರ್ಪಟ್ಟು ಕೋಳವನ್ನು ಹಾಕಿಸುತ್ತವೆ ಎಂದು ನಂಬಿಕೆ ಇದೆ. ಆದ್ದರಿಂದ ಜೇಡಿ ಸುಳಿ ಅಥವಾ ಸಂಕೋಲೆ ಸುಳಿಯ ದನಗಳನ್ನು ಯಾರೂ ಇಷ್ಟಪಡುವುದಿಲ್ಲ.

2 ಹೀನಸುಳಿ ಅಥವಾ ಪಾತಾಳ ಸುಳಿ

ಇದು ದೇಹದ ಮೇಲಿರುವ ಅಶುಭಸೂಚಕವಾದ ಸುಳಿ. ಇಂತಹ ಸುಳಿಯುಳ್ಳ ಜನರ ನಡತೆಯನ್ನು ದನಗಳ ಸ್ವಭಾವಕ್ಕೆ ಹೋಲಿಸಿದ್ದಾರೆ. ಇದರ ಅರ್ಥ ಕೆಟ್ಟದ್ದು ಅಲ್ಪ, ಕ್ಷುಲ್ಲಕ ಬುದ್ಧಿವುಳ್ಳದ್ದೆಂದು ಅರ್ಥೈಸುತ್ತಾರೆ. ಈ ಸುಳಿಯುಳ್ಳ ದನಗಳಿರುವ ಮನೆ ಎಂದಿಗೂ ಏಳಿಗೆಯಾಗುವುದಿಲ್ಲದೆಂದು ಹೇಳುತ್ತಾರೆ. ದನಗಳ ಹಿಣಿಲ ನೆತ್ತಿಯ ಮೇಲೆ ಈ ಸುಳಿ ಇರುತ್ತದೆ. ಈ ಸುಳಿಯ ಮೇಲೆ ಬಿದ್ದ ನೀರು ನೇರವಾಗಿ ಅದರ ಮುಂಗಾಲಿನ ಪಾದದ ಮೇಲೆ ಬೀಳುವುದರಿಂದ ಅಂತಹ ರಾಸುಗಳು ಸಾಕಲು ಯೋಗ್ಯವಲ್ಲವೆಂದು ಹೇಳುತ್ತಾರೆ.

3 ನೊಗಮುರ್ಕ ಸುಳಿ ಅಥವಾ ಚೊಟ್ಟೆ ಸುಳಿ

ಈ ಸುಳಿ ದನಗಳ ಸ್ವಭಾವವನ್ನು ಸೂಚಿಸುವಂತಾದ್ದು, ನೊಗಮುರ್ಕ ಎಂದರೆ ಒಂದು ಜೋಡಿ ಎತ್ತುಗಳಲ್ಲಿ ಈ ಸುಳಿಯುಳ್ಳ ಒಂದು ಎತ್ತು ಬೇರೊಂದು ಎತ್ತನ್ನು ಕ್ಷೀಣಿಸುವುದರಿಂದ ಅದು ಬೇಗ ಸಾಯುವುದು ಎಂದು ಹೇಳುತ್ತಾರೆ. ಆದ್ದರಿಂದಲೇ ನೊಗಮುರ್ಕ ಎಂದು ಕರೆಯುವುದು ರೂಢಿಯಲ್ಲಿದೆ. ಈ ಸುಳಿ ದನದ ಹೆಗಲ ಮೇಲೆ

ಇರುತ್ತದೆ. ನೊಗವನ್ನು ಹೂಡಿದರೆ ನೊಗ ಈ ಸುಳಿಯ ಮೇಲೆ ಕೂರುವುದರಿಂದ ನೊಗಮುರ್ಕ ಎಂದೂ, ಕೆಲವರು ಚೊಟ್ಟೆ ಸುಳಿ ಎಂದೂ ಕರೆಯುತ್ತಾರೆ. ಈ ಸುಳಿಯ ರಾಸು ತನ್ನ ಜೊತೆಯ ಮತ್ತೊಂದು ರಾಸಿಗಿಂತ ಯಾವಾಗಲೂ ಮುಂಗೋಲಾಗಿ ಹೋಗುವುದರಿಂದ ಅದು ಬೇಗ ಸವೆಯುತ್ತದೆ ಎಂದು ಹೇಳುತ್ತಾರೆ. ಅದೇ ಬಗೆಯ ಸುಳಿಗಳು ಎರಡೂ ಎತ್ತುಗಳಲ್ಲಿದ್ದರೆ ಉತ್ತಮ ಎಂದು ಹೇಳುತ್ತಾರೆ.

4 ರೆಪ್ಪೆ ಸುಳಿ ಅಥವಾ ಕೊಡೆಮೇಲ್ಕೊಡೆ

ಈ ಸುಳಿ ಕಣ್ಣಿನ ರೆಪ್ಪೆಯ ಮೇಲೆ ಇರುವುದರಿಂದ ರೆಪ್ಪೆ ಸುಳಿ ಎಂದು ಪ್ರಾದೇಶಿಕವಾಗಿ ಇದನ್ನು ಛತ್ರಿ ಸುಳಿ, ಕೊಡೆಮೇಲ್ಕೊಡೆ ಎಂಬುದಾಗಿಯೂ ಕರೆಯುತ್ತಾರೆ. ಈ ಸುಳಿಯ ಲಕ್ಷಣವನ್ನು ಪಾತಾಳಸುಳಿಗೆ ಹೋಲಿಸಬಹುದು. ರೆಪ್ಪೆ ಸುಳಿಯ ಮೇಲೆ ಬಿದ್ದ ನೀರು ಕೆಳಗೆ ಇಳಿಯುತ್ತಾ ಕಣ್ಣಿಗೆ ಬೀಳುವುದರಿಂದ ಅದು ಯೋಗ್ಯವಾದುದಲ್ಲವೆಂದು ನಂಬಿಕೆ ಇದೆ. ಅದೇ ರೀತಿ ಈ ಸುಳಿಯ ಬಗ್ಗೆ 'ಕೊಡೆಮೇಲ್ಕೊಡೆ ಕೊಂಡೋನ ತೊಡೆ' ಎಂಬ ಅನುಭವದ ಮಾತೊಂದಿದೆ. ಇದರ ಅರ್ಥ ಕೊಂಡವನನ್ನು ಅಳಿಸಿಹಾಕುತ್ತದೆ ಅಥವಾ ನಾಶಮಾಡುತ್ತದೆ ಎಂದು ಹೇಳುತ್ತಾರೆ. ಕಣ್ಣಿನ ರೆಪ್ಪೆಯ ಸಮೀಪ ಇರುವುದರಿಂದ ರೆಪ್ಪೆಸುಳಿ ಎಂದು ಕರೆಯುತ್ತಾರೆ. ಆದ್ದರಿಂದ ಈ ಸುಳಿಯ ದನ ವ್ಯಾಪಾರ ದೃಷ್ಟಿಯಿಂದ ಒಳ್ಳೆಯದಲ್ಲ.

5 ಪರಕೆ ಸುಳಿ

ಈ ಸುಳಿ ದನಗಳ ಬಾಲದ ಬುಡದ ತೆಂಡೆಯಲ್ಲಿರುತ್ತದೆ. ಈ ಸುಳಿಯೂ ಸಹ ಯೋಗ್ಯವಾದುದಲ್ಲ.

6 ಕೀಲು ಸುಳಿ ಅಥವಾ ಕಾಗ್ಸುಳಿ

ದನಗಳ ಮುಂಡಿಯ ಕೀಲಿನ ಮೇಲೆ ಸುಳಿ ಇರುವುದನ್ನು ಕೀಲು ಸುಳಿ ಅಥವಾ ಕಾಗ್ಸುಳಿ ಎಂಬುದಾಗಿ ಕರೆಯುತ್ತಾರೆ. ದನಗಳು ಮೇಯುವಾಗ ಕಾಗೆಗಳು ಸಾಮಾನ್ಯವಾಗಿ ರುಂಡಿಯ (ಗುಳ ಇರುವ ಸ್ಥಳದ) ಮೇಲೆ ಕೂರುವುದರಿಂದ ಈ ಸುಳಿಗೆ ಕಾಗ್ಸುಳಿ ಎಂದು ಕರೆದಿರಬಹುದು. ದೇಹದ ರುಂಡಿ ಅಥವಾ ಕೀಲಿನ ಭಾಗಗಳು ಮುಖ್ಯವಾದ ಅಂಗಾಂಗಗಳಾದ್ದರಿಂದ ಅವುಗಳ ಮೇಲೆ ಸುಳಿ ಇರುವುದು ಒಳ್ಳೆಯದಲ್ಲವೆಂದು ಜನಪದದ ನಂಬಿಕೆ.

7 ಕತ್ತರಿ ಸುಳಿ

ದನಗಳ ಬೆನ್ನಿನ ಹುರಿಯ ಮಧ್ಯಭಾಗವನ್ನು ಭೇದಿಸುವಂತೆ ಉದ್ದನೆಯ ಸುಳಿಯನ್ನು ಕತ್ತರಿ ಸುಳಿ ಎಂದು ಕರೆಯುತ್ತಾರೆ. ಇದು ನೋಡಲು ಕತ್ತರಿಯ ಎರಡು

ಅಲಗುಗಳಂತೆ ಕಾಣುವುದರಿಂದ ಕತ್ತರಿ ಸುಳಿ ಎಂದು ಕರೆಯುತ್ತಾರೆ. ಈ ದನಗಳ ಸ್ವಭಾವವನ್ನು ಕತ್ತರಿಯ ಲಕ್ಷಣಗಳಿಗೆ ಹೋಲಿಸುವುದರಿಂದ ಈ ಸುಳಿಯ ರಾಸುಗಳು ಸಾಕಲು ಯೋಗ್ಯವಾದುದಲ್ಲವೆಂದು ಹೇಳುತ್ತಾರೆ.

8 ಗಲ್ಲದ ಸುಳಿ ಅಥವಾ ಜೊತಿಗೆ ಸುಳಿ

ಈ ಸುಳಿ ರಾಸುಗಳ ಚಪ್ಪೆಯ ಎರಡೂಕಡೆ ಇರುವುದರಿಂದ ನೊಗ ಏರಿಸಿ ನೊಗದ ಹಗವನ್ನು ಕೊರಳಿಗೆ ಬಳಸಿ ಕಟ್ಟುವಾಗ ಅದರ ನಡುವೆ ಈ ಸುಳಿ ಸೇರುವುದರಿಂದ ಗಲ್ಲದ ಸುಳಿ ಅಥವಾ ಜೊತಿಗೆ ಸುಳಿ ಎಂಬುದಾಗಿ ಕರೆಯುತ್ತಾರೆ. ಈ ಬಗೆಯ ಸುಳಿ ಬೇಸಾಯ ಮಾಡುವ ದನಗಳಲ್ಲಿ ಇರಬಾರದೆಂದು ನಂಬಿಕೆ ಇದೆ. ಹಾಲು ಕರೆಯುವ ದನಗಳಲ್ಲಿ ಇದನ್ನು ಗಮನಿಸುವುದಿಲ್ಲ.

9 ಸಮುಬುಡ್ಡ

ಈ ಸುಳಿ ಹೋರಿಯ ಮೂತ್ರದ್ವಾರದಿಂದ ಸರಿಸಮವಾಗಿ ಬೆನ್ನಿನ ಹುರಿಯ ಮೇಲಿದ್ದರೆ ಅಂತಹ ಸುಳಿಯನ್ನು ಸಮುಬುಡ್ಡ ಎಂದು ಕರೆಯುತ್ತಾರೆ. ಇದನ್ನು ಪತ್ತೆ ಮಾಡುವ ವಿಧಾನ ಬಲು ಸುಲಭ, ಒಂದು ರಾಸು ಸಮುಬುಡ್ಡವೆಂದು ಅನುಮಾನ ಬಂದರೆ ಹಗುರವಾದ ಸಗಣಿಯ ಉಂಡೆಯನ್ನು ಬೆನ್ನಿನ ಮೇಲಿರುವ ಸುಳಿಯ ಮೇಲಿಟ್ಟರೆ ಅದು ಸಮುಬುಡ್ಡವಾಗಿದ್ದರೆ ಗಂಜಲವನ್ನು ಸುರಿಸಲು ಪ್ರಾರಂಭಿಸುತ್ತದೆ ಎಂದು ನಿರ್ಧರಿಸುತ್ತಾರೆ. ಈ ಸುಳಿ ಎತ್ತುಗಳಲ್ಲಿದ್ದರೆ ಖೋಟಾರಾಸು ಎಂದು ಪರಿಗಣಿಸುತ್ತಾರೆ.

ಈ ಮೇಲ್ಕಂಡ 16 ಸುಳಿಗಳನ್ನು ರಾಸುಗಳಲ್ಲಿ ಗುರುತಿಸಲಾಗಿದೆ. ದನಗಳ ಸುಳಿಗಳಿಗೆ ಸಂಬಂಧಪಟ್ಟಂತೆ ಇದುವರೆವಿಗೂ ಯಾರೂ ಅಧ್ಯಯನ ಮಾಡಿರುವುದು ಕಂಡಿಲ್ಲವಾದ್ದರಿಂದ ಹಾಸನ ಮತ್ತು ಮೈಸೂರು ಜಿಲ್ಲೆಗಳ ಪ್ರಮುಖ ಹಳ್ಳಿಗಳಿಗೆ ಭೇಟಿ ಕೊಟ್ಟ ಸುಳಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ವಕ್ತೃಗಳು

1 ನಂಜೇಗೌಡ (54) ಒಕ್ಕಲಿಗ, ಪೆರಮನಹಳ್ಳಿ, ಹಾಸನ ತಾಲ್ಲೂಕು.
2 ಹಲಗೇಗೌಡ (60) ಒಕ್ಕಲಿಗ, ಕಿರಗಡಲು, ಆಲೂರು ತಾಲ್ಲೂಕು.
3 ಹನುಮಯ್ಯ (56) ಹರಿಜನ, ಹೆಚ್.ಡಿ. ಕೋಟೆ.
4 ಶಿವಮಲ್ಲೇಗೌಡ (45) ಒಕ್ಕಲಿಗ, ಸಿಂಗನಲ್ಲೂರು, ಕೊಳ್ಳೇಗಾಲ ತಾಲ್ಲೂಕು.
5 ರಾಮಚಂದ್ರು (40) ಒಕ್ಕಲಿಗ, ಸಿಂಗನಲ್ಲೂರು, ಕೊಳ್ಳೇಗಾಲ ತಾಲ್ಲೂಕು.
6 ದ್ಯಾವೇಗೌಡ (60) ಒಕ್ಕಲಿಗ, ಕನ್ನೇಗೌಡನಕೊಪ್ಪಲು, ಮೈಸೂರು.

ಜನಪದ ನಂಬಿಕೆಗಳು

ನಂಬಿಕೆ ಎಂದರೆ ಒಂದು ಹೇಳಿಕೆ ಅಥವಾ ಪರಿಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ. ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿರುವ ಈ ನಂಬಿಕೆಗಳು ಜನತೆಯ ಆಂತರಿಕ ಮನೋಭಾವ ಹಾಗೂ ಮೂಲ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಪ್ರಮುಖ ಸಾಧನೆಗಳಾಗಿವೆ. ಎಷ್ಟೋ ವೇಳೆ ಇವು ಜನಪದರ ಬಾಳನ್ನೇ ನಿರ್ದೇಶಿಸುತ್ತವೆ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರಪಂಚದಾದ್ಯಂತ ಕಂಡು ಬರುವ ನಂಬಿಕೆಗಳಲ್ಲಿ ಬಹಳಷ್ಟು ಮೂಢನಂಬಿಕೆಗಳೇ. ಆದರೂ, ಕೆಲವು ನಂಬಿಕೆಗಳಲ್ಲಿ ವೈಜ್ಞಾನಿಕ ಸತ್ಯ, ಸಾಮಾನ್ಯ ಜ್ಞಾನ, ಪೌರಾಣಿಕ, ಐತಿಹ್ಯಾಂಶ ಹಾಗೂ ಕಥಾಂಶಗಳು ಅಡಕವಾಗಿವೆ.

ಜನಪದ ನಂಬಿಕೆಗಳ ಉಗಮ ಮುಖ್ಯವಾಗಿ ಮೂರು ರೀತಿಯಲ್ಲಿ ಆಯಿತೆನ್ನಬಹುದು — ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಯುಕ್ತಿಕ. ಧಾರ್ಮಿಕ ನಂಬಿಕೆಗಳು ಭಯದಿಂದ ಹುಟ್ಟಿದವು. ಮನಸ್ಸಿನ ಅಸ್ಥಿರತೆ ಹಾಗೂ ಅತಿಮಾನುಷ ಭಯ ಈ ವರ್ಗದ ನಂಬಿಕೆಗಳ ಹುಟ್ಟಿಗೆ ಮುಖ್ಯ ಕಾರಣ. ಭೂತಾರಾಧನೆ, ಪಿತೃ ಪೂಜೆ, ದೇವತೆಗಳ ಆರಾಧನೆ, ಕುಲದೇವತಾ ಪದ್ಧತಿ, ಇತ್ಯಾದಿಗಳಿಗೆ ಸಂಬಂಧಿಸಿದ ನಂಬಿಕೆಗಳು ಈ ಗುಂಪಿಗೆ ಸೇರುತ್ತವೆ. ಜನ ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಳ್ಳುವಾಗ ಅವರ ಚಟುವಟಿಕೆಗಳಿಗೆ ತಕ್ಕಂತೆ ಕೆಲವು ನಂಬಿಕೆಗಳು ರೂಪುಗೊಂಡವು — ಇವು ಸಾಂಸ್ಕೃತಿಕ ನಂಬಿಕೆಗಳು....ವೈಯುಕ್ತಿಕ ನಂಬಿಕೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ನಂಬಿಕೆಗಳ ಸಂಸ್ಕಾರದಿಂದ ಒಬ್ಬ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಸಾರ್ವತ್ರಿಕವಾದರೂ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು....ಈ ಬಗೆಯ ನಂಬಿಕೆಗಳಲ್ಲಿ ಬಾಳಿನ ಅನುಭವ ಹಾಗೂ ಮಾನಸಿಕ ಅನುಭವಗಳ ಮಿಳಿತವನ್ನು ಕಾಣಬಹುದು.

ಕರ್ನಾಟಕ ವಿಷಯ ವಿಶ್ವಕೋಶ, ಪುಟ. 658

ಟಿ. ವಿ. ವೆಂಕಟಾಚಲಶಾಸ್ತ್ರೀ

ಚಿಂತನೆ

ಹೋರಾಟ

ನಡೆಯುತ್ತಿರುವುದು ಹೋರಾಟದ ಯುಗ ; ನಾವಿರುವುದು ಹೋರಾಟದ ಜಗತ್ತಿನಲ್ಲಿ 'ಭಾಷೆಗಾಗಿ ನಾವು ಹೋರಾಡುತ್ತೇವೆ' ಎನ್ನುತ್ತಾರೆ ಭಾಷಾಭಿಮಾನಿಗಳು ; 'ದೇಶಕ್ಕಾಗಿ ನೀವು ಹೋರಾಡಬೇಕು' ಎನ್ನುತ್ತಾರೆ ನಮ್ಮ ದೇಶನಾಯಕರು. ವರ್ಣಭೇದ ವರ್ಗಭೇದಗಳನ್ನು ತೊಡೆದು ಹಾಕಲು ಹೋರಾಡದೆ ವಿಧಿಯಿಲ್ಲ, ಸಾಮಾಜಿಕ ಆರ್ಥಿಕ ಅಸಮತೆಗಳನ್ನು ತೊಲಗಿಸಲು ನಿರಂತರವಾಗಿ ಹೋರಾಟವನ್ನು ನಡೆಸದೆ ಬೇರೆ ಮಾರ್ಗವಿಲ್ಲ ; ಇದು ಸಮಾಜ ಸೇವಕರ ನಂಬಿಕೆ, ನಿಲವು. ಇದಕ್ಕಾಗಿ ದಲಿತರು, ದಲಿತರೆಂದು ತಮ್ಮನ್ನು ತಿಳಿದವರು, ಬಂಡಾಯವೇಳಬೇಕು ಎನ್ನುತ್ತಾರೆ, ನುಗ್ಗಿ ಹೋರಾಡಬೇಕು ಎನ್ನುತ್ತಾರೆ. ದಂಡುಗಳನ್ನು ಕಟ್ಟುತ್ತಾರೆ, ಸೇನೆಗಳನ್ನು ರಚಿಸುತ್ತಾರೆ. ಸಾಹಿತ್ಯದಲ್ಲಿಯೂ ಆ ನೋವಿನ ದನಿಗಳನ್ನು ಕೇಳಿಸಬೇಕು, ಹೋರಾಟದ ಕಿಡಿಗಳನ್ನು ಹೊತ್ತಿಸಬೇಕು ಎಂದು ಪಂಥಗಳನ್ನು ಹೂಡುತ್ತಾರೆ. ಕೃಷಿಕರು, ಕಾರ್ಮಿಕರು ತಮ್ಮ ಕಷ್ಟ ನಷ್ಟಗಳನ್ನು ಸಂಬಂಧಿಸಿದವರಲ್ಲಿ ಹೇಳಿಕೊಳ್ಳಲು ಸಂಘಗಳನ್ನು ಕಟ್ಟಿಕೊಂಡು, ಆ ಸಂಘಗಳ ಮೂಲಕ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಾರೆ. ಉದ್ಯೋಗಿಗಳಿಗೂ ವಿದ್ಯಾರ್ಥಿಗಳಿಗೂ ಹೀಗೆಯೇ ಸೌಕರ್ಯ ಸವಲತ್ತುಗಳಿಗಾಗಿ ಹೋರಾಟದ ಕಣಗಳುಂಟು, ಬಣಗಳುಂಟು ; ಕಾರ್ಯಕಾರೀ ಸಮಿತಿಗಳುಂಟು.

"ಹೋರಾಟ ನಮ್ಮ ಆಜನ್ಮಸಿದ್ಧ ಹಕ್ಕು. ಹೋರಾಡದೆ ಕೆಲಸ ಕೈಗೂಡುವುದಿಲ್ಲ. ಲಾಭ, ಪ್ರಯೋಜನ, ಅನುಕೂಲಗಳಿಲ್ಲ" — ಇದು ಎಲ್ಲರೂ ಹೇಳುವ ಮಾತು. "ಸಮಾಜವನ್ನಾಗಲಿ, ಸರ್ಕಾರವನ್ನಾಗಲಿ, ಅಧಿಕಾರಿಯನ್ನಾಗಲಿ ಉದ್ಯಮಿಯನ್ನಾಗಲಿ, ತಮ್ಮ ಸಮಸ್ಯೆಗಳ ಕಡೆಗೆ, ಸಂಕಷ್ಟಗಳ ಕಡೆಗೆ, ಆಸೆ ಅವಕಾಶಗಳ ಕಡೆಗೆ ಮನಸ್ಸು ಕೊಡುವಂತೆ ಮಾಡಬೇಕಾದರೆ, ಸಂಧಿ ಸಂಧಾನಗಳ ಕೈಯನ್ನು ಕಾಯುವುದಾದರೆ ಅದೊಂದು ಮರೀಚಿಕೆ, ಅದಕ್ಕಾಗಿ ಅನಂತ ಕಾಲವೇ ಕಾಯಬೇಕಾಗುತ್ತದೆ ;

ಹೋರಾಡಿ ಪಡೆಯುವುದು ಸುಲಭವಾದ ಗೆಲುವಿನ ಗುಟ್ಟು" — ಇದು ಹಲವರ ವಿಶ್ವಾಸದ ಧ್ವಜ. "ಹೇಡಿದಿರು ಹೋರಾಡಿ ಫಲವಿಲ್ಲವೆಂದು"—ಇದು ಇಂಥವರ ಧ್ಯೇಯ ವಾಕ್ಯ.

ಹೋರಾಟದ ಮಾರ್ಗಗಳು ಹಲವಾರು. ಹೋರಾಡುವವರು ಯಾರು, ಅವರ ಸಮಸ್ಯೆಗಳೂ ಸಂಕಷ್ಟಗಳೂ ಯಾವ ರೀತಿಯವು ಎನ್ನುವುದನ್ನು ಅವು ಅವಲಂಬಿಸುತ್ತವೆ. ಒಂದೇ ಸಮನೆ ಅರ್ಜಿಗಳನ್ನು ಬರೆಯುತ್ತ ಲೇಖನಿಯನ್ನೇ ಶಸ್ತ್ರವಾಗಿ ಝಳಪಿಸಿ ಇಲ್ಲವೆ ಸಮಕ್ಷದಲ್ಲಿ ಹಾಜರಾಗಿ ಅಹವಾಲು ಮಾಡಿ, ಕೂಗಾಡಿ, ವಾಗ್ಯುದ್ಧ ಹೂಡಬಹುದು. ಕಪ್ಪುಪಟ್ಟಿ ಧರಿಸಿ, ಲೇಖನಿ ಇಳಿಸಿ ಅಸಮಾಧಾನ ವ್ಯಕ್ತಮಾಡಬಹುದು. ಸಾಮೂಹಿಕ ರಜೆ ಹಾಕಿ ಕೆಲಸ ಕಾರ್ಯ ಸ್ಥಗಿತಗೊಳಿಸಬಹುದು. ಧರಣಿ ಕೂರಬಹುದು, ಘೇರಾವ್ ಮಾಡಬಹುದು. ಸರದಿಯ ಇಲ್ಲವೆ ಆಮರಣಾಂತ ಉಪವಾಸ ಮಾಡಿ "ಸತ್ತು ಹೋಗುತ್ತೇನೆ, ನೋಡು" ಎಂದು ಹೆದರಿಸಬಹುದು. ಸೀಮೆಯೆಣ್ಣೆ ಸುರಿದು ಬೆಂಕಿ ಹಚ್ಚಿಕೊಂಡೋ, ಗೋಪುರದ ಮೇಲಿನಿಂದ ಕೆಳಕ್ಕೆ ಹಾರಿಕೊಂಡೋ ಸತ್ತೇ ಹೋಗಲೂಬಹುದು. ಹೀಗೆ ಹೋರಾಟದ ದಾರಿಗಳು ವಿವಿಧವಾಗಿವೆ.

ಉದ್ದೇಶ ಸಾಧನೆಗೆ ಸತ್ಯಾಗ್ರಹವೆಂಬ ಹೋರಾಟದ ದಾರಿಯನ್ನು ಹೇಳಿಕೊಟ್ಟವರು ಸತ್ಯ ಗೆಲ್ಲಲೇಬೇಕು ಎಂಬ ವಿಶ್ವಾಸದಿಂದ ಹೊರಟವರು. ಸಾರ್ವಕಾಲಿಕ ಮೌಲ್ಯಗಳನ್ನು ಸತ್ಯವೆಂದು ಸಾರಿದರು. ಸ್ವಾರ್ಥವನ್ನು ಹಿಂದಿಕ್ಕಿ, ತ್ಯಾಗದ ಎಚ್ಚರವನ್ನು ಮೂಡಿಸಿದರು. ಈ ಹೋರಾಟದ ಅಸ್ತ್ರಕ್ಕೆ ಅಹಿಂಸೆಯ ಧಾರೆಯನ್ನು ದಾನ ಮಾಡಿಕೊಟ್ಟರು. ನಾವು ಸ್ವಾರ್ಥವನ್ನು ಮುಂದೆ ಮಾಡಿದ್ದರಿಂದ, ಹಿಂಸೆ ಮುಂದಾಗುತ್ತ ಬಂತು. ಕುಂಬಳಕಾಯಿ ಹಚ್ಚುವ ಚೂರಿ, ಕೊಲೆಗೆ ಸಜ್ಜಾಯಿತು !

ಹೋರಾಟ ಏಕೆ ಬೇಕು ? ಹೋರಾಡದೆ ಕೆಲಸ ಕೈಗೂಡದೇ ? ವಿವೇಕಿಗಳು ಈ ದಿಕ್ಕಿನಲ್ಲಿ ತರ್ಕಿಸುವುದು ಎಂದಿಗಿಂತ ಇಂದು ಹೆಚ್ಚಾಗಿದೆ. ಸರಳ ಸ್ವಭಾವದ ಸಾಮಾಜಿಕನಿಂದ ಹಿಡಿದು ಸರ್ಕಾರದವರೆಗೆ ಎಲ್ಲರೂ ಒಗ್ಗೂಡಿ ಯುಕ್ತಿಯಿಂದ, ಶಕ್ತಿಯಿಂದಲ್ಲ, ಏಕಾಭಿಪ್ರಾಯಕ್ಕೆ ಬರುವುದು ಯಾವಾಗಲೂ ಒಳ್ಳೆಯದು. ಯುಕ್ತಿಯ ಒಂದು ಸೂಜಿಮೊನೆಗೆ ಬೆಟ್ಟದಷ್ಟು ಶಕ್ತಿ ಮಣಿಯುವುದು ಸಾಧ್ಯವಿದೆ. ಅದಕ್ಕೆ ಬೇಕಾಗಿರುವುದು ಸ್ವಾರ್ಥ ಅತಿಯಾಗದ, ಕೋಪ ತಾಪಗಳಿಲ್ಲದ ಒಂದು ಮನಸ್ಥಿತಿ, ವಿಚಾರಧಾರೆ. ಇಂತಹ ಸ್ಥಿತಿಯಲ್ಲಿ, ಎರಡೂ ಕಡೆಗಳಲ್ಲಿ, ಸ್ವಲ್ಪಮಟ್ಟಿಗೆ ಕೊಟ್ಟು ಪಡೆಯುವ, ಸೋತು ಗೆಲ್ಲುವ, ಒಂದು ನಿಲುವು ಅವಶ್ಯವಾಗುತ್ತದೆ. ಇದು ಒಂದು ಕಷ್ಟದ ಸಾಧನೆ ಎಂಬುದೇನೋ ನಿಜ. ಹೋರಾಟಕ್ಕಿಂತ ಇದು ಕಷ್ಟ. ಇದೂ ಒಂದು ಸಾತ್ವಿಕ ರೀತಿಯ ಹೋರಾಟವೇ. ನಮ್ಮ ಬೇಡಿಕೆಗಳು ನ್ಯಾಯವೂ ಸಕಾಲಿಕವೂ ಆದ ಬೇಡಿಕೆಗಳಾಗಿ, ನಮ್ಮ ನಾಯಕರೂ, ಸಲಹೆಗಾರರೂ, ವಿವೇಕಶಾಲಿಗಳೂ, ದಯಾಳುಗಳೂ, ಆಗಿ, ಹೊಸ ರೀತಿಯ ಹೋರಾಟ ಮಾರ್ಗವನ್ನು ಕುರಿತು ಇಂದು ಆಳವಾಗಿ ಚಿಂತಿಸಬೇಕು. ಇಲ್ಲವಾದರೆ, 'ವಸಿಷ್ಠಸ್ಮೃತಿ' ಹೇಳುವ ಹಾಗೆ, ಬೆಂಕಿ ಹಚ್ಚುವ, ವಿಷ ಬೆರಸುವ, ಕೊಲೆ

ಗೆಲಸಕ್ಕೆ ಕೈಹಾಕುವ, ಮದ್ದು ದೋಚುವ, ಆಸ್ತಿ ಅಪಹರಿಸುವ, ಅತ್ಯಾಚಾರಕ್ಕೆ ಹಾರುವ ಆತತಾಯಿಗಳು ನಮ್ಮ ಸಮಾಜದಲ್ಲಿ ಹೆಚ್ಚುತ್ತಲೇ ಹೋಗುತ್ತಾರೆ. ಸಮಾಜ ಅನಾಯಕವಾಗದಂತೆ ನೋಡಿಕೊಳ್ಳುವ, ವಿಪತ್ಕಾರಿಗಳ ಕೈಗೆ ಸಿಕ್ಕಿ ಒಡೆಯದಂತೆ ರಕ್ಷಿಸುವ ಹೊಣೆಗಾರಿಕೆ ಮುಖಂಡರಿಗೆ ಸೇರಿದ್ದು, ವಿವೇಕಿಗಳಿಗೂ ವಿಶ್ವಾಸಪರರಿಗೂ ಸೇರಿದ್ದು.

o-O-o

ಹೋಳಿಯ ಹಬ್ಬ

ಕಾಮನ ಹಬ್ಬ. ಕಾಮನಿಗೆಂತಹ ಹಬ್ಬ ? — ಎಂದು ಯಾರಾದರೂ ಪ್ರಶ್ನಿಸಿದರೆ, ಅವನಿಗೆ ಹಬ್ಬವಲ್ಲದ ದಿನ ಯಾವುದು ? ಹಬ್ಬವಾಗದ ಜನ ಯಾರು ? ಎಂಬುದಾಗಿ ಸುಲಭವಾಗಿ ಮರು ಪ್ರಶ್ನೆ ಹಾಕಬಹುದು.

ವಿಷ್ಣುವಿನ ಮಗ ಕಾಮ. ಇವನ ಪತ್ನಿ ರತಿ, ಮಂತ್ರಿ ವಸಂತ, ಗೆಳೆಯ ಚಂದ್ರ. ಗಿಳಿ ಅವನ ರಥ, ಮೀನು ಧ್ವಜದ ಸಂಕೇತ ; ಕಬ್ಬೇ ಬಿಲ್ಲು. ಹೂವುಗಳೇ ಬಾಣಗಳು. ಕೆರೆ ಕೊಳ ತೋಟ ತುಡಿಕೆಗಳು ಇವನ ವಿಹಾರ ಕ್ಷೇತ್ರ.— ಹೀಗೆ ಕಾಮನನ್ನು ನಮ್ಮ ಕವಿಗಳು ಕಲ್ಪಿಸಿದ್ದಾರೆ. ಕಬ್ಬಿನ ಬಿಲ್ಲಿಗೆ ದುಂಬಿಗಳ ಹೆದೆಯನ್ನೇರಿಸಿ ಅರವಿಂದವೋ, ಅಶೋಕವೋ, ಮಾವೋ ಮಲ್ಲಿಗೆಯೋ ಹೂವುಗಳನ್ನೇ ಬಾಣಗಳಾಗಿ ಮಾಡಿಕೊಂಡು ಗಂಡು ಹೆಣ್ಣುಗಳನ್ನು ನಿರಂತರವಾಗಿ ಅವನು ಬೇಟೆಯಾಡುವನೆಂದು ನಮ್ಮ ಕವಿಗಳು ಅವನನ್ನು ದಣಿವಿಲ್ಲದೆ ಬಣ್ಣ ಬಣ್ಣವಾಗಿ ಬಣ್ಣಿಸಿದ್ದಾರೆ. ಹಳೆಯ ಕಾಲದ್ದಿರಲಿ, ಈ ಕಾಲದ್ದಿರಲಿ, ಕಲೆಯ ಮಾಧ್ಯಮ ದೃಶ್ಯವೋ ಶ್ರಾವ್ಯವೋ ಏನಾದರಾಗಲಿ, ಈ ಕಾಮನ ಕೈವಾಡ, ಮಹಿಮೆ ಪ್ರಭಾವಗಳು ತುಂಬಿ ತುಳುಕುವ ಕಲ್ಪನೆ ವರ್ಣನೆಗಳಿರುತ್ತವೆ. ಈ ಕಲ್ಪನೆ ವರ್ಣನೆಗಳನ್ನು ನೋಡಿದರೆ, ರತಿ-ಪ್ರೀತಿಗಳು, ಪ್ರೇಮ-ಕಾಮಗಳು ಜೀವರಾಶಿಯ ಬದುಕಿನ ಸಹಜವಾದ ಪ್ರವೃತ್ತಿಗಳು, ಅವುಗಳಿಲ್ಲದೆ ಜಗತ್ತಿನ ವ್ಯಾಪಾರ ನಡೆಯಲಾರದು ಎಂಬ ಸಂಗತಿ ಮನವರಿಕೆಯಾಗುತ್ತದೆ. ಸೃಷ್ಟಿಯಲ್ಲಿ ಚೆಲುವು ಎಲ್ಲೆಲ್ಲಿ ಪ್ರೈದೋರುತ್ತದೆಯೋ, ಅದು ಯಾರ ಯಾರ ಮನಸ್ಸು ಹೃದಯಗಳನ್ನು ಮುಟ್ಟಿ ಮಧುರ ಭಾವನೆಗಳನ್ನು ಹೊಮ್ಮಿಸುತ್ತದೆಯೋ, ಆ ಉಗಮ ಮತ್ತು ಗಮ್ಯ ಸ್ಥಾನಗಳಲ್ಲೆಲ್ಲ ಕಾಮನ ಸಂಚಾರವುಂಟು, ಬೇಟೆಯ ಬೆಡಗುಂಟು ಎಂದು ನಾವು ತಿಳಿಯಬೇಕು. ಇವೆಲ್ಲ ಭಾವನೆಗಳಿಗೆ ಅನುಭವಗಳಿಗೆ ಕೊಟ್ಟ ರೂಪಗಳು, ಸಂಕೇತಗಳು; ಅನ್ಯಥಾ ಅಲ್ಲ.

ವೇದಗಳಲ್ಲಿಯ 'ಕಾಮಸೂಕ್ತ'ದಲ್ಲಿ ಪ್ರಪಂಚದ ಸೃಷ್ಟಿ ಕಾಮನಿಂದಲೇ ಆಯಿತೆಂದು ಹೇಳಿದೆ. ಮನಸ್ಸಿನ ಮಂಥನದಿಂದ ಹುಟ್ಟಿದ್ದು ಕಾರಣವಾಗಿ ಕಾಮವನ್ನು ಮನಸ್ಸಿನ ರೇತಸ್ಸೆಂದು ಹೇಳಿದೆ. ಬ್ರಹ್ಮನ ಹೃದಯ ಇಚ್ಛಾರೂಪದ ಕಾಮದ ಉತ್ಪತ್ತಿ ಸ್ಥಾನ ಎಂದಿರುವುದೇ ಅಲ್ಲದೆ, ವಿಷ್ಣು ರುದ್ರ ಅಗ್ನಿಗಳಿಗೆ ಕೂಡ ಕಾಮನೆಂದಿರುವುದು

ವೈದಿಕ ಕಲ್ಪನೆಯುಳ್ಳದ್ದು. ದೇವತಾ ಶ್ರೇಷ್ಠನಾದ, ಉತ್ತರಫಾಲ್ಗುನೀದೇವತೆಯಾದ ಭಗನ ನಕ್ಷತ್ರವನ್ನು ಶಿವ-ಚಂದ್ರನು ಪ್ರವೇಶಿಸಿದಾಗ, ಭಗವಂತನಾಗಿ ಕಾಮನನ್ನು ದಹನ ಮಾಡಿದ ಸಮಯವೇ ಫಾಲ್ಗುನ ಪೌರ್ಣಿಮೆ, ಕಾಮನ ಹುಣ್ಣಿಮೆ. ಪುರಾಣೇತಿಹಾಸಗಳೂ ಕಾವ್ಯಗಳೂ ಇದನ್ನೇ ಗಿರಿಜಾಕಲ್ಯಾಣದ ಕಾಮದಹನವೃತ್ತಾಂತವಾಗಿ ಮಾರ್ಪಡಿಸಿರುವಂತೆ ತೋರುತ್ತದೆ. ತಾರಕಾಸುರ ವಧೆ, ಕುಮಾರಸ್ವಾಮಿಯ ಜನನ ಇವುಗಳೊಂದಿಗೆ ಹೆಣೆದುಕೊಂಡು ಬರುವ ಕಾಮನ ಕಥೆಯುಳ್ಳದ್ದಾದರೂ ರುದ್ರನು ಅಗ್ನಿ, ಯಜ್ಞವೇದಿಯಲ್ಲಿ ಜನಿಸಿದ ಪಾರ್ವತಿ ಅಗ್ನಿ, ಅವರ ಪುತ್ರನಾಗಿ ಹುಟ್ಟಿದ ಕುಮಾರಸ್ವಾಮಿ ಜನನೀ ಭಾವದಿಂದ ಸ್ವೀಕರಿಸಿದ ಕೃತ್ತಿಕಾದೇವತೆಗಳು ಅಗ್ನಿದೇವತಾಸ್ವರೂಪರು ; ಕಾಮನೂ ಅಗ್ನಿ ರೂಪನೇ. "ಯಜ್ಞೇನ ಯಜ್ಞಮಯಜಂತ ದೇವಾಃ" ಎಂಬಂತೆ ಅಗ್ನಿಯನ್ನು ಅಗ್ನಿ ದಹಿಸಿದ. ಇದು ಕಾಮದಹನದ ರಹಸ್ಯ. ಎಂದರೆ ಕರ್ಮವಾಸನೆಗಳ ಫಲವಾದ ವಿಷಯಭೋಗಗಳು ಬೆಂಕಿಯಂತೆ ಹೊತ್ತಿ ಉರಿಯುವಾಗ, ಅದನ್ನು ಜ್ಞಾನಮಯವಾದ ತಪಸ್ಸು ಎಂಬ ಬೆಂಕಿ ಸುಟ್ಟು ಹಾಕುತ್ತದೆ. ಜಸವೂ ದುಷ್ಟವೂ ಆತ್ಮ ಶ್ರೇಯಸ್ಸಿಗೆ ಹಿತಕರವಲ್ಲದವೂ ಆದ ಮನಸ್ಸಿನ ಕಳಂಕಗಳೆಂಬ ಕೊಳೆಯನ್ನು, ದುರ್ಭಾವನೆಗಳ ಕಸ ಕಸರುಗಳನ್ನು ಒಗ್ಗೂಡಿಸಿ ರಾಶಿಮಾಡಿ, ಅವನ್ನೆಲ್ಲ ಸದಸದ್ವಿವೇಕದ, ಶುದ್ಧಶೀಲದ ಕಿಡಿ ತಾಗಿಸಿ ಸುಟ್ಟು ಹಾಕಿದರೆ, ಅದೀಗ ನಿಜವಾಗಿ ಕಾಮದಹನವಾದಂತೆಯೇ. ಹಣೆಗಣ್ಣಿಂದ ಮನ್ಮಥನನ್ನು ಶಿವ ಸುಟ್ಟನೆಂದರೆ ಜ್ಞಾನನೇತ್ರದಿಂದ ಮನಸ್ಸಿನ ಕಾಮನೆಗಳನ್ನು ನಷ್ಟಮಾಡಿದನೆಂದೇ ಅರ್ಥ. ಈ ಅರ್ಥವನ್ನು ಹಿಗ್ಗಿಸಿದ ಸಾಂಕೇತಿಕ ಕಥೆಗಳನ್ನು ಬೌದ್ಧ ಜೈನಧರ್ಮಗಳ ಗೌತಮಬುದ್ಧ—ಮಾರ, ಮಲ್ಲಿನಾಥ-ಮನ್ಮಥ ಇವರ ಸಂಘರ್ಷದ ಕಥೆಗಳಲ್ಲೂ ಕಾಣುತ್ತೇವೆ.

ಕಾಮನ ಹಬ್ಬವನ್ನು ಹೋಳಿಯ ಹಬ್ಬ ಎನ್ನುತ್ತಾರೆ. ಅಥರ್ವ ಪರಿಶಿಷ್ಟದಲ್ಲಿ 'ಹೋಲಾಕಾ', 'ಹೋಲಿಕಾ' ಪೂಜೆಯನ್ನು ಸಂಜೆ ಮಾಡಬೇಕೆಂದು ಹೇಳಿದೆ: ಈ ಮಾತುಗಳು ದಹನಸಂಬಂಧವಾದ ಆಚಾರಗಳನ್ನು ಹೇಳುತ್ತವೆ. ಕಾಮನ ಹುಣ್ಣಿಮೆಯ ದಿನದಿಂದ ಶೀತಕಾಲ ಹೋಗಿ ಗ್ರೀಷ್ಮ ತೊಡಗುತ್ತದೆ. ಲೋಕಕ್ಕೆ ಅಭಯವನ್ನೂ ಮಕ್ಕಳಿಗೆ ರಕ್ಷಣೆಯನ್ನೂ ಬಯಸಿ, ಬೆಂಕಿಯನ್ನೇರ್ಪಡಿಸಿ, ಕಂಟಕಪ್ರಾಯಳಾದ ಹೋಲಿಕಾ ರಾಕ್ಷಸಿಯನ್ನು ಮಂತ್ರಪೂರ್ವಕವಾಗಿ ಅದರಲ್ಲಿ ದಹಿಸಿದರೆ, ಆ ರಾಕ್ಷಸಿ ನಾಶವಾಗುವಳೆಂದು ವಸಿಷ್ಠಮುನಿ ರಘುಚಕ್ರವರ್ತಿಗೆ ಸಲಹೆ ಮಾಡಿದನೆಂದೂ, ಆ ದೊರೆ ತನ್ನ ರಾಜ್ಯದಲ್ಲಿ ಹೋಲಿಕಾ ಉತ್ಸವ ನಡೆಯುವಂತೆ ಆಜ್ಞೆ ಮಾಡಿದನೆಂದೂ ಪುರಾಣದ ಕಥೆಯಿದೆ. ಆ ದಹನದ ರಾತ್ರಿಗೆ 'ಸರ್ವಸಾರ'ವೆಂದು ಹೆಸರು. ಪಾಡ್ಯದ ದಿನ ನಡೆಯುವ ಮನ್ಮಥನ ಪೂಜೆಯನ್ನು ಭವಿಷ್ಯೋತ್ತರಪುರಾಣದಲ್ಲಿ ಹೇಳಿದೆ.

ಹಬ್ಬಕ್ಕೆ ಕಟ್ಟಿಗೆ ಬೆರಣಿಗಳನ್ನು ಕದ್ದು ಸಂಗ್ರಹಿಸಿ, ಹುಚ್ಚುವೇಷ ಹಾಕಿ, ಉನ್ಮತ್ತವಾಗಿ ಕುಣಿದು, ಅವಾಚ್ಯಗಳನ್ನು ಆಡಿ ಹಬ್ಬ ಮಾಡಿದೆವೆಂದು ನಾಡಿನ ಮಕ್ಕಳು, ಮುಗ್ಧರು ಸಂತೋಷಪಡುತ್ತಿರುವುದು ಒಂದು ಅವನತಿಯ ಚಿತ್ರ. ಪುರುಷಾ

ರ್ಥಪ್ರತೀಕನಾದ ಕಾಮನ ಸ್ವರೂಪವನ್ನು ಚಿಂತಿಸಿ, ಕಲಾಪ್ರದರ್ಶನಗಳು, ವಿವಿಧ ಭಾರತೀಯ ಪರಂಪರೆಯ ಕಾಮದಹನದ ಪೌರಾಣಿಕ ದೃಶ್ಯಗಳನ್ನು ಅಭಿನಯಿಸುವುದು, ಇವುಗಳ ಮೂಲಕ ಹಬ್ಬ ನಡೆಸುವುದು ಉತ್ತಮ ಪಕ್ಷವಲ್ಲವೇ ?

o-O-o

ಸಾಲ

ನನ್ನ ಬಾಲ್ಯದಲ್ಲಿ ಸಣ್ಣ ಪುಟ್ಟ ವ್ಯಾಪಾರಗಳಿಗೆ ಎಂದು ನಮ್ಮ ಹಿರಿಯರು ನನ್ನನ್ನು ಚಿಲ್ಲರೆ ಅಂಗಡಿಗಳಿಗೆ ಕಳಿಸಿ ಕೊಡುತ್ತಿದ್ದರು. ಆ ವ್ಯಾಪಾರಗಳ ವೇಳೆಯಲ್ಲಿ ನಾನು ಕುತೂಹಲದಿಂದ ಅಂಗಡಿಯೊಳಗಿನ ಸೂಚನಾ ಫಲಕಗಳನ್ನು ಗಮನಿಸುತ್ತಿದ್ದೆ. ಆ ಫಲಕಗಳ ಮೇಲೆ ಎದ್ದು ಕಾಣುವಂತೆ "ಸಾಲ ಕೇಳಬೇಡಿ" ಎಂದೋ "ಇಂದು ನಗದು, ನಾಳೆ ಸಾಲ" ಎಂದೋ ಇರುತ್ತಿದ್ದ ಬರವಣಿಗೆಗಳು ಇಂದೂ ನನ್ನ ಮನಸ್ಸಿನ ಮೇಲೆ ಮುದ್ರೆ ಒತ್ತಿದಂತಿವೆ. ಈಗಲೂ ಹಳ್ಳಿ ಕಡೆಯ ಅಂಗಡಿಗಳಲ್ಲಿ ಇಂತಹ ಬರವಣಿಗೆಗಳುಂಟು. ನಾನು ಬೆಳೆದು, ನನಗೆ ಸರ್ವಜ್ಞನ ತ್ರಿಪದಿಗಳ ಪರಿಚಯವಾದಾಗ, ಸಾಲದ ವಿಷಯದಲ್ಲಿ ಅವನು ಆಡಿರುವ ನೀತಿಯ ಮಾತು ಸಹ ಹೀಗೆಯೇ ಮನಸ್ಸಿಗೆ ಅಂಟಿಕೊಂಡಿತು. "ಸಾಲ ತೆಗೆದುಕೊಳ್ಳುವಾಗ ಹಾಲು ಅನ್ನವನ್ನು ಉಂಡ ಸುಖ ಇರುತ್ತದೆ ; ಆದರೆ ಸಾಲಗಾರ ಸಾಲ ಹಿಂದಿರುಗಿಸುವಂತೆ ಕಾಡುವಾಗ ಕಿಬ್ಬದಿಯ ಕೀಲೇ ಮುರಿದು ಹೋದ ಹಾಗೆ ಸಂಕಟವಾಗುತ್ತದೆ" ಎಂಬ ಆ ಮಾತು, ಸಾಲದ ಕೋಟಲೆಗೆ ಸಿಕ್ಕಿಕೊಂಡ ದಿನಗಳಲ್ಲಿ ಸ್ವಲ್ಪ ಅನುಭವಕ್ಕೆ ಬಂದುದರಿಂದ, ಸಹಜವಾಗಿಯೇ ಮನಸ್ಸಿನಲ್ಲಿ ದೃಢವಾಯಿತು. ಅಲ್ಲದೆ ಸಾಲದ ದೆಸೆಯಿಂದ ಕ್ಲೇಶಪಟ್ಟವರ ಬೆಟ್ಟದಂತಹ ಅನುಭವವೂ ಕಣ್ಣೆದುರಿನಲ್ಲಿತ್ತು.

ನಮ್ಮ ಸಾಮಾಜಿಕ ಜೀವನದಲ್ಲಿ ಇಂದು ಸಾಲ ದೊರಕಿಸಿಕೊಂಡಿರುವ ಸ್ಥಾನ ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ, ಭಯವೂ ಆಗುತ್ತದೆ. ಸಾಲದ ದೆಸೆಯಿಂದ ಮನೆಗಳು ಮಾರಿಹೋಗಿವೆ ; ಆಸ್ತಿಗಳು ಕರಗಿ ಹೋಗಿವೆ ; ಸಂಸಾರಗಳು ಒಡೆದು ಹೋಗಿವೆ ; ಮನುಷ್ಯರು ಗುಲಾಮರಾಗಿದ್ದಾರೆ. ನಿರ್ಗತಿಕರು, ನಿರುದ್ಯೋಗಿಗಳು ನಿಸ್ಸಹಾಯರಾಗಿ ಸಾಲಕ್ಕೆ ತೆಕ್ಕೆ ಬೀಳುವುದು ಒಂದು ರೀತಿಯಾದರೆ, ಸ್ಥಿತಿವಂತರೂ ಉದ್ಯೋಗಿಗಳು ಸಾಲದ ಸುಳಿಗೆ ಸಿಕ್ಕಿ ಬಿದ್ದಿರುವುದು ಇನ್ನೊಂದು ರೀತಿ_ಮೊದಲ ಗುಂಪಿನವರ ವಿಷಯವಾಗಿ ನಮ್ಮ ಸಹಾನುಭೂತಿ ಸಹಜ. ಎರಡನೆಯವರ ವಿಷಯ ಹಾಗಲ್ಲ. ಸಂಸಾರ ನಿರ್ವಹಣೆಗೆ ಅಂಗಡಿಯಲ್ಲಿ ಪಡಿ ಪದಾರ್ಥಗಳಿಗೆ ಸಾಲ ಮಾಡುವುದರಿಂದ ಹಿಡಿದು, ಸಾವಿರಾರು ರೂಪಾಯಿಗಳ ಭೋಗ್ಯ ವಸ್ತುಗಳನ್ನು ಮನೆಯಲ್ಲಿ ತುಂಬಿಕೊಳ್ಳುವುದಕ್ಕೆ ಸಹ ಸಾಲ ಮಾಡುತ್ತಾರೆ ಇವರು. ಮಾತ್ರವಲ್ಲ, ಬಡ್ಡಿಯ ಆಸೆಗಾಗಿ ಸಾಲವನ್ನು ಕೊಡಲು ಸಾಲ ಮಾಡುವ ನಿಪುಣರೂ ಇವರಲ್ಲಿದ್ದಾರೆ. ನಮ್ಮ ಚೀಟಿಯ

ವ್ಯವಹಾರಗಳೂ, ಸ್ವಲ್ಪ ಹಣ ಮುಂಗಡ ಸಲ್ಲಿಸಿ ಬೇಕಾದ ಪದಾರ್ಥ ಕೊಂಡು ನಿಧಾನವಾಗಿ ಉಳಿದ ಹಣ ಪಾವತಿ ಮಾಡುವ ಏರ್ಪಾಡುಗಳೂ ಒಂದು ರೀತಿಯಲ್ಲಿ ಸಾಲದ ಬೇರೆ ಬೇರೆ ರೂಪಗಳು. ನಮ್ಮ ವ್ಯಾಪಾರಿಗಳೂ ಸಾಲ ಕೊಟ್ಟು ಜನಸೇವೆ ಮಾಡುವುದೇ ತಮ್ಮ ಧ್ಯೇಯವೆಂದು ಹೇಳಿಕೊಳ್ಳುವ ನಾನಾ ಧನವಂತ ಮಾಧ್ಯಮಗಳೂ ತಮ್ಮ ವ್ಯಾಪಾರ ವಹಿವಾಟುಗಳನ್ನು ಕುದುರಿಸಿಕೊಳ್ಳಲು ಬಗೆಬಗೆಯ ಪ್ರಲೋಭನೆಗಳನ್ನು ಒಡ್ಡಿ ಗಿರಾಕಿಗಳನ್ನು ಸಾಲದ ಆಳದ ಸುಳಿಗಳಲ್ಲಿ ಸಿಕ್ಕಿಸುತ್ತ ಹೋಗುವುದು ದಿನನಿತ್ಯದ ವ್ಯವಹಾರವಾಗಿದೆ. ಇದಕ್ಕೆ ಸಮಾಜ ಸರ್ಕಾರಗಳ ಮಾನ್ಯತೆಯೂ ಇದೆ. ಇಂತಹ ವ್ಯವಹಾರಗಳಲ್ಲಿ, ಉದ್ದೇಶದ ದುರುಪಯೋಗವಾಗಿ, ಪದಾರ್ಥಗಳಿಗೆ ಸಲ್ಲುವ ನ್ಯಾಯವಾದ ಬೆಲೆಗಿಂತ ಎಷ್ಟೋ ಪಾಲು ಹೆಚ್ಚಿನ ಬೆಲೆಯನ್ನು ನಾವು ತೆತ್ತಿರುತ್ತೇವೆ. ನಮ್ಮ ಕಷ್ಟಾರ್ಜಿತವೂ ನ್ಯಾಯಾರ್ಜಿತವೂ ಆದ ಹಣ ಬಹುವಾಗಿ ಸೋರಿಹೋಗಿರುತ್ತದೆ. ಹಣ ಸಂಪಾದನೆಗೆ ನಮ್ಮ ಹಾಹಾಕಾರ ಹೆಚ್ಚುತ್ತ ಸಾಲದ ಹೊರೆ ಬೆಟ್ಟವಾಗಿ ಬೆಳೆದಿರುತ್ತದೆ. ಮನೆ ಕಟ್ಟಿಸಲು ಸಾಲ, ಮದುವೆ ಮಾಡಲು ಸಾಲ, ವಾಹನ ಕೊಳ್ಳಲು ಸಾಲ, ಹೀಗೆ ನಮ್ಮ ಅಗತ್ಯಗಳಿಗಾಗಿ ಮಾಡುವ ಸಾಲಗಳು ಪೂರ್ತಿಯಾಗಿ ತೀರುವ ಹೊತ್ತಿಗೆ ನಮ್ಮ ಆಯುಷ್ಯದ ಬಹುಭಾಗವೇ ತೀರಿರುತ್ತದೆ, ಕೆಲವು ಸಂದರ್ಭಗಳಲ್ಲಿಯಂತೂ ಆಯುಷ್ಯವೇ ಮುಗಿದಿರುತ್ತವೆ ; ಮುಗಿಯದ ಸಾಲದ ಭಾರ ಮಕ್ಕಳ ತಲೆಯ ಮೇಲೆ ಕುಳಿತಿರುತ್ತದೆ. ಅಧಿಕ ವೆಚ್ಚದ ಹೊರೆಯಿಂದ ಹಂಗು, ದೈನ್ಯ, ಪರಾಧೀನತೆಗಳ ಬಳುವಳಿ ಮುನ್ನಡೆದಿರುತ್ತದೆ.

ನಮ್ಮ ಬದುಕಿನಲ್ಲಿ ಸಾಲ ಎಷ್ಟು ಪ್ರಬಲವಾಗಿದೆಯೆಂದರೆ, ನಮ್ಮ ಸಂಬಳ ಸಂಪಾದನೆಗಳ ಮೇಲೆ ನಮಗೆ ಹಿಡಿತವೇ ಇಲ್ಲ ಎನ್ನುವಂತಾಗಿದೆ, ಗೌರವವೇ ಇಲ್ಲದಂತಾಗಿವೆ. ನಮ್ಮ ಸಂಬಳದಲ್ಲಿ ಕೈಗೆ ಬರುವುದಕ್ಕಿಂತ, ಸಾಲಕ್ಕೆ ಮುರಿದುಕೊಳ್ಳುವ ಹಣವೇ ಹೆಚ್ಚು ಎನ್ನುವ ಸ್ಥಿತಿಗೆ ನಾವು ಇಳಿದಿದ್ದೇವೆ. "ಎಷ್ಟು ಸಂಪಾದಿಸಿದರೂ ಸಾಲದು" ಎನ್ನುತ್ತೇವೆ : "ದುಡ್ಡಿಗೆ ಬೆಲೆಯಿಲ್ಲ" ಎನ್ನುತ್ತೇವೆ. ಹೆಚ್ಚು ಸಂಬಳ ಭತ್ಯೆಗಳಿಗಾಗಿ, ಒಂಟಿಯಾಗಿ ಒಟ್ಟಾಗಿ ಪ್ರತಿಭಟನೆ ನಡೆಸುತ್ತೇವೆ. ಸರ್ಕಾರದ ಮೇಲೆ ಒತ್ತಡ ತರುತ್ತೇವೆ. ಕೆಲಸ ಮಾಡದೆ ಉತ್ಪನ್ನಗಳನ್ನು ಕುಗ್ಗಿಸುತ್ತೇವೆ ; ದುಡಿಯದಿದ್ದರೂ ಸಂಬಳದ ಹಕ್ಕು ಸಾಧಿಸುತ್ತೇವೆ. ಲಂಚ ಈಗ ಬಹಿರಂಗ ವ್ಯವಹಾರವಾಗಿದೆ ; ಸಾಮಾಜಿಕ ನೀತಿಯೊಂದೇ ಮಾನ್ಯತೆ ಗಳಿಸುತ್ತದೆ,

ಇದಕ್ಕೆ ಪರಿಹಾರವೇನು ? ಪರಿಹಾರ ನಮ್ಮ ಕೈಯಲ್ಲಿಯೇ ಇದೆ. ಆರ್ಥಿಕವಾಗಿ ಒಂದು ನಿಷ್ಠೆ, ಸಂಯಮ ನಮಗೆ ಅವಶ್ಯ. ವ್ಯಕ್ತಿಯಾಗಲಿ, ಸಮಾಜ, ಸರ್ಕಾರಗಳೇ ಆಗಲಿ, ಈ ನಿಷ್ಠೆ ಸಂಯಮಗಳ ಸಲುವಾಗಿ ಸಾಲದ ಕೊಡುವಿಕೆ ಕೊಳ್ಳುವಿಕೆಯ ಮೇಲೆ ಬಲವಾಗಿ ಕಡಿವಾಣ ಹಾಕಬೇಕು. ಯಾವ ಕಾರಣದಿಂದಲೇ ಆಗಲಿ, ಯಾರೇ ಆಗಲಿ, ಸಾಲವನ್ನು ಪ್ರೋತ್ಸಾಹಿಸಬಾರದು. ವ್ಯಕ್ತಿಗಳು ಸಾಲವನ್ನು ನೆಚ್ಚಿ ಕುಳ್ಳಿರಬಾರದು.

ಸಾಲ ಆಪದ್ಧರ್ಮವಾಗಿರಬೇಕಲ್ಲದೆ, ಈಗ ಸಾಮಾನ್ಯವಾಗಿರುವಂತೆ ಜೀವನ ವಿಧಾನವಾಗಿರಬಾರದು.

ಇಂದು ಸ್ವಾವಲಂಬನೆ, ಮಿತವ್ಯಯ ಮತ್ತು ನಗದು ವ್ಯವಹಾರಗಳು ನಮ್ಮ ಸಾಮಾಜಿಕ ಜೀವನದಲ್ಲಿ ಬೆಳೆಯುವ ಹಾಗೆ ನಾವು ನೋಡಿಕೊಳ್ಳಬೇಕು. ಶೂಲಕ್ಕೆ ಸದೃಶವಾಗಿರುವ ಸಾಲದ ವಿಷಯದಲ್ಲಿ ನಾವು ಎಚ್ಚರವಾಗಿರಬೇಕು.

o—O—o

ಅಚ್ಚುಕಟ್ಟು

ದಿನದಿನದ ಚಟುವಟಿಕೆಗಳು ಮೊದಲುಗೊಂಡು ನಮ್ಮ ಜೀವನದ ಎಲ್ಲ ವ್ಯವಹಾರಗಳೂ ಒಂದು ಬಗೆಯಾಗಿ ಅಸ್ತವ್ಯಸ್ತವಾಗಿ ನಡೆದುಕೊಂಡು ಹೋಗುತ್ತಿರುವಂತೆ ತೋರುತ್ತದೆ. ಶೈಶವದಲ್ಲಿ ಮಗುವಿನ ಯೋಗಕ್ಷೇಮ ಅದರ ತಾಯಿತಂದೆಗಳದು. ಬಾಲ್ಯದಲ್ಲಿಯೂ ಸ್ವಲ್ಪಮಟ್ಟಿಗೆ ಹೀಗೆಯೇ. ತಾಯಿತಂದೆಗಳೋ ಬೇರೆ ಪೋಷಕರೋ, ಗುರುಹಿರಿಯರೋ ಅಕ್ಕರೆಯಿಂದ ಬಾಲಕನ ಚಟುವಟಿಕೆಗಳನ್ನು ನಿಯಂತ್ರಿಸುತ್ತ, ಅವನ ಮಾರ್ಗದರ್ಶಕರಾಗಿರುತ್ತಾರೆ. ಈ ಮುಂದಿನ ಘಟ್ಟದಲ್ಲಿ, ಬಾಲಕ ಯುವಕನಾಗಿ ಬೆಳೆಯುತೊಡಗಿದಂತೆ, ಅವನ ಮೇಲೆ ಹಿರಿಯರ ಹಿಡಿತ ಸ್ವಲ್ಪ ಸ್ವಲ್ಪವಾಗಿ ಸಡಿಲಗೊಳ್ಳುತ್ತ ಹೋಗುತ್ತದೆ. ಅವನ ವರ್ತನೆಗಳಿಗೆ ಅವನೇ ಹೊಣೆಗಾರನಾಗುವ ಕಾಲವಿದು. ಅವನಿಗೆ ಉಂಟಾಗುವ ಒಳಿತು ಕೆಡುಕುಗಳು, ಅವನ ಕಾರ್ಯ ಚಟುವಟಿಕೆಗಳ ಸ್ವರೂಪ, ಯುಕ್ತಾಯುಕ್ತ ವಿವೇಚನೆ ಇವನ್ನು ಅವಲಂಬಿಸಿರುತ್ತವೆ. ಎಂದರೆ ವ್ಯಕ್ತಿಯ ಏಳಿಗೆ ಅವನತಿಗಳು ಅವನ ಕೈಯಲ್ಲಿಯೇ ಎಂದಂತಾಯಿತು. ಮನಸ್ಸು ಮಾಡಿದರೆ ಸಾಮಾನ್ಯನು ಮಹಾವ್ಯಕ್ತಿಯಾಗಬಹುದು ; ಮಹಾವ್ಯಕ್ತಿಯಾಗುವ ಸಾಧ್ಯತೆಯುಳ್ಳವನು, ಮನಸ್ಸು ಮಾಡಲಿಲ್ಲವಾದರೆ, ಸಾಮಾನ್ಯವಾಗಿಯೇ ಉಳಿಯಬಹುದು.

ಅಡ್ಡಾದಿಡ್ಡಿಯಾಗಿರುವ ನಮ್ಮ ಬದುಕಿನಲ್ಲಿ, ಅದನ್ನು ಅಸಾರ್ಥಕಗೊಳಿಸುವ, ವಿಫಲಗೊಳಿಸುವ, ವಿಷಬೀಜಗಳಿಗೆ ಕೊರತೆಯಿಲ್ಲ. ಪ್ರಮಾಣ ಪರಿಜ್ಞಾನವೆಂಬ ವಿವೇಕದ ಅಭಾವ ಉತ್ಕಟವಾದಾಗ, ಈ ವಿಷಬೀಜಗಳಲ್ಲಿ ಒಂದು ಅಂಕುರಿಸಲು ಸಿದ್ಧವಾಗುತ್ತದೆ. ಯಾವುದು, ಏನು, ಎಷ್ಟು, ಎಲ್ಲಿ, ಹೇಗೆ ಎಂಬ ಪ್ರಶ್ನೆಗಳ ಸರಮಾಲೆಯಲ್ಲಿ, ಮುಖ್ಯವಾಗಿ 'ಎಷ್ಟು' ಎಂಬುದರ ಸರಿಯಾದ, ಸವಿಮರ್ಶವಾದ, ತಿಳಿವಳಿಕೆಯೇ ಪ್ರಮಾಣ ಪರಿಜ್ಞಾನ. ಹೀಗೆಯೇ ಸ್ಥಾನ, ಪ್ರಕಾರಗಳ ಪರಿಜ್ಞಾನಗಳು ; ವ್ಯಕ್ತಿ ವಸ್ತುಗಳ ಪರಿಜ್ಞಾನಗಳು. ವ್ಯಕ್ತಿಯಾಗಲಿ, ವಸ್ತುವಾಗಲಿ ಸಕಲ ವಿವರಗಳಲ್ಲಿಯೂ ಅಂಗೋಪಾಂಗಗಳಲ್ಲಿಯೂ ಸಮಂಜಸವಾಗಿ ಹೊಂದಿಕೊಂಡಿರುವುದು ತುಂಬ ಅಪೇಕ್ಷಣೀಯ. ಈ ಸಮಂಜಸಿಕೆಯ ಭೌತರೂಪವನ್ನು, ಬೇಕಾದರೆ ಅಚ್ಚುಕಟ್ಟು, ಪರಿಷ್ಕಾರ, ಚೊಕ್ಕತನ, ಶಿಸ್ತು, ವ್ಯವಸ್ಥೆ, ಎಂದು ಕರೆಯಬಹುದು.

ಈಗ ಪ್ರಮಾಣ ಪರಿಜ್ಞಾನವನ್ನೇ ಎತ್ತಿಕೊಳ್ಳೋಣ. ಉದಾಹರಣೆಗೆ, ನಮ್ಮ ಶರೀರದ ಎತ್ತರ, ಆಕಾರ, ಗಾತ್ರಗಳಿಗೆ ಒಪ್ಪುವ ಹಾಗೆ ದರ್ಜಿ ನಮಗೆ ಉಡುಪುಗಳನ್ನು

ಹೊಲಿದುಕೊಡಬೇಕಲ್ಲದೆ, ತನಗೆ ತೋರಿದ ವ್ಯಕ್ತಿಯ ಎತ್ತರ, ಆಕಾರ, ಗಾತ್ರಗಳಿಗೆ ಒಪ್ಪುವ ಹಾಗಲ್ಲ ತಕ್ಕ ಉದ್ದಳತೆಯ ಎಳೆಗಳನ್ನು, ತಕ್ಕ ರೀತಿಯಲ್ಲಿ ಜೋಡಿಸಿ, ಸಣ್ಣಗೆ ಸೀಳಿದ ನಮ್ಯಗುಣವುಳ್ಳ ಕಡ್ಡಿಗಳಿಂದ ಕುಶಲ ರೀತಿಯಲ್ಲಿ ಹಚ್ಚಿದಾಗ ಮಾತ್ರ ಎಳೆಗಳೂ ದೊನ್ನೆಗಳೂ ಆಗುತ್ತವೆಯಲ್ಲದೆ, ನಮಗೆ ತೋರಿದಂತೆ ಮಾಡಿದರೆ ಆಗುವುದಿಲ್ಲ. ನಮ್ಮ ಬದುಕಿನಲ್ಲಿ ಈ ಅಚ್ಚುಕಟ್ಟು, ಪರಿಷ್ಕಾರ ನಾನಾ ಕಾರಣಗಳಿಂದ ಕಣ್ಮರೆಯಾಗುತ್ತಿರುವಂತೆ ತೋರುವುದು. ನಾವು ಮಾಡುವ ಕೆಲಸ ಅಚ್ಚುಕಟ್ಟಾಗಿರಬೇಕು ಎಂಬುವದಕ್ಕಿಂತ, ಹೇಗೋ ಮಾಡಿದರಾಯಿತು ಎಂಬ ಧೋರಣೆಯೇ ಈಗ ಹೆಚ್ಚು. ಇಂತಹ ಧೋರಣೆಯಿಂದಾಗಿ ಕೆಲಸದ ಹಾಳು, ಪದಾರ್ಥಗಳ ಪೋಲು ಮಾತ್ರವಲ್ಲದೆ ಕಾಲವ್ಯಯ ಧನವ್ಯಯಗಳೂ ಮಿಗಿಲಾಗಿ ಆಗುತ್ತಿರುವುದನ್ನು ನಾವು ಕಾಣುತ್ತಿಲ್ಲ; ಇಲ್ಲವೆ ಕಂಡರೂ, ಕಾಣದಂತೆ ಕಣ್ಣುಮುಚ್ಚಿಕೊಂಡಿದ್ದೇವೆ. ಪೆನ್ಸಿಲ್ ಒರೆಯುವುದರಲ್ಲಿಯೂ ಪೆನ್ನಿಗೆ ಇಂಕು ತುಂಬುವುದರಲ್ಲಿಯೂ ಎಚ್ಚರ ಇರುವವರು ಸಹಜವಾಗಿಯೇ ಬರವಣಿಗೆಯಲ್ಲಿ ಸಹ ಅಚ್ಚುಕಟ್ಟಿನ ಜನ ಆಗಿರುತ್ತಾರೆ. ಅಕ್ಷರಗಳ ಪ್ರಮಾಣ, ಪದಗಳ ನಡುವೆಯ ವಿರಾಮ, ಪಂಕ್ತಿಗಳ ಋಜುತ್ವ, ಮಾರ್ಜಿನ್ನಿನ ನಿಖರತೆ ಎಲ್ಲಾ ಗೆರೆಕೊಯ್ದ ಹಾಗೆ ನಿರ್ವಹಿಸಬಲ್ಲರು ಇವರು. ಇವರಿಗೆ ಪತ್ರದ ಒಕ್ಕಣೆ ಎಷ್ಟು ಮುಖ್ಯವೋ ಆ ಪತ್ರವಿರಿಸಿದ ಲಕ್ಕೋಟೆಯನ್ನು ಅಂಟು ಹೆಚ್ಚು ಕಡಿಮೆಯಾಗದಂತೆ ಅಚ್ಚುಕಟ್ಟಾಗಿ ಹಚ್ಚಿ ಮುಚ್ಚುವುದೂ ಅಷ್ಟೇ ಮುಖ್ಯವಾಗಿರುತ್ತದೆ. ಕೆಲವರು ಹೇಳಬೇಕಾದ ವಿಷಯವನ್ನು ಸಂಬಂಧವಿರುವ, ಇಲ್ಲದ ನೂರು ಮಾತುಗಳನ್ನು ಆಡಿದಲ್ಲದೆ ಹೇಳಲು ಸಮರ್ಥರಲ್ಲ ; ಮಾತುಬಲ್ಲವರಾದರೆ ನಾಲ್ಕೇ ಮಾತುಗಳಲ್ಲಿ ಅದನ್ನು ಮನದಷ್ಟು ಮಾಡುತ್ತಾರೆ. ವಸ್ತ್ವೈಕ್ಯ, ಕಾಲಮಿತಿ, ಉದ್ದೇಶಗಳ ಪರಿಜ್ಞಾನವಿಲ್ಲದೆ ಭಾಷಣ ಮಾಡುವವರೇ ನಮ್ಮಲ್ಲಿ ಹೆಚ್ಚು. ಈ ಮೂರನ್ನೂ ಯಶಸ್ವಿಯಾಗಿ ಸಾಧಿಸಿ ವಾಗ್ಮಿತೆಯನ್ನು ಪ್ರಕಟಿಸುವವರು ತುಂಬ ವಿರಳ. ಈ ವಿರಳ ಪಂಕ್ತಿಯ ಭಾಷಣಕಾರರು ಮಾಡುವ ಭಾಷಣ ಪ್ರವಚನಗಳು ಸಿದ್ಧಪಡಿಸಿದ ಒಳ್ಳೆಯ ಪ್ರಬಂಧದಂತೆ ಪರಿಷ್ಕಾರವಾಗಿರಬಲ್ಲುದು.

ನಮ್ಮ ದುರ್ದೈವವೆಂದರೆ, ನಮ್ಮ ಶಕ್ತಿಯ ಬಹುಭಾಗ ಪ್ರಮಾಣ ಪರಿಜ್ಞಾನದ ಅಭಾವದಿಂದ ವ್ಯರ್ಥವಾಗಿ ಹೋಗುವುದೇ ಆಗಿದೆ. ವಿದ್ಯಾರ್ಥಿ, ಉಪಾಧ್ಯಾಯ, ಕಾರ್ಮಿಕ, ಗುಮಾಸ್ತೆ, ಅಧಿಕಾರಿ ಹೀಗೆ ನಮ್ಮ ಸಾಮಾಜಿಕ ಜೀವನದ ನಾನಾ ಸ್ತರದ ಜನರಲ್ಲಿ, ತಂತಮ್ಮ ಪಾಲಿನ ಕೆಲಸದಲ್ಲಿ ಒಂದು ವ್ಯವಸ್ಥೆ, ಶಿಸ್ತು ಇಲ್ಲದ ವರ್ತನೆಯೇ ಈಗ ಸಾಮಾನ್ಯವಾಗಿದೆ. ಕಾಲ ಮತ್ತು ಶಕ್ತಿಗಳನ್ನು ಸದುಪಯೋಗ ಮಾಡಿಕೊಳ್ಳುವ ಕೌಶಲವೇ ನಮ್ಮಲ್ಲಿ ಅನೇಕರಿಗೆ ತಿಳಿಯದಾಗಿದೆ. ಇದರ ಜೊತೆಗೆ ಬೇಕಾಬಿಟ್ಟಿತನದ ಪ್ರವೃತ್ತಿ ಬೇರೆ. ಚಪ್ಪಲಿ ಹೊಲಿಯುವವನಿರಲಿ, ವೇದಾಂತದ ಪಾಠಮಾಡುವವನಿರಲಿ ಮನಸ್ಸು ತೊಡಗಿಸಿ ಅಚ್ಚುಕಟ್ಟಾಗಿ ಕೆಲಸ ಮಾಡುವ ತಾಳ್ಮೆ, ವ್ಯವಧಾನಗಳು, ಕೌಶಲ ನೈಪುಣ್ಯಗಳು ಅತ್ಯವಶ್ಯವಾದವು. ನಮಗೆ ಮಾಡುವ ಕೆಲಸಕ್ಕಿಂತ, ಅದು ಎಷ್ಟು ಬೇಗ ಮುಗಿದೀತು, ಎಷ್ಟು ಮಜೂರಿ, ಸಂಬಳ ಸಿಕ್ಕೀತು ಎಂಬ ಕಡೆಗೇ

ಲಕ್ಷ್ಯ ಹೆಚ್ಚು. ಕೆಲಸ ಮಾಡದೆಯೇ ಪ್ರತಿಫಲ ಕೇಳುವ ಜನ ನಾವು ; ಇನ್ನು ನಮ್ಮ ಚಿಂತನೆ, ಮಾತು, ದುಡಿಮೆಗಳಲ್ಲಿ ಪರಿಷ್ಕಾರಕ್ಕೆ, ಪರಿಣತಿಗೆ ಎಲ್ಲಿ ಸ್ಥಾನವಿರುತ್ತದೆ ? ಪರಿಶ್ರಮಕ್ಕೆ ಉತ್ಪನ್ನಕ್ಕೆ ಏನು ಬೆಲೆ ಸಿಕ್ಕುತ್ತದೆ ?

o—O—o

ಸಮಾಜಕಲ್ಯಾಣ

ಸಮಾಜ ಕಲ್ಯಾಣವನ್ನು ಕುರಿತು ವಿಚಾರ ಮಾಡುವಾಗ, ಸಹಜವಾಗಿಯೇ ನಾವು ನಮ್ಮ ದೇಶದ ಸ್ಥಿತಿಗತಿಗಳನ್ನೇ ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ. ನಮ್ಮ ಸಮಾಜ ನಾನಾ ವರ್ಣಗಳ, ವರ್ಗಗಳ ಒಂದು ರಚನೆ. ಈ ವಿಧದ ರಚನೆ ಕಾರಣವಾಗಿ ಒಂದು ಬಗೆಯ ಅಸಮತೆ, ತಾರತಮ್ಯ ನಮ್ಮ ನಡುವೆ ಕಂಡುಬರುತ್ತದೆ. ಈ ಅಸಮತೆ ತಾರತಮ್ಯವನ್ನು ತೆಗೆದು ಬಿಟ್ಟರೆ ನಾವು ಸುಖವಾಗಿರುತ್ತೇವೆ. ಈಗ ನಾವು ಅನುಭವಿಸುತ್ತಿರುವ ಯಾವ ದುಃಖಗಳೂ ಕಷ್ಟಗಳೂ ಇರುವುದಿಲ್ಲ ಎಂಬುದಾಗಿ ನಮ್ಮವರೇ ಆದ ಸಮಾಜಸುಧಾರಕರು ವಿಚಾರ ಮಾಡುತ್ತಿರುತ್ತಾರೆ. ಈ ವಿಚಾರದಲ್ಲಿ ಎಷ್ಟೋ ವೇಳೆ, ತರ್ಕಶುದ್ಧವಾದ ಚಿಂತನೆ, ತಾಳ್ಮೆ, ಸಹಾನುಭೂತಿ, ಸಂಯಮಗಳ ಪ್ರತಿಯಾಗಿ ಅಸೂಯೆ ಅಸಹಕಾರಗಳ, ರೋಷ ದ್ವೇಷಗಳ, ರಭಸಮತಿಯ ವಿಜೃಂಭಣೆಯೇ ಹೆಚ್ಚಾಗಿ ಕಾಣುತ್ತದೆ ; ಕಾಲವನ್ನೂ ವ್ಯಕ್ತಿಯನ್ನೂ ಸ್ನೇಹ ಸಾಮರಸ್ಯಗಳಿಂದ, ಪ್ರೀತಿ ಔದಾರ್ಯಗಳಿಂದ ಪಕ್ವಗೊಳಿಸಬಹುದೆಂಬ ಉದಾತ್ತ ದೃಷ್ಟಿಯ ಅಭಾವ ಎದ್ದು ಕಾಣುತ್ತದೆ. ವಾಸ್ತವವಾಗಿ ನಮ್ಮನ್ನು ಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳೂ ರೋಗರುಜಿನಗಳೂ ಬೇರೆ ರೀತಿಯವು. ಇವನ್ನು ಗುರುತಿಸಿ ಪರಿಹಾರ ಕಂಡುಕೊಳ್ಳುವುದು ವರ್ಣ ವರ್ಗರಹಿತ ಸಮಾಜ ನಿರ್ಮಾಣವೆಂಬ ದೊಡ್ಡ ಧೋರಣೆಯ ಮಾತಿಗಿಂತ ಮುಖ್ಯವಾದದ್ದು. ಮೊದಲನೆಯದರ ಪರಿಹಾರದಿಂದ, ಎರಡನೆಯದರ ಗುರಿ ಮುಟ್ಟುವುದು ಸುಲಭವಾದೀತು.

ನಮ್ಮ ಸಾಮಾಜಿಕ ಸಮಸ್ಯೆಗಳು ಯಾವುವು ? ಆಹಾರ, ವಸತಿ, ಉದ್ಯೋಗಗಳ ಪೂರೈಕೆ ತಾನೇ ? ಇವನ್ನು ಪಡೆಯುವುದು ವ್ಯಕ್ತಿಯ ಹಕ್ಕು ಎಂದೋ ಸರ್ಕಾರದ ಜವಾಬ್ದಾರಿ ಎಂದೋ ನಾವು ತಿಳಿದುಬಿಟ್ಟರೆ ಆಯಿತೇ ? ವ್ಯಕ್ತಿಗೆ ಇವನ್ನು ಪಡೆದುಕೊಳ್ಳುವುದು, ಪ್ರಜೆಯು ಹಕ್ಕಿನ ಚಲಾವಣೆ ಮಾಡಿದರೆ ಸಾಧ್ಯ ಎನ್ನುವಂತಿಲ್ಲ. ಅದಕ್ಕೆ ಯೋಗ್ಯತೆ ಗಳಿಸಬೇಕು. ಪರಿಶ್ರಮ, ಬೌದ್ಧಿಕತೆ, ತಂತ್ರಜ್ಞತೆಗಳನ್ನು ಬೆಳೆಸುವ ವಿದ್ಯೆಯನ್ನು ಅವನು ಸಾಧಿಸಲೇಬೇಕು. ಆ ವಿದ್ಯೆ ಅವನಿಗೆ ವಸತಿ ಉದ್ಯೋಗಗಳನ್ನೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಕೊಡುವಂತೆ ಸಮಾಜ ಸರ್ಕಾರಗಳು ಏರ್ಪಾಡು ಮಾಡಬೇಕಾದ್ದು ಅವುಗಳ ಕರ್ತವ್ಯ. ಇದು ಪರಿಣಾಮಕಾರಿಯಾಗಿ ಸಾಧ್ಯವಾಗಬೇಕಾದರೆ, ನಮ್ಮ ದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಮಿತಿಗೊಳ್ಳಬೇಕು. ಇದರ ವಿಧಾನಗಳು ಜನರ ಮನವೊಲಿಸುವಂತಿರಬೇಕಲ್ಲದೆ, ಬಲಾತ್ಕಾರ ಮಾಡುವಂತಿರಬಾರದು. ಈ ಸೂತ್ರಕ್ಕೆ ಪಟ್ಟಣವಾಸಿಗಳೂ ಗ್ರಾಮವಾಸಿಗಳೂ ಸಮಾನವಾಗಿ ಒಳಪಡುವಂತಿರ

ಬೇಕು. ಇಲ್ಲವಾದರೆ ನಾವು ಬೇರೊಂದು ರೀತಿಯಲ್ಲಿ ಬೌದ್ಧಿಕ ಜ್ಞಾನದಿಂದ ನರಳಬೇಕಾಗುತ್ತದೆ. ನಮ್ಮ ಜನ ಸರ್ಕಾರಿ ಉದ್ಯೋಗಗಳ ವ್ಯಾಮೋಹದಿಂದ ದೂರವಾಗಿ ಸ್ವತಂತ್ರವಾದ ಉದ್ಯಮಗಳನ್ನು ಉದ್ಯೋಗಗಳನ್ನೂ ಅವಲಂಬಿಸುವ ಹಾಗೆ ಸ್ವಯಂ ಸರ್ಕಾರವೂ ಸಮಾಜವೂ ಪ್ರೋತ್ಸಾಹಿಸಬೇಕು. ಇದಕ್ಕಾಗಿ ನಿಯತಕಾಲಿಕಗಳಾದ ಕಾರ್ಯಕ್ರಮಗಳು ವ್ಯವಸ್ಥೆಗೊಳ್ಳುವುದು ಅವಶ್ಯ. ಒಂದು ಸಂಸಾರದಲ್ಲಿ ಕನಿಷ್ಠ ಒಬ್ಬರಿಗೆ ಒಂದು ಕೆಲಸ, ಒಂದು ವಾಸದ ಮನೆ ಎಂಬ ಉದ್ದೇಶ ಸಾಧಿತವಾಗಬೇಕಾದರೆ, ಏಕಸ್ವಾಮ್ಯ ದುರ್ಲಾಭಗಳನ್ನು ಪರಿಣಾಮಕಾರಿಯಾಗಿ ನಾವು ತಡೆಯಬೇಕಾಗುತ್ತದೆ.

ನಮ್ಮ ಸಾಮಾಜಿಕ ರೋಗ ರುಜಿನಗಳಿಗಂತೂ ಲೆಕ್ಕವಿಲ್ಲ. ಅಜ್ಞಾನ ದಾರಿದ್ರ್ಯಗಳು ಇನ್ನೂ ವಿಜೃಂಭಿಸುತ್ತಲೇ ಇವೆ. ಇವುಗಳ ಮೂಲ ಬಲುಮಟ್ಟಿಗೆ ನಿರಕ್ಷರತೆ. ಇದು ತೊಲಗದೆ ನಮ್ಮ ಬದುಕು ಸುಧಾರಿಸುವುದಿಲ್ಲ. ನಿರಕ್ಷರತೆಯ ಕಗ್ಗತ್ತಲೆಯಲ್ಲಿರುವಾಗ, ಯುಕ್ತಾಯುಕ್ತ ವಿವೇಚನೆ ಮೂಡುವುದು ಸಾಧ್ಯವಿಲ್ಲ. ಈ ಸ್ಥಿತಿಯಲ್ಲಿ ಜೂಜು, ಕುಡಿತ ಮುಂತಾದ ಹಲವು ದುಶ್ಚಟಗಳು ಸಹಜವಾಗಿಯೇ ಅಂಟಿಕೊಂಡು ನಮ್ಮನ್ನು ಅವನತಿಯ ಪಾತಾಳಕ್ಕೆ ಎಳೆಯುತ್ತಿವೆ. ಸಂಸಾರಗಳು ಹಾಳಾಗುತ್ತಿವೆ. ಜೂಜು ಕಟ್ಟೆಗಳೂ, ಕುಡಿತದ ಅಂಗಡಿಗಳೂ ಮೊದಲಿಗಿಂತ ಹೆಚ್ಚು ಸಂಖ್ಯೆಯಲ್ಲಿ ಮೇಲೇಳುತ್ತಿರುವುದನ್ನು ನಾವು, ಅವುಗಳ ಅಪಾಯವನ್ನು ತಿಳಿದೂ, ಸ್ವಾಗತಿಸುತ್ತಿದ್ದೇವೆ! ಈಚಿನ ದಿನಗಳಲ್ಲಿಯಂತೂ ದೃಶ್ಯಮಾಧ್ಯಮಗಳೂ ವಾಚನ ಮಾಧ್ಯಮಗಳೂ ಜನರ ಈ ಅಸಹಾಯಕ ಸ್ಥಿತಿಯನ್ನೂ ಮೌಢ್ಯವನ್ನೂ ಚೆನ್ನಾಗಿ ದುರುಪಯೋಗಪಡಿಸಿಕೊಳ್ಳುತ್ತಿವೆ; ಕಳ್ಳತನ, ಅತ್ಯಾಚಾರ, ಹಿಂಸಾಚಾರಗಳು ಬೆಳೆಯಲು ಪ್ರೇರಣೆ, ಸ್ಫೂರ್ತಿ ನೀಡುತ್ತವೆ. ಅವುಗಳ ಸಂಪಾದನೆ ಬೆಳೆಯುತ್ತಿದೆ; ನಮ್ಮ ಜನ ಮಾತ್ರ ಕೆಡುತ್ತಿದ್ದಾರೆ; 'ಕೆಡುತ್ತಿದ್ದೇವೆ' ಎಂಬ ಅರಿವಿಲ್ಲದೆ ಕೆಡುತ್ತಿದ್ದಾರೆ. ಜೂಜು, ಮದ್ಯಪಾನ ಮುಂತಾದವುಗಳ ವಿಷಯದಲ್ಲಿ ನಮ್ಮ ಧೋರಣೆಗಳು ಇಂದು ನೇರವಾಗಿಲ್ಲ. ಹಣಕ್ಕಾಗಿ ನಾವು ಏನನ್ನಾದರೂ ಮಾಡಲು ಸಿದ್ಧ ಎಂಬುದನ್ನು ಇವು ಹೇಳುವಂತಿವೆ. ಮುಚ್ಚುಮರೆಯ ವ್ಯವಹಾರಗಳು ಈಗ ಬಹಿರಂಗ ವ್ಯಾಪಾರಗಳಾಗಿ ಪರಿಣಮಿಸಿ, ನಮ್ಮ ಸಮಾಜದಲ್ಲಿ ಭೋಗ ಜೀವನದ ಮೋಜುಗಳು ಪ್ರತಿಷ್ಠೆಯ ಸಂಕೇತಗಳಾಗಿ ಮೆರೆಯುತ್ತಿವೆ.

ಈ ರೋಗಗಳಿಗೆ ಚಿಕಿತ್ಸೆ ಹೇಗೆ? ಆತ್ಮೋನ್ನತಿಗೆ ಸಲ್ಲದ ವಿಷಪ್ರಾಯವಾದ ಎಲ್ಲವನ್ನೂ ದೃಢಚಿತ್ತದಿಂದ ಹತ್ತಿಕ್ಕದಲ್ಲದೆ ನಾವು ಏಳಿಗೆಯಾಗುವುದು ಕಷ್ಟ. ವಿಶ್ವವಿದ್ಯಾನಿಲಯಗಳೂ ಸಮಾಜ ವಿಜ್ಞಾನ ಸಂಸ್ಥೆಗಳೂ ಮೌಲ್ಯಾಧಾರಿತವಾದ ವಿದ್ಯೆಯನ್ನು ಪ್ರಸಾರ ಮಾಡುವುದು ಹೇಗೆ ಎಂಬುದನ್ನು ಯೋಚಿಸುತ್ತಿವೆ. ಆದರೆ ಇನ್ನೂ ಅಸಹಾಯಕ ಪರಿಸ್ಥಿತಿಯಲ್ಲಿಯೇ ಅವು ತೊಳಲುತ್ತಿವೆಯೆನ್ನಬೇಕು.

ನಮ್ಮ ದುರ್ದೈವವೆಂದರೆ, ನಮ್ಮ ಸಮಾಜಕ್ಕೆ ಯೋಚಿಸುವ ಮನಸ್ಸಿಲ್ಲ; ತಾನು ಬೀಳಲಿರುವ ಆಳವಾದ ಹಳ್ಳವನ್ನು ಕಾಣುವ ಕಣ್ಣಿಲ್ಲ; ಧೀಮಂತ ಚಿಂತನಗಳ ಅಮೃತೋಕ್ತಿಗಳನ್ನು ಆಲಿಸುವ ಕಿವಿಯಿಲ್ಲ. ಎಷ್ಟು ಕಾಲ ಹೀಗೆ ನಡೆಯುವುದೋ, ನೋಡಬೇಕು.

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ
(ಮುಂದುವರೆದುದು)

ಪ್ರಾಚೀನ ಆರ್ಯರು

4000 ವರ್ಷಗಳ ಹಿಂದೆ, ಅಂದರೆ ಕ್ರಿ.ಪೂ. 2000 ದ ಹೊತ್ತಿಗೆ ಮಧ್ಯ ಮತ್ತು ಆಗ್ನೇಯ ಯುರೋಪ್ ಈಗ ಇರುವುದಕ್ಕಿಂತ ಬೆಚ್ಚಗಿತ್ತು ಮತ್ತು ತೇವದಿಂದ ಕೂಡಿತ್ತು. ಅಲ್ಲದೆ ಹೆಚ್ಚು ಗಿಡಮರಗಳಿಂದ ತುಂಬಿತ್ತು. ಅಲ್ಲಿ ರೈನ್ ನದಿಯಿಂದ ಕ್ಯಾಸ್ಪಿಯನ್ ಸಮುದ್ರದವರೆಗೂ ಅಲೆದಾಡುತ್ತಾ ಜೀವಿಸುತ್ತಿದ್ದ ಜನರ ತಂಡಗಳು ಹರಡಿದ್ದುವು. ಇವರಲ್ಲಿ ಗೌರವರ್ಣದ ನೀಲಿಕಣ್ಣುಗಳ ನಾರ್ಡಿಕ್ ಕುಲದವರೇ ಹೆಚ್ಚಾಗಿದ್ದರು. ಇಷ್ಟು ವಿಶಾಲವಾಗಿ ಪಸರಿಸಿದ್ದರೂ ಈ ತಂಡಗಳಲ್ಲಿ ಸಂಪರ್ಕ ಸಾಕಷ್ಟಿದ್ದಿತು; ಇದರಿಂದಲೇ ಇವರೆಲ್ಲಾ ಒಂದೇ ಭಾಷೆಯಿಂದ ಹುಟ್ಟಿದ ಭಾಷೆಗಳನ್ನು ಆಡುತ್ತಿದ್ದರು. ಆಗ ಇವರ ಸಂಖ್ಯೆ ಅಷ್ಟೇನೂ ಹೆಚ್ಚಾಗಿದ್ದಿರಲಿಕ್ಕಿಲ್ಲ. ಹಮ್ಮುರಬಿಯ ನ್ಯಾಯ ಸೂತ್ರಗಳನ್ನು ಆಗತಾನೇ ಪಡೆದಿದ್ದ ಬೇಬಿಲಾನಿನ ಜನರಿಗಾಗಲೀ ಮೊದಲ ಬಾರಿ ಪರತಂತ್ರದ ಕಹಿಯನ್ನು ಕಾಣುತ್ತಿದ್ದ ಈಜಿಪ್ಟಿನ ಸುವ್ಯವಸ್ಥಿತ ನಾಗರಿಕ ಜನರಿಗಾಗಲೀ ಇಂತಹ ಜನ ಭೂಮಿಯ ಮೇಲಿದ್ದಾರೆಂಬ ಊಹೆ ಕೂಡ ಇರಲಿಲ್ಲ.

ಮುಂದೆ ಪ್ರಪಂಚದ ಚರಿತ್ರೆಯಲ್ಲಿ ಈ ಜನ ಬಹುಪ್ರಮುಖ ಪಾತ್ರ ವಹಿಸಿರುತ್ತಾರೆ. ಇಂತಹವರು ಆಗ ಕಾಡುಗಳ ನಡುವೆ ಮರಗಳನ್ನು ಕಡಿದು ಸಿದ್ಧಮಾಡಿದ ಸ್ಥಳಗಳಲ್ಲಿ ವಾಸಿಸುತ್ತಿದ್ದರು. ಇವರ ಹತ್ತಿರ ಮೊದಲು ಕುದುರೆಗಳಿರಲಿಲ್ಲ ; ದನಕರು ಇರುತ್ತಿದ್ದುವು. ಪ್ರಯಾಣ ಮಾಡಬೇಕಾದಾಗ ತಮ್ಮ ಗುಡಾರಗಳು ಮತ್ತಿತರ ಸಾಮಾನುಗಳನ್ನು ಒಡ್ಡೊಡ್ಡಾದ ಎತ್ತಿನ ಬಂಡಿಗಳಲ್ಲಿ ಹಾಕಿಕೊಂಡು ಹೋಗುತ್ತಿದ್ದರು. ಎಲ್ಲಿಯಾದರೂ ಸ್ವಲ್ಪ ಹೆಚ್ಚು ದಿನ ತಂಗಬೇಕಾದಾಗ ಮರದ ರೆಂಬೆಗಳು ಕಡ್ಡಿಗಳನ್ನು ಹೆಣೆದು ಮಣ್ಣು ಮೆತ್ತಿ ಮಾಡಿದ ಮನೆಗಳನ್ನು ರಚಿಸಿಕೊಳ್ಳುತ್ತಿದ್ದಿರಬಹುದು. ಪ್ರಮುಖ ವ್ಯಕ್ತಿಗಳು ಸತ್ತಾಗ ಅವರನ್ನು ಇವರು ಸುಡುತ್ತಿದ್ದರು ; ಕಪ್ಪು ಕೂದಲಿನ ಜನದಂತೆ ವೈಭವದಿಂದ ಹೂಳುತ್ತಿರಲಿಲ್ಲ. ಶವಗಳನ್ನು ಸುಟ್ಟ ಮೇಲೆ ಆ ಬೂದಿಯನ್ನು ಗಡಿಗೆಗಳಲ್ಲಿ

ತುಂಬಿ ನೆಲವಲ್ಲಿ ಹೂಳಿ ಇವುಗಳ ಸುತ್ತಲೂ ಗುಂಡಾದ ದೊಡ್ಡ ದಿಬ್ಬಗಳನ್ನು ನಿರ್ಮಿಸುತ್ತಿದ್ದರು. ಇಂತಹ "ದುಂಡನೆಯ ಗೋರಿಯ ದಿಬ್ಬಗಳನ್ನು (round barrows) ಉತ್ತರ ಯೂರೋಪಿನ ಎಲ್ಲೆಡೆಗಳಲ್ಲಿಯೂ ನಾವು ಕಾಣಬಹುದು. ಇವರಿಗೂ ಮುಂಚೆ ಅಲ್ಲಿ ಇರುತ್ತಿದ್ದ ಕಂದು ವರ್ಣದ ಕಪ್ಪು ಕೂದಲಿನ ಜನರು ಹೆಣಗಳನ್ನು ಕುಳಿತಿರುವ ಭಂಗಿಯಲ್ಲಿ ಹೂಳಿ ಉದ್ದ ಮಾಟದ ಗೋರಿಯ ದಿಬ್ಬಗಳನ್ನು ರಚಿಸುತ್ತಿದ್ದರು.

ನೇಗಿಲಿಗೆ ಎತ್ತುಗಳನ್ನು ಹೂಡಿ ನೆಲ ಉತ್ತು ಆರ್ಯರು ಗೋಧಿ ಬೆಳೆಯುತ್ತಿದ್ದರು. ಆದರೆ ಇವರು ಒಂದೇ ಸ್ಥಳದಲ್ಲಿ ನೆಲಸುತ್ತಿರಲಿಲ್ಲ. ಪೈರನ್ನು ಕೊಯ್ದು ಆಗುತ್ತಲೂ ಮುಂದೆ ಬೇರೆ ಸ್ಥಳ ಹುಡುಕಿಕೊಂಡು ಹೋಗುತ್ತಿದ್ದರು. ಮೊದಲು ಇವರು ಕಂಚನ್ನು ಉಪಯೋಗಿಸುತ್ತಿದ್ದರು. ಕ್ರಿ. ಪೂ. 1500ರ ಹೊತ್ತಿಗೆ ಇವರಿಗೆ ಕಬ್ಬಿಣದ ಉಪಯೋಗ ತಿಳಿದಿತ್ತು. ಆದಿರಿನಿಂದ ಕಬ್ಬಿಣ ತೆಗೆಯುವುದನ್ನು ಮೊದಲು ಕಂಡುಹಿಡಿದವರು ಇವರೇ ಇರಬಹುದು. ಬಹುಶಃ ಇದೇ ಕಾಲಕ್ಕೆ ಇವರು ಕುದುರೆ ಸಾಕತೊಡಗಿದರು. ಮೊದಲು ಮೊದಲು ಇವರು ಕುದುರೆಯನ್ನು ಗಾಡಿ ಎಳೆಯಲು ಮಾತ್ರ ಉಪಯೋಗಿಸುತ್ತಿದ್ದರು. ಮೆಡಿಟರೇನಿಯನ್ ಬಳಿಯ ಜನರಂತೆ ಇವರ ಸಮಾಜ ಜೀವನಕ್ಕೆ ದೇವಾಲಯ ಕೇಂದ್ರವಾಗಿರಲಿಲ್ಲ. ಇವರ ನಾಯಕರು ಮುಂದಾಳುಗಳಾಗಿದ್ದರೇ ಹೊರತು ಪುರೋಹಿತರಾಗಿರುತ್ತಿರಲಿಲ್ಲ. ಇವರಲ್ಲಿ ಸಮಾಜದ ಮುಖ್ಯಸ್ಥರು ದೇವಾಂಶವುಳ್ಳ ರಾಜರೆಂದೆನಿಸಿಕೊಳ್ಳುತ್ತಿರಲಿಲ್ಲ ; ಶ್ರೀಮಂತ ಕುಲದವರೆನಿಸಿಕೊಳುತ್ತಿದ್ದರಷ್ಟೆ. ಮೊದಲಿನಿಂದಲೂ ಇವರು ಕೆಲವು ವಂಶದವರನ್ನು ಕುಲೀನರೆಂದು ಪರಿಗಣಿಸಿ ಅಗ್ರಸ್ಥಾನ ಕೊಡುತ್ತಿದ್ದರು.

ಇವರು ಬಲು ವಾಚಾಳಿಗಳಾಗಿದ್ದರು ಮತ್ತು ಅನೇಕ ಹಬ್ಬಗಳನ್ನಾಚರಿಸುತ್ತಿದ್ದರು. ಅಂತಹ ದಿನಗಳಲ್ಲಿ ಇವರು ಯಥೇಚ್ಛವಾಗಿ ಮದ್ಯಪಾನ ಮಾಡುತ್ತಿದ್ದರು ಮತ್ತು ಇವರಲ್ಲಿರುತ್ತಿದ್ದ ಹಾಡಲು ಬಲ್ಲ ಕವಿಗಳು ಕಥಾ ಕಾವ್ಯಗಳನ್ನು ಹಾಡುತ್ತಿದ್ದರು. ಪ್ರಾಚೀನ ನಾಗರಿಕತೆಗಳ ಸಂಪರ್ಕ ಬರುವವರೆಗೂ ಇವರಲ್ಲಿ ಓದು ಬರಹ ಇರಲಿಲ್ಲವಾದುದರಿಂದ ಇವರ ಸಾಹಿತ್ಯ ಸಂಪತ್ತೆಲ್ಲಾ ಇಂತಹ ಗೀತ ಕವಿಗಳ, ಚಾರಣರ ಜ್ಞಾಪಕ ಶಕ್ತಿಯಲ್ಲಿ ಅಡಕವಾಗಿತ್ತು. ಮನರಂಜನೆಗೋಸ್ಕರ ಕಾವ್ಯಗಳನ್ನು ಹಾಡಿಸಿ ಕೇಳುತ್ತಿದ್ದ ಈ ಪದ್ಧತಿಯ ಫಲವಾಗಿ ಇವರ ಭಾಷೆ ಸುಂದರವೂ ಸುಸಂಸ್ಕೃತವೂ ಉತ್ತಮ ಅಭಿವ್ಯಕ್ತಿ ಸಾಧನವೂ ಆಯಿತು. ಮುಂದೆ ಪ್ರಪಂಚದಲ್ಲಿ ಆರ್ಯನ್ ಮೂಲವುಳ್ಳ ಭಾಷೆಗಳವ್ದೇ ಮೇಲುಗೈಯಾಗಲು ಇದೂ ಒಂದು ಕಾರಣವಿರಬೇಕು. ಆರ್ಯನ್ ಬುಡಕಟ್ಟಿನ ಪ್ರತಿಪಂಗಡದಲ್ಲಿಯೂ ಅದರ ಪೂರ್ವ ಚರಿತ್ರೆ ಇಂತಹ ಗೀತ ಕಾವ್ಯಗಳು, ಮಹಾಕಾವ್ಯಗಳು, ವೀರಕಥೆಗಳು (Saga) ವೇದಗಳು ಎಂದು ಕರೆಯಲ್ಪಡುತ್ತಿದ್ದ ಸಾಹಿತ್ಯ ರೂಪಗಳಲ್ಲಿ ಹರಳುಗಟ್ಟಿದಂತೆ ಉಳಿದುಕೊಂಡಿದೆ.

ಇವರ ಮುಖಂಡರ ಮನೆಗಳು ಇವರ ಸಮಾಜ ಜೀವನದ ಕೇಂದ್ರಗಳಾಗಿದ್ದುವು. ಸ್ವಲ್ಪ ದೀರ್ಘಕಾಲ ನೆಲೆಸಿದೆಡೆಗಳಲ್ಲೆಲ್ಲಾ ಪಂಗಡದ ಮುಖಂಡನಿಗೋಸ್ಕರ ಇವರು ಮರದ

ದಿಮ್ಮಿಗಳಿಂದ ಒಂದು ವಿಶಾಲವಾದ ಮನೆ ಕಟ್ಟುತ್ತಿದ್ದರು, ದನದ ಕೊಟ್ಟಿಗೆಗಳೂ, ಹೊಲದ ಕೆಲಸಗಳಿಗೋಸ್ಕರ ಬೇರೆ ಮನೆಗಳೂ ಅಲ್ಲಲ್ಲಿಯೇ ಇರುತ್ತಿದ್ದಿರಬೇಕು. ಆದರೆ ಮುಖಂಡನ ಮನೆಯ ವಿಶಾಲವಾದ ಹಜಾರ ಎಲ್ಲರಿಗೂ ಸಾಮಾನ್ಯ ಕೇಂದ್ರವಾಗಿತ್ತು. ಔತಣಗಳಿಗೆ, ಗೀತ ಕವಿಗಳ ಗಾಯನವನ್ನು ಕೇಳುವುದಕ್ಕೆ, ಆಟದ ಪಂದ್ಯಗಳಿಗೆ, ಮುಖ್ಯ ವಿಚಾರಗಳನ್ನು ಕುರಿತ ಚರ್ಚೆ ಎಲ್ಲದಕ್ಕೂ ಪ್ರತಿಯೊಬ್ಬರೂ ಇಲ್ಲಿಯೇ ಸೇರುತ್ತಿದ್ದರು. ಇದರ ಸುತ್ತಲೂ ದನದ ಕೊಟ್ಟಿಗೆಗಳೂ ಕುದುರೆ ಲಾಯಗಳು ಇರುತ್ತಿದ್ದುವು. ಇವರ ನಾಯಕ, ಅವನ ಪತ್ನಿ ಮತ್ತಿತರ ಅಂತಹ ಮುಖ್ಯಸ್ಥರೂ ಇಲ್ಲಿ–ಅಲ್ಲಿ ಎತ್ತರವಾದ ಒಂದು ವೇದಿಕೆಯ ಮೇಲೆಯೋ ಇಲ್ಲ ಉಪ್ಪರಿಗೆಯ ಮೇಲಿನ ಹಜಾರದಲ್ಲಿಯೋ ಮಲಗುತ್ತಿದ್ದರು. ಸಾಮಾನ್ಯ ಜನರು ಇಂಡಿಯಾ ದೇಶದ ಕುಟುಂಬಗಳಲ್ಲಿ ಇಂದಿಗೂ ಇರುವಂತೆ ಎಲ್ಲಿ ಅಂದರೆ ಅಲ್ಲಿ ಮಲಗುತ್ತಿದ್ದರು. ಆಯುಧಗಳು, ಒಡವೆಗಳು, ಉಪಕರಣಗಳು, ಮತ್ತಿತರ ಅಂತಹ ಸಾಮಾನುಗಳು ಮಾತ್ರ ವೈಯಕ್ತಿಕ ಸ್ವತ್ತಾಗಿದ್ದುವು. ಉಳಿದೆಲ್ಲಾ ಸಂಪತ್ತು ಇವರ ಪಿತೃಪ್ರಧಾನ ಸಮಾಜದ ಸಾಮಾನ್ಯ ಆಸ್ತಿಯಾಗಿತ್ತು. ಇದು ಒಂದು ಬಗೆಯ ಕಮ್ಯೂನಿಸಂ. ಹುಲ್ಲುಗಾವಲುಗಳು ಮತ್ತು ದನಕರು ಮುಖಂಡನ ಸ್ವತ್ತೆನಿಸಿಕೊಂಡಿದ್ದರೂ ಒಟ್ಟು ಸಮಾಜದ ಹಿತಕ್ಕೋಸ್ಕರ ಅವು ಉಪಯೋಗವಾಗುತ್ತಿದ್ದುವು. ಅರಣ್ಯಗಳು ಮತ್ತು ನದಿಗಳು ಯಾರಿಗೂ ಸೇರಿದುವಾಗಿರಲಿಲ್ಲ.

ಮೆಸಪೊಟೇಮಿಯ ಮತ್ತು ನೈಲ್ ಪ್ರದೇಶದ ನಾಗರಿಕತೆಗಳು ಬೆಳೆಯುತ್ತಿದ್ದಾಗ ಈ ಜನರು ಮಧ್ಯ ಯುರೋಪು ಮತ್ತು ಪಶ್ಚಿಮ ಏಷ್ಯದ ಮಧ್ಯ ಭಾಗಗಳಲ್ಲಿ ಅಭಿವೃದ್ಧಿ ಹೊಂದುತ್ತಿದ್ದರು. ಕ್ರಿ.ಪೂ. 2000 ದಿಂದ 1000ದವರೆಗಿನ ಕಾಲದಲ್ಲಿ ಇವರು ಸೂರ್ಯ ಶಿಲಾ ಸಂಸ್ಕೃತಿಯ ಜನರ ಮೇಲೆ ದಾಳಿಯಿಟ್ಟು ಅವರನ್ನು ಒತ್ತರಿಸಿಕೊಂಡು ಬಂದರು. ಬ್ರಿಟನ್, ಸ್ಪೇನ್ ಮತ್ತು ಫ್ರಾನ್ಸಿಗೆ ಇವರು ಹೀಗೆ ಬಂದರು. ಇವರು ಪಶ್ಚಿಮ ಯೂರೋಪಿಗೆ ಮುಖ್ಯವಾಗಿ ಎರಡು ಬಾರಿ ನುಗ್ಗಿದರು. ಮೊದಲ ಬಾರಿ ಬಂದವರಿಗೆ ಗಾಯ್‌ಡೆಲಿಕ್ ಸೆಲ್ಟರು (Goidelic Celts) ಎನ್ನುತ್ತಾರೆ. ಕಂಚಿನ ಆಯುಧಗಳನ್ನು ಉಪಯೋಗಿಸುತ್ತಿದ್ದ ಈ ಜನರು ಬ್ರಿಟನ್ ಮತ್ತು ಐರ್‌ಲೆಂಡಿನವರೆಗೂ ನುಗ್ಗಿದರು. ಬ್ರಿಟನಿಯ ಕಾರ್ನಾಕ್ ಮತ್ತು ಇಂಗ್ಲೆಂಡಿನ ಅವ್‌ಬರಿ ಮತ್ತು ಸ್ಟೋನ್‌ಹೆಂಜಿನಲ್ಲಿರುವ ಕಲ್ಲಿನ ಅಗಾಧವಾದ ರಚನೆಗಳನ್ನು ಕಟ್ಟಿದ ಜನರನ್ನು ಇವರು ಪೂರ್ಣವಾಗಿ ಸೋಲಿಸಿದರು. ಎರಡನೆ ಬಾರಿ ಹೀಗೆ ಬಂದವರೂ ಇವರಿಗೆ ಸಂಬಂಧಿಸಿದ ಜನರೇ ಆದರೂ ಅವರಲ್ಲಿ ಬೇರೆ ಕುಲಗಳೂ ಮಿಶ್ರವಾಗಿದ್ದಿರಬಹುದು. ಬ್ರೈಥೋಮಿಕ್ ಸೆಲ್ಟರು (Brythomic) ಎಂದು ಕರೆಸಿಕೊಳ್ಳುವ ಈ ಜನ ಪಟ್ಟಣವನ್ನು ಉಪಯೋಗಿಸುತ್ತಿದ್ದರು. ಇವರಾಡುತ್ತಿದ್ದ ಭಾಷೆಯೇ ಇಂದಿನ ವೆಲ್ಷ್ ಭಾಷೆಯ ಮೂಲ.

ಇಂತಹ ಸೆಲ್ಟ್ ಪಂಗಡಗಳಿಗೆ ಸೇರಿದ ಜನರು ದಕ್ಷಿಣ ದಿಕ್ಕಿನಲ್ಲಿ ಸ್ಪೇನಿಗೆ ಹರಡಿದರು. ಅಲ್ಲಿ ಇನ್ನೂ ವಾಸಿಸುತ್ತಿದ್ದ ಹೆಲಿಯೊಲಿಥಿಕ್ ಸಂಸ್ಕೃತಿಯ ಬಾಸ್ಕ್ ಜನರಲ್ಲದೆ

ಸಮುದ್ರ ತೀರದಲ್ಲಿದ್ದ ಸೆಮಿಟಿಕ್ ಫಿನೀಷಿಯನ್ ಜನರನ್ನು ಇವರು ಸಂಧಿಸಿದರು. ಇವರನ್ನು ಬಹುಮಟ್ಟಿಗೆ ಹೋಲುತ್ತಿದ್ದ ಇತರ ಪಂಗಡಗಳವರು ಇನ್ನೂ ಕಾಡುಗಳಿಂದ ತುಂಬಿದ್ದ ಇಟಲಿಯನ್ನು ಪ್ರವೇಶಿಸಿದರು. ಆದರೆ ಈ ಜನರಿಗೆ ಹೋದಲ್ಲೆಲ್ಲಾ ಗೆಲುವಾಗಲಿಲ್ಲ. ಕ್ರಿ.ಪೂ. 8 ನೇ ಶತಮಾನದಲ್ಲಿ ಚರಿತ್ರೆಯಲ್ಲಿ ರೋಂ ನಗರ ಕಾಣಿಸಿಕೊಳ್ಳುತ್ತದೆ. ಟೈಬರ್ ನದೀ ತೀರದ ಈ ಪಟ್ಟಣ ಆಗ ವಾಣಿಜ್ಯ ಕೇಂದ್ರವಾಗಿತ್ತು. ಅಲ್ಲಿ ಆರ್ಯನ್ ಬುಡಕಟ್ಟಿನ ಲ್ಯಾಟಿನ್ ಜನರೇ ಇದ್ದರೂ ಅವರು ಎಟ್ರುಸ್ಕನ್ ದೊರೆಗಳ ಮತ್ತು ಶ್ರೀಮಂತರ ಅಧೀನರಾಗಿ ಬಾಳುತ್ತಿದ್ದರು.

ಪಶ್ಚಿಮದಲ್ಲಿ ಆರ್ಯನ್ ಗುಂಪುಗಳು ಹೇಗೆ ಹರಡಿದುವೆಂದು ನೋಡಿದ್ದಾಯಿತು. ಈ ಜನರ ಮೂಲಸ್ಥಾನದ ಪೂರ್ವಭಾಗದಿಂದಲೂ ಹೀಗೆಯೇ ಜನ ವಲಸೆ ಹೊರಟರು. ಇಲ್ಲಿ ಇವರು ದಕ್ಷಿಣ ದಿಕ್ಕಿಗೆ ಹೋದರು. ಕ್ರಿ.ಪೂ. 1000 ಕ್ಕೂ ಹಿಂದೆಯೇ ಸಂಸ್ಕೃತವನ್ನಾಡುತ್ತಿದ್ದ ಆರ್ಯರು ಇಂಡಿಯಾ ದೇಶದ ಪಶ್ಚಿಮದ ಕಣಿವೆಗಳ ಮೂಲಕ ಉತ್ತರ ಹಿಂದೂಸ್ಥಾನವನ್ನು ಸೇರಿದ್ದರು. ಇಲ್ಲಿ ಇವರು ಕಪ್ಪು ಬಣ್ಣದ ದ್ರಾವಿಡರನ್ನು ಸಂಧಿಸಿ ಅವರಿಂದ ಎಷ್ಟೋ ವಿಷಯಗಳನ್ನು ಕಲಿತರು. ಇತರ ಕೆಲವು ಆರ್ಯನ್ ಪಂಗಡಗಳು ಮಧ್ಯ ಏಷ್ಯಾದ ಬೆಟ್ಟಗಳನ್ನು ಕಣಿವೆಗಳ ಮಾರ್ಗವಾಗಿ ದಾಟಿ ಈಗ ಇಂತಹ ಜನರು ಕಂಡು ಬರುವುದಕ್ಕಿಂತಲೂ ಬಹು ಪೂರ್ವಕ್ಕೆ ಪಸರಿಸಿರಬೇಕೆಂದು ತೋರುತ್ತದೆ. ಏಕೆಂದರೆ ಗೌರವರ್ಣದ, ನೀಲಿಕಣ್ಣುಳ್ಳ ಆದರೂ ಮಂಗೋಲ್ ಭಾಷೆಗಳನ್ನಾಡುವ ಜನ ಈಗಲೂ ಪೂರ್ವ ತುರ್ಕಿಸ್ಥಾನದಲ್ಲಿದ್ದಾರೆ.

ಕಪ್ಪು ಮತ್ತು ಕ್ಯಾಸ್ಪಿಯನ್ ಸಮುದ್ರಗಳ ನಡುವೆ ಇದ್ದ ಪ್ರಾಚೀನ ಬುಡಕಟ್ಟಿನ ಹಿಟ್ಟೈಟ್ ಜನರು ಕ್ರಿ.ಪೂ. 1000ಕ್ಕೂ ಮುಂಚೆಯೇ ಆರ್ಮೇನಿಯನ್ನರಲ್ಲಿ ವಿಲೀನ ಹೊಂದಿ ಆರ್ಯ ಸಂಸ್ಕೃತಿಯಲ್ಲಿ ಸೇರಿ ಹೋದರು. ಅಸ್ಸಿರಿಯನ್ನರಿಗೂ ಮತ್ತು ಬೇಬಿಲೋನಿಯನ್ನರಿಗೂ ಅಷ್ಟು ಹೊತ್ತಿಗಾಗಲೇ ಎದುರಿಸಲು ದುಸ್ಸಾಧ್ಯರಾದ ಹೊಸ ಅನಾಗರಿಕ ಜನಾಂಗಗಳು ತಮ್ಮ ಈಶಾನ್ಯ ಗಡಿಯಲ್ಲಿ ತೊಂದರೆ ಕೊಡುತ್ತಿದ್ದಾರೆಂಬ ಅರಿವಾಗಿತ್ತು. ಈ ಗುಂಪುಗಳಲ್ಲಿ ಸಿಥಿಯನ್ನರು, ಮೀಡರು ಮತ್ತು ಪರ್ಷಿಯನ್ನರು ಮುಖ್ಯರಾದವರು.

ಆದರೂ ಹಳೆಯ ನಾಗರಿಕತೆಗಳಿಗೆ ಆರ್ಯನ್ನರಿಂದ ಬಲವಾದ ಪೆಟ್ಟು ತಗುಲಿದುದು ಬಾಲ್ಕನ್ ಪರ್ಯಾಯ ದ್ವೀಪದ ಮೂಲಕ. ಕ್ರಿ.ಪೂ. 1000 ಕ್ಕೆ ಅನೇಕ ಶತಮಾನಗಳ ಹಿಂದಿನಿಂದಲೇ ಈ ಜನ ದಕ್ಷಿಣ ದಿಕ್ಕಿಗೆ ಹೊರಟು ಏಷ್ಯಾ ಮೈನರಿಗೆ ಬರಲಾರಂಭಿಸಿದ್ದರು. ಹೀಗೆ ಮೊದಲು ಬಂದವರಲ್ಲಿ ಫ್ರಿಜಿಯನ್ನರು ಮುಖ್ಯರಾದವರು. ಬಳಿಕ ಇಯೋಲಿಕ್, ಐಯೋನಿಕ್ ಮತ್ತು ಡೋರಿಯನ್ ಗ್ರೀಕರು ಬಂದರು. ಕ್ರಿ.ಪೂ. 1000ದ ಹೊತ್ತಿಗಾಗಲೇ ಇವರು ಗ್ರೀಸ್‌ನ ಮುಖ್ಯ ಭೂಭಾಗ ಮತ್ತು ಅದರ ಸುತ್ತಮುತ್ತಲಿನ ದ್ವೀಪಗಳಲ್ಲಿ ಪ್ರಾಚೀನವಾದ ಈಜಿಯನ್ ನಾಗರಿಕತೆಯು ಹೆಸರಳಿಸಿಬಿಟ್ಟಿದ್ದರು. ಮೈಸಿನೇ (Mycenae) ಮತ್ತು ಟಿರಿನ್ಸ್ (Tiryns) ನಗರಗಳು ಪೂರ್ತಿ

ನಿರ್ನಾಮವಾಗಿದ್ದವು. ನಾಸಸ್ ಕೂಡ ಹೆಚ್ಚು ಕಡಿಮೆ ಜನರ ಮನಸ್ಸಿನಿಂದ ಮರೆಯಾಗಿ ಹೋಗಿತ್ತು. ಕ್ರಿ.ಪೂ. 1000ಕ್ಕೆ ಮುಂಚೆಯೇ ಸಮುದ್ರಯಾನ ಮಾಡತೊಡಗಿದ್ದ ಗ್ರೀಕರು ಕ್ರೀಟ್ ಮತ್ತು ರೋಡ್ಸ್ ದ್ವೀಪಗಳಲ್ಲಿ ನೆಲಸಿದ್ದಲ್ಲದೆ ಸಿಸಿಲಿ ಮತ್ತು ದಕ್ಷಿಣ ಇಟಲಿಯಲ್ಲಿ ಆ ಮೊದಲು ಫಿನಿಷಿಯನ್ನರು ಮಾಡಿದ್ದಂತೆ ಎಲ್ಲೆಡೆಯಲ್ಲಿಯೂ ತಮ್ಮ ವಸಾಹತುಗಳನ್ನು ಸ್ಥಾಪಿಸುತ್ತಿದ್ದರು.

ಅಸ್ಸಿರಿಯಾದಲ್ಲಿ ಮೂರನೆಯ ಪಿಲೆಸರ್(Tiglath pileser) ಮತ್ತು ಎರಡನೇ ಸಾರ್ಗನ್ ಹಾಗೂ ಸಾರ್ದನಪಾಲಸ ಆಳುತ್ತಾ ಬೇಬಿಲೋನ್, ಸಿರಿಯ ಮತ್ತು ಈಜಿಪ್ಟುಗಳೊಡನೆ ಹೋರಾಡುತ್ತಿದ್ದಾಗ ಇಟಲಿ, ಗ್ರೀಸ್ ಮತು ಉತ್ತರ ಪರ್ಷಿಯಗಳಲ್ಲಿ ಆರ್ಯನ್ ಜನರು ಹಳೆಯ ನಾಗರಿಕತೆಗಳಿಂದ ಅನೇಕ ವಿಷಯಗಳನ್ನು ಕಲಿತು ಅವುಗಳನ್ನು ಇಟಲಿ, ಗ್ರೀಸ್ ಮತ್ತು ಉತ್ತರ ಪರ್ಷಿಯಗಳಲ್ಲಿ ತಮ್ಮ ಉದ್ದೇಶ ಸಾಧನೆಗೋಸ್ಕರ ಉಪಯೋಗಿಸಿಕೊಳ್ಳುತ್ತಿದ್ದರು. ಕ್ರಿ.ಪೂ. 900 ರ ಮುಂಚೆ ಆರು ನೂರು ವರ್ಷಗಳ ಕಾಲದ ಚರಿತ್ರೆ ಎಂದರೆ ಈ ಆರ್ಯನ್ ಜನ ಪ್ರಬಲರಾಗುತ್ತಾ ಕೊನೆಗೆ ಪ್ರಾಚೀನ ನಾಗರಿಕತೆಗಳನ್ನೆಲ್ಲಾ ಸೋಲಿಸಿ ಈಜಿಪ್ಷಿಯನ್, ಸೆಮಿಟಿಕ್ ಮತ್ತು ಈಜಿಯನ್ನನ್ನು ಹೇಗೆ ಸ್ವಾಧೀನಪಡಿಸಿಕೊಂಡರೆನ್ನುವ ಕಥೆಯೇ ಆಗಿದೆ. ಮೇಲೆ ನೋಡುವುದಕ್ಕೇನೋ ಆರ್ಯರು ಪೂರ್ಣ ವಿಜಯಿಗಳಾದರೆಂದು ಅನ್ನಿಸಬಹುದು. ಆದರೆ ಅಧಿಕಾರ ಸೂತ್ರ ಆರ್ಯರ ಕೈ ಸೇರಿದ ಮೇಲೆಯೂ ಆರ್ಯನ್, ಸೆಮಿಟಿಕ್ ಮತ್ತು ಈಜಿಯನ್ ಭಾವನೆಗಳ ಮತ್ತು ಜೀವನ ಮಾರ್ಗಗಳ ನಡುವಣ ಎಳೆದಾಟ ಬಹುಕಾಲ ನಡೆಯಿತು. ಏಕೆ ! ಈ ಹೋರಾಟ ಇನ್ನೂ ನಿಂತಿಲ್ಲವೆಂದು ಹೇಳಬಹುದು.

20 ಬೇಬಿಲಾನಿನ ಕೊನೆಯ ಸಾಮ್ರಾಜ್ಯ ಮತ್ತು ಒಂದನೇ ಡೇರಿಯಸ್ಸಿನ ಚಕ್ರಾಧಿಪತ್ಯ

ಮೂರನೇ ಟಿಗ್ಲಾತ್ ಪಿಲೆಸರ್ ಮತ್ತು ಎರಡನೆಯ ಸಾರ್ಗನ್ನರ ಆಡಳಿತದಲ್ಲಿ ಬೇಬಿಲಾನ್ ಪ್ರಬಲ ಸೈನ್ಯ ಶಕ್ತಿಯುಳ್ಳ ರಾಷ್ಟ್ರವಾಯಿತು ಎಂದು ಈ ಮೊದಲೇ ನೋಡಿದ್ದೇವೆ. ರಾಜದ್ರೋಹ ಮಾಡಿ ಸಿಂಹಾಸನವನ್ನೇರಿದ ಸಾರ್ಗನ್ನನ ಹುಟ್ಟು ಹೆಸರು ನಿಜವಾಗಿಯೂ ಬೇರೆ ಇತ್ತು. ಬೇಬಿಲೋನಿಯನ್ನರ ಮನಸ್ಸಂತೋಷಪಡಿಸಲೋಸುಗ ಈತನು ತನಗಿಂತ ಎರಡು ಸಾವಿರ ವರ್ಷಗಳ ಹಿಂದಿದ್ದ ಅಕ್ಕಡಿಯನ್ ಚಕ್ರಾಧಿಪತ್ಯದ ಸ್ಥಾಪಕ ಒಂದನೆಯ ಸಾರ್ಗನ್ನಿನ ಹೆಸರಿಟ್ಟುಕೊಂಡನು. ಯುದ್ಧದಲ್ಲಿ ಸೋತಿದ್ದರೂ ಬೇಬಿಲಾನ್ ನಿನೆವೆಗಿಂತ ಬಲಯುತವಾಗಿತ್ತು ; ಅದರ ಜನಸಂಖ್ಯೆ ನಿನೆವೆಗಿಂತ ಹೆಚ್ಚಾಗಿತ್ತು. ಅದರ ಮುಖ್ಯ ದೇವತೆ ಬೆಲ್‌ಮಾರ್ಡಕ್. ಆ ದೇವರ ಅರ್ಚಕರು ಮತ್ತು ಆ ಪಟ್ಟಣದ ಮುಖ್ಯ ವರ್ತಕರನ್ನು ಯಾರೂ ಉದಾಸೀನ ಮಾಡುವಂತಿರಲಿಲ್ಲ. ಕ್ರಿ.ಪೂ. 800 ರ ಹೊತ್ತಿಗಾಗಲೇ ಮಾನವ ಬಹು ಮುಂದುವರಿದಿದ್ದನು. ಮೊದಲು ನಗರ ಯಾವುದಾದರೂ ಸೋತ ಕೂಡಲೇ ಲೂಟಿ, ಸಾಮೂಹಿಕ ಕೊಲೆ ನಡೆಯುತ್ತಿತ್ತು. ಈಗ

ಹಾಗಿರಲಿಲ್ಲ. ಯುದ್ಧದಲ್ಲಿ ಗೆದ್ದವರು ಸೋತವರ ಮನಸ್ಸಂತೋಷಪಡಿಸಲು ಪ್ರಯತ್ನಿಸಿ ಅವರನ್ನು ತಮ್ಮ ಕಡೆ ಒಲಿಸಿಕೊಳ್ಳಲು ನೋಡುತ್ತಿದ್ದರು. ಎರಡನೆ ಸಾರ್ಗನ್ನನ ನಂತರ ಈ ಹೊಸ ಅಸ್ಸಿರಿಯನ್ ಚಕ್ರಾಧಿಪತ್ಯ ಸುಮಾರು ನೂರೈವತ್ತು ವರ್ಷ ನಡೆದುಕೊಂಡು ಬಂದಿತು. ಈ ವಂಶದ ಅಸ್ಸುರ ಬನಿಪಾಲ (ಸಾರ್ಡನ್ ಪಾಲಸ್) ಕೆಳಗಣ ಈಜಿಪ್ಟನ್ನು ವಶಪಡಿಸಿಕೊಂಡಿದ್ದನು ಎಂದು ಮೊದಲೇ ನೋಡಿದ್ದೇವೆ.

ಆದರೆ ಅಸ್ಸಿರಿಯದ ಬಲ, ಒಗ್ಗಟ್ಟು ಒಮ್ಮೆಗೇ ಕುಂದಿಹೋಯಿತು. ಒಂದನೆಯ ಸಾಮ್ಮೆಟಿಕಸ್ (Psammetichus) ಎಂಬ ಫ್ಯಾರೋವಿನ ಮುಖಂಡತ್ವದಲ್ಲಿ ಈಜಿಪ್ಟು ಪ್ರಬಲ ಯತ್ನ ಮಾಡಿ ಪರಕೀಯರನ್ನು ಹೊರತಳ್ಳಿ ಆ ಬಳಿಕ ಎರಡನೇ ನೆಕೋ (Necho) ಕೈ ಕೆಳಗೆ ಸಿರಿಯವನ್ನು ಆಕ್ರಮಿಸಿಕೊಳ್ಳಲು ಸಹ ಯತ್ನಿಸಿತ್ತು. ಅಷ್ಟು ಹೊತ್ತಿಗೆ ಅಸ್ಸಿರಿಯ ಬೇರೆ ಶತ್ರುಗಳನ್ನೆದುರಿಸುತ್ತ ಇದ್ದುದರಿಂದ ಇವರನ್ನು ಸರಿಯಾಗಿ ಎದುರಿಸಲಾಗಲಿಲ್ಲ. ಆಗ್ನೇಯ ಮೆಸಪೊಟೇಮಿಯದಿಂದ ಬಂದ ಮತ್ತೊಂದು ಸೆಮಿಟಿಕ್ ಪಂಗಡದ ಚಾಲ್ಡಿಯನ್ನರು ಈಶಾನ್ಯ ದಿಕ್ಕಿನ ಮೀಡರು ಮತ್ತು ಪರ್ಷಿಯನ್ನರೊಡನೆ (ಇವರು ಆರ್ಯನ್ನರು) ಸೇರಿಕೊಂಡು ಕ್ರಿ.ಪೂ. 606 ರಲ್ಲಿ ಅಸ್ಸಿರಿಯವನ್ನು ಪೂರ್ತಿ ಸೋಲಿಸಿ ನಿನೆವೆ ಪಟ್ಟಣವನ್ನು ವಶಪಡಿಸಿಕೊಂಡರು. ಇಲ್ಲಿಂದ ಘಟನೆಗಳ ಕಾಲವನ್ನು ನಿಖರವಾಗಿ ಗುರ್ತಿಸಲು ಸಾಧ್ಯ.

ಹೀಗೆ ಗೆದ್ದ ಅಸ್ಸಿರಿಯ ಸಾಮ್ರಾಜ್ಯವನ್ನು ವಿಜಯಿಗಳು ಹಂಚಿಕೊಂಡರು. ಉತ್ತರದಲ್ಲಿ ಸೈಯಾಕ್ಸೆರೆಸ್ (Cyaxares)ನ ಕೈಕೆಳಗೆ ಮೀಡಿಯನ್ ಚಕ್ರಾಧಿಪತ್ಯ ಸ್ಥಾಪನೆಯಾಯಿತು. ನಿನೆವೆ ಇದರಲ್ಲಿ ಸೇರಿಹೋಯಿತು. ಏಕ್‌ಬತಾನಾ (Ecba-atana) ಇವರ ರಾಜಧಾನಿಯಾಗಿತ್ತು. ಇವರ ದಕ್ಷಿಣಕ್ಕೆ ಬಾಲಚಂದ್ರನಾಕೃತಿಯ ಹೊಸಚಾಲ್ಡಿಯನ್ ಚಕ್ರಾಧಿಪತ್ಯ ಸ್ಥಾಪನೆಯಾಯಿತು. ಇದಕ್ಕೆ ಎರಡನೇ ಬೇಬಿಲಾನ್ ಸಾಮ್ರಾಜ್ಯವೆನ್ನುತ್ತಾರೆ. ನೆಬುಚಡ್ನೆಜಾರ್ ದಿ ಗ್ರೇಟ್(ಬೈಬಲ್ಲಿನಲ್ಲಿ ಬರುವ ನೆಬುಚಡ್ನೆಜಾರ್ ಇವನೇ)ನ ಆಡಳಿತದಲ್ಲಿ ಇದು ಅತ್ಯಂತ ಸಬಲವೂ ಐಶ್ವರ್ಯಭರಿತವೂ ಆಯಿತು. ಆದರೂ ಬೇಬಿಲಾನಿಗೆ ಇದು ಉನ್ನತಿಯ ಕಾಲ ಹೇಗೋ ಹಾಗೆ ಕಡೆಗಾಲವೂ ಹೌದು. ಕೆಲವು ಕಾಲ ಇವೆರಡು ಸಾಮ್ರಾಜ್ಯಗಳೂ ಸೌಹಾರ್ದದಿಂದಿದ್ದುವು. ನೆಬುಚಡ್ನೆಜಾರ್ ತನ್ನ ಮಗಳನ್ನು ಸಯಾಕ್ಸೆರೆಸ್‌ಗೆ ವಿವಾಹ ಮಾಡಿಕೊಟ್ಟಿದ್ದನು.

ಇದೇ ಸಮಯದಲ್ಲಿ ಎರಡನೆಯ ನೇಕೋ ಸಿರಿಯವನ್ನು ಅತಿ ಸುಲಭವಾಗಿ ಸೋಲಿಸಿದನು. ಜ್ಯೂಡಾದ ರಾಜ ಜೊಸ್ಸೈಯಾನನ್ನು ಕ್ರಿ.ಪೂ. 608 ರಲ್ಲಿ ಮೆಗೆಡ್ಡೊವಿನಲ್ಲಿ ಸೋಲಿಸಿ ಕೊಂದು (ಈ ಪುಟ್ಟ ದೇಶ ಜ್ಯೂಡಾ ವಿಷಯ ಇನ್ನೂ ಮುಂದೆ ತಿಳಿಸಲಾಗುವುದು) — ಅಲ್ಲಿಂದ ಮುಂದೆ ಯೂಫ್ರೆಟೀಸ್ ನದಿ ಕಡೆ ನುಗ್ಗಿದನು. ಇಲ್ಲಿ ಅವನತಿ ಹೊಂದುತ್ತಿದ್ದ ಅಸ್ಸಿರಿಯದ ಬದಲು ಆಗ ತಾನೇ ಪುನರ್ಜನ್ಮ ಪಡೆದಿದ್ದ ಬೇಬಿಲೋನಿಯವನ್ನು ಎದುರಿಸಬೇಕಾಯಿತು. ಚಾಲ್ಡಿಯನ್ನರು ಈಜಿಪ್ಟಿನವರೊಡನೆ ಶೌರ್ಯದಿಂದ ಕಾದಿ ಅವರನ್ನು ಸಂಪೂರ್ಣವಾಗಿ ಸೋಲಿಸಿ ನೇಕೋವನ್ನು ಈಜಿಪ್ಟಿನವರೆಗೂ

ಬೆನ್ನಟ್ಟಿಕೊಂಡು ಹೋದರು. ಹಳೆ ಈಜಿಪ್ಟಿನ ಎಲ್ಲೆಯವರೆಗೂ ಬೇಬಿಲಾನ್ ಸಾಮ್ರಾಜ್ಯ ಪಸರಿಸಿತು.

ಕ್ರಿ.ಪೂ. 606 ರಿಂದ 539 ರವರೆಗೂ ಈ ಎರಡನೇ ಬೇಬಿಲಾನ್ ಸಾಮ್ರಾಜ್ಯ ಅಪಾಯಗಳ ಮಧ್ಯೆಯೇ ಚೆನ್ನಾಗಿ ನಡೆದುಕೊಂಡು ಬಂದಿತು. ಉತ್ತರ ದಿಕ್ಕಿನ ಶಕ್ತಿಯುತವಾದ ಮೀಡಿಯನ್ ಸಾಮ್ರಾಜ್ಯದೊಡನೆ ಶಾಂತಿ ಇರುವವರೆಗೂ ಇದಕ್ಕೆ ಏನೂ ಆತಂಕ ಇರಲಿಲ್ಲ. ಈ ಅರುವತ್ತೇಳು ವರ್ಷಗಳು ಇಲ್ಲಿ ಜೀವನ ಸುಖಮಯವಾಗಿದ್ದುದಲ್ಲದೆ ಜ್ಞಾನಾರ್ಜನೆಗೆ ತುಂಬ ಪ್ರೋತ್ಸಾಹವಿತ್ತು.

ಅಸ್ಸಿರಿಯನ್ ದೊರೆಗಳ ಆಡಳಿತದಲ್ಲಿಯೂ — ಅದರಲ್ಲೂ ಸಾರ್ಡನ ಪಾಲಸ್ಸಿನ ಕಾಲದಲ್ಲಿ — ಬೇಬಿಲಾನ್ ದೊಡ್ಡ ಜ್ಞಾನ ಕೇಂದ್ರವಾಗಿತ್ತು. ಇವನು ಅಸ್ಸಿರಿಯನ್ ಆದರೂ ಬೇಬಿಲಾನಿನವರಂತೆಯೇ ಇದ್ದನು. ಈತನು ಒಂದು ಗ್ರಂಥ ಭಂಡಾರವನ್ನು ಸ್ಥಾಪಿಸಿದನು. ಆದರೆ ಇದರಲ್ಲಿದ್ದ ಗ್ರಂಥಗಳು, ಕಾಗದದ ಪುಸ್ತಕಗಳಲ್ಲ. ಸುಮೇರಿಯನ್ನರ ಕಾಲದಿಂದ ಅಲ್ಲಿ ಬರೆಯಲು ಉಪಯೋಗಿಸುತ್ತಿದ್ದ ಜೇಡಿಮಣ್ಣಿನ ಹಲಗೆಗಳೇ ಇದರಲ್ಲಿದ್ದ ಪುಸ್ತಕಗಳು. ಈ ಪುಸ್ತಕ ಸಂಗ್ರಹವನ್ನು ಈಚೆಗೆ ಮಣ್ಣಿಂದ ಹೊರತೆಗೆದಿದ್ದಾರೆ. ಇದು ಬಹುಶಃ ಇಂದಿನವರೆಗೆ ದೊರೆತಿರುವ ಚಾರಿತ್ರಿಕ ದಾಖಲೆಗಳಲ್ಲೆಲ್ಲಾ ಅತ್ಯಂತ ಬೆಲೆಬಾಳುವುದಾಗಿದೆ. ಈ ಚಾಲ್ಡಿಯನ್ ದೊರೆಗಳಲ್ಲಿ ಕೊನೆಯವನಾದ ನ್ಯಬೊನಿಡಸ್‌ಗೆ ಸಾಹಿತ್ಯದಲ್ಲಿ ಈತನಿಗಿಂತಲೂ ಹೆಚ್ಚು ಆಸಕ್ತಿ ಇತ್ತು. ಪ್ರಾಚೀನ ಸಂಶೋಧನೆಗೆ ಈತನು ಉತ್ತೇಜನ ಕೊಟ್ಟನು. ಒಂದನೇ ಸಾರ್ಗನ್ನನ ಸಿಂಹಾಸನಾರೋಹಣದ ಕಾಲವನ್ನು ಸಂಶೋಧಕರು ನಿಷ್ಕರ್ಷೆ ಮಾಡಿದಾಗ ಈತನು ಅದು ಯಾವಾಗಲೂ ನೆನಪಿನಲ್ಲಿರುವಂತೆ ಶಾಸನಗಳನ್ನು ಬರೆಸಿದನು. ಆದರೆ ಅಷ್ಟು ಹೊತ್ತಿಗಾಗಲೇ ಈತನ ರಾಜ್ಯದಲ್ಲಿ ಒಡಕುಗಳು ಕಾಣಿಸಿಕೊಂಡಿದ್ದುವು. ದೇಶದಲ್ಲಿ ಒಗ್ಗಟ್ಟನ್ನು ತರುವುದಕ್ಕೋಸ್ಕರ ತಾನು ಬೇರೆ ಬೇರೆ ಸ್ಥಳಗಳ ದೇವತೆಗಳನ್ನು ರಾಜಧಾನಿ ಬೇಬಿಲಾನಿಗೆ ತಂದು ಅಲ್ಲಿ ಅವುಗಳಿಗೆ ಅನೇಕ ದೇವಸ್ಥಾನಗಳನ್ನು ಕಟ್ಟಿಸಿದನು. ಮುಂದೆ ರೋಮನ್ನರು ಇದೇ ಉಪಾಯದಿಂದ ದೇಶಕ್ಕೆ ಒಗ್ಗಟ್ಟನ್ನು ತಂದುಕೊಟ್ಟರು. ಆದರೆ ಬೇಬಿಲಾನಿನಲ್ಲಿ ಇದರ ಪರಿಣಾಮ ಬೇರೆಯೇ ಆಯಿತು. ಬೇಬಿಲಾನಿಯನ್ನರ ಪ್ರಮುಖ ದೇವತೆ ಬೆಲ್ ಮಾರ್ಡಕ್‌ನ ಅರ್ಚಕರುಗಳಿಗೆ ಇದು ಸರಿ ಹೋಗಲಿಲ್ಲ. ಇವರೆಲ್ಲಾ ಒಂದಾಗಿ ಪಕ್ಕದ ಮೀಡಿಯನ್ ಸಾಮ್ರಾಜ್ಯಾಧಿಪತಿ ಪರ್ಷಿಯದ ಸೈರಸ್‌ನನ್ನು, ನ್ಯಬೊನಿಡಸ್ಸನ್ನನ ಬದಲು ಪಟ್ಟಕ್ಕೆ ತರಲು ಒಳಸಂಚು ಹೂಡಿದರು. ಪೂರ್ವ ಏಷ್ಯಾ ಮೈನರಿನಲ್ಲಿದ್ದ ಲಿಡಿಯ ದೇಶದ ಐಶ್ವರ್ಯವಂತ ದೊರೆ ಕ್ರೋಸಸ್‌ನನ್ನು ಸೋಲಿಸಿ ಈತನು ಆಗಲೇ ಹೆಸರು ಗಳಿಸಿದ್ದನು. ಕ್ರಿ.ಪೂ. 538ರಲ್ಲಿ ಈತನು ಬೇಬಿಲಾನಿನ ಮೇಲೆ ದಂಡೆತ್ತಿ ಬಂದನು. ಕೋಟೆಯ ಹೊರಗೆ ಚಿಕ್ಕ ಕದನ ನಡೆಯಿತು. ಆದರೆ ಕೋಟೆ ಬಾಗಿಲುಗಳನ್ನು ಒಳಗಿದ್ದವರು ತೆರೆದುಬಿಟ್ಟರು. ಹೆಚ್ಚು ಹೋರಾಟವಿಲ್ಲದೆಯೇ ಈತನ ಸೈನಿಕರು ಪಟ್ಟಣವನ್ನು ಪ್ರವೇಶಿಸಿದರು. ಈ ಸಂಗತಿಯನ್ನು ಬೈಬಲ್ಲಿನಲ್ಲಿ ಹೀಗೆ ವರ್ಣಿಸಿದ್ದಾರೆ.

"ಯುವರಾಜ ಬೆಲ್‌ಷಜಾರ್ ಭೋಜನ ಕೂಟದಲ್ಲಿದ್ದಾಗ ಒಂದು ಕೈ ಕಾಣಿಸಿಕೊಂಡು ಬೆಂಕಿಯ ಅಕ್ಷರಗಳಲ್ಲಿ ಗೋಡೆಯ ಮೇಲೆ ಈ ರಹಸ್ಯ ಪದಗಳನ್ನು ಬರೆಯಿತು. "ಮೆನೆ, ಮೆನೆ, ಟೆಕೆಲ್, ಉಫ಼ರ್ಸಿನ್ "Mene, Mene, Tekel, Upharsin" 'ಇವನ್ನು ಓದಿ ಅರ್ಥ ಹೇಳಲು ಯುವರಾಜನು ಪ್ರವಾದಿ ಡೇನಿಯಲ್‌ನನ್ನು ಕರೆಸಿದನು. ದೇವನು ನಿನ್ನ ಆಳ್ವಿಕೆಯ ದಿನಗಳನ್ನು ಎಣಿಸಿಕೊಂಡಿದ್ದಾನೆ. ನಿನ್ನ ಆಳ್ವಿಕೆ ಮುಗಿಯಿತು. ನಿನ್ನನ್ನು ತಕ್ಕಡಿಯಲ್ಲಿ ಹಾಕಿ ತೂಗಿ ನಿನ್ನ ಯೋಗ್ಯತೆ ಸಾಲದೆಂದು ಆತನು ಕಂಡುಕೊಂಡನು. ನಿನ್ನ ರಾಜ್ಯವನ್ನು ಮೀಡರಿಗೆ ಮತ್ತು ಪರ್ಷಿಯನ್ನರಿಗೆ ಕೊಡಲಾಗಿದೆ' ಎಂದು ಇದರ ಅರ್ಥವೆಂದು ಡೇನಿಯಲ್ ಹೇಳಿದನು." ಪ್ರಾಯಶಃ ಈ ಗೋಡೆ ಮೇಲಿನ ಬರವಣಿಗೆ ಕೂಡ ಬೆಲ್ ಮಾರ್ಡಕ್‌ನ ಪೂಜಾರಿಗಳದ್ದೇ ತಂತ್ರ ಇರಬಹುದು. ಅದೇ ದಿನ ರಾತ್ರಿ ಬೆಲ್‌ಷಜಾರ್ ಹತನಾದನೆಂದು ಬೈಬಲ್ ತಿಳಿಸುತ್ತದೆ. ನ್ಯಬೊನಿಡಸ್ಸನನ್ನು ಶತ್ರುಗಳು ಕೈಸೆರೆ ಹಿಡಿದರು. ಪಟ್ಟಣದ ಆಕ್ರಮಣ ಅದೆಷ್ಟು ಶಾಂತಿಯುತವಾಗಿ ನಡೆಯಿತೆಂದರೆ ಬೆಲ್‌ಮಾರ್ಡಕ್‌ನ ಪೂಜಾವಿಧಿಗಳು ಏನೊಂದೂ ತಡೆಯಿಲ್ಲದೆ ಒಂದೇ ಸಮನೆ ನಡೆಯುತ್ತಲೇ ಇದ್ದುವು.

ಹೀಗೆ ಬೇಬಿಲಾನ್ ಮತ್ತು ಮೀಡ್ ಸಾಮ್ರಾಜ್ಯಗಳು ಒಂದಾದುವು. ಸೈರಸ್ಸನ ಮಗ ಕ್ಯಾಂಬಿಸೆಸ್ ಈಜಿಪ್ಟನ್ನು ವಶಪಡಿಸಿಕೊಂಡನು. ಈತನಿಗೆ ಮುಂದೆ ಹುಚ್ಚು ಹಿಡಿದು ಆಕಸ್ಮಿಕವೊಂದರಲ್ಲಿ ಸತ್ತುಹೋದನು. ಸೈರಸ್ಸನ ಮಂತ್ರಿಗಳಲ್ಲೊಬ್ಬನಾದ ಹಿಸ್ಟಾಸ್ಪೆಸ್ಸನ ಮಗ ಮೀಡರ ಡೇರಿಯಸ್ ಅಥವಾ ಒಂದನೇ ಡೇರಿಯಸ್ ಇವನ ನಂತರ ಪಟ್ಟಕ್ಕೆ ಬಂದನು.

ಪ್ರಾಚೀನ ನಾಗರಿಕತೆಗಳ ಪ್ರದೇಶದಲ್ಲಿದ್ದ ಆರ್ಯನ್ ಸಾಮ್ರಾಜ್ಯಗಳಲ್ಲೆಲ್ಲಾ ಮೊವಲನೆಯದಾದ ಡೇರಿಯಸ್ಸನ ಪರ್ಷಿಯನ್ ಸಾಮ್ರಾಜ್ಯ ಆದುವರೆಗಿದ್ದ ಎಲ್ಲ ಸಾಮ್ರಾಜ್ಯಗಳಿಗಿಂತ ದೊಡ್ಡದಾಗಿತ್ತು. ಇಂಡಿಯದ ಸಿಂಧುನದಿಯವರೆಗೂ ಇದ್ದ ಇದರಲ್ಲಿ ಏಷ್ಯಾ ಮೈನರ್ ಮತ್ತು ಸಿರಿಯ, ಹಳೆಯ ಅಸ್ಸಿರಿಯನ್ ಮತ್ತು ಬೇಬಿಲೋನಿಯನ್ ಚಕ್ರಾಧಿಪತ್ಯಗಳಿಗೊಳಪಟ್ಟಿದ್ದ ಪ್ರದೇಶಗಳು, ಈಜಿಪ್ಟ್, ಕಾಕಸಸ್ ಮತ್ತು ಕ್ಯಾಸ್ಪಿಯನ್ ಪ್ರದೇಶಗಳು, ಮೀಡಿಯ ಮತ್ತು ಪರ್ಷಿಯ ಇವುಗಳೆಲ್ಲ ಇದ್ದುವು. ಇಷ್ಟು ಹೊತ್ತಿಗೆ ಮನುಷ್ಯ ಕುದುರೆ ಸವಾರಿ ಕಲಿತಿದ್ದನು ; ಕುದುರೆ ರಥಗಳು ಬಳಕೆಯಲ್ಲಿದ್ದುವು. ಜೊತೆಗೆ ಸಿದ್ಧಪಡಿಸಿದ ರಸ್ತೆಗಳಿರುತ್ತಿದ್ದುವು. ಹೀಗಾಗಿ ಇಷ್ಟು ದೊಡ್ಡ ಸಾಮ್ರಾಜ್ಯ ಇರಲು ಸಾಧ್ಯವಾಯಿತು. ಆದುವರೆಗೂ ಕತ್ತೆ, ಎತ್ತು ಮತ್ತು ಮರಳುಕಾಡಿನಲ್ಲಿ ಒಂಟೆ ಇವುಗಳೇ ಅತ್ಯಂತ ವೇಗವಾದ ವಾಹನಗಳಾಗಿದ್ದುವು. ಈ ಹೊಸ ಸಾಮ್ರಾಜ್ಯವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪರ್ಷಿಯನ್ ರಾಜರು ದೊಡ್ಡ ಭಾಟಾ ಮಾರ್ಗಗಳನ್ನು ಮಾಡಿಸಿದರು. ರಾಜದೂತರಿಗೆ ಮತ್ತು ಸರ್ಕಾರಿ ಅನುಮತಿ ಪಡೆದಿದ್ದ ಪ್ರಯಾಣಿಕರಿಗೆ ಸವಾರಿಗೆ ಕುದುರೆಗಳು ಯಾವಾಗಲೂ ಸಿದ್ಧವಾಗಿರುತ್ತಿದ್ದುವು. ಇಷ್ಟೇ ಅಲ್ಲದೆ ನಾಣ್ಯ ಚಲಾವಣೆಯೂ ಈ ಹೊತ್ತಿಗೆ ಬಳಕೆಗೆ ಬಂದಿದ್ದರಿಂದ ವ್ಯಾಪಾರ ಮತ್ತು

ಪರಸ್ಪರ ವ್ಯವಹಾರಗಳಿಗೂ ಬಹಳ ಅನುಕೂಲವಾಯಿತು. ಆದರೆ ಬೇಬಿಲಾನ್ ಈ ದೇಶದ ರಾಜಧಾನಿಯಾಗಲಿಲ್ಲ. ಬೆಲ್‌ಮಾರ್ಡುಕನ ಪೂಜಾರಿಗಳಿಗೆ ತಾವು ಮಾಡಿದ ರಾಜದ್ರೋಹದಿಂದ ಏನೂ ಲಾಭವಾಗಲಿಲ್ಲ. ಬೇಬಿಲಾನ್ ಇನ್ನೂ ಪ್ರಮುಖ ಪಟ್ಟಣಗಳಲ್ಲೊಂದಾಗಿದ್ದರೂ ಅವನತಿಗಿಳಿಯುತ್ತಿತ್ತು. ಪರ್ಸಿಪೋಲಿಸ್, ಸೂಸ ಮತ್ತು ಎಕ್‌ಬಟನಾಗಳು ಈ ಹೊಸ ಸಾಮ್ರಾಜ್ಯದ ಮುಖ್ಯ ನಗರಗಳಾಗಿದ್ದುವು. ಸೂಸ ರಾಜಧಾನಿಯಾಗಿತ್ತು. ನಿನೆವೆಯನ್ನು ಜನ ಆಗಲೇ ತ್ಯಜಿಸಿ ಹೋಗಿ ಅದು ಪಾಳು ಬೀಳುತ್ತಿತ್ತು.

21 ಯಹೂದ್ಯರ ಆದಿಚರಿತ್ರೆ

ಈಗ ಹೀಬ್ರ್ಯೂಗಳ ವಿಷಯ ತಿಳಿದುಕೊಳ್ಳೋಣ. ಸೆಮಿಟಿಕ್ ಜನರಲ್ಲೊಬ್ಬರಾದ ಇವರು ಆ ಕಾಲದಲ್ಲಿ ಅಷ್ಟು ಮುಖ್ಯರಾದವರೆನಿಸಿಕೊಳ್ಳದಿದ್ದರೂ ಮುಂದೆ ಪ್ರಪಂಚದ ಚರಿತ್ರೆಯ ಮೇಲೆ ಇವರು ಬೀರಿದ ಪ್ರಭಾವ ಬಹು ದೊಡ್ಡದು. ಕ್ರಿ.ಪೂ. 1000ಕ್ಕೆ ಬಹುಮುಂಚೆಯೇ ಇವರು ಜುಡಿಯದಲ್ಲಿ ನೆಲಸಿದ್ದರು. ಜೆರೂಸಲೆಂ ಮುಂದೆ ಇವರ ರಾಜಧಾನಿಯಾಯಿತು. ಈ ಪ್ರದೇಶದ ದಕ್ಷಿಣ ದಿಕ್ಕಿನಲ್ಲಿ ಈಜಿಪ್ಟ್, ಉತ್ತರಕ್ಕೆ ಪದೇ ಪದೇ ಬದಲಾಗುತ್ತಿದ್ದ ಸಿರಿಯ, ಅಸ್ಸಿರಿಯ ಮತ್ತು ಬೇಬಿಲಾನ್, ಈ ದೊಡ್ಡ ಸಾಮ್ರಾಜ್ಯಗಳಿದ್ದುದರಿಂದ ಈ ದೇಶ ಈಜಿಪ್ಟ್ ಮತ್ತು ಈ ಸಾಮ್ರಾಜ್ಯಗಳ ಮಧ್ಯದ ಹಾದಿಯಾಗಿ ಪರಿಣಮಿಸಿತು. ಹೀಗೆ ಹೀಬ್ರ್ಯೂಗಳ ಕಥೆ ಈ ಸಾಮ್ರಾಜ್ಯಗಳ ಚರಿತ್ರೆಯೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ.

ಪ್ರಪಂಚದಲ್ಲಿ ಈ ಜನ ಪ್ರಾಮುಖ್ಯತೆ ಪಡೆಯಲು ಕಾರಣವೇನೆಂದರೆ ಕ್ರೈಸ್ತರು "ಹಳೆ ಒಡಂಬಡಿಕೆ" ಎಂದು ಕರೆಯುವ ಹೀಬ್ರ್ಯೂ ಬೈಬಲ್ಲನ್ನು ಇವರೇ ಬರೆದಿದ್ದು. ಇದರಲ್ಲಿ ನಿಯಮಗಳು, ಘಟನಾವಳಿಗಳು, ಸ್ತೋತ್ರಗಳು, ಸುಭಾಷಿತಗಳು ಕವಿತೆಗಳು ಕಟ್ಟುಕಥೆಗಳು, ರಾಜಕೀಯ ಹೇಳಿಕೆಗಳು ಎಲ್ಲಾ ಇವೆ. ಇದನ್ನು ಒಂದು ಬಗೆಯ ಪ್ರಪಂಚದ ಚರಿತ್ರೆಯೆಂತಲೂ ಹೇಳಬಹುದು. ಈ ಸಾಹಿತ್ಯ ಚರಿತ್ರೆಯಲ್ಲಿ ಮೊದಲ ಬಾರಿಗೆ ಕ್ರಿ.ಪೂ. 500 ಅಥವಾ 400 ರಲ್ಲಿ ಕಾಣಿಸಿಕೊಳ್ಳುತ್ತದೆ.

ಇವೆಲ್ಲವನ್ನೂ ಮೊದಲ ಬಾರಿಗೆ ಸಂಗ್ರಹಿಸಿ ಬರೆದದ್ದು ಬಹುಶಃ ಬೇಬಿಲಾನಿನಲ್ಲಿ ಎಂದು ತೋರುತ್ತದೆ. ಅಸ್ಸಿರಿಯ ತನ್ನ ಉತ್ತರ ದಿಕ್ಕಿನ ಹಗೆಗಳಾದ ಮೀಡರು, ಚಾಲ್ಡಿಯನ್ನರು ಮತ್ತು ಪರ್ಷಿಯನ್‌ರೊಂದಿಗೆ ತನ್ನ ಇರುವಿಕೆಗಾಗಿ ಸೆಣಸುತ್ತಿದ್ದಾಗ ದಕ್ಷಿಣದಿಂದ ಈಜಿಪ್ಟಿನ ಫ್ಯಾರೋ ಎರಡನೆಯ ನೇಕೋ ಹೇಗೆ ಅದರ ಮೇಲೆ ದಂಡೆತ್ತಿ ಬಂದನೆಂದು ಮೊದಲೇ ನೋಡಿದ್ದೇವೆ. ಜ್ಯೂಡಿಯಾದ ಜೋಸ್ಯೆಯಾ ಇವನನ್ನು ಮಗಿಡ್ಡೊ ಎಂಬಲ್ಲಿ ಎದುರಿಸಿ ಸೋತುಹೋಗಿ ಕೊಲ್ಲಲ್ಪಟ್ಟನು. (ಕ್ರಿ.ಪೂ. 608) ಜ್ಯೂಡಾ ಈಜಿಪ್ಟಿನ ಅಧೀನರಾಜ್ಯವಾಯಿತು. ಬಳಿಕ, ಬೇಬಿಲಾನಿನ ಹೊಸರಾಜ, ಚಾಲ್ಡಿಯನ್ನರ ನೆಬುಚಡ್ನಜಾರ್ ಮಹಾಶಯ ನೇಕೊವನ್ನು ತಿರುಗಿ ಈಜಿಪ್ಟಿಗೆ ಓಡಿಸಿದಾಗ ಜ್ಯೂಡಾದಲ್ಲಿ ತನ್ನ ಕೈಗೊಂಬೆಗಳಾದವರನ್ನೇ ರಾಜರನ್ನಾಗಿ ಸ್ಥಾಪಿಸುವ ಯತ್ನ

ಮಾಡಿದನು. ಇದು ಸಫಲವಾಗಲಿಲ್ಲ, ಜನ ಬೇಬಿಲೋನಿನ ಅಧಿಕಾರಿಗಳನ್ನು ಕೊಂದು ಹಾಕಿದರು. ಈ ಪುಟ್ಟ ರಾಜ್ಯ ಸ್ವಪ್ರಯೋಜನಕ್ಕಾಗಿ ಈಜಿಪ್ಟನ್ನು ಉತ್ತರದ ಸಾಮ್ರಾಜ್ಯದ ಮೇಲೆ ಎತ್ತಿ ಕಟ್ಟುತ್ತಿತ್ತು. ಕೊನೆಗೆ ಚಕ್ರವರ್ತಿ ಈ ರಾಜ್ಯವನ್ನೇ ಪೂರ್ತಿ ನಾಶ ಮಾಡಲು ನಿರ್ಧರಿಸಿದನು. ಜೆರೂಸಲೆಮ್ಮನ್ನು ಲೂಟಿ ಮಾಡಿ ಪೂರ್ತಿ ಸುಟ್ಟು ಹಾಕಲಾಯಿತು. ಸತ್ತುಳಿದ ಯಹೂದ್ಯರನ್ನು ಬೇಬಿಲಾನಿಗೆ ಸೆರೆ ಹಿಡಿದು ತೆಗೆದುಕೊಂಡು ಹೋದರು.

ಕ್ರಿ. ಪೂ 538 ರಲ್ಲಿ ಸೈರಸ್ ಬೇಬಿಲಾನನ್ನು ವಶಪಡಿಸಿಕೊಳ್ಳುವವರೆಗೂ ಈ ಜನರು ಅಲ್ಲಿಯೇ ಇದ್ದರು. ಸೈರಸ್ ಇವರನ್ನೆಲ್ಲಾ ಒಟ್ಟು ಗೂಡಿಸಿ ಜೆರೂಸಲೆಂಗೆ ಹಿಂದಿರುಗಿ ಕಳುಹಿಸಿದನು. ಇವರು ತಮ್ಮ ದೇಶದಲ್ಲಿ ನೆಲೆಸಿ ಜೆರೂಸಲೆಂನ ದೇವಸ್ಥಾನ ಮತ್ತು ಕೋಟೆಗಳನ್ನು ತಿರುಗಿ ಕಟ್ಟಿದರು.

ಇದಕ್ಕೆ ಮುಂಚೆ ಯಹೂದ್ಯರಲ್ಲಿ ನಾಗರಿಕತೆ ಮತ್ತು ಒಗ್ಗಟ್ಟು ಇದ್ದಂತೆ ತೋರುವುದಿಲ್ಲ. ಅವರಲ್ಲಿ ಎಲ್ಲೋ ಕೆಲವರಿಗೆ ಮಾತ್ರ ಓದು ಬರಹ ಬರುತ್ತಿದ್ದಂತೆ ಕಾಣುತ್ತದೆ. ಅವರ ಚರಿತ್ರೆಯ ಆದಿ ಭಾಗದಲ್ಲಿ ಬೈಬಲ್ಲನ್ನು ಓದಿ ಹೇಳಿದ ಪ್ರಸಂಗ ಎಲ್ಲಿಯೂ ಬಂದಿಲ್ಲ. ಅದರಲ್ಲಿ ಮೊದಲ ಸಲ ಪುಸ್ತಕ ಎಂಬ ಪದ ಕಾಣಿಸಿಕೊಳ್ಳುವುದು. ಜೋಸೈಯಾ ದೊರೆಯ ಕಾಲದಲ್ಲಿ. ಬೇಬಿಲಾನಿನಲ್ಲಿ ಬಂಧನದಲ್ಲಿದ್ದ ಕಾಲದಲ್ಲಿ ಇವರು ನಾಗರಿಕತೆ ಪಡೆದು ಒಗ್ಗಟ್ಟಾದರು. ತಿರುಗಿ ಜೆರೂಸಲೆಮ್ಮಿಗೆ ಬರುವ ಹೊತ್ತಿಗೆ ಈ ಜನಕ್ಕೆ ತಮ್ಮ ಸಾಹಿತ್ಯ, ತಮ್ಮ ರಾಜ್ಯ ಎಂಬ ಅರಿವು ಚೆನ್ನಾಗಿ ಬಂದಿತ್ತು. ರಾಜಕೀಯದಲ್ಲೂ ಇವರು ಅಷ್ಟು ಹೊತ್ತಿಗೆ ಅರಿತು ನುರಿತಿದ್ದರು.

ಆಗ ಬೈಬಲ್ಲೆಂದರೆ ಬರಿಯ ಪೆಂಟಟ್ಯೂಕ್ ಆಗಿತ್ತೆಂದು ತೋರುತ್ತದೆ. ಅಂದರೆ ಹಳೆ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು. ಇವಲ್ಲದೆ ಇವರ ಬಳಿ ಅನೇಕ ಬೇರೆ ಬೇರೆ ಪುಸ್ತಕಗಳಿದ್ದುವು. ಇವುಗಳೆಲ್ಲವನ್ನೂ ಪೆಂಟಟ್ಯೂಕ್‌ನೊಂದಿಗೆ ಸೇರಿಸಿ ಎಲ್ಲವನ್ನೂ ಈಗ ಇರುವ ಹೀಬ್ರ್ಯೂ ಬೈಬಲ್ಲಿನ ರೂಪಕ್ಕೆ ತಂದರು. ಉದಾ : ಪೂರ್ವಕಾಲ ವೃತ್ತಾಂತ, ಕೀರ್ತನೆಗಳು ಮತ್ತು ಜ್ಞಾನೋಕ್ತಿಗಳು ಇತ್ಯಾದಿ.

ಬೈಬಲ್ಲಿನ ಪ್ರಥಮ ಭಾಗದಲ್ಲಿ ಪ್ರಪಂಚ ಸೃಷ್ಟಿ, ಆಡಮ್ ಮತ್ತು ಈವ್ ಇವರ ಕಥೆ, ಪ್ರಳಯ ವೃತಾಂತಗಳನ್ನು ವಿವರಿಸಿದ್ದಾರೆ. ಬೇಬಿಲಾನ್ ಜನರ ನಂಬಿಕೆಗಳಿಗೂ ಇವುಗಳಿಗೂ ಬಹಳ ಸಾಮ್ಯ ಇದೆ. ಸೆಮಿಟಿಕ್ ಜನರೆಲ್ಲರಲ್ಲೂ ಇಂತಹವೇ ಐತಿಹ್ಯಗಳಿದ್ದುವೆಂದು ತೋರುತ್ತದೆ. ಹಾಗೆಯೇ ಮೋಸೆಸ್ ಮತ್ತು ಸ್ಯಾಮ್ಸನ್ನನ ಕಥೆಗಳಂಥವೇ ಕಥೆಗಳು ಸುಮೆರಿಯ ಮತ್ತು ಬೇಬಿಲಾನ್‌ಗಳಲ್ಲಿ ಪ್ರಚಾರದಲ್ಲಿದ್ದುವು. ಆದರೆ ಅಬ್ರಹಾಮನ ಕಥೆಯಿಂದ ಈಚೆಗಿನ ಕಥೆಗಳು ಮುಖ್ಯವಾಗಿ ಯಹೂದ್ಯರಿಗೆ ಮಾತ್ರ ಸಂಬಂಧಪಟ್ಟುವು.

ಅಬ್ರಹಾಮ್ ಹಮ್ಮುರಬಿಯಷ್ಟೇ ಹಿಂದಿನವನಾಗಿರಬಹುದು. ಈತನು ಸೆಮಿಟಿಕ್ ಅಲೆಮಾರಿ ಕುಲದವನು. ತನ್ನ ಗುಂಪಿಗೆ ಹಿರಿಯನಾಗಿದ್ದವನು. ಇವನ ದೇಶ

ಪರ್ಯಟನ, ಇನನ ಮಕ್ಕಳ ಮೊಮ್ಮಕ್ಕಳ ವೃತ್ತಾಂತ ಅವರು ಈಜಿಪ್ಟಿನಲ್ಲಿ ಬಂಧನ ಕ್ಕೊಳಗಾಗಿದ್ದುದು, ಇವೆಲ್ಲವನ್ನೂ ಬೈಬಲ್ಲಿನ "ಬುಕ್ ಆಫ್ ಜೆನಿಸಿಸ್"ನಿಂದ ವಿಶದ ವಾಗಿ ತಿಳಿದುಕೊಳ್ಳಬಹುದು. ಇವನು ಕ್ಯಾನನ್ ನಾಡಿನಲ್ಲಿ ಪ್ರಯಾಣ ಮಾಡಿದನು. ಸಂಪದ್ಯುಕ್ತವಾದ ನಗರಗಳಿದ್ದ ಈ ಸುಖಮಯವಾದ ನಾಡನ್ನು ಇವನಿಗೂ ಇವನ ಸಂತತಿಯವರಿಗೂ ಕೊಡುವೆನೆಂದು ದೇವರು ವಾಗ್ದಾನ ಮಾಡಿದನು ಎಂದು ಬೈಬಲಿನಲ್ಲಿ ಹೇಳಿದೆ.

ಈ ಜನರು ಬಹುಕಾಲ ಈಜಿಪ್ಟಿನಲ್ಲಿ ವಾಸಿಸಿದರು. ಬಳಿಕ ನಲವತ್ತು ವರ್ಷಗಳು ಮೋಸೆಸ್ಸನ ಮುಂದಾಳುತ್ವದಲ್ಲಿ ಮರುಭೂಮಿಯಲ್ಲಿ ಅಲೆದಾಡಿದನಂತರ ಪೂರ್ವದಿಕ್ಕಿನಿಂದ ಅರೇಬಿಯದ ಮರಳುಕಾಡಿನ ಕಡೆಯಿಂದ ಇವರು ಕ್ಯಾನನ್ ನಾಡಿನ ಮೇಲೆರಿ ಬಂದರು. ಆಷ್ಟು ಹೊತ್ತಿಗೆ ಇವರ ಜನಸಂಖ್ಯೆ ಬೇಕಾದಷ್ಟು ಬೆಳೆದಿತ್ತು. ಇವರಲ್ಲಿ ಆಗ ಹನ್ನೆರಡು ಗೋತ್ರಗಳಿದ್ದುವು. ಈಜಿಪ್ಟಿನ ದಾಖಲೆಗಳಲ್ಲಿ ಮೋಸೆಸ್ಸಿನ ಹೆಸರಾಗಲೀ ಕ್ಯಾನನ್‌ನ ವಿಷಯವಾಗಲೀ ಇಲ್ಲದಿರುವುದರಿಂದ ಇದರ ಕಾಲ ಮಾತ್ರ ಖಚಿತವಾಗಿ ತಿಳಿದಿಲ್ಲ. ಅಂತೂ ಇವೆಲ್ಲಾ ಕ್ರಿ.ಪೂ. 1600 ರಿಂದ 1300 ರ ಮಧ್ಯೆ ಯಾವಾಗಲೋ ನಡೆದಿರಬಹುದು. ಆದರೆ ದೇವರು ವಾಗ್ದಾನ ಮಾಡಿದ್ದಷ್ಟು ನಾಡೂ ಇವರಿಗೆ ದೊರಕಲಿಲ್ಲ. ಆ ನಾಡಿನ ತೀರ ಪ್ರದೇಶ ಅಷ್ಟು ಹೊತ್ತಿಗಾಗಲೇ ಕ್ಯಾನನೈಟ್‌ರ ಕೈತಪ್ಪಿ ಫಿಲಿಸ್ಟೈನ್ಸರ ವಶಕ್ಕೆ ಹೋಗಿತ್ತು. ಇವರು ಈಜಿಯನ್ ಜನರು. ಇವರ ಪಟ್ಟಣಗಳಾದ ಗಾಜಾ, ಗಾಥ್, ಆಷ್‌ದಾದ್, ಅಸ್ಕಲಾನ್ ಮತ್ತು ಜಾಪ್ಪಾ (Jappa) ಯಹೂದ್ಯರ ಆಕ್ರಮಣಕ್ಕೆ ಜಗ್ಗಲಿಲ್ಲ. ತೀರಪ್ರದೇಶದ ಹಿಂದಣ ಗುಡ್ಡಗಾಡಿನ ಪ್ರದೇಶ ಮಾತ್ರ ಯಹೂದ್ಯರ ವಶಕ್ಕೆ ಬಂದಿತು. ಅನೇಕ ತಲೆಮಾರುಗಳ ಕಾಲ ಈ ಜನ ಅಷ್ಟೇನೂ ಹೆಸರುಗಳಿಸಲಿಲ್ಲ. ತಮ್ಮಂತಹ ಕುಲಗಳಿಗೆ ಸೇರಿದ ಮೋಬೈಟರು, ಮಿಡಿಯನೈಟರು ಮುಂತಾದವರೊಡನೆಯೂ, ಫಿಲಿಸ್ಟೈನರೊಡನೆಯೂ ಜಗಳ ಕಾಯುವುದೇ ಇವರ ಮುಖ್ಯ ಕಾರ್ಯವಾಗಿ ಹೋಯಿತು. ಈ ಕಾಲದಲ್ಲಿ ಅವರು ಪಟ್ಟ ಕಷ್ಟಗಳು. ಎದುರಿಸಿದ ಹೋರಾಟಗಳೆಲ್ಲವೂ ಬೈಬಲ್ಲಿನ ನ್ಯಾಯಪತಿಗಳು (ಬುಕ್ ಆಫ್ ಜಡ್ಜಸ್) ಎಂಬ ಭಾಗದಲ್ಲಿ ಚಿತ್ರಿತವಾಗಿವೆ. ತಮ್ಮ ಸೋಲು ಸಂಕಟಗಳನ್ನು ಮುಚ್ಚುಮರೆಯಿಲ್ಲದೆ ಇವರು ಹೇಳಿಕೊಂಡಿದ್ದಾರೆ.

ಸುಮಾರು ಕ್ರಿ.ಪೂ. 1000 ದವರೆಗೂ ಇವರಲ್ಲಿ ರಾಜರಿರಲಿಲ್ಲ. ಪುರೋಹಿತರು ಮತ್ತು ನ್ಯಾಯಾಧೀಶರು ಎನ್ನಬಹುದಾದವರನ್ನು ಜನಗಳಲ್ಲಿ ಹಿರಿಯರಾದವರು ಚುನಾಯಿಸುತ್ತಿದ್ದರು. ಇವರೇ ಜನರನ್ನು ಆಳುತ್ತಿದ್ದರು. (–ಆಳುತ್ತಿದ್ದರು ಎನ್ನುವುದು ಅಷ್ಟು ಸರಿಯಲ್ಲ. ಏಕೆಂದರೆ ಹೀಬ್ರೂ ಜನರಲ್ಲಿ ಉಳಿದ ಜನರಲ್ಲಿದ್ದಂತೆ ಆಡಳಿತ ಕಾರ್ಯ ನಡೆಯುತ್ತಿರಲಿಲ್ಲ.) ಕ್ರಿ.ಪೂ. 1000ದ ಹೊತ್ತಿಗೆ ಯಾವಾಗಲೋ ಒಂದು ಕಾಲದಲ್ಲಿ ಯುದ್ಧದಲ್ಲಿ ಮುಂದಾಳುತನ ವಹಿಸಲೋಸುಗ "ಸಾಲ್" ಎಂಬಾತನನ್ನು ರಾಜನನ್ನಾಗಿ ಆರಿಸಿಕೊಂಡರು. ಈತನ ಮುಂದಾಳುತನವೇನೂ ಮೊದಲಿರುತ್ತಿದ್ದ

ನ್ಯಾಯಪತಿಗಳ ಮುಂದಾಳುತನಕ್ಕಿಂತ ಉಪಯೋಗಕರವಾಗಿರಲಿಲ್ಲ. "ಗಿಲ್ಬೋವಾ ಶಿಖರ"ದ ಕದನದಲ್ಲಿ ಫಿಲಿಸ್ಟೈನರ ಬಾಣಗಳ ಸುರಿಮಳೆಯಲ್ಲಿ ಈತನು ಮರಣ ಹೊಂದಿದನು. ಆತನ ಶರೀರವನ್ನು ಶತ್ರುಗಳು ಬೆತ್-ಷಾನಿನ ಕೋಟೆ ಗೋಡೆಗೆ ಇಟ್ಟು ಮೊಳೆ ಹೊಡೆದರು. ಯುದ್ಧ ಕವಚವನ್ನು ತೆಗೆದುಕೊಂಡು ಹೋಗಿ ಫಿಲಿಸ್ಟೈನರ ವೀನಸ್ ದೇವಾಲಯದಲ್ಲಿ ಇಟ್ಟರು.

ಈತನ ನಂತರ ಬಂದ ಡೇವಿಡ್ ಈತನಿಗಿಂತ ವ್ಯವಹಾರ ಕುಶಲನಾಗಿದ್ದು ಏಳಿಗೆಗೆ ಬಂದನು. ಇಲ್ಲಿಂದ ಕೆಲವು ಕಾಲ ಮಾತ್ರ ಹೀಬ್ರೂ ಜನರು ಸುಖಸಂತೋಷದಿಂದಿದ್ದರು. ಈ ಕಾಲ ಬಿಟ್ಟರೆ ಬೇರಾವಾಗಲೂ ಇವರು ಸುಖಶಾಂತಿ ಕಾಣಲಿಲ್ಲ. ಈ ಅಲ್ಪ ಕಾಲದ ವೈಭವಕ್ಕೂ ಕಾರಣವಿಲ್ಲದಿರಲಿಲ್ಲ. ಫಿನಿಷಿಯನ್ ಪಟ್ಟಣವಾದ ಟೈರ್‌ನ ರಾಜ ಹಿರಾಮ್ ಡೇವಿಡ್ಡನೊಡನೆ ಒಪ್ಪಂದ ಮಾಡಿಕೊಂಡನು. ಹಿರಾಮ್ ಬುದ್ಧಿವಂತನೂ ಉದ್ಯಮಶಾಲಿಯೂ ಆಗಿದ್ದಂತೆ ತೋರುತ್ತದೆ. ಇವನಿಗೆ ತನ್ನ ಪಟ್ಟಣದಿಂದ ಕೆಂಪು ಸಮುದ್ರಕ್ಕೆ ಹೀಬ್ರೂ ದೇಶದ ಮೂಲಕ ಹೋಗಲು ಅವಕಾಶ ಬೇಕಾಗಿತ್ತು. ಸಾಮಾನ್ಯವಾಗಿ ಫೀನಿಷಿಯನ್ನರ ವ್ಯಾಪಾರವೆಲ್ಲಾ ಈಜಿಪ್ಟ್ ಮೂಲಕ ನಡೆಯುತ್ತಿತ್ತು. ಆದರೆ ಈ ಕಾಲದಲ್ಲಿ ಈಜಿಪ್ಟ್ ರಾಜ್ಯ ಅಸಾಧ್ಯ ಅವ್ಯವಸ್ಥೆಗೆ ಈಡಾಗಿತ್ತು. ಮತ್ತು ಆ ಮಾರ್ಗದಲ್ಲಿ ಬೇರೆ ಅನಾನುಕೂಲಗಳೂ ಇದ್ದಿರಬಹುದು. ಏನೇ ಇರಲಿ, ಹಿರಾಮನು ಡೇವಿಡ್ಡನೊಡನೆಯೂ, ಅವನ ಮಗ ಸಾಲೊಮನ್ನನೊಡನೆಯೂ ನಿಕಟ ಸಂಪರ್ಕವಿಟ್ಟುಕೊಂಡಿದ್ದನು. ಹಿರಾಮನ ಸಹಾಯದಿಂದ ಜೆರೂಸಲೆಂನ ಕೋಟೆ, ಅರಮನೆ ಮತ್ತು ದೇವಾಲಯಗಳು ಕಟ್ಟಲ್ಪಟ್ಟವು. ಇದಕ್ಕೆ ಪ್ರತಿಫಲವಾಗಿ ಹಿರಾಮನಿಗೆ ತನ್ನ ಹಡಗುಗಳನ್ನು ಕೆಂಪು ಸಮುದ್ರದಲ್ಲಿ ನಿರ್ಮಿಸಿ ವ್ಯಾಪಾರಕ್ಕೋಸ್ಕರ ಕಳುಹಿಸಲು ಅವಕಾಶ ದೊರೆಯಿತು. ಜೆರೂಸಲೆಮಿನ ಮುಖಾಂತರ ದಕ್ಷಿಣೋತ್ತರ ಮಾರ್ಗವಾಗಿ ಬೇಕಾದಷ್ಟು ವ್ಯಾಪಾರ ನಡೆಸಲು ಮೊದಲಾಯಿತು. ರಾಜನು ಅದುವರೆಗೂ ಎಂದೂ ಕಂಡಿಲ್ಲದಷ್ಟು ಐಶ್ವರ್ಯ ಮತ್ತು ವೈಭವ ಸಾಲೋಮನ್ ರಾಜನ ಕಾಲದಲ್ಲಿ ಬಂದಿತು. ಇವನಿಗೆ ಈಜಿಪ್ಟಿನ ಫ್ಯಾರೋ ಸಹ ತನ್ನ ಮಗಳನ್ನು ಮದುವೆ ಮಾಡಿ ಕೊಟ್ಟಿದ್ದನು.

ಆದರೂ ಸಾಲೊಮನ್ನಿನ ವೈಭವ ಐಶ್ವರ್ಯಗಳನ್ನು ಇಂದಿನ ಪರಿಸ್ಥಿತಿಗಳ ದೃಷ್ಟಿಯಿಂದ ಪರಿಶೀಲಿಸುವುದು ಒಳ್ಳೆಯದು. ಅತ್ಯಂತ ವೈಭವ ದೆಶೆಯಲ್ಲಿದ್ದಾಗಲೂ ಸಾಲೊಮನ್ ಸಣ್ಣದೊಂದು ಪಟ್ಟಣದ ಅಧಿಪತಿಯಾಗಿದ್ದನಷ್ಟೆ ; ಅದೂ ಬೇರೊಬ್ಬ ರಾಜನಿಗೆ ಅಧೀನ ರಾಜನಾಗಿ. ಆತನ ರಾಜ್ಯದ ಪ್ರಾಬಲ್ಯ ಅದೆಷ್ಟು ಬೇಗ ಕುಂದಿ ಹೋಯಿತೆಂದರೆ ಆತನ ಮರಣದ ನಂತರ ಕೇವಲ ಕೆಲವು ವರ್ಷಗಳಲ್ಲಿಯೇ 33 ನೇ ವಂಶದ ಮೊದಲ ಫ್ಯಾರೋ ಷೀಷಕ್ ಜೆರೂಸಲೆಮ್ಮನ್ನು ವಶಪಡಿಸಿಕೊಂಡು ಅದರ ಐಶ್ವರ್ಯದ ಬಹುಭಾಗವನ್ನು ಕೊಳ್ಳೆ ಹೊಡೆದುಕೊಂಡು ಹೋದನು. ಎಷ್ಟೋ ವಿಮರ್ಶಕರು "ರಾಜರು ಮತ್ತು ಘಟನಾವಳಿಗಳು" ಭಾಗದಲ್ಲಿ ಸಾಲೊಮನ್ನನ ಐಶ್ವರ್ಯ ವೈಭವಗಳನ್ನು ಹೀಬ್ರೂ ಲೇಖಕರು ಅತಿಯಾಗಿ ಉತ್ಪ್ರೇಕ್ಷಿಸಿದ್ದಾರೆಂದು ಟೀಕಿಸಿದ್ದಾರೆ. ಮುಂದೆ

ಬಂದ ಲೇಖಕರು ಸ್ವಜಾತಿ ಅಭಿಮಾನದಿಂದ ಮೊದಲಿದ್ದುದಕ್ಕೆ ಬೇಕಾದಷ್ಟನ್ನು ಸೇರಿಸಿ
ಬಿಟ್ಟಿದ್ದಾರೆಂದು ಇವರ ಊಹೆ. ಆದರೆ ಬೈಬಲ್ಲಿನ ಈ ಭಾಗವನ್ನು ಎಚ್ಚರಿಕೆಯಿಂದ
ಓದಿದಾಗ ಈ ವರ್ಣನೆಗಳು ಮೊದಲ ನೋಟಕ್ಕೆ ಕಾಣುವಷ್ಟೇನೂ ಮಿತಿ ಮೀರಿಲ್ಲ
ವೆಂದು ಗೊತ್ತಾಗುತ್ತದೆ. ಬೈಬಲ್ಲಿನಲ್ಲಿ ಹೇಳಿರುವ ಅಳತೆಗಳ ಪ್ರಕಾರ ಹೋಲಿಸಿ ನೋಡಿ
ದರೆ "ಸಾಲೊಮನ್ನನ ದೇವಾಲಯ" ಇಂದಿನ ಪಟ್ಟಣಗಳ ಬಡಾವಣೆಯೊಂದರ ಚರ್ಚಿ
ಗಿಂತಲೂ ಚಿಕ್ಕದಾಗಿತ್ತೆಂದು ವ್ಯಕ್ತವಾಗುತ್ತದೆ. ಈತನ ನಂತರ ಇದ್ದ ಅಹಬ್ ರಾಜನು
ಅಸ್ಸಿರಿಯದ ಸೈನ್ಯಕ್ಕೆ ಎರಡು ಸಾವಿರ ರಥಗಳನ್ನು ಕಳುಹಿಸಿದನೆಂದು ಅಸ್ಸಿರಿಯದ
ಸ್ಮಾರಕವೊಂದರಲ್ಲಿ ಬರೆದಿರುವಾಗ ಸಾಲೊಮನ್ನನ ಬಳಿ ಸಾವಿರದ ನಾನೂರು ರಥ
ಗಳಿದ್ದುದೇನೂ ಅತಿಶಯವಲ್ಲವೆಂದು ತಿಳಿಯುವುದು. ಅಲ್ಲದೆ ಸಾಲೊಮನ್ ಹೊರ
ಆಡಂಬರಕ್ಕೋಸ್ಕರ ಬಹಳ ಹಣ ಖರ್ಚು ಮಾಡಿದನೆಂದೂ ಜನಗಳಿಂದ ಹೆಚ್ಚು ಹೆಚ್ಚಾಗಿ
ತೆರಿಗೆ ವಸೂಲು ಮಾಡುತ್ತಿದ್ದುದಲ್ಲದೆ ಅವರನ್ನು ಅತಿಯಾಗಿ ದುಡಿಸುತ್ತಿದ್ದನೆಂದೂ
ಬೈಬಲ್ಲನ್ನು ಸರಿಯಾಗಿ ಪರೀಕ್ಷಿಸಿದರೆ ಅರ್ಥವಾಗುತ್ತದೆ. ಇವನ ಮರಣದ ನಂತರ ಈ
ರಾಜ್ಯದ ಉತ್ತರ ಭಾಗ ಜೆರೂಸಲೆಮಿನಿಂದ ಬೇರೆಯಾಗಿ ಇಸ್ರೇಲ್ ಎಂಬ ಸ್ವತಂತ್ರ
ರಾಜ್ಯವಾಯಿತು. ಜೆರೂಸಲೆಂ ಜ್ಯೂಡಾದ ಮುಖ್ಯ ಪಟ್ಟಣವಾಯಿತು.

ಹೀಬ್ರ್ಯೂ ಜನರ ವೈಭವ ಕೇವಲ ಸ್ವಲ್ಪ ಕಾಲ ಮಾತ್ರವಿತ್ತು. ಹೀರಾಮ್
ತೀರಿಕೊಂಡ ನಂತರ ಟೈರ್ ಪಟ್ಟಣದಿಂದ ಬರುತ್ತಿದ್ದ ಸಹಾಯ ನಿಂತು
ಹೋಯಿತು. ಈಜಿಪ್ಟ್ ತಿರುಗಿ ಪ್ರಬಲವಾಯಿತು. ಇನ್ನು ಮುಂದೆ ಜ್ಯೂಡಾ ಮತ್ತು
ಇಸ್ರೇಲಿನ ಚರಿತ್ರೆಯೆಂದರೆ ಉತ್ತರದಲ್ಲಿ ಸಿರಿಯ, ಅಸ್ಸಿರಿಯ ಮತ್ತು ಇವುಗಳ ಕಾಲದ
ನಂತರ ಬೇಬಿಲಾನ್, ದಕ್ಷಿಣದಲ್ಲಿ ಈಜಿಪ್ಟ್, ಈ ಬಲಯುತ ರಾಷ್ಟ್ರಗಳ ನಡುವೆ ಸಿಕ್ಕಿ
ಬಿದ್ದ ಎರಡು ಪುಟ್ಟ ರಾಜ್ಯಗಳ ಕಥೆಯಾಗುವುದು. ಒಂದಾಗುತ್ತಲೊಂದರಂತೆ ಒದಗಿ
ಬರುತ್ತಿದ್ದ ಆಪತ್ತುಗಳು, ಮಧ್ಯೆ ಈ ಆಪತ್ತುಗಳಿಗೆ ಕ್ಷಣಿಕವಾದ ಪರಿಹಾರ, ಮತ್ತೊಮ್ಮೆ
ಆಪತ್ತು, ಹೀಗೆಯೇ ಇವರ ಜೀವನ ಮುನ್ನಡೆಯಿತು. ಸಂಸ್ಕೃತರಾಗಿಲ್ಲದ ಜನ, ಅವರ
ನ್ನಾಳುತ್ತಿದ್ದ ಅಂಥವೇ ರಾಜರು ಇದೇ ಇವರ ಚರಿತ್ರೆಯಲ್ಲಿ ಬರುವ ಪಾತ್ರಗಳು.
ಕ್ರಿ. ಪೂ. 721ರಲ್ಲಿ ಇಸ್ರೇಲನ್ನು ಅಸ್ಸೀರಿಯನ್ನರು ಪೂರ್ತಿ ಸೋಲಿಸಿಬಿಟ್ಟರು. ಅಲ್ಲಿಂದ
ಮುಂದೆ ಅಲ್ಲಿಯ ಜನರ ಹೆಸರು ಚರಿತ್ರೆಯಲ್ಲೂ ಕಾಣಿಸುವುದಿಲ್ಲ. ಜ್ಯೂಡಾ ಮಾತ್ರ
ಕ್ರಿ. ಪೂ. 604 ರವರೆಗೂ ಹಾಗೂ ಹೀಗೂ ಜೀವ ಹಿಡಿದುಕೊಂಡಿತ್ತು. ಕಡೆಗೆ
ಅದಕ್ಕೂ ಇಸ್ರೇಲಿನ ಗತಿಯೇ ಆಯಿತು. ಬೈಬಲ್ಲಿನಲ್ಲಿ "ನ್ಯಾಯಪತಿ"ಗಳ ಕಾಲದಿಂದೀ
ಚೆಗೆ ವರ್ಣಿಸಿರುವ ಚರಿತ್ರೆಯ ವಿವರಗಳಲ್ಲಿ ಕೆಲವು ಆಕ್ಷೇಪಣಾರ್ಹವಾದ ತಪ್ಪುಗಳಿರ
ಬಹುದು ; ಆದರೂ ಈ ಭಾಗದಲ್ಲಿ ಹೇಳಿರುವುದೆಲ್ಲಾ ಹೆಚ್ಚು ಕಡಿಮೆ ನಿಜ. ಈಜಿಪ್ಟ್,
ಅಸ್ಸೀರಿಯ ಮತ್ತು ಬೇಬಿಲಾನ್‌ಗಳಿದ್ದಲ್ಲಿ ಕಳೆದ ಶತಮಾನದಲ್ಲಿ ನಡೆದ ಭೂಶೋಧನೆ
ಗಳಿಂದ ತಿಳಿದು ಬಂದ ಅಂಶಗಳಿಗೂ ಈ ಕಥೆಗಳಿಗೂ ತಾಳೆ ಬರುತ್ತದೆ.

ಹೀಬ್ರ್ಯೂ ಜನ ತಮ್ಮ ಇತಿಹಾಸವನ್ನು ಒಟ್ಟುಗೂಡಿಸಿಕೊಂಡು ತಮ್ಮದೇ

ಸಂಪ್ರದಾಯವನ್ನು ರೂಪಿಸಿಕೊಂಡಿದ್ದು ಬೇಬಿಲಾನಿನಲ್ಲಿ. ಬೇಬಿಲಾನಿಗೆ ಬಂದಿಗಳಾಗಿ ಹೋಗಿದ್ದ ಯಹೂದ್ಯರಿಗೂ ಸ್ವೈರಸ್ಸಿನ ಆಜ್ಞೆಯಂತೆ ಜೆರೂಸಲೆಮಿಗೆ ಹಿಂದಿರುಗಿದ ಯಹೂದ್ಯರಿಗೂ ಅನೇಕ ವ್ಯತ್ಯಾಸಗಳಿದ್ದುವು. ಅಷ್ಟು ಹೊತ್ತಿಗೆ ಇವರಲ್ಲಿ ಜ್ಞಾನ ಮತ್ತು ಚೈತನ್ಯಗಳು ವೃದ್ಧಿಯಾಗಿದ್ದುವು. ಬಂಧನದಲ್ಲಿದ್ದಾಗ ಇವರು ನಾಗರಿಕತೆಯನ್ನು ಅರಿತುಕೊಂಡರು. ಈ ಜನದ ವಿಶಿಷ್ಟ ಮನೋಧರ್ಮ ರೂಪುಗೊಳ್ಳಲು ಪ್ರವಾದಿಗಳೆಂಬ ಹೊಸ ಮಾರ್ಗದ ಜನ ಬಹುಮಟ್ಟಿಗೆ ಕಾರಣರಾದರು. ಈಗ ಈ ಪ್ರವಾದಿಗಳತ್ತ ನಮ್ಮ ದೃಷ್ಟಿಯನ್ನು ತಿರುಗಿಸೋಣ. ಒಂದೇ ಸಮನೆ ಮುನ್ನಡೆಯುತ್ತಲೇ ಇರುವ ಮಾನವ ಸಮಾಜದ ಚರಿತ್ರೆಯಲ್ಲಿ ಆಗಾಗ ಹೊಸ ಪ್ರಭಾವಯುತ ಶಕ್ತಿಗಳು ಹುಟ್ಟುತ್ತಿದ್ದವೆಂಬುದಕ್ಕೆ ಈ ಪ್ರವಾದಿಗಳು ಸಾಕ್ಷಿಗಳಾಗಿದ್ದಾರೆ.

22 ಜ್ಯೂಡಿಯದ ಪುರೋಹಿತರು ಮತ್ತು ಪ್ರವಾದಿಗಳು

ಬೇಬಿಲಾನ್ ಮತ್ತು ಅಸ್ಸಿರಿಯಗಳ ಪತನಗಳು ಸೆಮಿಟಿಕ್ ಜನರಿಗೆ ಮುಂದೆ ಒದಗಿದ ವಿಪತ್ಪರಂಪರೆಯ ಮೊದಲ ಸೂಚನೆಗಳು ಅಷ್ಟೆ. ಕ್ರಿ.ಪೂ. 17 ನೆಯ ಶತಮಾನದಲ್ಲಿ ನಾಗರಿಕ ಪ್ರಪಂಚವೆಲ್ಲಾ ಸೆಮಿಟಿಕ್ ಜನರ ಕೈ ಸೇರುವುದೆಂಬಂತೆ ತೋರುತ್ತಿತ್ತು. ಅಸ್ಸಿರಿಯ ಸಾಮ್ರಾಜ್ಯ ಅವರದ್ದೇ ಆಗಿತ್ತು. ಈಜಿಪ್ಟ್ ಅವರ ವಶದಲ್ಲಿತ್ತು. ಅಸ್ಸಿರಿಯನ್ನರು, ಬೇಬಿಲಾನಿಯನ್ನರು ಮತ್ತು ಸಿರಿಯನ್ನರೆಲ್ಲರೂ ಸೆಮಿಟಿಕ್ ಜನರೇ. ಇವರ ಭಾಷೆಗಳೆಲ್ಲಾ ಪರಸ್ಪರರಿಗೆ ಅರ್ಥವಾಗುತ್ತಿದ್ದುವು. ಪ್ರಪಂಚದ ವ್ಯಾಪಾರವೆಲ್ಲಾ ಸೆಮಿಟಿಕ್ಕರ ಕೈಯಲ್ಲಿತ್ತು. ಸ್ಪೇನ್, ಸಿಸಿಲಿ ಮತ್ತು ಆಫ್ರಿಕಗಳಲ್ಲಿ ಫಿನೀಷಿಯನ್ನರು ಸ್ಥಾಪಿಸಿದ್ದ ನಗರಗಳು ಇವರ ತಾಯ್ನಾಡಿನ ನಗರಗಳಾದ ಟೈರ್ ಮತ್ತು ಸಿಡನ್‌ಗಳನ್ನು ಮೀರಿಸಿದುವು. ಕ್ರಿ.ಪೂ. 800 ಕ್ಕಿಂತ ಮುಂಚೆಯೇ ಸ್ಥಾಪಿತವಾಗಿದ್ದ ಕಾರ್ಥೇಜಿನ ಜನಸಂಖ್ಯೆ ಒಂದು ಕಾಲದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚಿತ್ತು. ಅಲ್ಲಿಂದ ಹೊರಟ ಹಡಗುಗಳು ಬ್ರಿಟನ್ನಿನವರೆಗೂ ಹೋಗುತ್ತಿದ್ದುವಲ್ಲದೆ ಅಟ್ಲಾಂಟಿಕ್ ಸಾಗರದಲ್ಲಿಯೂ ಸ್ವಲ್ಪ ದೂರ ಸಂಚರಿಸುತ್ತಿದ್ದುವು. ಇವುಗಳು ಮಡೀರಾವನ್ನೂ ತಲುಪಿದ್ದಿರಬಹುದು. ಅರೇಬಿಯ ಮತ್ತು ಬಹುಶಃ ಭಾರತಗಳೊಡನೆ ವ್ಯಾಪಾರ ಮಾಡುವುದಕ್ಕೋಸ್ಕರ ಹಿರಾಮ್ ಸಾಲೊಮನ್ನನ ಸಹಕಾರದಿಂದ ಕೆಂಪು ಸಮುದ್ರದ ಮೇಲೆ ಹಡಗುಗಳನ್ನು ಕಟ್ಟಿದನೆಂದು ಈ ಮೊದಲೇ ನೋಡಿದ್ದೇವೆ. ಫ್ಯಾರೋ ನೇಕೊವಿನ ಕಾಲದಲ್ಲಿ ಫಿನೀಷಿಯನ್ ತಂಡ ಪೂರ್ತಿ ಆಫ್ರಿಕಖಂಡವನ್ನು ಪೂರ್ತಿಯಾಗಿ ಸುತ್ತುವರಿದುಕೊಂಡು ಬಂದಿತು.

ಆರ್ಯರು ಆಗಿನ್ನೂ ನಾಗರಿಕರಾಗಿರಲಿಲ್ಲ. ಗ್ರೀಕರು ಮಾತ್ರ ತಾವು ನಾಶ ಮಾಡಿದ ನಾಗರಿಕತೆಯ ಸ್ಥಾನದಲ್ಲಿ ತಮ್ಮ ಹೊಸ ಸಂಸ್ಕೃತಿಯನ್ನು ಸ್ಥಾಪಿಸುತ್ತಿದ್ದರು. ಅಂದಿನ ಅಸ್ಸಿರಿಯವನ್ನು ಲಿಖಿತವೊಂದರಲ್ಲಿ ಮೀಡರು ಮಧ್ಯ ಏಷ್ಯಾದಲ್ಲಿ "ಎದುರಿಸಲು ದುಸ್ಸಾಧ್ಯರಾಗುತ್ತಿರುವವರು" ಎಂದಿದೆ. ಮುಂದೆ ಕ್ರಿ. ಪೂ. 300 ಕ್ಕೂ ಮುಂಚೆಯೇ ಸೆಮಿಟಿಕ್ ಜನರ ಉನ್ನತಿಯ ಗುರುತುಗಳೂ ಸಹ ಹೇಳ ಹೆಸರಿಲ್ಲದಂತೆ ಆರ್ಯರಿಂದ ಅಳಿಸಿಹೋದುವು.

ಎಲ್ಲಿಯೂ ಸೆಮಿಟಿಕ್ ಜನ ಆರ್ಯರ ಅಧೀನರಾಗಿಯೋ ಸಾಮಂತರಾಗಿಯೋ ಬಾಳಬೇಕಾಯಿತು. ಕೆಲವ್ ಕಡೆಯಂತೂ ಸೆಮಿಟಿಕ್ ಜನ ದಿಕ್ಕಾಪಾಲಾಗಿ ಚೆದರಿಯೂ ಹೋದರು. ಇಷ್ಟೆಲ್ಲ ನಡೆಯುವುದೆಂದು ಊಹಿಸುವುದಕ್ಕೂ ಸಹ ಕ್ರಿ.ಪೂ. ೫00ರಲ್ಲಿ ಸಾಧ್ಯವಿರಲಿಲ್ಲ. ಆದರೆ ಅಕ್ಕಾಡಿಯನ್ನರು ಮತ್ತು ಒಂದನೆ ಸಾರ್ಗಾನನು ಸುಮೇರಿಯವನ್ನು ಜಯಿಸುವುದಕ್ಕೂ ಮುಂಚೆ ಸೆಮಿಟಿಕ್ ಜನ ಜೀವಿಸುತ್ತಿದ್ದಂತೆ ಅಲೆಮಾರಿಗಳಾಗಿ ಜೀವಿಸುತ್ತಿದ್ದ ಉತ್ತರ ಅರೇಬಿಯದ ಬೆಡುಯಿನ್ ಜನ ಮಾತ್ರ ಆರ್ಯರ ಒಡೆತನಕ್ಕೆ ಸಿಗಲಿಲ್ಲ.

ಇನ್ನು ನಾಗರಿಕರಾಗಿದ್ದ ಸೆಮಿಟಕ್ ಜನರಲ್ಲಿ ಈ ಐದು ಶತಮಾನಗಳ ಆರ್ಯರ ಧಾಳಿಯನ್ನು ತಡೆದುಕೊಂಡು ತಮ್ಮ ಹಳೆಯ ಮತ ಸಂಪ್ರದಾಯಗಳನ್ನು ಬಿಟ್ಟು ಕೊಡದಿದ್ದವರೆಂದರೆ ಸೈರಸ್‌ನ ಕಾಲದಲ್ಲಿ ಬೇಬಿಲಾನಿನಿಂದ ಜೆರೂಸಲೆಮಿಗೆ ಹಿಂದಿರುಗಿದ್ದ, ಅಲ್ಪರೆಂದು ತೋರುತ್ತಿದ್ದ ಯಹೂದ್ಯರು ಮಾತ್ರ. ಇವರ ಈ ದಾರ್ಷ್ಟ್ಯಕ್ಕೆ ಮುಖ್ಯ ಕಾರಣ ಇವರು ಬೇಬಿಲಾನಿನಲ್ಲಿದ್ದಾಗ ರೂಢಿಸಿಕೊಂಡಿದ್ದ ಬೈಬಲ್ ಗ್ರಂಥ[20]. ಯಹೂದ್ಯರು ಬೈಬಲ್ಲನ್ನು ರಚಿಸಿದರೆನ್ನುವುದಕ್ಕಿಂತ ಬೈಬಲ್ ಯಹೂದ್ಯ ಸಮಾಜಕ್ಕೆ ಜನ್ಮ ಕೊಟ್ಟಿತೆನ್ನಬಹುದು. ಇವರ ಸುತ್ತಮುತ್ತ ಇರುತ್ತಿದ್ದ ಜನರ ಭಾವನೆಗಳಿಗಿಂತ ಬೇರೆಯಾಗಿದ್ದ, ಮನಸ್ಸನ್ನು ಪ್ರಚೋದಿಸಿ ಚೈತನ್ಯ ನೀಡುವ ಭಾವನೆಗಳು ಈ ಗ್ರಂಥದುದ್ದಕ್ಕೂ ಕಂಡು ಬರುತ್ತವೆ. ಒಟ್ಟು 2500 ವರ್ಷಗಳ ಕಾಲ, ಬೇರೆ ಜನ ತಮ್ಮನ್ನು ತುಳಿಯುತ್ತಿದ್ದಾಗ, ತಾವೇ ಹೊಸ ಹೊಸ ಅನುಭವಗಳನ್ನೆದುರಿಸಬೇಕಾದಾಗ, ಕಷ್ಟಗಳು ಬಂದೊದಗಿದಾಗಲೆಲ್ಲ ಈ ಜನ ಈ ಭಾವನೆಗಳ ಆಧಾರವನ್ನೇ ನಂಬಿಕೊಂಡು ಬಾಳಬೇಕಾಯಿತು.

ಯಹೂದ್ಯರ ಭಾವನೆಗಳಲ್ಲೆಲ್ಲಾ ಮುಖ್ಯವಾದುವು ದೇವರನ್ನು ಕುರಿತ ಅವರ ಕಲ್ಪನೆಗಳು. ತಮ್ಮ ದೇವರು ದೃಷ್ಟಿಗೆ ಅಗೋಚರನು ಮತ್ತು ಮನುಷ್ಯ ಮಾತ್ರರೊಂದಿಗೆ ನಿಕಟ ಸಂಪರ್ಕವಿಲ್ಲದಿರುವವನೆಂದೂ ಕೇವಲ ಮನುಷ್ಯರ ಕೈಯಿಂದ ನಿರ್ಮಿತವಾದ ದೇವಾಲಯಗಳಲ್ಲಿ ಮಾತ್ರ ಇರುವವನಲ್ಲವೆಂದೂ ಧರ್ಮಶೀಲನಾದ ಆತನು ಪ್ರಪಂಚದಾದ್ಯಂತ ಇರುವನೆಂದು ಇವರು ನಂಬಿದ್ದರು. ಉಳಿದೆಲ್ಲ ಜನರು ತಮ್ಮ ತಮ್ಮ ದೇವರುಗಳು ದೇವಾಲಯಗಳಲ್ಲಿರುತ್ತಿದ್ದ ಮೂರ್ತಿಗಳಲ್ಲಿ ಸ್ವತಃ ಜೀವಂತವಾಗಿರುತ್ತಿದ್ದರೆಂದು ನಂಬುತ್ತಿದ್ದರು. ಅಂತಹ ಮೂರ್ತಿಯನ್ನು ಒಡೆದು ಹಾಕಿ ದೇವಾಲಯವನ್ನು ನೆಲಸಮ ಮಾಡಿದರೆಂದರೆ ತೀರಿತು, ಆ ದೇವರ ಹೆಸರು ನಿಧಾನವಾಗಿ ಅಳಿದು ಹೋಗುತ್ತಿತ್ತು. ಪೂಜಾರಿಗಳು, ಯಜ್ಞಗಳು ಇವುಗಳೆಲ್ಲವನ್ನೂ ಮೀರಿದವನಾಗಿದ್ದ ಸ್ವರ್ಗಲೋಕದಲ್ಲಿರುತ್ತಿದ್ದ ಯಹೂದ್ಯರ ದೇವರು ಮಾನವ ಸಮಾಜಕ್ಕೆ ಹೊಸಬನಾಗಿದ್ದನು. "ಅಬ್ರಹಾಮನ ದೇವರು" ಜಗತ್ತಿನ ಜನರನ್ನೆಲ್ಲಾ ಪರೀಕ್ಷಿಸಿ ತಮ್ಮನ್ನು 'ತನ್ನ ಜನ'ರೆಂದು ಆಯ್ದಿಟ್ಟಿರುವನೆಂದೂ ಜೆರೂಸಲೆಮನ್ನು ಉದ್ಧಾರ ಮಾಡಿ ಪ್ರಪಂಚದಲ್ಲಿ ಧರ್ಮದ ಆಗಾರವನ್ನಾಗಿ ಮಾಡುವುದು ಆತನಿಂದ ತಮಗೆ ನೇಮಿಸಲ್ಪಟ್ಟ ಕಾರ್ಯವೆಂದೂ

ಇವರು ನಂಬಿದ್ದರು. ಹೀಗೆ ಉನ್ನತವಾದ ಸಾಮಾನ್ಯ ಧ್ಯೇಯ ಒಂದಿದ್ದುದರಿಂದ ಇವರು ತಾವು ಉಳಿದವರಿಗಿಂತ ಉತ್ತಮರೆಂದು ಭಾವಿಸುತ್ತಿದ್ದರು. ಬೇಬಿಲಾನಿನಿಂದ ಹಿಂದಿರುಗಿ ಬಂದ ಮೇಲಂತೂ ಈ ಭಾವನೆ ಇವರಲ್ಲಿ ಪ್ರತಿಯೊಬ್ಬರಲ್ಲೂ ಊರಿ ಹೋಯಿತು.

ಮುಂದೆ ಮರ್ದಿಕೆ ಬಂದಾಗ ಅನೇಕ ಬೇಬಿಲೋನಿಯನ್ನರು, ಸಿರಿಯನ್ನರು, ಇನ್ನೂ ಮುಂದೆ ಫಿನೀಷಿಯನ್ನರು ಈ ಮತದ ಅನುಯಾಯಿಗಳಾದುದೇನೂ ಆಶ್ಚರ್ಯವಲ್ಲ. ಈ ಜನರೆಲ್ಲರ ಮತ್ತು ಯಹೂದ್ಯರ ಭಾಷೆ, ಪದ್ಧತಿ, ಅಭಿರುಚಿ ಮತ್ತು ಸಂಪ್ರದಾಯಗಳಲ್ಲಿ ಹೆಚ್ಚು ವ್ಯತ್ಯಾಸವಿರಲಿಲ್ಲವೆಂದರೂ ಇವರ ಮತಗಳಿಗಿಂತ ಯಹೂದ್ಯ ಮತ ಸ್ಫೂರ್ತಿದಾಯಕವಾಗಿತ್ತು. ಅದರ ಅನುಯಾಯಿಗಳಲ್ಲಿ ಸಹೋದರ ಭಾವನೆ ಬಲವಾಗುತ್ತಿತ್ತು. ಇಷ್ಟೇ ಅಲ್ಲದೆ ಅವರ ಅನುಯಾಯಿಗಳಿಗೆ ಮುಂದೆ ಸುಖಸಂತೋಷಗಳ ಕಾಲವೊಂದು ಬಂದೇ ಬರುವುದೆಂಬ ಭರವಸೆ ಇರುತ್ತಿತ್ತು. ಫಿನೀಷಿಯನ್ ಪಟ್ಟಣಗಳಾದ ಟೈರ್, ಸಿಡನ್, ಮತ್ತು ಕಾರ್ಥೇಜುಗಳ ಪತನದ ನಂತರ ಇದ್ದಕ್ಕಿದ್ದಂತೆ ಫಿನೀಷಿಯನ್ನರ ಹೆಸರೇ ಮಾಯವಾಗುತ್ತದೆ. ಅದೇ ಸಮಯದಲ್ಲಿ ಜೆರೂಸಲೆಂ ಅಲ್ಲದೆ ಸ್ಪೇನ್, ಆಫ್ರಿಕ, ಈಜಿಪ್ಟ್, ಅರೇಬಿಯ ಮತ್ತು ಪೌರ್ವಾತ್ಯ ದೇಶಗಳಲ್ಲಿ — ಒಟ್ಟಿನಲ್ಲಿ ಹೇಳುವುದಾದರೆ ಫಿನೀಷಿಯನ್ನರು ಇದ್ದಲ್ಲೆಲ್ಲ ಯಹೂದ್ಯರ ಗುಂಪುಗಳನ್ನು ಕಾಣುತ್ತೇವೆ. ಇವರೆಲ್ಲರನ್ನೂ ಒಂದುಗೂಡಿಸಿದ್ದ ಶಕ್ತಿ ಬೈಬಲ್ ಗ್ರಂಥ. ಹೆಸರಿಗೆ ಮಾತ್ರ ಜೆರೂಸಲೆಂ ಯಹೂದ್ಯರ ಮುಖ್ಯ ಪಟ್ಟಣವಾಗಿತ್ತು. "ಗ್ರಂಥಗಳ ಗ್ರಂಥ"ವೆನಿಸಿಕೊಳ್ಳುತ್ತಿದ್ದ ಬೈಬಲ್ ಇವರ "ಕೇಂದ್ರ"ವಾಗಿತ್ತು. ಹೀಗೆ ಪುಸ್ತಕವೊಂದರ ಬಲದ ಮೇಲೆ ಅಷ್ಟು ಜನ ಒಂದಾಗಿದ್ದು ಮಾನವ ಚರಿತ್ರೆಯಲ್ಲೇ ಹೊಸ ಸಂಗತಿ. ಹಿಂದೆ ಈಜಿಪ್ಟಿನವರು ಮತ್ತು ಸುಮೇರಿಯನ್ನರು ತಮ್ಮ ಚಿತ್ರ ಲಿಪಿಗಳನ್ನು ಬದಲಾಯಿಸಿ ವರ್ಣಮಾಲೆಗಳನ್ನು ಕಂಡು ಹಿಡಿದರೆನ್ನುವುದು ಸರಿಯಷ್ಟೆ. ಆಗ ಅವರು ಬಿತ್ತಿದ ಬರೆವಣಿಗೆಯ ಬೀಜ ಈಗ ಈ ರೀತಿಯ ಫಲ ಕೊಟ್ಟಿತು. ರಾಜನ ಹತೋಟಿಯಿಲ್ಲದೆ ಕಣ್ಣಿಗೆ ಕಾಣುವಂತಹ ದೇವಾಲಯವೊಂದರ ಮೇಲಿನ ಭಕ್ತಿ ವಿಶ್ವಾಸಗಳ ಬೆಂಬಲವಿಲ್ಲದೆ (ಕ್ರಿ.ಶ. 70ರಲ್ಲಿಯೇ ಜೆರೂಸಲೆಂನ ದೇವಾಲಯ ವಿನಾಶವಾಗಿ ಹೋಯಿತು) ಬರಿ ಒಂದು ಗ್ರಂಥದ ಶಕ್ತಿಯ ಆಧಾರದ ಮೇಲೆ ಅನೇಕ ಬಗೆಯ ಜನರು ಒಂದುಗೂಡಿದರು. ಯಹೂದ್ಯ ಸಮಾಜ ಉದಯವಾಯಿತು.

ಯಾವುದೇ ಧಾರ್ಮಿಕ ಮುಂದಾಳುಗಳಾಗಲೀ, ರಾಜಕೀಯ ನಾಯಕರಾಗಲೀ ಹೀಗೆಲ್ಲಾ ಆಗುವುದೆಂದು ಊಹಿಸಿಯೂ ಇರಲಿಲ್ಲ, ಅಥವಾ ಹೀಗೆ ಆಗಲಿ ಎಂದು ವ್ಯವಸ್ಥೆ ಮಾಡಲೂ ಇಲ್ಲ. ಯಹೂದ್ಯ ಸಮಾಜ ಅಭಿವೃದ್ಧಿಯಾಗತೊಡಗಿದಾಗ ಒಂದು ಹೊಸ ರೀತಿಯ ಮನುಷ್ಯರು ಚರಿತ್ರೆಯಲ್ಲಿ ತಲೆದೋರಿದರು. ಇವರೇ ಪ್ರವಾದಿಗಳು. ಉಳಿದೆಲ್ಲ ಜನರಂತೆ ಹೀಬ್ರ್ಯೂ ಜನರೂ ಸಹ ತಮ್ಮ ದೇವಸ್ಥಾನ ಮತ್ತು ಅರಮನೆಗಳ ಮೇಲೆ ಅಭಿಮಾನವಿಟ್ಟುಕೊಂಡು, ಪುರೋಹಿತನ ವಿವೇಚನಾಶಕ್ತಿ ಮತ್ತು ರಾಜನ

ಆಸೆ ಆಕಾಂಕ್ಷೆಗಳು ತಮ್ಮನ್ನು ಕಡಿದೊಯ್ಯುತ್ತ ಸಾಗುವಂತಹರಾಗುವರೆಂದು ಸಾಲೋ ಮನ್ನನ ಕಾಲದಲ್ಲಿ ಕಾಣಿಸುತ್ತಿತ್ತು. ಆದರೂ ಬೈಬಲ್ಲನ್ನು ಓದಿ ನೋಡಿದರೆ ಆಗಲೇ ಈ ಹೊಸ ತೆರನ ಮನುಷ್ಯರಾದ ಪ್ರವಾದಿಗಳ ಬರವಿನ ಮುನ್ಸೂಚನೆಗಳನ್ನು ನೋಡ ಬಹುದು.

ಹರಿದು ಹಂಚಿ ಹೋದ ಹೀಬ್ರ್ಯೂ ಜನ ಹೆಚ್ಚು ಹೆಚ್ಚು ಕಷ್ಟಗಳನ್ನೆದುರಿಸ ಬೇಕಾದಂತೆ ಪ್ರವಾದಿಗಳ ಮಹತ್ವವೂ ಹೆಚ್ಚುತ್ತಾ ಹೋಯಿತು.

ಪ್ರವಾದಿಗಳೆಂದರೆ ಯಾರು? ಇವರೆಲ್ಲಾ ಒಂದೇ ರೀತಿಯ ಜನರಲ್ಲ. ಪ್ರವಾದಿ ಎಜೆಕಿಯಲ್ ಪುರೋಹಿತ ಮನೆತನದವನಾದರೆ ಅಮೋಸ್ ಮೇಕೆ ಚರ್ಮವನ್ನು ಧರಿ ಸುವ ಕುರುಬರವನು. ಆದರೆ ಇವರೆಲ್ಲರೂ ಧರ್ಮವಾದಿಯಾದ ತಮ್ಮ ದೇವರ ಹೊರತು ಮತ್ತಾರಿಗೂ ತಲೆ ಬಾಗುತ್ತಿರಲಿಲ್ಲ. ಹೇಳಬೇಕೆನಿಸಿದ್ದನ್ನೆಲ್ಲಾ ಇವರು ಜನರೆದುರಿಗೆ ನೇರವಾಗಿ ಹೇಳುತ್ತಿದ್ದರು. ಈ ಸ್ಥಾನ ಪಡೆಯಲು ಇವರಿಗೆ ಯಾರ ಅನುಮತಿಯಾಗಲೀ ಸಂಪ್ರೋಕ್ಷಣೆಯಾಗಲೀ ಬೇಕಾಗಿರಲಿಲ್ಲ. "ನನಗೆ ಭಗವಂತನ ಅನುಜ್ಞೆಯಾಯಿತು" ಎಂದು ಘೋಷಿಸಿ ಇವರು ತಮ್ಮ ಉಪದೇಶಗಳನ್ನು ಪ್ರಾರಂಭಿಸುತ್ತಿದ್ದರು. ರಾಜಕೀಯ ದಲ್ಲೂ ಇವರು ತುಂಬ ಆಸಕ್ತಿ ವಹಿಸುತ್ತಿದ್ದರು. ಜನರನ್ನು ಈಜಿಪ್ಟ್[21], ಅಸ್ಸಿರಿಯ ಮತ್ತು ಬೇಬಿಲಾನ್‌ಗಳ ಮೇಲೆ ಎತ್ತಿ ಕಟ್ಟಿದವರೂ ಇವರೇ. ಪುರೋಹಿತ ವರ್ಗದವರು ಸುಖಾಪೇಕ್ಷಿಗಳಾಗಿದ್ದ ರಾಜನಲ್ಲಿ ಏನಾದರೂ ದೋಷಗಳಿದ್ದರೆ ಅವರನ್ನು ನಿರ್ದಾಕ್ಷಿಣ್ಯ ವಾಗಿ ಖಂಡಿಸುತ್ತಿದ್ದರು. ಆಧುನಿಕ ದೃಷ್ಟಿಕೋನದಿಂದ ನೋಡುವುದಾದರೆ ಇವರಲ್ಲಿ ಕೆಲವರು ಸಮಾಜ ಸುಧಾರಕರಾಗಿದ್ದರು. "ಹಣವಂತರು ಬಡವರನ್ನು ಅರೆಯುತ್ತಾರೆ. ಹಸಿದ ಮಕ್ಕಳ ಬಾಯಿನ ರೊಟ್ಟಿ ಕಿತ್ತು ಸುಖಲಾಲಸಿಗಳು ತಿನ್ನುತ್ತಿದ್ದಾರೆ. ವಿದೇಶೀ ಯರೊಡನೆ ಗೆಳೆತನ ಬೆಳೆಸಿ ಅವರ ವೈಭವ ಲಾಲಸೆ ಮತ್ತು ದುರ್ಮಾರ್ಗಗಳನ್ನು ತಾವು ಕಲಿಯುತ್ತಿದ್ದಾರೆ. ಇದೆಲ್ಲಾ ಅಬ್ರಹಾಮನ ಒಡೆಯನಾದ ಯಹೋವಾ ದೇವರಿಗೆ ಸರಿ ಬೀಳುವದಿಲ್ಲ. ಖಂಡಿತ ಈ ನಾಡನ್ನು ಆತನು ಶಿಕ್ಷಿಸುವನು" ಎಂದು ಇವರು ಬೋಧಿಸು ತ್ತಿದ್ದರು.

ಇವರ ಈ ತೆರದ ಘೋಷಣೆಗಳನ್ನು ಬರೆದಿಟ್ಟುಕೊಂಡು ಯಹೂದ್ಯಮತೀಯರು ಅಧ್ಯಯನ ಮಾಡುತ್ತಿದ್ದರು. ಯಹೂದ್ಯರು ನೆಲಸಿದಲ್ಲೆಲ್ಲಾ ಈ ಬೋಧನೆಗಳು ಹರಡಿ ಹೊಸ ಧಾರ್ಮಿಕ ಚೇತನವನ್ನು ಪ್ರಸಾರ ಮಾಡಿದುವು. ಸಾಮಾನ್ಯ ಮನುಷ್ಯನೂ ಸಹ ಪುರೋಹಿತರ ಮತ್ತು ದೇವಸ್ಥಾನಗಳ ಮಧ್ಯಸ್ಥಿಕೆ ಇಲ್ಲದೆ, ರಾಜರ ಗೊಡವೆ ಇಲ್ಲದೆ ಧರ್ಮಮೂರ್ತಿಯಾದ ದೇವರೊಡನೆ ನೇರವಾಗಿ ವರ್ತಿಸುವಂತಾಯಿತು. ಇದೇ ಯಹೂ ದ್ಯರು ಮಾನವ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಪಡೆಯಲು ಕಾರಣ. ಇಸೈಯಾ ಪ್ರವಾದಿಯ ಘನವಾದ ಘೋಷಣೆಗಳಲ್ಲಿ ಪ್ರವಾದಿಯ ವಾಣಿ ಬಹು ಉನ್ನತ ಮಟ್ಟ ಕ್ಕೇರುತ್ತದೆ. ಒಂದೇ ದೇವರನ್ನು ನಂಬಿ ಶಾಂತಿ, ಒಗ್ಗಟ್ಟಿನಿಂದ ಬಾಳುವ ಪ್ರಪಂಚ

ವೊಂದರ ಆಗಮನವನ್ನು ಚಿತ್ರಿಸುತ್ತದೆ. ಯಹೂದ್ಯ ಪ್ರವಾದಿಗಳ ವಚನ ಅತ್ಯುನ್ನತ ಮಟ್ಟಕ್ಕೇರಿದ್ದು ಇಲ್ಲಿ.

ಆದರೆ ಪ್ರವಾದಿಗಳೆಲ್ಲರೂ ಹೀಗೆಂಯೇ ಇದ್ದರೆಂದು ತಿಳಿಯಬಾರದು. ವಿಮರ್ಶಾತ್ಮಕ ದೃಷ್ಟಿಯಿಂದ ಓದಿದಾಗ ಇವುಗಳಲ್ಲಿ ಅನೇಕ ಕಡೆ ದ್ವೇಷಭಾವ, ಪಕ್ಷಪಾತ ಪೂರ್ವಗ್ರಹಗಳಿರುವುದು ತಿಳಿಯುತ್ತದೆ. ಈ ಭಾಗಗಳು ಇಂದಿನ ಕಾಲದ "ದುಷ್ಟ ಸಾಹಿತ್ಯ" ವೆನ್ನಬೇಕಾದ "ಪ್ರಚಾರ ಸಾಹಿತ್ಯ"ವನ್ನು ನೆನಪಿಗೆ ತರುತ್ತವೆ. ಆದರೆ ಬೇಬಿಲಾನಿನಲ್ಲಿ ಬಂಧನದಲ್ಲಿದ್ದ ಕಾಲದ ಸುಮಾರಿನ ಪ್ರವಾದಿಗಳೇ ಪ್ರಪಂಚದಲ್ಲಿ ಮೊದಲ ಬಾರಿಗೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ನೈತಿಕ ಭಾವನೆಗಳ ಶಕ್ತಿಯನ್ನು ತೋರಿಸಿ ಕೊಟ್ಟದ್ದು. ಅದುವರೆಗೂ ಮಾನವನನ್ನು ಪ್ರತಿಬಂಧಿಸಿಟ್ಟದ್ದ ಮಾಂತ್ರಿಕ ವಿದ್ಯೆ ಯಜ್ಞಗಳು ಮತ್ತು ಅಂಥ ಶ್ರದ್ಧೆಗಳ ಸ್ಥಾನದಲ್ಲಿ ಇವರು ಮಾನವನ ಅಂತರಾತ್ಮವನ್ನು ಪ್ರತಿಷ್ಠಾಪಿಸಿದರು.

23 ಗ್ರೀಕರು

ಸುಮಾರು ಕ್ರಿ.ಪೂ. 960 ರ ಕಾಲದಲ್ಲಿದ್ದ ಸಾಲೊಮನ್ನನ ನಂತರ ಆತನ ರಾಜ್ಯ ಒಡೆದು ಹೋಗಿ ಇಸ್ರೇಲ್ ಮತ್ತು ಜ್ಯೂಡಾಗಳೆಂಬ ಎರಡು ಭಾಗಗಳಾಗಿದ್ದನ್ನು ಅವುಗಳು ಸೋತು ಹೋಗಿ ಅಲ್ಲಿನ ಯಹೂದ್ಯರು ಬೇಬಿಲಾನಿನಲ್ಲಿ ತಮ್ಮ ವಿಶಿಷ್ಟ ಸಂಪ್ರದಾಯವನ್ನು ರೂಢಿಸಿಕೊಳ್ಳುತ್ತಿದ್ದುದನ್ನು ಹಿಂದೆ ತಿಳಿಸಲಾಯಿತು. ಅದೇ ಕಾಲದಲ್ಲಿ ಇನ್ನೊಂದೆಡೆ, ಮಾನವನ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡಿದ ಮತ್ತೊಂದು ಸಂಪ್ರದಾಯ, ಗ್ರೀಕ್ ಸಂಪ್ರದಾಯ ತಲೆಯೆತ್ತುತ್ತಿತ್ತು. "ದೇವರು ನಿತ್ಯನು, ವಿಶ್ವವ್ಯಾಪಿ ಮತ್ತು ನ್ಯಾಯ ರೂಪಿ, ಜನರು ತಾವು ಮಾಡುವ ಕಾರ್ಯಗಳಿಗೆ ತಾವೇ ಹೊಣೆಗಾರರು. ಅವುಗಳಿಗೆ ದೇವರ ಹತ್ತಿರ ಅವರೇ ನೇರವಾಗಿ ಉತ್ತರ ಹೇಳಬೇಕಾಗುವುದು ಎಂದು ಹೀಬ್ರ್ಯೂ ಪ್ರವಾದಿಗಳು ಜನರಿಗೆ ಯುಕ್ತಾಯುಕ್ತ ವಿವೇಚನಾ ಜ್ಞಾನವನ್ನು ಬೋಧಿಸುತ್ತಿದ್ದಾಗ, ಮಾನವ ಬುದ್ಧಿಯನ್ನು ಬೇರೊಂದು ಹಾದಿಯಲ್ಲಿ ಹೊಸ ಹೊಸ ಸಾಹಸಗಳೆಡೆಗೆ ಗ್ರೀಕ್ ತತ್ತ್ವ ಜ್ಞಾನಿಗಳು ಕರೆದೊಯ್ಯುತ್ತಿದ್ದರು.

ಗ್ರೀಕರು ಆರ್ಯರೆಂದು ಮೊದಲೇ ಹೇಳಿದೆ. ಕ್ರಿ. ಪೂ. 1000 ಕ್ಕೂ ಕೆಲವು ಶತಮಾನಗಳ ಹಿಂದೆಯೇ ಈ ಜನರು ಈಜಿಯನ್ ಜನರಿದ್ದ ನಗರಗಳು ಮತ್ತು ದ್ವೀಪಗಳಲ್ಲಿ ಬಂದಿದ್ದರು. ಥಾಥ್ಮೆಸ್ (18 ನೇ ಅಧ್ಯಾಯದ ಮೊದಲಲ್ಲಿ ನೋಡಿ) ಯೂಫ್ರೆಟಿಸ್ ಪ್ರದೇಶವನ್ನು ಗೆದ್ದು ಅಲ್ಲಿ ಆನೆಗಳ ಬೇಟೆಯಾಡುತ್ತಿದ್ದಿರಬಹುದಾದ ಕಾಲದಲ್ಲಿಯೇ ಬಹುಶಃ ಈ ಜನ ದಕ್ಷಿಣ ದಿಕ್ಕಿನತ್ತ ಚಲಿಸಲು ಮೊದಲು ಮಾಡಿರಬಹುದು. (ಆ ಕಾಲದಲ್ಲಿ ಮೆಸಪೊಟೇಮಿಯದಲ್ಲಿ ಆನೆಗಳೂ ಗ್ರೀಸಿನಲ್ಲಿ ಸಿಂಹಗಳೂ ಇನ್ನೂ ವಾಸಿಸುತ್ತಿದ್ದುವು.)

ನಾಸಸ್ಸನ್ನು ಗ್ರೀಕರೇ ಧಾಳಿ ಮಾಡಿ ಸುಟ್ಟು ಹಾಕಿರಬಹುದಾದರೂ ಆ ಬಗ್ಗೆ

ಗ್ರೀಕರಲ್ಲಿ ಐತಿಹ್ಯಗಳಾವವೂ ಇರಲಿಲ್ಲ. ಆದರೆ ಕ್ರೀಟನ್ ಕೆಲಸಗಾರರ ಕುಶಲತೆ, ಮಿನಾಸ್ ದೊರೆ ಮತ್ತು ಆತನ ಅರಮನೆ (ಇದನ್ನು ಲ್ಯಾಬಿರಿಂತ್ ಎಂದು ಕರೆಯುತ್ತಿದ್ದರು) ಯ ವಿಷಯವಾಗಿ ಮಾತ್ರ ಗ್ರೀಕ್ ಕಥೆಗಳಿದ್ದುವು.

ಅನೇಕ ಆರ್ಯ ಜನರಲ್ಲಿದ್ದಂತೆ ಇವರಲ್ಲಿಯೂ ಗೀತ ಕವಿಗಳು (ಚಾರಣರು) ಇದ್ದರು. ಇವರ ಗೀತ ಕಾವ್ಯಗಳು ಈ ಜನರಲ್ಲಿ ಬೇರೆ ಬೇರೆ ಗುಂಪುಗಳ ನಡುವೆ ಸಂಪರ್ಕವನ್ನುಂಟು ಮಾಡುವ ಮುಖ್ಯ ಸಾಧನವಾಗಿತ್ತು. ಇಂತಹ ಎರಡು ಮಹಾಕಾವ್ಯಗಳು ಇವರು ಇನ್ನೂ ನಾಗರಿಕರಾಗಿಲ್ಲದಿದ್ದ ಕಾಲದಿಂದಲೂ ಪರಂಪರೆಯಾಗಿ ಬಂದಿದ್ದುವು. ಇವುಗಳಲ್ಲಿ "ಇಲಿಯಡ್" ಕಾವ್ಯದಲ್ಲಿ ಗ್ರೀಕ್ ಪಂಗಡಗಳೆಲ್ಲಾ ಒಂದಾಗಿ ಏಷ್ಯಾ ಮೈನರಿನಲ್ಲಿದ್ದ ಟ್ರಾಯ್ ಪಟ್ಟಣಕ್ಕೆ ಮುತ್ತಿಗೆ ಹಾಕಿ ಅದನ್ನು ಸೋಲಿಸಿ ಕೊಳ್ಳೆ ಹೊಡೆದಿದ್ದು ವರ್ಣಿತವಾಗಿತ್ತು. "ಒಡಿಸ್ಸಿ" ಗ್ರೀಕ್ ಮುಖಂಡರಲ್ಲೊಬ್ಬನಾದ ಚತುರನಾದ ಓಡಿಸಿಯಸ್ ಟ್ರಾಯ್‌ನಿಂದ ತನ್ನ ದ್ವೀಪಕ್ಕೆ ಹಿಂದಿರುಗಿದ ಸಾಹಸದ ಕಥೆ. ಕ್ರಿ. ಪೂ. 9 ಅಥವಾ 8 ನೆಯ ಶತಮಾನದ ಹೊತ್ತಿಗೆ ಇವರು ನೆರೆಹೊರೆಯ ನಾಗರಿಕ ಜನಾಂಗಗಳಿಂದ ಬರೆವಣಿಗೆಯನ್ನು ಕಲಿತುಕೊಂಡು ಇವೆರಡು ಕಾವ್ಯಗಳನ್ನು ಬರೆದಿಟ್ಟರು. ಆದರೆ ಇವು ಇದಕ್ಕೆ ಬಹು ಮೊದಲಿನಿಂದಲೂ ಇದ್ದುವೆಂದು ಊಹೆ ಮಾಡಿದ್ದಾರೆ. ಮಿಲ್ಟನ್ ಕವಿ ಒಬ್ಬೊಂಟಿಗನಾಗಿ ಪ್ಯಾರಡೈಸ್ ಲಾಸ್ಟ್ ಕಾವ್ಯವನ್ನು ರಚಿಸಿದಂತೆಯೇ ಹೋಮರನೆಂಬ ಅಂಧ ಕವಿ ಈ ಕಾವ್ಯಗಳನ್ನು ರಚಿಸಿವನೆಂದು ಬಹು ಕಾಲ ಎಲ್ಲರೂ ನಂಬಿದ್ದರು. ಈ ಹೆಸರಿನ ಕವಿಯೊಬ್ಬ ನಿಜವಾಗಿಯೂ ಜೀವಿಸಿದ್ದನೇ, ಈತ ಈ ಕಾವ್ಯಗಳನ್ನು ರಚಿಸಿದ್ದನೇ ಅಥವಾ ಆಗಲೇ ರಚಿತವಾಗಿದ್ದ ಕಾವ್ಯಗಳನ್ನು ಪರಿಷ್ಕರಿಸಿ ಬರೆದಿಟ್ಟನೇ, ಎನ್ನುವುದು ಈಗ ಮಹಾ ವಿದ್ವಾಂಸರುಗಳಿಗೆ ಚರ್ಚಿಸಲು ಉತ್ತಮ ಅವಕಾಶಗಳನ್ನೊದಗಿಸಿದೆ. ಈ ವಾಗ್ಯುದ್ಧಗಳಗೊಡವೆ ನಮಗೆ ಬೇಡ. ಕ್ರಿ. ಪೂ. 8 ನೇ ಶತಮಾನದ ಹೊತ್ತಿಗಾಗಲೇ ಜನರ ಬಳಿ ಆ ಮಹಾ ಕಾವ್ಯಗಳು ಇದ್ದುವು. ಗ್ರೀಕರಲ್ಲದ ಅನಾಗರಿಕ ಜನರಿಂದ ತಾವು ಬೇರೆಯಾದವರು, ತಾವೆಲ್ಲಾ ಒಂದೇ ಎಂಬ ಭಾವನೆ ಇವರ ಬೇರೆ ಬೇರೆ ಗುಂಪುಗಳಲ್ಲಿ ಮೂಡಲು ಇವು ಸಹಾಯಕವಾದುವು ಎಂದು ನಾವು ತಿಳಿದಿದ್ದರೆ ಸಾಕು. ಬರವಣಿಗೆ ಬರುವ ಮೊದಲು ಈ ಏಕೀಭಾವ ಬಾಯಿಮಾತಿನಿಂದ, ಉಕ್ತ ಸಾಹಿತ್ಯದಿಂದ ಸಾಧಿತವಾದರೆ ಮುಂದೆ ಲಿಖಿತ ಸಾಹಿತ್ಯದಿಂದ ಈ ಕಾರ್ಯ ನಡೆಯಿತು. ಪರಾಕ್ರಮ ಮತ್ತು ಸದ್ವರ್ತನೆಗಳು ಇವರೆಲ್ಲರ ಸಾಮಾನ್ಯ ಆದರ್ಶಗಳಾಗಿದ್ದುವು.

ಈ ಮಹಾಕಾವ್ಯಗಳಲ್ಲಿ ಕಂಡು ಬರುವ ಗ್ರೀಕರು ಕಬ್ಬಿಣದ ಉಪಯೋಗ ತಿಳಿದಿಲ್ಲದ, ಬರವಣಿಗೆ ಗೊತ್ತಿಲ್ಲದ, ನಗರಗಳನ್ನು ಕಟ್ಟುವ ಪದ್ಧತಿ ಇಲ್ಲದ ಅನಾಗರಿಕರಾಗಿದ್ದರು. ಮುಂಚೆ ತಾವು ನಾಶ ಮಾಡಿದ ಈಜಿಯನ್ ಪಟ್ಟಣಗಳ ಹೊರ ಭಾಗದಲ್ಲಿ ಹಳ್ಳಿಗಳನ್ನು ಕಟ್ಟಿಕೊಂಡು ಇವರು ಜೀವಿಸುತ್ತಿದ್ದರು. ಈ ಹಳ್ಳಿಗಳಲ್ಲಿ ನಡುವೆ ಮುಖ್ಯಸ್ಥನ ದೊಡ್ಡ ಸಭಾಂಗಣದಿಂದ ಕೂಡಿದ ಮನೆ ಇರುತ್ತಿತ್ತು. ಉಳಿದ ಜನ ಅದರ ಸುತ್ತಲೂ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಿದ್ದರು. ಕಾಲ ಕಳೆದಂತೆ ಇಂತಹ ಊರುಗಳಿಗೆ

ಕೋಟೆ ಕಟ್ಟಲು ಇವರು ಮೊದಲು ಮಾಡಿರಬೇಕು. ಅನಂತರ ತಮ್ಮಿಂದ ಸೋತು ಹೋದ ಜನರು ಮಾಡುತ್ತಿದ್ದಂತೆ ದೇವಸ್ಥಾನಗಳನ್ನು ಕಟ್ಟುವುದಕ್ಕೂ ಪ್ರಾರಂಭಿಸಿರಬೇಕು. ಪ್ರಾಚೀನ ನಾಗರಿಕತೆಗಳಲ್ಲಿ ಮೊದಲು ದೇವತೆಯ ಬಲಿಪೀಠಕ್ಕೆ ಪ್ರಾಮುಖ್ಯ ಬಂದು ಬಳಿಕ ಅದರ ಸುತ್ತಲೂ ನಗರ ಬೆಳೆದು ಕೊನೆಗೆ ಅದರ ಸುತ್ತಲೂ ಕೋಟೆ ಕಟ್ಟುತ್ತಿದ್ದರು. ಗ್ರೀಕ್ ನಗರಗಳಲ್ಲಿ ದೇವಸ್ಥಾನ ರಚನೆಗೂ ಮುಂಚೆ ಕೋಟೆ ನಿರ್ಮಾಣವಾಗುತ್ತಿತ್ತು: ಇದಾದ ಮೇಲೆ ಇವರು ವ್ಯಾಪಾರ ಮಾಡತೊಡಗಿ ಬೇರೆಡೆಗಳಲ್ಲಿ ವಸಾಹತುಗಳನ್ನು ಸ್ಥಾಪಿಸ ತೊಡಗಿದರು. ಕ್ರಿ.ಪೂ. ಏಳನೇ ಶತಮಾನದ ಹೊತ್ತಿಗಾಗಲೇ ಗ್ರೀಸಿನ ಕಣಿವೆಗಳಲ್ಲಿ ಮತ್ತು ದ್ವೀಪಗಳಲ್ಲಿ ನಗರಗಳು ಸಾಲು ಸಾಲಾಗಿ ಮೇಲೆದ್ದವು. ಅಷ್ಟು ಹೊತ್ತಿಗೆ ಇವರ ಹಿಂದೆ ಇದ್ದ ಈಜಿಯನ್ನರ ನಗರಗಳು ಮತ್ತು ಅವರ ನಾಗರಿಕತೆ ಮರೆತೇ ಹೋಗಿತ್ತು. ಗ್ರೀಕ್ ನಗರಗಳಲ್ಲಿ ಅಥೆನ್ಸ್, ಸ್ಪಾರ್ಟಾ, ಕಾರಿಂಥ್, ಥೀಬ್ಸ್, ಸ್ಯಾಮೊಸ್ ಮತ್ತು ಮಿಲೇಟಸ್ ಮುಖ್ಯವಾದವು. ಕಪ್ಪು ಸಮುದ್ರದ ತೀರದಲ್ಲಿ ಮತ್ತು ಇಟಲಿ, ಸಿಸಿಲಿಗಳಲ್ಲಿ ಆಗಲೇ ಗ್ರೀಕ್ ವಸಾಹತುಗಳಿದ್ದವು. ಇಟಲಿ ಪರ್ಯಾಯ ದ್ವೀಪದ "ಹಿಮ್ಮಡಿ ಮತ್ತು ಕಾಲ್ಬೆರಳು" ಎಂದು ಕರೆಯುವ ದಕ್ಷಿಣ ಭಾಗಕ್ಕೆ 'ವಿಶಾಲ ಗ್ರೀಸ್' ಎಂದು ಹೆಸರಾಗಿತ್ತು. ಮಾರ್ಸೇಲ್ಸ್ ಮುಂಚೆ ಇದ್ದ ಈಜಿಯನ್ ಪಟ್ಟಣವೊಂದರ ಸ್ಥಳದಲ್ಲಿ ಸ್ಥಾಪನೆಯಾದ ಗ್ರೀಕ್ ನಗರ.

ಸಮತಟ್ಟಾದ ಮೈದಾನ ಪ್ರದೇಶಗಳಲ್ಲಿರುವ ದೇಶಗಳು ಅಥವಾ ಯೂಫ್ರೆಟಿಸ್, ನೈಲ್ ಅಂತಹ ದೊಡ್ಡ ನದಿಗಳಿರುವ ದೇಶಗಳು ಕಾಲಕಳೆದಂತೆ ಒಂದೇ ಆಡಳಿತಕ್ಕೆ ಒಳಪಡುವ ಸಂಭವವಿದೆ. ಈಜಿಪ್ಟನಲ್ಲಿ ಮತ್ತು ಸುಮೇರಿಯದಲ್ಲಿ ಹೀಗೆಯೇ ಆಯಿತು. ಆದರೆ ಗ್ರೀಕ್ ಜನರು ಅನೇಕ ದ್ವೀಪಗಳ ಮತ್ತು ಕಣಿವೆಗಳ ನಡುವೆ ಹಂಚಿಹೋಗಿದ್ದರು. ಗ್ರೀಸ್, ವಿಶಾಲಗ್ರೀಸ್‌ಗಳೆರಡೂ ಗುಡ್ಡಗಾಡಿನ ಪ್ರದೇಶಗಳು. ಇಲ್ಲಿ ನಗರಗಳು ಒಂದುಗೂಡುವ ಬದಲು ಬೇರೆ ಬೇರೆಯಾಗಿಯೇ ಬೆಳೆಯಬೇಕಾಯಿತು. ಚರಿತ್ರೆಯಲ್ಲಿ ಗ್ರೀಕರು ಮೊದಲು ಕಾಣಿಸಿಕೊಂಡಾಗಲೇ ಒಂದಕ್ಕೊಂದು ಸೇರಿಕೊಳ್ಳುವ ಸೂಚನೆಯೇ ಇಲ್ಲದ ಪುಟ್ಟ ಪುಟ್ಟ ರಾಜ್ಯಗಳನ್ನು ನಾವು ನೋಡುತ್ತೇವೆ. ಈ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಜನರ ಕುಲ ಸಹ ಅನೇಕ ವೇಳೆ ಬೇರೆ ಬೇರೆಯಾಗಿರುತ್ತಿತ್ತು. ಕೆಲವು ನಗರಗಳಲ್ಲಿ ಗ್ರೀಕ್ ಪಂಗಡಗಳಾದ ಐಯೊನಿಕ್, ಇಯೊಲಿಯನ್ ಅಥವಾ ಡೋರಿಕ್ ಇವುಗಳಲ್ಲೊಂದಕ್ಕೆ ಸೇರಿದ ಜನರೇ ಹೆಚ್ಚಾಗಿ ಇರುತ್ತಿದ್ದರು. ಮತ್ತೆ ಕೆಲವು ನಗರಗಳಲ್ಲಿ ಗ್ರೀಕರ ಮತ್ತು ಇವರ ಮೊದಲು ಇದ್ದ ಮೆಡಿಟರೇನಿಯನ್ ಜನರ ಬೆರಕೆಯಿಂದ ಆದ ಜನ ಇರುತ್ತಿದ್ದರು. ಇನ್ನು ಕೆಲವು ನಗರಗಳಲ್ಲಿ ಕುಲ ಸಂಕರವಾಗಿಲ್ಲದಿದ್ದ ಗ್ರೀಕರು ಸ್ವತಂತ್ರ ಪ್ರಜೆಗಳಾಗಿದ್ದುಕೊಂಡು ತಮ್ಮಿಂದ ಸೋತ ಜನರನ್ನು ಗುಲಾಮರಾಗಿ ಇಟ್ಟುಕೊಂಡಿರುತ್ತಿದ್ದರು. ಸ್ಪಾರ್ಟಾದಲ್ಲಿರುತ್ತಿದ್ದ ಹೆಲಾಟರು ಇಂತಹ ಗುಲಾಮರು. ಕೆಲವು ಪಟ್ಟಣಗಳಲ್ಲಿ ಆರ್ಯರಲ್ಲಿಯೇ ಮುಖ್ಯಸ್ಥರಾಗಿದ್ದವರ ವಂಶಗಳು ಶ್ರೀಮಂತ ವರ್ಗವಾಗಿ ಪರಿವರ್ತನೆ ಹೊಂದಿದ್ದುವು. ಆರ್ಯರೆಲ್ಲಾ ಸಮಾನ ಸ್ಥಾನ ಪಡೆದು ರಾಜ್ಯಭಾರದಲ್ಲಿ

ಭಾಗವಹಿಸುತ್ತಿದ್ದ ನಗರಗಳೂ ಇದ್ದುವು. ಕೆಲವು ಪಟ್ಟಣಗಳಲ್ಲಿ ರಾಜರೂ ಸಹ ಇರುತ್ತಿದ್ದುದುಂಟು. ಈ ರಾಜರಲ್ಲಿ ಕೆಲವರನ್ನು ಜನರೇ ಚುನಾಯಿಸಿದ್ದರೆ ಮತ್ತೆ ಕೆಲವೆಡೆ ರಾಜ್ಯಪಟ್ಟ ವಂಶಪಟ್ಟ ವಂಶ ಪಾರಂಪರ್ಯವಾಗಿ ಬರುತ್ತಿತ್ತು. ದ್ರೋಹದಿಂದ ರಾಜನ ಸ್ಥಾನಕ್ಕೇರಿದವರನ್ನೂ ದಬ್ಬಾಳಿಕೆಯ ದೊರೆಗಳನ್ನೂ ಅಲ್ಲಲ್ಲಿ ನಾವು ಕಾಣಬಹುದಾಗಿತ್ತು.

ಅಲ್ಲಿನ ಭೌಗೋಳಿಕ ಪರಿಸ್ಥಿತಿ ಸಂಸ್ಥಾನಗಳು ಒಟ್ಟುಗೂಡುವುದಕ್ಕೆ ಹೇಗೋ ಹಾಗೆಯೇ ಅವು ಬೆಳೆದು ದೊಡ್ಡವಾಗುವುದಕ್ಕೂ ಅಡ್ಡಿಯಾಯಿತು. ಅಲ್ಲಿ ಅತ್ಯಂತ ದೊಡ್ಡವೆನಿಸಿಕೊಳ್ಳುತ್ತಿದ್ದ ರಾಜ್ಯಗಳೂ ಸಹ ಇಂದಿನ ಅನೇಕ ಇಂಗ್ಲಿಷ್ ಜಿಲ್ಲೆಗಳಿಗಿಂತ ಸಣ್ಣವಾಗಿರುತ್ತಿದ್ದುವು. ಅಲ್ಲಿನ ಪಟ್ಟಣ ಯಾವುದರದ್ದೂ ಜನಸಂಖ್ಯೆ ಯಾವಾಗಲೂ ಸುಮಾರು ಮೂರುಲಕ್ಷಕ್ಕೆ ಹೆಚ್ಚು ಆಗಲೇ ಇಲ್ಲವೆಂದೆನಿಸುತ್ತದೆ. ಏಕೆ 50000 ಜನ ಸಂಖ್ಯೆಯ ಪಟ್ಟಣಗಳೂ ಅಲ್ಲಿ ಬಹು ಅಪರೂಪವಾಗಿದ್ದುವು. ರಾಜ್ಯಗಳ ಮಧ್ಯೆ ಸಮಾನ ವಿಚಾರ ಮತ್ತು ಸಹಾನುಭೂತಿ ಗಳಿರುತ್ತಿದ್ದುವೇ ಹೊರತು ಅಲ್ಲಿ ಯಾವಾಗಲೂ ಬೇರೆ ಬೇರೆ ರಾಜ್ಯಗಳು ಒಂದೇ ರಾಜ್ಯವಾಗಲಿಲ್ಲ. ವ್ಯಾಪಾರ ಹೆಚ್ಚಿದಂತೆ ನಗರ ರಾಜ್ಯಗಳು ಸೇರಿ ಒಪ್ಪಂದ ಮಾಡಿಕೊಂಡು ಸಂಘಗಳನ್ನೇರ್ಪಡಿಸಿಕೊಳ್ಳುತ್ತಿದ್ದುವು. ಸಣ್ಣ ರಾಜ್ಯಗಳು ದೊಡ್ಡ ರಾಜ್ಯಗಳ ರಕ್ಷಣೆ ಪಡೆಯುತ್ತಿದ್ದುವು. ಹೀಗೆ ರಾಜ್ಯಗಳ ವಿಲೀನೀಕರಣ ನಡೆಯುದಿದ್ದರೂ ಎರಡು ಕಾರಣಗಳಿಂದಾಗಿ ಗ್ರೀಸಿನಲ್ಲಿ ಏಕೀಭಾವ ಇರಲು ಅವಕಾಶವಾಗಿತ್ತು. ಒಂದನೆಯದಾಗಿ, ಇವರೆಲ್ಲರೂ ಮುಂಚೆ ಹೇಳಿದ ಎರಡು ಮಹಾಕಾವ್ಯಗಳನ್ನು ಗೌರವಿಸುತ್ತಿದ್ದರು. ಎರಡನೆಯದಾಗಿ ನಾಲ್ಕು ವರ್ಷಗಳಿಗೊಮ್ಮೆ ಒಲಂಪಿಯದಲ್ಲಿ ನಡೆಯುತ್ತಿದ್ದ ಕ್ರೀಡಾ ಪಂದ್ಯಗಳಲ್ಲಿ ಇವರೆಲ್ಲರೂ ಭಾಗವಹಿಸುತ್ತಿದ್ದರು. ಒಳಜಗಳಗಳು ಕದನಗಳು ಇವರಲ್ಲಿ ಇರಲೇ ಇಲ್ಲವೆಂದಲ್ಲ. ಈ ಏಕೀಭಾವದಿಂದಾಗಿ ಈ ಒಳಜಗಳಗಳು ಎಲ್ಲೇ ಮೀರಿ ಹೋಗುತ್ತಿರಲಿಲ್ಲ. ಒಲಂಪಿಕ್ ಪಂದ್ಯಕ್ಕೆ ಹೋಗಿಬರುವ ಪ್ರಯಾಣಿಕರಿಗೆ ಯಾರೂ ತೊಂದರೆ ಮಾಡಬಾರದೆಂದು ಒಂದು ಕರಾರಿತ್ತು. ಬರಬರುತ್ತಾ ತಾವೆಲ್ಲ ಒಂದೇ ಪರಂಪರೆಯವರೆಂಬ ಭಾವನೆ ಇವರಲ್ಲಿ ಬಲವಾಯಿತು. ಈ ಪಂದ್ಯಗಳಲ್ಲಿ ಹೆಚ್ಚು ಹೆಚ್ಚು ಸಂಸ್ಥಾನಗಳು ಭಾಗವಹಿಸತೊಡಗಿದುವು. ಕೊನೆಗೆ ಗ್ರೀಕರಷ್ಟೇ ಅಲ್ಲದೆ ಇವರೊಡನೆ ನಿಕಟ ಸಂಬಂಧವಿದ್ದ ಉತ್ತರ ದಿಕ್ಕಿನ ಮ್ಯಾಸಿಡೋನಿಯಾ ಮತ್ತು ಎಪಿರಸ್ಸಿನಿಂದ ಸ್ಪರ್ಧಿಗಳು ಈ ಪಂದ್ಯಗಳಿಗೆ ಬರಲು ಇವರು ಅನುಮತಿ ಕೊಟ್ಟರು.

ಗ್ರೀಕ್ ಪಟ್ಟಣಗಳ ವ್ಯಾಪಾರ ಬರಬರುತ್ತಾ ಅಭಿವೃದ್ಧಿಯಾಗಿ ಗ್ರೀಕರ ಪ್ರಾಮುಖ್ಯ ಹೆಚ್ಚಿತು. ಕ್ರಿ.ಪೂ. ಏಳನೇ ಮತ್ತು ಆರನೇ ಶತಮಾನಗಳಲ್ಲಿ ಇವರ ನಾಗರಿಕತೆ ಉತ್ತಮ ಮಟ್ಟದಲ್ಲಾಯಿತು. ಈಜಿಯನ್ ಮತ್ತು ನದೀ ತೀರದ ನಾಗರಿಕತೆಗಳಿಗೂ ಇವರ ನಾಗರಿಕತೆಗೂ, ಮುಖ್ಯವಾಗಿ ಇವರ ಸಮಾಜ ಜೀವನದಲ್ಲಿ, ಅನೇಕ ವ್ಯತ್ಯಾಸಗಳಿದ್ದುವು. ಇದು ಸ್ವಾರಸ್ಯವಾದ ಸಂಗತಿ. ಇವರಲ್ಲಿಯೂ ಭವ್ಯವಾದ

ದೇವಾಲಯಗಳಿದ್ದುವು. ಆದರೆ ಸರ್ವಜ್ಞಾನಗಳ ಆಗಾರ, ಭಾವನೆಗಳ ಭಂಡಾರವೆಂದು ಪ್ರಾಚೀನ ನಗರಗಳ ಪುರೋಹಿತರಿಗಿರುತ್ತಿದ್ದ ಸಾಂಪ್ರದಾಯಿಕ ಪ್ರಾಮುಖ್ಯ ಇವರ ಪುರೋಹಿತರಿಗಿರುತ್ತಿರಲಿಲ್ಲ. ಮುಂದಾಳುಗಳು, ಶ್ರೀಮಂತ ಕುಟುಂಬಗಳಿದ್ದರೂ ವೈಭವ ಯುತ ಆಸ್ಥಾನವುಳ್ಳ ದೇವತಾ ಪುರುಷನೆನಿಸಿಕೊಳ್ಳುತ್ತಿದ್ದ ರಾಜ ಇವರಲ್ಲಿರುತ್ತಿರಲಿಲ್ಲ. ಇವರಲ್ಲಿ ಶ್ರೀಮಂತ ಪ್ರಭುತ್ವ ಜಾರಿಯಲ್ಲಿತ್ತೆನ್ನಬಹುದು. ಅಂದರೆ ಮುಖ್ಯ ಸ್ಥಾನ ಪಡೆದಿದ್ದ ಶ್ರೀಮಂತ ಮನೆತನಗಳು ಒಂದನ್ನೊಂದು ಹಿಂಬಾಲಿಸುತ್ತಿದ್ದುವು. ಇವರಲ್ಲಿ ಪ್ರಜಾಪ್ರಭುತ್ವಗಳೆಂದು ಕರೆಸಿಕೊಳ್ಳುತ್ತಿದ್ದ ರಾಜ್ಯಗಳಲ್ಲಿ ಸಹ ವಸ್ತುತಃ ನುಡಿಯುವುದಾದರೆ "ಶ್ರೀಮಂತ ಪ್ರಭುತ್ವ" ವೇ ಜಾರಿಯಲ್ಲಿತ್ತೆನ್ನಬೇಕು. ಏಕೆಂದರೆ ಇಲ್ಲಿ "ನಾಗರಿಕರೆಲ್ಲರೂ" ಸಭೆ ಸೇರಿ ಸಾರ್ವಜನಿಕ ವಿಚಾರಗಳನ್ನು ತೀರ್ಮಾನಿಸುತ್ತಿದ್ದ ರೆಂದು ಹೇಳುವುದು ನಿಜವಾದರೂ ನಗರದಲ್ಲಿದ್ದವರೆಲ್ಲರಿಗೂ ನಾಗರಿಕ ಹಕ್ಕುಗಳಿರಲಿಲ್ಲ; ಪ್ರಜೆಗಳೆಲ್ಲರಿಗೂ ಮತದಾನದ ಹಕ್ಕು ಇರುವ ನಮ್ಮ ಇಂದಿನ ಪ್ರಜಾಪ್ರಭುತ್ವಗಳಿಗೂ ಗ್ರೀಕ್ ಪ್ರಜಾಪ್ರಭುತ್ವಗಳಿಗೂ ವ್ಯತ್ಯಾಸವಿದೆ. ಗ್ರೀಕ್ ಪ್ರಜಾಪ್ರಭುತ್ವಗಳಲ್ಲಿ ನಾಲ್ಕೈದು ನೂರು ಅಥವಾ ನಾಲ್ಕೈದು ಸಾವಿರ ನಾಗರಿಕರಿದ್ದರೆ ಸಾರ್ವಜನಿಕ ವ್ಯವ ಹಾರಗಳಲ್ಲಿ ಭಾಗವಹಿಸುವ ಹಕ್ಕಿಲ್ಲದ ಅನೇಕ ಸಾವಿರ ಗುಲಾಮರು ಮತ್ತು ಗುಲಾಮ ಗಿರಿಯಿಂದ ಬಿಡುಗಡೆ ಪಡೆದವರು ಮತ್ತಿತರರು ಇರುತ್ತಿದ್ದರು. ಒಟ್ಟಿನಲ್ಲಿ ಗ್ರೀಕ್ ಸಂಸ್ಥಾನಗಳ ಆಡಳಿತ ಸಭ್ಯರ ಸಮಿತಿಯ ವಶದಲ್ಲಿರುತ್ತಿತ್ತು. ಅಂದರೆ ರಾಜನಿಗೂ ಇವ ರಲ್ಲಿ ಅಂತಹ ಪ್ರಾಮುಖ್ಯತೆಯಿರುತ್ತಿರಲಿಲ್ಲ. ಉಳಿದ ಜನರಿಗಿಂತ ಮುಂದಿನ ಸ್ಥಾನ ಪಡೆದ ಮತ್ತೊಬ್ಬ ಮನುಷ್ಯನೆಂದು ರಾಜನನ್ನು ಇವರು ಕಾಣಿಸುತ್ತಿದ್ದರಲ್ಲದೆ ಫ್ಯಾರೋ, ಮಿನಾಸ್ ಮತ್ತು ಮೆಸಪೊಟೇಮಿಯದ ರಾಜರಿಗೆ ಅವರ ಪ್ರಜೆಗಳು ಕೊಟ್ಟಿದ್ದ ದೇವತಾ ಸ್ಥಾನವನ್ನು ಇವರು ತಮ್ಮ ರಾಜರಿಗೆ ಕೊಟ್ಟಿರಲಿಲ್ಲ. ನಿರಂಕುಶ ಪ್ರಭುಗಳು ದ್ರೋಹ ದಿಂದ ರಾಜ್ಯಪಟ್ಟವನ್ನು ಸಂಪಾದಿಸಿದವರಾಗಿರುತ್ತಿದ್ದರು. ಅಂತೂ ಮಾನವನ ಭಾವನೆ ಗಳಿಗೂ ಸರ್ಕಾರದ ಆಡಳಿತಕ್ಕೂ ಪ್ರಾಚೀನ ನಾಗರಿಕತೆಗಳಲ್ಲಿರುತ್ತಿರಲಿಲ್ಲವಾದ ಸ್ವಾತಂತ್ರ್ಯ ಗ್ರೀಸಿನಲ್ಲಿತ್ತು. ತುಂಬಿದ ನಗರಗಳಲ್ಲಿ ಸಹ ವ್ಯಕ್ತಿಗೆ ಪ್ರತ್ಯೇಕ ಅಸ್ತಿತ್ವ ವನ್ನು ಗ್ರೀಕರು ತಂದಿತ್ತರು. ಇದು ಈ ಜನರು ಉತ್ತರ ದಿಕ್ಕಿನ ವಿಶಾಲ ಪ್ರದೇಶಗಳಲ್ಲಿ ಸ್ವಂತ ವ್ಯಕ್ತಿತ್ವದ ಸಾಹಸದಿಂದ ಅಲೆದಾಡುತ್ತಾ ಜೀವಿಸುತ್ತಿದ್ದ ಕಾಲದಿಂದ ಬಂದ ಪದ್ಧತಿ. ಇವರೇ ಚರಿತ್ರೆಯ ಮೊದಲ ಪ್ರಜಾಪ್ರಭುತ್ವವಾದಿಗಳು.

ಮೊದ ಮೊದಲು ಇವರು ಯುದ್ಧಗಳಲ್ಲಿ ನಿರತರಾಗಿದ್ದರು. ಮುಂದೆ ಈ ಕಾಲ ಮುಗಿದ ಮೇಲೆ ಇವರಲ್ಲಿ ಒಂದು ಹೊಸ ಸಂಗತಿ ಕಂಡು ಬರುತ್ತದೆ. ಅದೇ ಪುರೋಹಿತ ವರ್ಗಕ್ಕೆ ಸೇರಿಲ್ಲದ ಮನುಷ್ಯರು ಜ್ಞಾನಾರ್ಜನೆಗೆ ತೊಡಗಿದುದು. ಪ್ರಾಚೀನ ಸಂಸ್ಕೃತಿ ಗಳಲ್ಲಿ ಜೀವ ಮತ್ತು ಅಸ್ತಿತ್ವ ಇವುಗಳ ವಿಷಯ ಚಿಂತನೆ ಮಾಡುವುದನ್ನು, ತಾವು ತಿಳಿದು ದನ್ನು ಬರೆದಿಡುವುದು ಪುರೋಹಿತ ವರ್ಗದ ವಿಶೇಷ ಹಕ್ಕು ಅಥವಾ ಮಹಾರಾಜರುಗಳ ಮನೋರಂಜನೆಯ ವಿಷಯವಾಗಿತ್ತು. ಗ್ರೀಸಿನಲ್ಲಿ ಉಳಿದ ಜನತೂ ಈ ರಹಸ್ಯಗಳನ್ನು

ಭೇದಿಸ ಹೊರಟರು. ಕ್ರಿ.ಪೂ. 600 ರ ಹೊತ್ತಿಗಾಗಲೇ ಅಂದರೆ ಬಹುಶಃ ಇಸ್ರೈಯಾ ತನ್ನ ಪ್ರವಾದಿಗಳನ್ನು ಘೋಷಿಸುತ್ತಿದ್ದಾಗಲೇ ಥಾಲೀಸ್ ಮಿಲೇಟಸ್ಸಿನ ಅನಕ್ಸಿಮಾಂಡರ್, ಎಫೆಸಸ್ಸಿನ ಹೆರಾಕ್ಲಿಟಸ್ ಮುಂತಾದವರು ಪ್ರಪಂಚ, ಅದರ ನೈಜ ಸ್ವಭಾವ, ಅದರ ಮೂಲ ಮತ್ತು ಭವಿಷ್ಯ ಇವುಗಳ ವಿಚಾರವಾಗಿ ಸೂಕ್ಷ್ಮವಾಗಿ ಚಿಂತಿಸುತ್ತಿದ್ದರು. ಇವರೆಲ್ಲಾ ಸಾಮಾನ್ಯ ಮನುಷ್ಯರು. ಬೇರೆಯವರು ಹೇಳುತ್ತಿದ್ದ ಮೊದಲಿನಿಂದಲೂ ಸಿದ್ಧವಾಗಿದ್ದ ವಿವರಣೆಗಳನ್ನು ಇವರು ಒಪ್ಪುತ್ತಿರಲಿಲ್ಲ. ಹಾಗೆಯೇ ಏನೋ ಉತ್ತರ ಹೇಳಿ ಜಾರಿಕೊಳ್ಳುವವರನ್ನೂ ಇವರು ಎಂದಿಗೂ ಗೌರವಿಸುತ್ತಿರಲಿಲ್ಲ. ವಿಶ್ವ ವಿಷಯವಾಗಿ ಇವರ ಚಿಂತನೆಗಳ ಬಗೆಗೆ ಮುಂದೆ ಇನ್ನೂ ಬೇಕಾದಷ್ಟು ಹೇಳುವುದಿದೆ. ಕ್ರಿ.ಪೂ. 6 ನೇ ಶತಮಾನಕ್ಕೆ ಮುಂಚೆ ಬೆಳಕಿಗೆ ಬಂದ ಈ ಗ್ರೀಕ್ ಪ್ರಶ್ನಕಾರರೇ ಮೊದಲ ತತ್ತ್ವಜ್ಞಾನಿಗಳು. ಪ್ರಪಂಚದ ಮೊದಲ ಜ್ಞಾನ ಪ್ರೇಮಿಗಳು ಇವರೇ.

ಕ್ರಿ.ಪೂ. 6ನೇ ಶತಮಾನ ಮಾನವ ವರ್ಗದ ಚರಿತ್ರೆಯಲ್ಲಿ ಬಹು ಮುಖ್ಯವಾದುದು. ಆಗಲೇ ವಿಶ್ವ, ಅದರಲ್ಲಿ ಮನುಷ್ಯನ ಸ್ಥಾನ ಈ ಬಗ್ಗೆ ಮಾನಸಿಕ ಅನ್ವೇಷಣೆಯನ್ನು ಗ್ರೀಕ್ ತತ್ತ್ವಜ್ಞಾನಿಗಳು ಪ್ರಾರಂಭಿಸಿದ್ದರು. ಯಹೂದ್ಯ ಪ್ರವಾದವು ಇಸ್ರೈಯಾನ ವ್ಯಕ್ತಿತ್ವದಲ್ಲಿ ಅತ್ಯುನ್ನತ ಮಟ್ಟವನ್ನು ಮುಟ್ಟಿತ್ತು. ಇಷ್ಟೇ ಅಲ್ಲದೆ ಮುಂದೆ ಹೇಳುವಂತೆ ಇಂಡಿಯಾ ದೇಶದಲ್ಲಿ ಗೌತಮ ಬುದ್ಧ ಮತ್ತು ಚೈನಾದಲ್ಲಿ ಲಾ–ಒಟ್ಸೆ ಮತ್ತು ಕನ್ ಫ್ಯೂಷಿಯಸ್ ಇದೇ ಕಾಲದಲ್ಲಿ ತಮ್ಮ ಮತಗಳನ್ನು ಬೋಧಿಸುತ್ತಿದ್ದರು. ಅಥೆನ್ಸಿನಿಂದ ಪೆಸಿಫಿಕ್ ಸಮುದ್ರ ತೀರದವರೆಗೂ ಮಾನವನ ಮನಸ್ಸು ಎಚ್ಚೆತ್ತಿತ್ತು.

24 ಗ್ರೀಕರ ಮತ್ತು ಪರ್ಷಿಯನ್ನರ ಯುದ್ಧಗಳು

ಗ್ರೀಸ್, ದಕ್ಷಿಣ ಇಟಲಿ ಮತ್ತು ಏಷ್ಯಾ ಮೈನರಿನಲ್ಲಿ ಗ್ರೀಕರು ಬಿಚ್ಚು ಮನಸ್ಸಿನಿಂದ ತತ್ತ್ವಾನ್ವೇಷಣೆಯಲ್ಲಿ ತೊಡಗಿದ್ದಾಗ, ಜೆರೂಸಲೆಂ ಮತ್ತು ಬೇಬಿಲಾನ್‌ಗಳಲ್ಲಿ ಹೀಬ್ರ್ಯೂ ಪ್ರವಾದಿಗಳು ಮಾನವನಿಗೆ ಸ್ವತಂತ್ರವಾದ ಅಂತರಾತ್ಮ ಒಂದಿರುವುದೆಂದು ಬೋಧಿಸುತ್ತಿದ್ದಾಗ, ಸಾಹಸ ಪ್ರವೃತ್ತಿಯ ಆರ್ಯ ಬುಡಕಟ್ಟಿನ ಮೀಡರು ಮತ್ತು ಪರ್ಷಿಯನ್ನರು ಪ್ರಾಚೀನ ನಾಗರಿಕತೆಗಳನ್ನು ಕೈವಶ ಮಾಡಿಕೊಂಡು ಅದುವರೆಗಿದ್ದ ಸಾಮ್ರಾಜ್ಯಗಳೆಲ್ಲಕ್ಕಿಂತ ದೊಡ್ಡದಾದೊಂದು ಸಾಮ್ರಾಜ್ಯವನ್ನು ಕಟ್ಟುತ್ತಿದ್ದರು. ಸೈರಸ್ಸಿನ ಆಡಳಿತ ಕಾಲದಲ್ಲಿ ಬೇಬಿಲಾನ್ ಮತ್ತು ಬಹುಕಾಲದಿಂದ ಇದ್ದ ಸಂಪದ್ಯುಕ್ತ ರಾಜ್ಯವಾದ ಲಿಡಿಯ ಪರ್ಷಿಯನ್ನರ ಕೈ ಸೇರಿತು. ಬಳಿಕ ಲೆವಾಂಟಿನಲ್ಲಿದ್ದ ಫೀನಿಷಿಯನ್ ನಗರಗಳು ಮತ್ತು ಏಷ್ಯಾ ಮೈನರಿನಲ್ಲಿದ್ದ ಎಲ್ಲಾ ಗ್ರೀಕ್ ನಗರಗಳೂ ಸೋತು ಇವರಿಗೆ ಕಪ್ಪ ಕೊಡುವಂತಾಯಿತು. ಸೈರಸನ ಮಗ ಕ್ಯಾಂಬಿಸಿಸ್ ಈಜಿಪ್ಟನ್ನು ಜಯಿಸಿದನು. ಪರ್ಷಿಯನ್ ರಾಜರಲ್ಲಿ ಮೂರನೆಯವನಾದ ಮೀಡರ ಡೇರಿಯಸ್ ಅಥವಾ ಒಂದನೆಯ ಡೇರಿಯಸ್ ಅಂದಿನ ಪ್ರಪಂಚಕ್ಕೆಲ್ಲಾ ಅಧಿಪತಿಯೋ ಎಂಬಂತೆ ತೋರುತ್ತಿತ್ತು. ಈತನ ದೂತರು ಡಾರ್ಡನೆಲ್ಸ್‌ನಿಂದ ಸಿಂಧೂನದಿಯವರೆಗೂ

ಉತ್ತರ ಈಜಿಪ್ಟಿನಿಂದ ಮಧ್ಯ ಏಷ್ಯಾದವರೆಗೂ ರಾಜಾಜ್ಞೆಗಳನ್ನು ಹೊತ್ತು ಸಂಚರಿಸುತ್ತಿದ್ದರು.

ಯೂರೋಪಿನಲ್ಲಿದ್ದ ಗ್ರೀಕರು ಮತ್ತು ಇಟಲಿ, ಕಾರ್ಥೇಜ್, ಸಿಸಿಲಿ ಮತ್ತು ಸ್ಪೇನಿನಲ್ಲಿದ್ದ ಫಿನೀಷಿಯನ್ನರು ಪರ್ಷಿಯದ ಆಡಳಿತಕ್ಕೊಳಪಟ್ಟಿರಲಿಲ್ಲವೆನ್ನುವುದು ನಿಜವಾದರೂ ಇವರೆಲ್ಲರಿಗೂ ಪರ್ಷಿಯ ಸಾಮ್ರಾಜ್ಯವೆಂದರೆ ಭೀತಿ ಗೌರವಗಳಿದ್ದುವು. ಈ ಸಾಮ್ರಾಜ್ಯಕ್ಕೆ ನಿಜವಾಗಿ ತೊಂದರೆ ಕೊಡುತ್ತಿದ್ದವರೆಂದರೆ ದಕ್ಷಿಣ ರಷ್ಯಾ ಮತ್ತು ಮಧ್ಯ ಏಷ್ಯಾದಲ್ಲಿದ್ದ ಸಿಥಿಯನ್ನರು. ಇವರು ನಾರ್ಡಿಕ್ ಜನರ ಮೂಲ ಬುಡಕಟ್ಟಿನವರು. ಪರ್ಷಿಯನ್ ಸಾಮ್ರಾಜ್ಯದ ಉತ್ತರ ಮತ್ತು ಈಶಾನ್ಯ ಎಲ್ಲೆಗಳ ಮೇಲೆ ಧಾಳಿ ಮಾಡುತ್ತಿದ್ದರು.

ಈ ಸಾಮ್ರಾಜ್ಯದ ಪ್ರಜೆಗಳೆಲ್ಲಾ ಪರ್ಷಿಯನ್ನರಲ್ಲ. ಈ ಅಗಾಧ ಚಕ್ರಾಧಿಪತ್ಯವನ್ನು ವಶಪಡಿಸಿಕೊಳ್ಳಲು ಬಂದವರಷ್ಟು ಜನ ಮಾತ್ರ ಪರ್ಷಿಯನ್ನರು. ಉಳಿದವರೆಲ್ಲಾ ಆಯಾಪ್ರದೇಶಗಳಲ್ಲಿ ಎಂದಿನಿಂದಲೂ ಇದ್ದವರೇ. ಆದರೆ ಪರ್ಷಿಯನ್ ಸರ್ಕಾರಿ ಭಾಷೆಯಾಗಿತ್ತು. ವಾಣಿಜ್ಯ ಮತ್ತು ಹಣಕಾಸಿನ ವ್ಯವಹಾರ ಮಾತ್ರ ಇನ್ನೂ ಸೆಮಿಟಿಕ್ ಜನರ ಕೈಯಲ್ಲೇ ಇತ್ತು. ಮುಂಚೆ ಇದ್ದಂತೆಯೇ ಟೈರ್ ಮತ್ತು ಸಿಡನ್ ಮೆಡಿಟರೇನಿಯನ್ ತೀರದ ಮುಖ್ಯ ರೇವು ಪಟ್ಟಣಗಳಾಗಿದ್ದುವು. ಸೆಮಿಟಿಕ್ ಹಡಗುಗಳು ಎಲ್ಲೆಡೆಯಲ್ಲೂ ಸಂಚರಿಸುತ್ತಿದ್ದುವು. ಇವುಗಳಲ್ಲಿ ಪ್ರಯಾಣ ಮಾಡುತ್ತಿದ್ದ ಸೆಮಿಟಿಕ್ ವ್ಯಾಪಾರಗಾರರು ಹೋಗುತ್ತಿದ್ದಲ್ಲೆಲ್ಲಾ ಅವರದೇ ಆದ ಹೀಬ್ರ್ಯೂ ಸಂಪ್ರದಾಯಗಳು ಮತ್ತು ಹೀಬ್ರ್ಯೂ ಧರ್ಮ ಗ್ರಂಥಗಳು ಮೊದಲೇ ಪ್ರಚಲಿತವಾಗಿದ್ದುವು. ಹೊಸದಾಗಿ ಕಂಡು ಬಂದಿದ್ದ ಗ್ರೀಕರ ಪ್ರಭಾವವೂ ಈ ಸಾಮ್ರಾಜ್ಯದಲ್ಲಿ ಬೇಗ ಬೇಗ ಬಲಗೊಳ್ಳುತ್ತಿತ್ತು. ಆಗಲೇ ಇವರು ಸೆಮಿಟಿಕ್ಕರಿಗೆ ಪ್ರಬಲ ಪ್ರತಿಸ್ಪರ್ಧಿಗಳಾಗುತ್ತಿದ್ದರು. ನಿರ್ಲಿಪ್ತ ಮನೋಭಾವದವರೂ ಮೇಧಾವಿಗಳೂ ಆದ ಇವರು ನಿಷ್ಪಕ್ಷಪಾತದಿಂದ ವರ್ತಿಸುವ ಉಪಯುಕ್ತ ಅಧಿಕಾರಿಗಳಾಗಲು ತಕ್ಕವರಾಗಿದ್ದರು.

ಸಿಥಿಯನ್ನರನ್ನು ಅವರ ತಾಯಿನಾಡಿನಲ್ಲೇ ಮಟ್ಟ ಹಾಕಬೇಕೆನ್ನುವ ಉದ್ದೇಶದಿಂದ ಡೇರಿಯಸ್ ಯೂರೋಪಿನ ಮೇಲೆ ದಂಡೆತ್ತಿ ಬಂದನು. ಒಳ್ಳೆಯ ಕುದುರೆ ಸವಾರರಾದ ಸಿಥಿಯನ್ನರು ದಕ್ಷಿಣ ರಷ್ಯವಿರುವಲ್ಲಿ ವಾಸಿಸುತ್ತಿದ್ದರು. ದೊಡ್ಡ ಸೈನ್ಯದೊಂದಿಗೆ ಡೇರಿಯಸ್ ಬಾಸ್ಫೋರಸ್ಸನ್ನು ದಾಟಿ ಬಲ್ಗೇರಿಯ ಮೂಲಕ ಡ್ಯಾನ್ಯೂಬ್ ನದಿಯನ್ನು ಮುಟ್ಟಿ ಅದನ್ನು ದೋಣಿಗಳ ಸೇತುವೆ ಮೂಲಕ ದಾಟಿ ಉತ್ತರಕ್ಕೆ ನುಗ್ಗಿದನು. ಆದರೆ ಈತನ ಸೈನ್ಯ ಬಹಳ ಕಷ್ಟಗಳನ್ನೆದುರಿಸಬೇಕಾಯಿತು. ಇವನ ಸೈನ್ಯದಲ್ಲಿ ಹೆಚ್ಚು ಭಾಗ ಪದಾತಿ ಸೈನ್ಯವಾಗಿತ್ತು. ಸಿಥಿಯನ್ ಕುದುರೆ ಸವಾರರು ಈ ಸೈನ್ಯದ ಸುತ್ತಲೂ ತಮ್ಮ ಕುದುರೆಗಳನ್ನು ಓಡಿಸುತ್ತಾ ಸೈನ್ಯಕ್ಕೆ ಬೇಕಾದ ಸಾಮಾನು ಸರಂಜಾಮು ತಲುಪದಂತೆ ಮಾಡುವುದು, ಅಪ್ಪಿ ತಪ್ಪಿ ಮುಖ್ಯ ಸೈನ್ಯದಿಂದ ದೂರವಾಗಿದ್ದ ಸೈನಿಕರನ್ನು ಕೊಂದು ಹಾಕುವುದು ಹೀಗೆ ಮಾಡುತ್ತಿದ್ದರೇ ಹೊರತು ಎಲ್ಲಿಯೂ

ಡೇರಿಯಸ್ಸನ ಸೈನ್ಯದೊಡನೆ ಯುದ್ಧಕ್ಕೆ ಸಿಲ್ಲೇ ಇಲ್ಲ. ಡೇರಿಯಸ್ ತುಂಬ ಅವಮಾನ ದಿಂದ ಹಿಮ್ಮೆಟ್ಟಬೇಕಾಯಿತು.

ಡೇರಿಯಸ್ ಸೂಸಾಕ್ಕೆ ಹಿಂದಿರುಗಿದರೂ ಥ್ರೇಸ್ ಮತ್ತು ಮ್ಯಾಸಿಡೋನಿಯ ಗಳಲ್ಲಿ ತನ್ನ ಸೈನ್ಯದೊಂದು ಭಾಗವನ್ನು ಬಿಟ್ಟು ಬಂದನು. ಮ್ಯಾಸಿಡೋನಿಯ ಇವನ ಅಧಿಕಾರವನ್ನು ಒಪ್ಪಿಕೊಂಡಿತು. ಆದರೂ ಸಿಥಿಯನ್ನರಿಂದಾದ ಈ ದೊಡ್ಡ ಪರಾಜ ಯದ ಬಳಿಕ ಏಷ್ಯದ ಗ್ರೀಕ್ ನಗರಗಳು ಇವನ ಮೇಲೆ ದಂಗೆಯೆದ್ದವು. ಯೂರೋಪಿನ ಗ್ರೀಕರೂ ಇವರಲ್ಲಿ ಸೇರಿಕೊಳ್ಳುವಂತಾಯಿತು. ಈಗ ಡೇರಿಯಸ್ ಯೂರೋಪಿನ ಗ್ರೀಕರನ್ನು ಹತೋಟಿಗೆ ತರುವುದಕ್ಕೋಸ್ಕರ ಅವರ ಮೇಲೆ ದಂಡೆತ್ತಿ ಹೋದನು. ಇವನ ಬಳಿ ಅದ್ದ ಫಿನೀಷಿಯನ್ ನೌಕಾಪಡೆಯ ಸಹಾಯದಿಂದ ಒಂದಾಗುತ್ತಲೊಂದು ದ್ವೀಪ ಈತನ ಕೈವಶವಾಗುತ್ತಾ ಹೋಯಿತು. ಕೊನೆಗೆ ಕ್ರಿ.ಪೂ. 490 ರಲ್ಲಿ ಅಥೆನ್ಸಿನ ಮೇಲೆ ಈ ದಂಡಯಾತ್ರೆಯ ಮುಖ್ಯ ಧಾಳಿ ನಡೆಯಲು ಎಲ್ಲಾ ಸಿದ್ಧವಾಯಿತು. ಏಷ್ಯಾ ಮೈನರಿನ ಮತ್ತು ಪೂರ್ವ ಮೆಡಿಟರೇನಿಯನ್ನಿನ ರೇವು ಪಟ್ಟಣಗಳಿಂದ ಹೊರಟ ದೊಡ್ಡ "ಆರ್ಮಡಾ"ವೊಂದು ಗ್ರೀಸಿನ ತೀರವನ್ನು ಸೇರಿತು. ಇದರಿಂದ ಇಳಿದ ದೊಡ್ಡ ಸೈನ್ಯ ಅಥೆನ್ಸಿನ ಉತ್ತರದಲ್ಲಿರುವ ಮೆರಾಥಾನಿನಲ್ಲಿ ಬೀಡು ಬಿಟ್ಟಿತು. ಇದಕ್ಕೆ ಅಥೆನಿ ಯನ್ನರಿಂದ ಭಾರಿ ಸೋಲಾಯಿತು.

ಈ ಸಂದರ್ಭದಲ್ಲಿ ಒಂದು ಆಶ್ಚರ್ಯಕರ ಸಂಗತಿ ನಡೆಯಿತು. ಅಥೆನ್ಸ್ ತನ್ನ ಅತಿ ವೈರಿಯಿಂದ ಸ್ಪಾರ್ಟಾದ ಸಹಾಯ ಬಯಸಿತು. "ಗ್ರೀಕ್ ಜನ ಅನಾಗರಿಕರಾದ ಹಗೆ ಗಳ ಗುಲಾಮರಾಗುವ ಸಂಭವ ಬಂದೊದಗಿದೆ, ಇದನ್ನು ತಡೆಯಲು ನೀವು ನಮಗೆ ಸಹಾಯ ಮಾಡಬೇಕು" ಎಂಬ ಸಂದೇಶವನ್ನು ಕೊಟ್ಟು ವೇಗವಾಗಿ ಓಡಬಲ್ಲ ಒಬ್ಬ ದೂತನನನ್ನು ಅಥೆನಿಯನ್ನರು ಸ್ಪಾರ್ಟಾವಿಗೆ ಕಳುಹಿಸಿದರು. ಎರಡು ದಿನಗಳಿಗಿಂತ ಕಡಿಮೆ ಕಾಲದಲ್ಲಿ ಈ ದೂತನು ಸಮ ತಿಟ್ಟಾಗಿಲ್ಲದ ನೆಲದ ಮೇಲೆ ಓಡುತ್ತಾ ಹೋಗಿ ನೂರು ಮೈಲಿಗಳಿಗಿಂತ ಹೆಚ್ಚು ದೂರವಿದ್ದ ಸ್ಪಾರ್ಟಾವನ್ನು ತಲುಪಿದನು. —(ಇಂದಿನ ಕ್ರೀಡಾ ಪಂದ್ಯಗಳ ಮೆರಾಥಾನ್ ಓಟಗಾರರ ಮೂಲಪುರುಷ ಇವನೇ) — ಉದಾರ ಮನೋಭಾವದಿಂದ ಸ್ಪಾರ್ಟನ್ನರು ಇದಕ್ಕೆ ಒಪ್ಪಿಕೊಂಡು ಸ್ವಲ್ಪವೂ ತಡ ಮಾಡದೆ ತಮ್ಮ ಸೈನ್ಯವನ್ನು ಕಳುಹಿಸಿದರು. ಆದರೆ ಈ ಸೈನ್ಯ ಅಥೆನ್ಸನ್ನು ಮುಟ್ಟುವ ಹೊತ್ತಿಗೆ ಕದನ ನಡೆದು ಹೋಗಿತ್ತು. ಸೋತು ಸತ್ತು ಬಿದ್ದಿರುವ ಪರ್ಷಿಯನ್ ಸೈನಿಕರನ್ನು ನೋಡುವುದಷ್ಟೇ ಈ ಸೈನ್ಯಕ್ಕೆ ಉಳಿದಿದ್ದ ಕಾರ್ಯ. ಪರ್ಷಿಯದ ನೌಕಾ ಪಡೆ ಏಷ್ಯಾಕ್ಕೆ ಅಷ್ಟು ಹೊತ್ತಿಗಾಗಲೇ ವಾಪಸ್ಸಾಗಿತ್ತು. ಪರ್ಷಿಯ ಗ್ರೀಸಿನ ಮೇಲೆ ನಡೆಸಿದ ಮೊದಲ ಧಾಳಿ ಈ ರೀತಿ ಕೊನೆಗಂಡಿತು.

ಪರ್ಷಿಯ ಇಷ್ಟಕ್ಕೆ ಸುಮ್ಮನಾಗಲಿಲ್ಲ. ಗ್ರೀಸಿನ ಮೇಲೆ ಮತ್ತೊಂದು ಧಾಳಿ ನಡೆ ಸಿತು. ಈ ಸಲದ ಧಾಳಿ ಮೊದಲನೆಯದಕ್ಕಿಂತ ಭಾರಿಯಾಗಿತ್ತು. ಮೆರಾಥಾನಿನ ಸೋಲಿನ ಸುದ್ದಿ ತಿಳಿದ ಮೇಲೆ ಕೆಲವು ಕಾಲದಲ್ಲೇ ಡೇರಿಯಸ್ ಮೃತಪಟ್ಟನು. ಮುಂದೆ

ಪಟ್ಟಕ್ಕೆ ಬಂದ ಈತನ ಮಗ ಕ್ಷಯರ್ಷ (ಕ್ಸೆರ್ಕ್ಸೆಸ್) ಗ್ರೀಕರನ್ನು ಸದೆ ಬಡಿಯಬೇಕೆಂಬ ಉದ್ದೇಶದಿಂದ ನಾಲ್ಕು ವರ್ಷ ಕಾಲ ದೊಡ್ಡ ಸೈನ್ಯವೊಂದನ್ನು ಕಟ್ಟುವುದರಲ್ಲಿ ನಿರತನಾದನು. ಇದರಿಂದ ದಿಗಿಲುಗೊಂಡ ಗ್ರೀಕರು ಒಗ್ಗಟ್ಟಾದರು. ಪ್ರಪಂಚದಲ್ಲಿ ಅದುವರೆಗೆ ಯಾರೂ ಕ್ಷಯರ್ಷ ಕಟ್ಟಿದಷ್ಟು ದೊಡ್ಡ ಸೈನ್ಯ ಕಟ್ಟಿರಲಿಲ್ಲ. ಈ ಅಗಾಧವಾದ ಸೈನ್ಯದಲ್ಲಿ ಪರಸ್ಪರ ಹೊಂದಾಣಿಕೆಯಿಲ್ಲದ ವಿಧ ವಿಧವಾದ ಜನರು ಇದ್ದರು. ಕ್ರಿ.ಪೂ. 480 ರಲ್ಲಿ ಇದು ಡಾರ್ಡನೆಲ್ಸ್ ಜಲಸಂಧಿಯನ್ನು ದೋಣಿಗಳ ಸೇತುವೆ ಕಟ್ಟಿಕೊಂಡು ದಾಟಿ ಸಮುದ್ರ ತೀರದ ಪಕ್ಕದಲ್ಲಿ ಮುಂದೆ ಸಾಗಿತು. ಇದಕ್ಕೆ ಬೇಕಾದ ಸಾಮಾನು ಸರಂಜಾಮುಗಳನ್ನು ಹೊತ್ತ ನೌಕಾ ಪಡೆಯೊಂದು ಇದರ ಜತೆಯಲ್ಲಿಯೇ ಮುಂದೆ ಸಾಗುತ್ತಿತ್ತು. ಥರ್ಮೊಪೈಲೇಯ ಸಣ್ಣ ಕಣಿವೆಯಲ್ಲಿ ಸ್ಪಾರ್ಟಾದ ಲಿಯೊನಿಡಾಸಿನ ಮುಂದಾಳುತ್ವದಲ್ಲಿ ಸಾವಿರದ ನಾಲ್ಕು ನೂರು ಗ್ರೀಕರಿದ್ದ ಸಣ್ಣ ಪಡೆ ಈ ಮಹತ್ತರವಾದ ಸೈನ್ಯವನ್ನು ಅತ್ಯಂತ ಶೌರ್ಯದಿಂದ ಎದುರಿಸಿತು. ಈ ಸಾವಿರದ ನಾಲ್ಕು ನೂರು ಜನರಲ್ಲಿ ಒಬ್ಬನೂ ಜೀವದಿಂದ ಉಳಿಯಲಿಲ್ಲ. ಆದರೆ ಪರ್ಷಿಯನ್ ಸೈನ್ಯಕ್ಕೆ ಇವರಿಂದಾದ ಹಾನಿ ಅಷ್ಟಿಷ್ಟಲ್ಲ. ಇದರಿಂದಲೇ ಥೀಬ್ಸ್[23] ಮತ್ತು ಅಥೆನ್ಸಿನ ಮೇಲೆ ಬಂದು ಲಗ್ಗೆ ಹಾಕುವ ಹೊತ್ತಿಗೆ ಪರ್ಷಿಯನ್ನರ ಹೆಮ್ಮೆ ಎಷ್ಟೋ ತಗ್ಗಿತ್ತು. ಥೀಬ್ಸ್ ಪಟ್ಟಣ ಪರ್ಷಿಯನ್ನರ ಶರಣು ಹೋಗಿ ಒಪ್ಪಂದ ಮಾಡಿಕೊಂಡಿತು. ಅಥೆನ್ಸಿನ ಜನ ಪಟ್ಟಣವನ್ನು ತೊರೆದು ಓಡಿ ಹೋದರು : ಅಥೆನ್ಸ್ ಪಟ್ಟಣ ಬೆಂಕಿ ಬಿದ್ದು ಸುಟ್ಟು ಹೋಯಿತು.

ಗ್ರೀಸೆಲ್ಲಾ ಕ್ಷಯರ್ಷನ ವಶವಾದಂತೆ ತೋರುತ್ತಿತ್ತು. ಆದರೆ ಯಾರೂ ಊಹೆ ಕೂಡ ಮಾಡಿರದಂತಹ ರೀತಿಯಲ್ಲಿ ಗ್ರೀಕರಿಗೆ ಜಯ ಕೈ ಸೇರಿತು. ಪರ್ಷಿಯನ್ ನೌಕಾ ಪಡೆಯಲ್ಲಿ ಮೂರರಲ್ಲೊಂದರಷ್ಟು ಇಲ್ಲದಿದ್ದ ಗ್ರೀಕರ ನೌಕಾ ಪಡೆ ಸಾಲಾಮಿಸ್ ಕೊಲ್ಲಿಯಲ್ಲಿ ಪರ್ಷಿಯನ್ ನೌಕಾ ಪಡೆಯನ್ನು ಎದುರಿಸಿ ನಾಶ ಮಾಡಿತು. ಸೈನ್ಯಕ್ಕೆ ಸಾಮಾನು ಸರಬರಾಜೇ ಇಲ್ಲದಂತಾಗುತ್ತಲೂ ಕ್ಷಯರ್ಷ ಗಾಬರಿಗೊಂಡು ಅರ್ಧ ಸೈನ್ಯವನ್ನು ಜೊತೆಗಿಟ್ಟುಕೊಂಡು ಏಷ್ಯಕ್ಕೆ ಹಿಂದಿರುಗಿದನು. ಗ್ರೀಸಿನಲ್ಲಿ ಉಳಿದುಕೊಂಡಿದ್ದ ಸೈನ್ಯವೆಲ್ಲಾ ಕ್ರಿ.ಪೂ. 479ರಲ್ಲಿ ಪ್ಲಾಟಿಯಂ ಕದನದಲ್ಲಿ ಸೋತು ಹೋಯಿತು. ಇಷ್ಟು ಹೊತ್ತಿಗೆ ಪರ್ಷಿಯದ ನೌಕಾಪಡೆಯ ಅವಶೇಷಗಳನ್ನು ಹುಡುಕಿ ಹುಡುಕಿ ಗ್ರೀಕರು ಏಷ್ಯಾ ಮೈನರಿನ ಮೈಕಾಲೆ (Mycale)ಯಲ್ಲಿ ಧ್ವಂಸ ಮಾಡಿಬಿಟ್ಟರು.

ಪರ್ಷಿಯದಿಂದ ಬಂದೊದಗಿದ್ದ ವಿಪತ್ತು ಪರಿಹಾರವಾಯಿತು. ಏಷ್ಯದಲ್ಲಿದ್ದ ಗ್ರೀಕ್ ಪಟ್ಟಣಗಳಲ್ಲಿ ಅನೇಕ ಪಟ್ಟಣಗಳು ಸ್ವತಂತ್ರವಾದುವು. ಹೆರೋಡೋಟಸ್ ಬರೆದ ಗ್ರಂಥ "ಹೆರೋಡೋಟಸ್ಸಿನ ಚರಿತ್ರೆ"ಯಲ್ಲಿ ಇವೆಲ್ಲವೂ ಬಹುವಿವರವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿವೆ. ಈ ಗ್ರಂಥ ಪ್ರಪಂಚದ ಚರಿತ್ರೆಯ ಪುಸ್ತಕಗಳಲ್ಲಿ ಮೊದನೆಯದು. ಇದರ ಲೇಖಕ ಹೆರೋಡೋಟಸ್ ಕ್ರಿ.ಪೂ, 484ರಲ್ಲಿ ಏಷ್ಯಾಮೈನರಿನಲ್ಲಿದ್ದ ಐಯೋನಿಯನ್ ಗ್ರೀಕ್ ಪಟ್ಟಣವಾದ ಹಾಲಿಕಾರ್ನಾಸಸ್ಸಿನಲ್ಲಿ ಹುಟ್ಟಿದನು. ಘಟನೆಗಳೆಲ್ಲದರ ವಿವರಗಳನ್ನೂ ಖಚಿತವಾಗಿ ತಿಳಿದುಕೊಳ್ಳಲು ಈತನು ಬೇಬಿಲಾನ್ ಮತ್ತು

ಈಜಿಪ್ಟುಗಳನ್ನು ಸುತ್ತಿಕೊಂಡು ಬಂದನು. ಮೈಕಾಲೆ (Mycale)ಯ ಸೋಲಿನ ನಂತರ ಪರ್ಷಿಯಾದ ಬಲ ಕುಂದಿಹೋಯಿತು. ಅಲ್ಲಿ ರಾಜ ವಂಶದಲ್ಲಿ ಕಲಹಗಳು ಹೆಚ್ಚಾದುವು. ಕ್ಷಯರ್ಷ ಕ್ರಿ.ಪೂ. 465ರಲ್ಲಿ ಕೊಲೆ ಮಾಡಲ್ಪಟ್ಟನು. ಈಜಿಪ್ಟ್, ಸಿರಿಯೆ ಮತ್ತು ಮೀಡಿಯಗಳಲ್ಲಿ ಜನ ದಂಗೆಯೆದ್ದರು. ಈ ಸಾಮ್ರಾಜ್ಯದ ಪ್ರಾಬಲ್ಯ ಇವೆಲ್ಲ ಕಾರಣಗಳಿಂದ ಬಹುಬೇಗನೆ ಕ್ಷೀಣಿಸಿ ಹೋಯಿತು. ಹೆರೋಡೋಟಸ್ ತನ್ನ ಚರಿತ್ರೆಯಲ್ಲಿ ಪರ್ಷಿಯದ ದೌರ್ಬಲ್ಯವನ್ನು ಒತ್ತಿ ಹೇಳಿದ್ದಾನೆ. ವಾಸ್ತವವಾಗಿ ಈ ಚರಿತ್ರೆಯೆಲ್ಲ ಮುಖ್ಯವಾಗಿ "ಪ್ರಚಾರ ಸಾಹಿತ್ಯ"ವೇ. ಗ್ರೀಕರೆಲ್ಲಾ ಒಟ್ಟಾಗಿ ಪರ್ಷಿಯವನ್ನು ಗೆಲ್ಲಬೇಕೆಂಬುದು ಹೆರೋಡೋಟಸ್ಸಿನ ಆಶಯ. ಈ ಚರಿತ್ರೆಯಲ್ಲಿ ಬರುವ ಒಂದು ಪಾತ್ರ ಅರಿಸ್ಟಾಗೋರಾಸ್ ಅಂದಿನ ಪ್ರಪಂಚದ ನಕ್ಷೆಯನ್ನು ಸ್ಪಾರ್ಟದ ಜನರ ಬಳಿ ತೆಗೆದುಕೊಂಡು ಹೋಗಿ ಹೀಗೆ ಹೇಳುತ್ತಾನೆ. " ಈ ಅನಾಗರಿಕರು ಯುದ್ಧದಲ್ಲಿ ಅಷ್ಟೇನೂ ಗಟ್ಟಿಗರಲ್ಲ. ಆದರೆ ನೀವು ಯುದ್ಧ ವಿದ್ಯೆಯಲ್ಲಿ ಬಹು ಚತುರರು. ಅವರಲ್ಲಿ ಚಿನ್ನ, ಬೆಳ್ಳಿ, ಕಂಚು, ಉತ್ತಮವಾದ ಕಸೂತಿಗೆಲಸದ ಬಟ್ಟೆಗಳು, ಸಾಕು ಪ್ರಾಣಿಗಳು ಗುಲಾಮರು ಇತ್ಯಾದಿ ಬೇಕಾದಷ್ಟು ಐಶ್ವರ್ಯವಿದೆ. ನೀವು ಮನಸ್ಸು ಮಾಡಿದರೆ ಸಾಕು, ಅವೆಲ್ಲಾ ನಿಮ್ಮದಾಗುತ್ತದೆ.

(ಮುಂದುವರೆಯುತ್ತದೆ)

ಟಿಪ್ಪಣಿಗಳು

20 ಬೈಬಲ್ಲಿನ ಮೊದಲ ಭಾಗವಾದ ಹಳೆ ಒಡಂಬಡಿಕೆಯಲ್ಲಿರುವುದು ಕ್ರಿಸ್ತ ಜನ್ಮ ತಾಳುವುದಕ್ಕೂ ಮುಂಚಿನ ಕಥೆ. ಈ ಭಾಗವೇ ಯಹೂದ್ಯರ ಧರ್ಮ ಗ್ರಂಥ.

21 ಈಜಿಪ್ಟನ್ನು ಇವರು ಮುರಿದು ಹೋದ ಕಡ್ಡಿ ಎಂದು ಕರೆಯುತ್ತಿದ್ದರು.

22 ಆರ್ಮಡಾ : ಕ್ರಿ.ಶ. 1588 ರಲ್ಲಿ ಸ್ಪೇನಿನ ರಾಜ ಎರಡನೇ ಫಿಲಿಪ್ ಇಂಗ್ಲೆಂಡನ್ನು ಜಯಿಸಲು ದೊಡ್ಡದೊಂದು ನೌಕಾಪಡೆಯನ್ನು ಕಳುಹಿಸಿದನು. ಅದಕ್ಕೆ ಆರ್ಮಡಾ ಎಂದು ಹೆಸರು. ಅಲ್ಲಿಂದೀಚೆಗೆ ದೊಡ್ಡ ದೊಡ್ಡ ನೌಕಾವ್ಯೂಹಗಳೆಲ್ಲವನ್ನೂ "ಆರ್ಮಡಾ"ಗಳೆಂದು ಕರೆಯುವುದು ವಾಡಿಕೆಯಾಗಿಬಿಟ್ಟಿದೆ.

23 ಈಜಿಪ್ಟಿನಲ್ಲೂ ಇದೇ ಹೆಸರಿನ ಪಟ್ಟಣವೊಂದಿತ್ತು. ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ.

ಸಾದರ ಸ್ವೀಕಾರ

1) **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ,** ಸಂಪುಟ ೬೯/ಸಂಚಿಕೆ ೧,
ಜೂನ್ ೧೯೮೪

2) **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ,** ಸಂಪುಟ ೬೯/ಸಂಚಿಕೆ ೨,
ಡಿಸೆಂಬರ್ ೧೯೮೪

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್, ಪಂಪ ಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು-೧೮

3) ಕಲಿಸುವ ಸಾಮಾನ್ಯ ಪದ್ಧತಿಗಳು, ಲೇ : ವ್ಹಿ. ಜಿ. ಮಾರಿಹಾಳ
ಪ್ರಕಾಶಕರು : ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩

4) ನಷ್ಟ ಪರಿಹಾರ ಕಾನೂನು, ಲೇ : ಜಿ. ಎನ್. ಸಭಾಹಿತ
ಪ್ರಕಾಶಕರು : ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩

o—O—o

ಪುಸ್ತಕ ವಿಮರ್ಶೆ

ಕರ್ನಾಟಕ ಕಡಲಾಚೆಯ ಸಂಪರ್ಕಗಳು (ಕ್ರಿ.ಶ. ೧೩೫೦ ರವರೆಗೆ)
ಲೇ : ಡಿ. ಎಸ್. ಜಯಪ್ಪಗೌಡ, ಶುಭೋದಯ ಪ್ರಕಾಶನ, ಮೈಸೂರು, ೧೯೮೩, ಮೊದಲನೆಯ ಆವೃತ್ತಿ, ಪುಟಗಳು xvi + ೨೧೪, ನಕಾಶೆಗಳು, ೨

ಕಡಲಾಚೆಯ ಮತ್ತು ಈಚೆಯ ನಾಡುಗಳೊಡನೆ ಪ್ರಾಚೀನ ಕರ್ನಾಟಕ ಸಾಂಸ್ಕೃತಿಕ ಸಂಪರ್ಕ—ಎಂಬ ವಿಚಾರ ತುಂಬ ಸ್ವಾರಸ್ಯಕರವಾದದ್ದಷ್ಟೇ ಅಲ್ಲ, ಎಂಥ ವರಿಗೂ ಆಸಕ್ತಿ, ಕುತೂಹಲ ಹುಟ್ಟಿಸುವಂಥದ್ದು. ಆದರೂ ಸಂಶೋಧನೆಯ ಈ ಕನ್ನೆ-ಕ್ಷೇತ್ರದಲ್ಲಿ ಹೇಳಿಕೊಳ್ಳುವಷ್ಟೇನೂ ಕೆಲಸ ಆಗಿಲ್ಲ ; ಅದರಲ್ಲೂ ಪ್ರಾಂತೀಯ ಭಾಷೆಗಳಲ್ಲಿ ಬರೆದದ್ದು ಕಡಿಮೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರ ವಿಭಾಗದಲ್ಲಿರುವ ಡಿ. ಎಸ್. ಜಯಪ್ಪಗೌಡರು ಪರಿಶ್ರಮದಿಂದ ಬರೆದು ಪ್ರಕಟಿಸಿದ ಈ ಕನ್ನಡ ಕೃತಿ ನಿಜಕ್ಕೂ ಸ್ವಾಗತಾರ್ಹ.

ಇನ್ನೂರ ಮೂವತ್ತು ಪುಟಗಳ (ಕ್ರೌನ್ ಅಷ್ಟ) ಈ ಪುಸ್ತಕದಲ್ಲಿ ಹತ್ತು ಅಧ್ಯಾಯಗಳಿವೆ ; ಎರಡು ಉಪಯುಕ್ತ ಭೂಪಟಗಳೂ ಸೇರಿವೆ. ಗ್ರಂಥದ ಕೊನೆಯಲ್ಲಿ ಸಂಕ್ಷಿಪ್ತಗಳು, ಆಯ್ದ ಗ್ರಂಥಸೂಚಿ, ಹಾಗೂ ವಿಷಯ (ಶಬ್ದ) ಸೂಚಿಗಳೂ ಕೂಡಿಕೊಂಡಿವೆ. ಭಾರತ ಸರ್ಕಾರದ ಶಾಸನ ಇಲಾಖೆಯ ನಿರ್ದೇಶಕರಾದ ಡಾ|| ಕೆ.ವಿ. ರಮೇಶರ ಸಂಕ್ಷಿಪ್ತವಾದರೂ ಅರ್ಥಗರ್ಭಿತವಾದ ಮುನ್ನುಡಿ ಇದೆ.

ಮೊದಲನೆಯ ಅಧ್ಯಾಯದಲ್ಲಿ ವಿಷಯದ ಹಿನ್ನೆಲೆಯನ್ನು ಕೊಡಲು ಆರಂಭಿಸುತ್ತ 'ವಿವಿಧತೆಯಲ್ಲಿ ಏಕತೆ'ಯನ್ನು ನೋಡಲು ಸಿಗುವ ಭಾರತ-ಉಪಖಂಡವು ಇತಿಹಾಸ-ಪೂರ್ವಕಾಲದಿಂದಲೂ ಕಡಲಾಚೆಯ ಸಂಪರ್ಕವನ್ನಿಟ್ಟುಕೊಂಡದ್ದನ್ನು ಉಲ್ಲೇಖಿಸಿಬಿಟ್ಟಿದ್ದಾರೆ. ಆದರೆ ಗ್ರಂಥದ ಚೌಕಟ್ಟಿನಲ್ಲಿ ಪ್ರಾಸಂಗಿಕವಾಗಿ ಕೊಟ್ಟರೆ ಸಾಕೆನಿಸಬಹುದಾದ 'ಕರ್ನಾಟಕ' ನಾಮ ವಿಶ್ಲೇಷಣೆ, ಚರ್ಚೆ, ಕರ್ನಾಟಕದ ಭೌಗೋಳಿಕ ವ್ಯಾಪ್ತಿ ವಿಚಾರಗಳನ್ನೂ, ಮೊದಲ ಹದಿಮೂರು ಪುಟಗಳಲ್ಲಿ ತುಂಬಿಸಿದ್ದಾರೆ. ಕರ್ನಾಟಕದ ರಾಜ್ಯ-ಸಾಮ್ರಾಜ್ಯಗಳೂ, ಜನ ಸಮುದಾಯಗಳೂ ಕಡಲಾಚೆಯ ದೇಶಗಳೊಂದಿಗೆ ಬೆಳೆಸಿಕೊಂಡು ಬಂದಿದ್ದ ಸಾಂಸ್ಕೃತಿಕ ವಾಣಿಜ್ಯ ಸಂಪರ್ಕಕ್ಕೆ ಕಾರಣವಾಗಿದ್ದಿರಬಹುದಾದ ಪರಿಸರ-ಪ್ರಭಾವಗಳನ್ನೂ ಕೂಲಂಕಷವಾಗಿ ಇಲ್ಲಿ ಪರಿಶೀಲಿಸಬೇಕಿತ್ತು, ಅವುಗಳ ಸಮರ್ಥನೆಗೆ ಸಾಕಷ್ಟು ಪ್ರಾಕ್ತನ ಸಾಹಿತ್ಯಕ ಸಾಕ್ಷ್ಯಾಧಾರಗಳನ್ನೂ ಸಮೀಕ್ಷಿಸಬಹುದಿತ್ತು.

ಎರಡನೆಯ ಅಧ್ಯಾಯದಲ್ಲಿ (ಪುಟಗಳು 14-15) ಇತಿಹಾಸ ಪೂರ್ವಕಾಲವನ್ನು ಕೈಗೆತ್ತಿಕೊಂಡು ಆ ಕಾಲಘಟ್ಟದಲ್ಲಾದ ಜನಾಂಗ ವಲಸೆಯ ಸಾಕ್ಷ್ಯಾಧಾರಗಳು, ಸಾಂಸ್ಕೃತಿಕ ಸಾಕ್ಷ್ಯಾಧಾರಗಳು ಏನೆಲ್ಲ ಇವೆಯೆಂಬುದನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಆಮೇಲೆ ಜನಾಂಗದ ಶಾರೀರಿಕ ಲಕ್ಷಣಗಳು ಹಾಗೂ ಭಾಷೆ ವಿಚಾರವಾಗಿ ಪ್ರತ್ಯೇಕವಾಗಿ ಚರ್ಚಿಸಿದ್ದಾರೆ. ಭಾಷೆಯ ಬಗೆಗೆ ಸಾಕಷ್ಟು ವಿವರಗಳನ್ನು ಕೊಡುವಾಗ ಉಪಾಧ್ಯಾಯರು ಈಚೆಗೆ ಪ್ರಚುರಪಡಿಸಿದ ಆಫ್ರೋ-ದ್ರವಿಡಿಯನ್ ಭಾಷೆಗಳ ತೌಲನಿಕ ಅಧ್ಯಯನದ ಫಲಿತಾಂಶದ ಬಗೆಗಲ್ಲಿಗೆ ಹಚ್ಚಬಹುದಿತ್ತು. ಕಾರಣ ಅದು ಇಂಥ ಸಂದರ್ಭದಲ್ಲಿ ತುಂಬ ಸಾಮಯಿಕವಾದ ಸಂಗತಿ.

ಅಧ್ಯಾಯದ ಕೊನೆಯಲ್ಲಿ 'ಆರ್ಯಸಂಸ್ಕೃತಿಯ ಪ್ರಭಾವ'ದಂಥ ಕ್ಲಿಷ್ಟ ಸಮಸ್ಯೆಯನ್ನು ಪ್ರಸ್ತಾಪಿಸಿ, ತಮ್ಮ ವಿಶ್ಲೇಷಣೆಯನ್ನು ಕೆಲವರು ಮತ್ತು ಸಾರಸ್ವತರಿಗೆ ಮಾತ್ರ ಸೀಮಿತಗೊಳಿಸಿದ್ದಾರೆ. ಈ ಅಧ್ಯಾಯ ಕೂಡ ಹಿನ್ನೆಲೆಯಾಗಿ ಕೆಲ ಮಾಹಿತಿಗಳನ್ನು ಒದಗಿಸುತ್ತದೆ.

ಮೂರು ಮತ್ತು ನಾಲ್ಕನೆಯ ಅಧ್ಯಾಯಗಳಲ್ಲಿ ಪಾಶ್ಚಾತ್ಯ ಭೂಮಿಕೆಯೊಡನೆ ಕರ್ನಾಟಕ ಬೆಳೆಸಿಕೊಂಡು ಬಂದಿದ್ದ ಸಂಪರ್ಕದ ವಿವರಣೆ ನೀಡಲು ಪ್ರಯತ್ನಿಸಿದ್ದಾರೆ, ಇದಕ್ಕಾಗಿ ಕೇವಲ ಗ್ರೀಸ್ ಮತ್ತು ರೋಮ್ ಎಂಬ ಎರಡು ರಾಷ್ಟ್ರಗಳನ್ನು ಮಾತ್ರ ಕೈಗೆತ್ತಿಕೊಂಡಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ (ಪುಟಗಳು 51-61) ಗ್ರೀಕ್—ಕರ್ನಾಟಕ ಸಾಂಸ್ಕೃತಿಕ ಸಂಬಂಧವು ಇತಿಹಾಸದ ಮುಂಜಾವಿನಲ್ಲಿ ಹೇಗಿತ್ತು ಅನಂತರದ ಇತಿಹಾಸ ಕಾಲದಲ್ಲಿ ಯಾವ ತೆರನದಾಗಿತ್ತು ಎಂಬುದನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿ ಕೊನೆಯಲ್ಲುಂಟಾದ ಸಾಂಸ್ಕೃತಿಕ ಪ್ರಭಾವವನ್ನು ಸಂಕ್ಷಿಪ್ತವಾಗಿ ಸಮೀಕ್ಷಿಸಿದ್ದಾರೆ. ಆಕ್ಸಿರಿಂಗಸ್ (oxy rhyncus) ನಲ್ಲಿ ದೊರೆತ ಗ್ರೀಕ್ ಬರಹದಲ್ಲಿರುವ ಸಂಭಾಷಣೆಯ ಭಾಗದಲ್ಲಿ ಕಂಡು ಬರುವುದು 'ಕನ್ನಡ ಭಾಷೆ' ಎಂದು ಗೋವಿಂದ ಪೈ ಹೇಳಿದ್ದರೆ, ಕೈಯವರು ಈಚೆಗೆ 'ತುಳು' ಎಂದು ಗುರುತಿಸಿದ್ದು ಸೂಕ್ತವೆ ಎಂಬುದನ್ನು ಜಯಪ್ಪಗೌಡರು ಚರ್ಚಿಸಿದರೆ — ಸಾಮಯಿಕವಾಗುತ್ತಿತ್ತು. ಕಾರಣ ಆ ಹೊಸ ವಿಚಾರಧಾರೆ ಈಚೆಗೆ ಭಾಷೆ-ಚರಿತ್ರೆಗಳಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರ ಗಮನವನ್ನು ವಿಶೇಷವಾಗಿ ಸೆಳೆದಿವೆ. ಈ ಬಗೆಯ ಪುಸ್ತಕದಲ್ಲಿ ಅವರ ವಾದಕ್ಕೆ ಸ್ಥಳ ಕೊಡಬಹುದಿತ್ತು.

ನಾಲ್ಕನೆಯ ಅಧ್ಯಾಯದಲ್ಲಿ ಪುಟಗಳು (62-112) ರೋಮನ್ ಸಾಮ್ರಾಜ್ಯ—ಕರ್ನಾಟಕ ಸಂಪರ್ಕ ವಿಶೇಷಣವನ್ನು ಕುರಿತ ಸುದೀರ್ಘವಾದ ವಿವರಣೆಗೆ ಐವತ್ತು ಪುಟಗಳು ಮೀಸಲಾಗಿದೆ. ವಿಪುಲವಾದ ಮಾಹಿತಿಗಳನ್ನು ಸಂಗ್ರಹಿಸಲು ಜಯಪ್ಪಗೌಡರಿಗೆ ಇಲ್ಲಿ ಸಾಧ್ಯವಾಗಿದೆ. ಅವುಗಳನ್ನೆಲ್ಲ ವ್ಯವಸ್ಥಿತವಾಗಿ ಜೋಡಿಸುವ ಕಾರ್ಯದಲ್ಲಿ ಶ್ರಮ ವಹಿಸಿದ್ದಾರೆ. ಮೊದಲು ಭಾರತದ ಬಗೆಗೆ ರೋಮನ್ನರು ಪಡೆದಿದ್ದ ಭೌಗೋಳಿಕ ಅರಿವನ್ನು ಅವರ ವಾಣಿಜ್ಯಸಂಪರ್ಕಾಕಾಂಕ್ಷೆಯನ್ನು ಚರ್ಚಿಸಿ, ಅದಕ್ಕೆ ಪೂರಕವಾಗಿ 'ಅಂತರ

ರಾಷ್ಟ್ರೀಯ ವಾಣಿಜ್ಯ ಮಾರ್ಗಗಳಲ್ಲಿ — ಭೂಮಾರ್ಗ—ಜಲಮಾರ್ಗಗಳ ಒಂದು ಕಿರು ನೋಟವನ್ನು ನೀಡಿದ್ದಾರೆ. ಕರ್ನಾಟಕದಲ್ಲಿ ದೊರೆತ ರೋಮನ್ ನಾಣ್ಯಗಳೇ ಮುಂತಾದ ಪ್ರಾಚ್ಯಾವಶೇಷಗಳ ವಿಚಾರಗಳನ್ನೂ ಲೇಖಕರು ಒಂದೆಡೆ ಸಂಗ್ರಹಿಸಿಟ್ಟಿದ್ದಾರೆ. ಈ ಮಾಹಿತಿಗಳ ಹಿನ್ನೆಲೆಯಲ್ಲಿ ಕರ್ನಾಟಕದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ ಹೇಗಿತ್ತೆಂಬುದನ್ನು ರೋಮನ್ ಪ್ರವಾಸಿಗಳು ಕಂಡ ಕರ್ನಾಟಕದ ಬಣ್ಣನೆಯನ್ನು ಸಮೀಕ್ಷಿಸಿದ್ದಾರೆ.

ಕರ್ನಾಟಕ-ರೋಮನ್ ವಾಣಿಜ್ಯ ಸಂಪರ್ಕ, ಸ್ವರೂಪವನ್ನು ಸಮೀಕ್ಷಿಸಿದ ಬಳಿಕ ಇದನ್ನು ಅಭಿವೃದ್ಧಿಪಡಿಸುವಲ್ಲಿ ವಾಣಿಜ್ಯ ವೃತ್ತಿ ಸಂಘಗಳು ವಹಿಸಿದ ಪಾತ್ರವೇನೆಂಬುದನ್ನು ವಿವೇಚಿಸಲಾಗಿದೆ. ಇವುಗಳ ಪರಿಣಾಮವಾಗಿ ನಾಡಿಗೆ ಹರಿದು ಬಂದ ರೋಮನ್ ಸಂಪತ್ತು ಮತ್ತು ಅದರ ಪರಿಣಾಮಗಳನ್ನು ಚರ್ಚಿಸಲಾಗಿದೆ. ಈ ಬಗೆಯ ವಾಣಿಜ್ಯ ವ್ಯವಹಾರವು ಕ್ರಮೇಣ ಇಳಿಮುಖವಾಗಲು ಕಾರಣಗಳೇನೆಂಬುದನ್ನು ವಿಶ್ಲೇಷಿಸಿದ್ದಾರೆ. ಅಧ್ಯಾಯದ ಕೊನೆಯಲ್ಲಿ ಕರ್ನಾಟಕ ಮತ್ತು ರೋಮನ್ ಸಾಮ್ರಾಜ್ಯದ ನಡುವೆ ಇದ್ದ ರಾಯಭಾರ ಸಂಬಂಧದ ಸ್ವರೂಪವನ್ನು ಸಂಗ್ರಹವಾಗಿಡಲಾಗಿದೆ. ರೋಮನ್ ಸಾಮ್ರಾಜ್ಯದ ಉದಯ ಹಾಗೂ ಅವನತಿ ಪ್ರಪಂಚದ ಪ್ರಾಚೀನ ಇತಿಹಾಸದ ಮೇಲೆ ಎಂಥ ಮಹತ್ತರ ಪರಿಣಾಮ ಬೀರಿತು ಎಂಬ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚಿಸಲಾದ ಸಂಗತಿಗಳು, ಮೌಲಿಕವಾಗಿವೆ ; ಚೆನ್ನಾಗಿವೆ.

ಐದನೆಯ ಹಾಗೂ ಆರನೆಯ ಅಧ್ಯಾಯಗಳಲ್ಲಿ ಪುನಃ ಕಡಲಾಚೆಯ ಕರ್ನಾಟಕ— ಸಂಪರ್ಕದ ಸ್ವರೂಪವನ್ನು ತಿಳಿಯಲು ಸಹಾಯಕವಾದ ಸಾಮಾನ್ಯ ವಿಚಾರಗಳನ್ನು ವಿವರಿಸಲಾಗಿದೆ. ಇದನ್ನು ಪುಸ್ತಕದ ಆರಂಭದಲ್ಲೇ ಒಟ್ಟಾರೆ ಸಮೀಕ್ಷಿಸಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಒಂದು ಕಾಲಕ್ರಮದಲ್ಲಿ ವಿವರಿಸುವ ಉದ್ದೇಶವಿಟ್ಟುಕೊಂಡು ಹೀಗೈ ಮಾಡಿರಬಹುದೆಂದು ತಿಳಿಯಬಹುದು.

ಐದನೆಯ ಅಧ್ಯಾಯದಲ್ಲಿ (113–149) ಅಂತರರಾಷ್ಟ್ರೀಯ ಸಂಪರ್ಕದ ಉತ್ಕರ್ಷಕಾಲದ ವಿಚಾರವಾಗಿ ವಿವರಪೂರ್ಣವಾಗಿ ವಿವೇಚಿಸಲಾಗಿದೆ. ರೋಮನ್ ಸಾಮ್ರಾಜ್ಯದ ಯುಗ ಮುಗಿದ ಬಳಿಕ ಬೆಳೆದ ಅಂತರರಾಷ್ಟ್ರೀಯ ಸಂಪರ್ಕದ ಪ್ರಯೋಜನ ಪಡೆಯುವಲ್ಲಿ ಭಾರತದ ವಿವಿಧ ಪ್ರದೇಶಗಳು ಹೇಗೆ ಮುಂದಾದವು, ಮುಂದಿನ ಐದು ಶತಮಾನಗಳ ಕಾಲದಲ್ಲಿ ಕರ್ನಾಟಕವೂ ಈ ದಿಶೆಯಲ್ಲಿ ಹೇಗೆ ನವಶಕೆಯೊಂದನ್ನು ಕಂಡಿತು ಎಂಬುದನ್ನು ವಿಶ್ಲೇಷಿಸಲಾಗಿದೆ. ಇದರ ಮಹತ್ವವನ್ನು ತಿಳಿಯುವಲ್ಲಿ ಹಿನ್ನೆಲೆಯಾಗಿ ನಮ್ಮ ದೇಶದ ಆಂತರಿಕ ಹೆದ್ದಾರಿ ವ್ಯವಸ್ಥೆ, ರಾಜಕೀಯ ಬೆಳವಣಿಗೆ, ವೃತ್ತಿ ಸಂಘಗಳ ಸಂಘಟನೆ ಮುಂತಾದವುಗಳನ್ನು ವಿವರಿಸಲಾಗಿದೆ. ಸಾಧ್ಯವಾದೆಡೆಯಲ್ಲೆಲ್ಲ ಕರ್ನಾಟಕಕ್ಕೆ ಇವನ್ನು ಅನ್ವಯಿಸಿ, ಉದಾಹರಣೆಗಳ ಮೂಲಕ ವಿಶದಪಡಿಸಲಾಗಿದೆ. ಕರ್ನಾಟಕದ ಸಾಮ್ರಾಜ್ಯಯುಗದಲ್ಲಿ ಪ್ರಸಿದ್ಧಿಗೆ ಬಂದ ಹಲವು ವರ್ತಕ ಸಂಘಗಳು ವಿದೇಶೀ ವಾಣಿಜ್ಯದಲ್ಲಿ ಹೇಗೆ ಪಾಲ್ಗೊಂಡಿದ್ದವು ಹಾಗೆಯೇ ಕರ್ನಾಟಕದಲ್ಲಿ ವಿದೇಶೀ

ವ್ಯಾಪಾರ ವೃತ್ತಿ ಸಂಘಗಳ ಚಟುವಟಿಕೆಗಳೇನು ಎಂಬುದನ್ನು ಸ್ವಾರಸ್ಯಕರವಾಗಿ ವಿವರಿಸ ಲಾಗಿದೆ. ಕೊನೆಯಲ್ಲಿ ಈ ವ್ಯವಹಾರದಲ್ಲಿ ತೊಡಗಿಸಿದ್ದ ಸಿದ್ಧವಸ್ತುಗಳನ್ನು ಕೆಲಕಡಲು ಗಳ್ಳರ ವಿಚಾರವನ್ನು ಸಂಗ್ರಹವಾಗಿಯಾದರೂ ಕೊಡಲಾಗಿದೆ. ವರ್ತಕರ ಪ್ರಭಾವವನ್ನು ನಿದರ್ಶನ ಸಹಿತ ಕೊಡುತ್ತ, ತಾವೂ ಗಳಿಸಿ ಸಮಾಜವನ್ನೂ ಬೆಳೆಸಿ ಸಂಸ್ಕೃತಿಯನ್ನು ಅವರು ಪೋಷಿಸಿದರು ಎಂಬ ಮಾತಿನೊಂದಿಗೆ ಲೇಖಕರು ಅಧ್ಯಾಯವನ್ನು ಮುಗಿಸು ತ್ತಾರೆ.

ಆರನೆಯ ಅಧ್ಯಾಯದ (150-159) ಹತ್ತು ಪುಟದಲ್ಲಿ ಸಮುದ್ರ ವ್ಯಾಪಾರ ಮತ್ತು ಯಾನದ ವಿಚಾರವಾಗಿ ಪ್ರತ್ಯೇಕವಾಗಿ ವಿವರಿಸಲಾಗಿದೆ, ಇದಕ್ಕಾಗಿ ಲಭ್ಯ ವಿರುವ ಶಾಸನೋಲ್ಲೇಖಗಳನ್ನೂ, ಸಾಹಿತ್ಯಕ ದಾಖಲೆಗಳನ್ನು ಕೊಡಲಾಗಿದೆ. ಸಮುದ್ರ ವ್ಯಾಪಾರದಲ್ಲಿ ನಿಷ್ಣಾತರಾದ ವರ್ತಕರೂ ಉತ್ತಮವಾದ ಬಂದರು ವ್ಯವಸ್ಥೆ ಯಿಂದಾಗಿ ಅಂತರರಾಷ್ಟ್ರೀಯ ಸಂಪರ್ಕಕ್ಕೆ ಉತ್ತಮ ಕಾಣಿಕೆ ಸಲ್ಲಿಸಿದರು. ಆಗ್ನೇಯ ಏಷ್ಯಾ ಮತ್ತು ಮಧ್ಯ ಪ್ರಾಚ್ಯಗಳೊಂದಿಗೆ ಬೆಳೆಸಿಕೊಂಡು ಬಂದಿದ್ದ ಕರ್ನಾಟಕದ ಕಡ ಲಾಚೆಯ ಸಂಪರ್ಕದ ಸ್ವರೂಪ-ಪ್ರಭಾವ ಅರಿಯಲು ಇದು ಅಗತ್ಯವಾಗಿದೆ.

ಏಳನೆಯ ಅಧ್ಯಾಯದಲ್ಲಿ (160-181) ಮುಖ್ಯವಾಗಿ ಕಂಬುಜ, ಚಂಪಾ, ಸಯಾಂ, ಮಲಯ, ಸುಮಾತ್ರ, ಜಾವಾ ಮತ್ತು ಬರ್ಮಾ ದೇಶಗಳಿಗೂ ಕರ್ನಾಟಕಕ್ಕೂ ಏರ್ಪಾಟಾಗಿದ್ದ ಸಾಗರೋತ್ತರ ಸಂಬಂಧಗಳ ಹೆಜ್ಜೆಗುರುತುಗಳನ್ನು ಅವರಿಗೆ ಲಭ್ಯವಿರುವ ಸಾಕ್ಷ್ಯಾಧಾರಗಳ ಮೂಲಕ ಗುರುತಿಸಲು ಪರಿಶ್ರಮಿಸಿದ್ದಾರೆ. ಅದ ರಿಂದ ಮೂಡಬಹುದಾದ ಸ್ಥೂಲಚಿತ್ರವನ್ನು ಮಾತ್ರ ರೇಖಿಸುತ್ತ, ಒಟ್ಟಾರೆ ಆಗ್ನೇಯ ಏಷ್ಯಾದಲ್ಲಿ ಕಾಣುವ ಭಾರತೀಯ ಸಾಂಸ್ಕೃತಿಕ ಪ್ರಭಾವದ ವಿಸ್ತರಣೆಯಲ್ಲಿ ಕರ್ನಾಟಕ ಗಣನೀಯ ಪಾತ್ರ ವಹಿಸಿದೆ ಎನ್ನುತ್ತ ಮುಕ್ತಾಯಗೊಳಿಸಿದ್ದಾರೆ. ಈ ವಿಷಯವನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು ಸ್ವತಂತ್ರ ಗ್ರಂಥ ರಚಿಸುವಷ್ಟು ಮಾಹಿತಿಗಳು ಹೇರಳ ವಾಗಿವೆ.

ಎಂಟನೆಯ ಅಧ್ಯಾಯದಲ್ಲಿ (ಪುಟಗಳು 182-192) ಚೀನಾದೇಶದ ಬಗೆಗೂ ಒಂಭತ್ತನೆಯ ಅಧ್ಯಾಯದಲ್ಲಿ (ಪುಟಗಳು 188-192) ಶ್ರೀ ಲಂಕಾದ ಬಗೆಗೂ ಪ್ರತ್ಯೇಕವಾದ ಸಂಪರ್ಕ ಸಮೀಕ್ಷೆಯನ್ನು ನೀಡಿದ್ದಾರೆ. ಅಧ್ಯಾಯಗಳ ದೃಷ್ಟಿಯಿಂದ ಇವು ಎರಡೂ ಬಹಳ ಚಿಕ್ಕದಾಗಿದ್ದರೂ ವಿಷಯ ವ್ಯಾಪ್ತಿಯ ದೃಷ್ಟಿಯಿಂದ ನೋಡಿದರೆ ಸಾಕಷ್ಟು ವಿವರಗಳನ್ನು ಒಳಗೊಂಡಿವೆ. (ಈಚೆಗೆ ಕೈಕೊಂಡ ವಿಜಯನಗರ ಪುನರುತ್ಥಾನ ಯೋಜನೆಯಲ್ಲಿ ಚೀನೀ ನಾಣ್ಯಗಳೂ, ಪಿಂಗಾಣಿ ಪಾತ್ರೆ ಚೂರುಗಳೇ ಮುಂತಾದವು ಉತ್ಖನನದಲ್ಲಿ ದೊರಕಿದ್ದು ವಿಜಯನಗರ ಕಾಲದಲ್ಲಿ ಕರ್ನಾಟಕ-ಚೀನಾ ದೇಶದೊಟ್ಟಿ ಗಿನ ಸಂಬಂಧದ ಮೇಲೆ ಇನ್ನಷ್ಟು ಬೆಳಕು ಚೆಲ್ಲುವಂತಿದೆ.)

ಹತ್ತನೆಯ ಅಧ್ಯಾಯ (ಪುಟಗಳು 193-200)ದಲ್ಲಿ ಕರ್ನಾಟಕ ಮಧ್ಯಪ್ರಾಚ್ಯ ಮತ್ತು ಯೂರೋಪಿನೊಟ್ಟಿಗೆ ಇಟ್ಟುಕೊಂಡಿದ್ದ ಸಂಪರ್ಕವನ್ನು ಸಮೀಕ್ಷಿಸಲು ಯತ್ನಿಸ

ಲಾಗಿವೆ. ಕೇವಲ ಏಳೆಂಟು ಪುಟಗಳಲ್ಲಿ ಧಿಡೀರನೆ ಮುಗಿಯುವ ಈ ಅಧ್ಯಾಯದಲ್ಲಿ ಕೊಡಬಹುದಾಗಿದ್ದ ವಿವರಗಳು ಇನ್ನೂ ಇದ್ದವೆಂದು ಅನ್ನಿಸದೆ ಇರದು. ಉದಾಹರಣೆಗೆ ಆದಿಲ್‌ಶಾಹಿ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಭಾವ ಬೀರಿದ ಸೂಫಿಸಂಥ, ಪರ್ಶಿಯಾ, ಟರ್ಕಿ, ಫ್ರಾನ್ಸ್ ಮುಂತಾದೆಡೆಗಳಿಂದ ಬಂದಿರಬಹುದಾದ ಕಲಾವಿದರ ಪ್ರಭಾವದ ವಿಚಾರ, ಮುಂತಾದುವು ನಮ್ಮ ನಾಡಿನ ಮಧ್ಯಕಾಲೀನ ಸಾಂಸ್ಕೃತಿಕ ಜೀವನ ಚರಿತ್ರೆಯಲ್ಲಿ ಮೌಲಿಕವಾಗಿವೆ. ಕರ್ನಾಟಕದ ಕಡಲಾಚೆಯ ಸಂಪರ್ಕಗಳನ್ನು ಸಮೀಕ್ಷಿಸುವಾಗ 1350 ರವರೆಗೆ ಎಂದು ನಿಗದಿಪಡಿಸಿಕೊಂಡಿದ್ದಿರಬಹುದಾದರೂ ಇದೇನು ಕರಾರು ವಾಕ್ಕಾಗಿಲ್ಲ, ಮೇಲಾಗಿ ಇಂಥ ವಿಚಾರದಲ್ಲಿ ಕಾಲ ವಿಭಜನೆ ಕೂಡ ಚರ್ಚಾಸ್ಪದವಾಗಿರುತ್ತದೆಯಲ್ಲವೇ ? ಪುಸ್ತಕದ ಅಂತ್ಯದಲ್ಲಿ ವಲಸೆಯ ಪ್ರಶ್ನೆಯನ್ನೆತ್ತಿಕೊಂಡು ಅಲ್ಲಿ ಅಖಿಲ ಭಾರತ ಬಂಜಾರ ಸೇವಾಸಂಘದ ಪ್ರಧಾನ ಸಲಹೆಗಾರರಾದ ರಾಂಸಿಗ್ ಬನಾವಟ್‌ರವರು ನಡೆಸಿದ ಬಂಜಾರ–ಮೂಲದ ಅಧ್ಯಯನದ ವಿಚಾರವಾಗಿ ವಿವರಗಳು ದೊರೆಯದ ಹಿನ್ನೆಲೆಯಲ್ಲಿ ಕೇವಲ ಪತ್ರಿಕಾ ವರದಿಯನ್ನೂ ಉದ್ಧರಿಸುತ್ತ ಪುಸ್ತಕವನ್ನು ಮುಗಿಸುವಾಗ ಲೇಖಕರಿಗೆ ಅದು ಇನ್ನು ಸ್ಪಷ್ಟವಾಗಬೇಕಾಗಿರುವ ವಿಷಯವೆಂದೆನ್ನಿಸಿದೆ.

ಹತ್ತು ಅಧ್ಯಾಯಗಳಲ್ಲಿ ಸುದೀರ್ಘವಾಗಿ ಚರ್ಚೆಯಾದ ಕರ್ನಾಟಕದ ಕಡಲಾಚೆಯ ಸಂಪರ್ಕ ಸಮೀಕ್ಷೆಯಾಚೆ ಒಂದು ಒಳ್ಳೆಯ ಉಪಸಂಹಾರ ನೀಡಿ ಒಟ್ಟಾರೆ ಅದರ ಮಹತ್ವ ಹಾದಿ ವೈಶಿಷ್ಟಗಳನ್ನು ಸಂಗ್ರಹವಾಗಿಯಾಗಿಯಾದರೂ ನೀಡಿದ್ದರೆ, ಹಿನ್ನೆಲೆಗೆ ಕೊಟ್ಟು ಮಹತ್ವವನ್ನು ಅಂತ್ಯಕ್ಕೂ ಕೊಟ್ಟಿದ್ದರೆ, ಪುಸ್ತಕದ ಸ್ವಾರಸ್ಯ ಮತ್ತು ಮೌಲ್ಯ ಇನ್ನೂ ಹೆಚ್ಚುತ್ತಿತ್ತು. ಸೂಕ್ತವಾದ ರೇಖಾಚಿತ್ರ, ಛಾಯಾಚಿತ್ರಗಳ ಮೂಲಕ ಸಂಪರ್ಕ ಸ್ವರೂಪ—ಪ್ರಭಾವಗಳನ್ನು ಇನ್ನು ಮನಂಬುಗುವಂತೆ ತೋರಿಸಬಹುದಿತ್ತು. ಪ್ರಾಚೀನ ಅಂತರಾಷ್ಟ್ರೀಯ ವಾಣಿಜ್ಯ ಮಾರ್ಗಗಳು (ರೋಂ ಮತ್ತು ಮುಂದಿನ ಶತಮಾನಗಳಲ್ಲಿ ಕಂಡುಬರುವಂತೆ) ಹೇಗಿದ್ದವು ಎಂಬುದನ್ನು ತೋರಿಸುವ ಒಂದು ನಕಾಶೆ ಹಾಗೂ ಪ್ರಾಚೀನ ಕರ್ನಾಟಕದ ಹೆದ್ದಾರಿಗಳನ್ನು ಮತ್ತು ಮುಖ್ಯ ಪಟ್ಟಣಗಳನ್ನು ನಿರ್ದೇಶಿಸುವ ಇನ್ನೊಂದು ಭೂಪಟ ನಿಜಕ್ಕೂ ಉಪಯುಕ್ತವಾಗಿದೆ. ಆದರೆ ಆವೆರಡಕ್ಕೂ 'ಸ್ಕೇಲು' ನೀಡಿಲ್ಲವಲ್ಲ !

ಗ್ರಂಥದ ಕೊನೆಯಲ್ಲಿ ಸಂಕ್ಷಿಪ್ತಗಳನ್ನೇನೋ ನೀಡಲಾಗಿದೆ. ಒಂದು ಏಕರೂಪತೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಹಾಗೆಯೇ ಆಯ್ದ ಗ್ರಂಥ, ಸೂಚಿಯನ್ನು ಕನ್ನಡ ವಿಭಾಗದಲ್ಲಿ ಕನ್ನಡ ಗ್ರಂಥಗಳು, ವಿಶ್ವಕೋಶಗಳು, ನಿಯತಕಾಲಿಕೆಗಳು, ಸುದ್ಧಿ ಪತ್ರಿಕೆಗಳು ಎಂಬುದಾಗಿ ನಾಲ್ಕು ವರ್ಗಗಳಲ್ಲಿ ನೀಡಿದ್ದರೆ, ಇಂಗ್ಲೀಷ್ ವಿಭಾಗದಲ್ಲಿ ಇಂಗ್ಲೀಷ್ ಗ್ರಂಥಗಳು ಮತ್ತು 'ಇತರೆ' ಎಂಬ ಎರಡೇ ವಿಭಾಗ ಮಾಡಿಕೊಂಡಿದ್ದರ ಔಚಿತ್ಯ ತಿಳಿಯದು. 'ವಿಷಯಸೂಚಿ' ಸಾಕಷ್ಟು ವಿವರಪೂರ್ಣವಾಗಿದೆ. ಇನ್ನು ಕಣ್ತಪ್ಪಿ ಉಳಿದ ಮುದ್ರಣ ದೋಷಗಳಿಗೆ ತಿದ್ದುಪಡಿಗಳನ್ನು ನೀಡಿ ಸರಿಪಡಿಸಲಾಗಿವೆ. ಆದರೆ ಪುಸ್ತಕದ

ಆರಂಭದಲ್ಲೇ ಕವನಗಳನ್ನು ಇಂಗ್ಲೀಷಿನಲ್ಲಿ ಕೊಡುವ ಅಧಿಕೃತ ಪುಟದಲ್ಲಿ, ಪುಟಗಳು xvi+214+xvi ಎಂದು ಲೆಕ್ಕ ಹಾಕಿರುವುದನ್ನು ತೆಗೆದುಕೊಂಡರೆ ಒಟ್ಟು 246 ಪುಟಗಳಾಗುತ್ತವೆ ! ಇದು ವಾಸ್ತವವಾಗಿ 230 ಪುಟಗಳ ಪುಸ್ತಕವಾದ್ದರಿಂದ ಇದೂ ಮುದ್ರಣ ದೋಷವೆಂದು 'ತಿದ್ದುಪಡಿ' ಕೊಡಬಹುದಿತ್ತು.

ಪುಸ್ತಕದ ರಕ್ಷಾಕವಚದ ಬಗೆಗೆ ಒಂದು ಮಾತು. ಅನಂತ ಸಮುದ್ರದ ಸಂಕೇತವೆಂಬಂತೆ ನೀಲಿಬಣ್ಣದ ಹಿನ್ನೆಲೆಯಲ್ಲಿ ಕಲಾವಿದ ಮುರಳೀಧರರಾವ್ ತೋರಿಸಿದ ಶ್ವೇತ ನೌಕೆ ಅರ್ಥಪೂರ್ಣವಾಗಿದೆ, ಚೆನ್ನಾಗಿದೆ. ಆದರೆ ಮುಖಪುಟದ ಅಂಚಿನಲ್ಲಿ ತೋರಿಸಿದ ನಗ್ನ ಸ್ತ್ರೀಯ ಪ್ರಾಚೀನ ಚಿತ್ರದ ಪ್ರತಿಚಿತ್ರವನ್ನು ಕರ್ನಾಟಕದ ಕಡಲಾಚೆಯ ಸಂಪರ್ಕಗಳನ್ನು ವಿವರಿಸುವ ಈ ಪುಸ್ತಕಕ್ಕೆ ಹೇಗೆ ಅನ್ವಯಿಸಿ ಸೇರಿಸಿದ್ದಾರೆಯೆಂಬುದು ತಿಳಿಯದು. ಪುಸ್ತಕದ ಮುದ್ರಣ, ವಿನ್ಯಾಸ ಮುದ್ದಾಗಿದೆ. ಇತಿಹಾಸ ಮತ್ತು ಭಾಷಾಂತರ ಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿದ ಜಯಪ್ಪಗೌಡರು ವಿಷಯ ಕುರಿತು (ಕನ್ನಡ ವಿಷಯ ವಿಶ್ವಕೋಶಕ್ಕೆ ಕರ್ನಾಟಕ) ಬರೆದ ದೀರ್ಘ ಲೇಖನ ಆಗಲೇ ಪ್ರಕಟವಾಗಿದೆ. ಈ ಕ್ಷೇತ್ರದಲ್ಲಿ ಇನ್ನು ಸಂಶೋಧನೆ ಮಾಡುವ ಮಹತ್ವಾಕಾಂಕ್ಷೆ ಇಟ್ಟು ಕೊಂಡಿದ್ದಾರೆ, ವಿಪುಲ ಮಾಹಿತಿ ಸಂಗ್ರಹ ಮಾಡಿಕೊಂಡಿದ್ದಾರೆ, ಎಂಬುದು ಈ ಗ್ರಂಥ ರುಜುವಾತುಪಡಿಸುತ್ತದೆ. ಅವರ ಪರಿಶ್ರಮ ಈ ಗ್ರಂಥ ರೂಪದಲ್ಲಿ ಪ್ರತಿಫಲಿಸಿದೆ. ಸದಾ ಕುತೂಹಲ ಕೆರಳಿಸುವಂಥ 'ಕಡಲಾಚೆಯ ಕರ್ನಾಟಕ ಸಂಪರ್ಕ, (ಈ ಹೆಸರೇ ತುಂಬ ಸ್ವಾರಸ್ಯವಾಗಿದೆ) ಎಂಬ ವಿಷಯದ ಬಗ್ಗೆ ಸಾಕಷ್ಟು ಸಂಶೋಧನೆ ಆಗಿಲ್ಲ— ಕನ್ನಡದಲ್ಲಿ ಆದ ಸಂಶೋಧನೆಗಳು ಸರಳವಾಗಿ ನಿರೂಪಿತವಾಗಿಲ್ಲ —ಎಂಬ ಹಿನ್ನೆಲೆಯಲ್ಲಿ ಡಿ. ಎಸ್. ಜಯಪ್ಪಗೌಡರು ಮಾಡಿದ ಈ ಪ್ರಯತ್ನ ನಿಜಕ್ಕೂ ಸ್ತುತ್ಯರ್ಹ, ಅಭಿನಂದನೀಯ. ಕರ್ನಾಟಕದ 'ನಾಡುನುಡಿ ನಡವಳಿಕೆಗಳು ಪರರಾಷ್ಟ್ರಗಳ ಮೇಲೆ ಬೀರಿ ಬಂದಿರುವ ಗಣನೀಯ ಪ್ರಮಾಣದ ಪ್ರಭಾವವನ್ನು ಆಧಾರಪೂರ್ಣವಾಗಿ ತಿಳಿದುಕೊಳ್ಳುವಲ್ಲಿ ಸಹಾಯಕವಾಗಿರುವ ಜಯಪ್ಪಗೌಡರ ಈ ಕೃತಿಗೆ ಧಾರವಾಡದ ವಿದ್ಯಾವರ್ಧಕ ಸಂಸ್ಥೆಯ 1983 ರ ಬಹುಮಾನ ಹಾಗೂ ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾದೆಮಿಯ 1984 ರ ಸಮಾಜ ವಿಜ್ಞಾನ ವಿಭಾಗದ ಬಹುಮಾನ ದೊರೆತಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಇದು ಇನ್ನೂ ಹೆಚ್ಚಿನ ಸಂಶೋಧನಾ ಗ್ರಂಥಗಳನ್ನು ಬರೆದು ಜಯಶಾಲಿಗಳಾಗಲು ಜಯಪ್ಪಗೌಡರಿಗೆ ಉತ್ತೇಜನ ನೀಡುವಂತಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತ, ಅವರನ್ನು, ಶುಭೋದಯ ಪ್ರಕಾಶನವನ್ನು ಅಭಿನಂದಿಸೋಣ.

ಡಾ|| ಎಚ್. ಆರ್. ರಘುನಾಥ ಭಟ್

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬